UNIVERSAL
LIBRARY
OU_200348
UNIVERSAL
LIBRARY

MATRUNANDINI

ಮಾತೃನಂದಿನಿ.

ಸತೀಹಿತೈಷಿಣೀ ಗ್ರಂಥಮಾಲಾ ಸಂಖ್ಯೆ ೬.

ಕರ್ನಾಟಕ

ಮಾತೃನಂದಿನಿ.

ಸಂಜನಗೂಡು

ಸತೀಹಿತೈಷಿಣೀ ಮಾತೃಮಂದಿರದಲ್ಲಿ

ಪ್ರಕಟಿಸಲ್ಪಟ್ಟಿದು.

ಪ್ರಥಮ ಮುದ್ರಣ ೧೦೦೦ ಪ್ರತಿಗಳು.

(ಇದರ ಸರ್ವಸ್ವಾಮ್ಯವೂ ಹಿತೈಷಿಣಿಯವರದಾಗಿರುವುದು.)

ಕ್ರಯ 1-4-0] [ಚಂದಾದಾರರಿಗೆ 1-2-0

Published

BY

Shrimati Thirumalamma

AT THE

Sathchithaishini Matrumandiram

NANJANGUD.

CKED 1956

1920.

PRINTED AT

THE SHRI KRISHNA P. PRESS, HUBLI,

BY B. N. MUTALIK DESAI.

Checked 1965

॥ ಶ್ರೀ ॥

ಅಲಮೇಲುಮಂಗಾಸಹಾಯ.

ಸಮರ್ಪಣೆ.

Checked 1961

" ಮಾತಸ್ಸಮಸ್ತ ಜಗತಾಂ ಮಧುಕೈಟಭಾರೇ
ರ್ವಕ್ಷೋವಿಹಾರಿಣಿ ಮನೋಹರ ದಿವ್ಯರೂಪೇ॥
ಶ್ರೀಸ್ವಾಮಿನಿ ಶ್ರಿತಜನಪ್ರಿಯ ದಾನಶೀಲೇ—
ಶ್ರೀವೇಙ್ಕಟೇಶದಯಿತೇ ತವಸುಪ್ರಭಾತಮ್॥ "

ಈ ಗ್ರಂಥಪುಷ್ಪವನ್ನು.

ಕ್ಷಮಾಗುಣಸಂಪನ್ನೆಯೂ, ಪುತ್ರವತ್ಸಲೆಯೂ, ದಯಾಮಯೆಯೂ,
ಪತಿಪರಾಯಣೆಯೂ, ಆದರ್ಶರಮಣಿಯೂ ಆಗಿದ್ದು, ತನ್ನ
ಅಲ್ಪವಯಸ್ಸಿನಲ್ಲಿಯೇ ಶ್ರೀಪದಸಾಮ್ರಾಜ್ಯವನ್ನಡರಿ,
ದೈವೀಪ್ರೇಮದ ಯಶಶ್ಶರೀರದಿಂದ ಪ್ರಕಾಶಿಸು
ತ್ತಿರುವ ನನ್ನ ಜನ್ಮದಾತೆಯ ಚರಣಾರವಿಂದ
ಗಳಲ್ಲಿ ಅನನ್ಯಭಕ್ತಿಭಾವದಿಂದ ಸಮರ್ಪಿಸಿ,
ಭಗವತೀಮಾತೆಯ ಅನುಗ್ರಹವು
ಅನವರತವೂ ಎಡೆಬಿಡದೆ
ರಕ್ಷಿಸುತ್ತಿರಲೆಂದು
ಬೇಡುವೆನು.

(ಭೀಷ್ಮಾಸ್ವಾಮಿ) (ಗ್ರಂಥಕರ್ತೃ)

(ನಿದ್ರಾಜಡತೆಯಲ್ಲಿರುವ ನಮ್ಮ ಭಗಿನಿಯರಿಗೆ)

ರಾಗ॥ (ಯಾರು ಹಿತದವರು ಮನವೆ)

ಏಳೇಳಿರೆನ್ನೊಳದಕ್ಕತಂಗಿಯರೇ॥ ಏಳೇಳು ಬಗೆಯಾಗಿ ಹೇಳುವೆನು ಕೂಗಿ॥ ಅ ॥ ಹತ್ತಾತ್ಮಕೆಯಳುತಿರಲ್ ತಲೆಯೆತ್ತಿ ನೋಡದಿರೆ ಮತ್ತಾವುದಿ ಹುದೆಮಗೆ ಕರ್ತವ್ಯವಿಳೆಯೊಳ್ ॥ ಕತ್ತಲೆಯು ಕೋಣೆಯೊಳು ಮತ್ತಿನಿಂ ಮುಲಗಿಹುದು ॥ ಮತ್ತಕಾಶಿನಿಯರಿಗಿದೆತ್ತಣದು ನಡತೆ ॥ ೧ ॥ ಊರೂರ ತಿರುತಿರುಗಲರಸರನು ಕಳುಹಿದಿರಿ । ಆರಯ್ಯುದೊಂದಿನಿತು ಮೈಮರೆದು ಮಲಗಿದಿರಿ ॥ ಸರಗೊಳ್ಳುವರಕಟ ಪರದೇಶಿಗಳು ಬಂದು । ಆರೆಮ್ಮನಿದಿರಿಸುವ ಧೀರರಿಲ್ಲಿಹರೆಂದು ॥ಏಳೇಳಿ॥ ೨ ॥ ಜೋಗಿಮಲಗುವರೆ ನಿದ್ರಾಸೋಗ ನೀವೆಳೆದಿಂತು । ಬೇಗಪಡುತಿರೆ ಕರ್ನಾಟಮಾತೆಯಂತು ॥ ಕೂಗುತಿದೆ ಖಗನಿಕರವಾಗುತಿದೆ ಶುಭಶಕುನವಾಗಗೋಚರನೊಲಿವ ಬೇಗಮಂ ನೆನೆನೆನೆದು ॥ ಏಳೇಳಿ ॥ ೩ ॥ ಕರೆಯಿಸಿರಿ ನಿಮ್ಮರಸರನು, ನೆರೆಯಿಸಿರಿ ಕಾರ್ಯವನು ಹುರಿಗೊಳಿಸಿ ನಿಲ್ಲಿಸಿರಿ ದೇಶಸೇವಕರಂ ॥ ಪರಿಭಾವಿಸಿ ನಮ್ಮ ಪೂರ್ವಜರ ಮಹಿಮೆಯನು, ಪರದೇಶಿಗಳ ಪಿಂದಟ್ಟಿ ಪಡೆಯಿರಿ ಕೀರ್ತಿಯನು ॥ ಏಳೇಳಿ ॥ ೪ ॥ ನೀವಲ್ಲದಿನ್ಯಾರು ಈವೇಳೆಯೊಳು ಕಾಯ್ವ । ನೀವೇಳ್ವೆ ಕರ್ನಾಟಮಾತೃಭಂಡಾರ ॥ ವಾವಿಧದಿ ಬರಿದಾಗುತಿಹುದಾ ಎದೇಶಿಗಳಿಂದ । ನಾವಧಾನದಿ ನೋಡಿ ಭಾವೆಯರೆ ನೀವೇಳಿ ॥ಏಳೇಳಿ ॥೫॥ ಕಳೆಯುದಿರಿ ಕಾಲವನು, ಕೆಳೆತನದಿ ಲೋಕವನು ಬೆಳಯಿಸಿರಿ ಸಂಪದವನು ಅಲಸತೆಯನುಳಿದಿನ್ನು ॥ ಒಲಿದಕ್ಕಗಳಿರೆ ಹೇಳಿ, ಎಳದಂಗಿಯರೆ ಕೇಳಿ, ತಳುವು ಮಾಡದೆಯೇಳಿ ನಲವಿನಿಂ ನೆರೆಬಾಳಿ ॥ ಏಳೇಳಿ ॥ ೬ ॥ ಉದಯಾದ್ರಿ ಶಿಖರದೊಳು ಉದಯಿಸಿದನಿದೊ ಭಾನು । ಸದಮಲಾತ್ಮರ ನೋಡಿ ನಗುತ ಲಿಹನು ॥ ಮದವಳಿದು ಮುದವಡೆದು ನಡೆನೋಡಿ ಮುಂದಿಹುದನ್ನು ॥ ಪದುಳದಿಂ ಪೇಳುವೆನು ಸುದತಿಯರೆ ನಿಮಗಿನ್ನು ॥ ಏಳೇಳಿ ॥ ೭ ॥ ಕನ್ನಡದಮಾತೆಯಾ ಮುನ್ನಿದ್ದ ವೈಭವವ ನಿನ್ನೊಮ್ಮೆ ನೆಲೆಗೊಳಿಪೆವೆಂದಿರ್ಪ ನಮ್ಮಾ ॥ ಕನ್ನಡದ ನಾಡೊಡೆಯ ಚೆನ್ನಕೃಷ್ಣೇಂದ್ರಂಗೆ ನನ್ನಿಯಿಂ ಜಯವೆಂದು ಹರಸಿನಿಂದು ॥ ೮ ॥ ಜಯವೆನ್ನಿ ಕರ್ನಾಟ ಜನನಿಯುಡಿದಾವರೆಗೆ । ಜಯವೆನ್ನಿ ಕರ್ನಾಟ ಭಾರತಿಯ ನುಡಿಗೆ ॥ ಜಯವೆನ್ನಿ ವರಶೇಷ ಗಿರಿವರನ ಚರಣಕ್ಕೆ । ಜಯವೆನ್ನಿ ಸಂತತವು ಕರ್ನಾಟ ಜನಪದಕೆ ॥ ಏಳೇಳಿ ॥ ೯ ॥

ನಿವೇದನ.

ನನ್ನ ಪರಮಪೂಜ್ಯರಾದ ದೇಶೀಯಭಗಿನಿಯರೇ!

ನಾನೋರ್ವ ಬಾಲಿಶ ವಿದ್ಯಾರ್ಥಿನಿ; ಆರ್ಯಭೂಮಾತೆಯ ಅನಂತ ಸಂತಾನದಲ್ಲಿ ನಾನೊಂದು ಅಣುಮಾತ್ರ. ಬಹುಭಾಷಾಪರಿಶ್ರಮವಾಗಲೀ, ವ್ಯಾಪಕಶಿಕ್ಷಣದ ಪಾಂಡಿತ್ಯವಾಗಲೀ, ನಾಗರಿಕತೆಯ ಗಂಧವಾಗಲೀ, ರಸಿಕ ಸಮಾಜಸುಧಾರಣೆಯ ಮುಖ್ಯ ತತ್ತ್ವವಾಗಲೀ, ಮತಪಿಂಡನ ವರ್ಣಸಂಕರ ಗಳ ಪರವಾಗಿ ವ್ಯಾಖ್ಯಾನಮಾಡುವಷ್ಟರ ಶಾಸ್ತ್ರಜ್ಞಾನವಾಗಲೀ, ಭಿನ್ನ ಭಿನ್ನ ಮತಗಳ ಏಕೀಕರಣ ಸಾಮರ್ಥ್ಯವಾಗಲೀ, ಯಾವದೇ ಒಂದನ್ನೂ ತಿಳಿದವ ಳಲ್ಲದ ಸಾಮಾನ್ಯ ಸ್ತ್ರೀ. ಇಂತಿರುವ ನನ್ನಿಂದ ಈ ಲೇಖನ ಕಾರ್ಯವು ಹೇಗೆ ನಿರ್ವಹಿಸಲ್ಪಡಬೇಕೆಂಬ ಭಾವನೆಯು ವಿಚಾರಪರರ ತರ್ಕಕ್ಕೆ ಒಳಪಟ್ಟೇ ಇರಬೇಕಷ್ಟೆ; ಸಹಜ!

ಅರಿವಿಲ್ಲದ ನನ್ನಿಂದ, ಕೇವಲ ನನ್ನ ಸ್ವಶಕ್ತಿ-ಸ್ವಚಾತುರ್ಯಗಳಿಂದ, ಗುರುತರದ ಸಮಾಜಪರವಾದ ಹಲವು ವಿಷಯ ವಿಚಾರಗಳನ್ನು ಪ್ರತಿಪಾದಿ ಸುವ ಈ ಗ್ರಂಥವು ರಚಿಸಲ್ಪಟ್ಟಿತೆಂದು ಹೇಳಿಕೊಳ್ಳಲಾರೆನು. ಎಂದರೆ, ಇದು ಅನ್ಯಭಾಷಾಗ್ರಂಥಗಳ ಭಾಷಾಂತರೀಕರಣವೆಂದು ಮಾತ್ರ ತಿಳಿಯ ಬಾರದು. ಏಕೆಂದರೆ, ದೇಶಭಾಷೆಯೊಂದರಲ್ಲಿಯೇ ದೃಷ್ಟಿಯಿಟ್ಟು, ಅನ್ಯ ಭಾಷಾಪರಿಶ್ರಮಕ್ಕವಕಾಶವನ್ನೇ ಕಂಡವಳಲ್ಲದ ನಾನು, ಭಾಷಾಂತರಿಸುವುದು ಇಲ್ಲವೇ ಅವುಗಳಲ್ಲಿಯ ವಿಷಯಗಳನ್ನು ಸಂಗ್ರಹಿಸುವುದು ಹೇಗೆ? ಇಷ್ಟು ಮಾತ್ರ ಹೇಳಬಲ್ಲೆನು.

ಗಂಥಾವತರಣದ ಪ್ರೇರಣೆಗೂ, ಪ್ರತಿಭೆಗೂ, ಕಲ್ಪನೆಗೂ, ಮತ್ತು ಮೇಧಾಶಕ್ತಿಗೂ, ಆ ನಮ್ಮ ಮಾತೃದೈವವೇ ಕಾರಣ-ಕಾರ್ಯಕರ್ತ್ರಿಯಾಗಿ ರುವಳೆಂದೂ, ಆ ನಮ್ಮ ತಾಯಿ, ಯಾವರೀತಿಯಲ್ಲಿ, ಯಾವರೂಪದಲ್ಲಿ, ಯಾವದಾರಿಯಲ್ಲಿ, ಮತ್ತು ಎಂತಹ ವಾಕ್ಸರಣಿಯಲ್ಲಿ, ಯಾವಯಾವಕಾಲ ದಲ್ಲಿ ಹೇಗೆಹೇಗೆ ಪ್ರೇರೇಪಿಸಿದಳೋ ಹಾಗೆಯೇ, ಅವಳ ಪ್ರೇರಣೆಯಾದಂ ತೆಯೇ, ಅವಳ ಕೃಪಾವಲೋಕನವೊಂದನ್ನೇ ಮುಖ್ಯಾವಲಂಬವಾಗಿಟ್ಟು, ಅವಳಿಂದೆಳೆದೊಯ್ಯಲ್ಪಟ್ಟ ದಾರಿಯಲ್ಲಿ ನಡೆವುದೇ ಮುಖ್ಯ ಕರ್ತವ್ಯವೆಂದೂ ನಂಬಿರುವ ನೀಲಿನ ಜಡಭಕ್ತಿಯೊಂದರಿಂದಲೇ ಈ ಗ್ರಂಥವು ನಿರ್ಮಿತ ವಾಗಿರುವುದು.

ಅದುದರಿಂದ ನನ್ನ ಪ್ರಿಯಸೋದರಿಯರೇ! ಭಗವತಿಯಿಂದ ಪ್ರೇರಿತವಾಗಿ ಜನ್ಮವನ್ನೆತ್ತಿರುವ ಈ ನಂದಿನಿಯಲ್ಲಿ ಭೂತ–ಭವಿಷ್ಯದ್ವರ್ತಮಾನ ಕಾಲಗಳ ವಸ್ತು-ಸ್ಥಿತಿ-ಸ್ವರೂಪ-ಪರಿವರ್ತನಾಕ್ರಮಗಳನ್ನು ತಕ್ಕಮಟ್ಟಿಗೆ—ಉದಾಹರಣೆಗಳನ್ನು ಮುಂದಿಟ್ಟು—ಸಹಜ ರೀತಿಯಿಂದ ಪ್ರತಿಪಾದಿಸುತ್ತಿರುವ ಪ್ರತಿಯೊಂದು ಪರಿಚ್ಛೇದವನ್ನೂ ಚನ್ನಾಗಿ ಮಥಿಸಿ, ಸಾವಧಾನದಿಂದ ಸಮಾಲೋಚಿಸಿ, ಗುಣಗ್ರಹಣಮಾಡಿ, ದೀನಭಗಿನಿಯರಿಗೆ ಆಶ್ರಯವನ್ನು ಕಲ್ಪಿಸುವುದರಿಂದ, ನಮ್ಮ ಚಿತ್ರಕಲಾ ನಗೇಶರೇ ಮೊದಲಾದವರ ಆದರ್ಶ ಜೀವನವನ್ನು ಸಾರ್ಥಕಪಡಿಸಿ, ನಮ್ಮವರನ್ನು ಸುತ್ತಿಮುತ್ತಿ ಕಾಡುತ್ತಿರುವ ಕ್ಲೇಶ-ಸಂಶಯಗಳನ್ನು ಕಡಿದುಹಾಕಿ, ನಮ್ಮಾಸ್ತ್ರೀಪ್ರಪಂಚದಲ್ಲಿ ಸಾರಾಸಾರ ವಿಚಾರಪರತೆ, ಇತಿಕರ್ತವ್ಯತೆ, ಆತ್ಮಾವಲಂಬನದ ಅಪೂರ್ವಶಕ್ತಿಗಳನ್ನು ಸ್ಫೂರ್ತಿಗೊಳಿಸುವಂತಹ ವಿದ್ಯಾವೈಭವವು ತಲೆದೋರಿ, ಸುಜ್ಞಾನಸೂರ್ಯೋದಯದಿಂದ ನಮ್ಮ ಪೂರ್ವಜರ ಪ್ರಾಶಸ್ತ್ಯವು ಮತ್ತೆ ಕಳೆಯೇರಿ ಬೆಳಗುವಂತೆ ಮಾಡಿ, ನಮ್ಮ ನಿರ್ಮತ್ಸರ ಪ್ರೇಮ ಸಂಭಾವನೆಯಿಂದ ನಮ್ಮ ದೇಶಮಾತೆಯು ಆನಂದಮಯಿಯೆನ್ನಿಸುವಂತೆ ಮಾಡಲು, ಸರ್ವಪ್ರಕಾರದಿಂದಲೂ ಪ್ರಯತ್ನವನ್ನು ಕೈಕೊಳ್ಳುವುದು, ಕೋಮಲಾಂತಃಕರಣಿಯರಾದ ನಿಮ್ಮನ್ನೇ ಸೇರಿರುವುದು. ಮತ್ತೇನನ್ನು ಹೇಳಲಿ?

ನನ್ನ ಭಗಿನಿಯರೇ! 'ತಾಯಿಗಿಂತ ಹಿತರಿಲ್ಲ; ಉಪ್ಪಿಗಿಂತ ಸವಿಯಿಲ್ಲ.' ಎಂಬ ಗಾದೆಯನ್ನು ನೀವೆಲ್ಲರೂ ತಿಳಿದೇ ಇರುವಿರಿ. ತಾಯಿಯೆಂದರೆ, ನನ್ಮೈಯ್ಯಬ್ಬುವುದೂ, ತವರ್ಮನೆಯನ್ನು ನೆನೆದಮಾತ್ರಕ್ಕೆ ಆತ್ಮನು ಆನಂದಿಂದ ನಲವೇರಿ ನಲಿದಾಡುವುದೂ ನಿಜವಷ್ಟೆ! ಅದೇತರಿಂದ? ಆ ತಾಯಿಯು ಅನಂತವಾದ–ಅಕ್ಷಯವಾದ–ಪ್ರೀತಿಯು ನಮ್ಮನ್ನು ಅನುದಿನವೂ ಸುತ್ತುವರಿದು ಸಲಹುತ್ತಿರುವುದರಿಂದಲೇ ಅಲ್ಲವೇ? ಹಾಗಾದರೆ, ಅಂತಹ ಪ್ರೇಮಮಯಿಯಾದ ತಾಯಿಯಲ್ಲಿ ನಾವು ಹೇಗೆ ವರ್ತಿಸಬೇಕು? ಹೇಳಲಾದೀತೇ?

ತಾಯಿಯ ಮನಸ್ಸು ಒಲಿಯಬೇಕಾದರೆ, ಅವಳಲ್ಲಿರುವ ಅತ್ಯದ್ಭುತವಾದ ಕ್ಷಮಾ, ಧೃತಿ, ಶಾಂತಿ, ಔದಾರ್ಯಗಳ ಸದ್ವೃತ್ತವನ್ನು ನಾವೂ ಅನುಕರಣ ಮಾಡಿ, ಅದರಿಂದ ನಮ್ಮ ಎಡಬಲದವರನ್ನೂ ಮೇಲಕ್ಕೇರಿಸುವುದು ಅವಶ್ಯಕವಲ್ಲವೆ?

ಇಲ್ಲಿ ನಮ್ಮ ತಾಯಿಯೆಂದರೆ, ನಮ್ಮ ಗರ್ಭಧಾರಿಣಿಯರು ಮಾತ್ರವೇ ಅಲ್ಲ. ಅವರನ್ನೂ ಹೆತ್ತ-ಹೊತ್ತ-ಸಲಹುತ್ತಿರುವ ನಮ್ಮ ಆರ್ಯಭೂಮಾತೆ

ಯೇ ನಮ್ಮೆಲ್ಲರಿಗೂ ತಾಯಿ; ಅವಳೇ ಸಮಸ್ತ ದೇವತಾಸಮೂಹಕ್ಕೂ ಅಧಿದೇವತೆ; ಇದೇ ನನ್ನ ತಿಳಿವಳಿಕೆ! ಆ ನಮ್ಮ ಭಗವತಿಯು ಪ್ರತಿನಿಧಿಸ್ವರೂಪಿಣಿಯಾದ ನನ್ನ ಜನ್ಮದಾತೆಯು ತನ್ನ ಸ್ಥೂಲದೇಹವನ್ನುಳಿದಿದ್ದರೂ, ಯಶಶ್ಶರೀರದಿಂದ ನನ್ನ ಪ್ರತಿಯೊಂದು ಅವಯವಗಳಲ್ಲಿಯೂ ವ್ಯಾಪಿಸಿ, ನನ್ನನ್ನು ಈ ಬಗೆಯಾಗಿ ಪಿಡಿದಾಡಿಸುತ್ತಿರುವಳೆಂದೂ, ಅವಳ ಅಶೀರ್ವಾದ ಬಲದಿಂದ ನನ್ನ ಸ್ವಾಮಿಯು ನನ್ನಲ್ಲಿ ಸಾಕ್ಷಾತ್ಕರಿಸಿ, ಮಾತೃಪ್ರೇರಣೆಯಿಂದ ನನ್ನ ಸಮಸ್ತ ಕಾರ್ಯಕಲಾಪಗಳಿಗೂ ಸಹಾಯಕನಾಗಿ ನಿಲ್ಲುತ್ತಿರುವನೆಂದೂ, ಮತ್ತು ಆ ತಾಯಿಯ ಕಟಾಕ್ಷದಿಂದಲೇ ಗುರುಹಿರಿಯರ ಹರಕೆಗಳೂ. ಸದ್ಧರ್ಮ ಭ್ರಾತೃವರ್ಗೀಯರ ಸಹಾಯವೂ ಮತ್ತಷ್ಟು ಪ್ರೋತ್ಸಾಹಿಸುತ್ತಿರುವುದೆಂದೂ ನಾನು ಮನಸ್ಸಾಕ್ಷಿಯಾಗಿ ಹೇಳಬಲ್ಲೆನು.

ಮತ್ತೊಂದು ಮಾತು:—ಈ ನಂದಿನಿಯ ಸರ್ವಸ್ವತಂತ್ರ್ಯವೂ ನಮ್ಮ ಮಾತೃದೈವದ ಚರಣಾರವಿಂದದಲ್ಲಿ ಸಮರ್ಪಿಸಲ್ಪಟ್ಟಿರುವುದರಿಂದ, ಗ್ರಂಥದ ಮೊದಲಿಂದ ಕಡೆಯವರೆಗೆ ಸಾರಿ ಸಾರಿ ಹೇಳುತ್ತಿರುವ 'ಮಾತೆ, ಮಾತೃದೈವ, ಭಗವತೀಮಾತೃ, ಜನನೀ, ಜನ್ಮದಾತೆ, ತಾಯಿ, ಅಮ್ಮ' ಮೊದಲಾದ ಶಬ್ದಗಳು,ನಮ್ಮ ಸೋದರಿಯರಿಗೆ ಬಂದುವೇಳೆ ಹಾಸ್ಯಾಸ್ಪದವಾಗಿ ತೋರಿಬಂದರೂ ನನಗದರಿಂದ ಏನೂ ಅಪಮಾನವಾಗುವಂತಿಲ್ಲ. ಅದೂಅಲ್ಲದೆ ಆನಂದವಾರವಶತೆಯಿಂದ ಲೇಖನದಲ್ಲಿ ನ್ಯೂನಾತಿರಿಕ್ತ ದೋಷಗಳನ್ನು ಮಾಡಿದ್ದರೆ ಕೂಡ. ಅವನ್ನು ಸಹಜ ಕ್ಷಮೆಯಿಂದ ಕ್ರಮಪಡಿಸಿಕೊಳ್ಳುವಂತೆ ಎಚ್ಚರಿಸುವುದು ನಮ್ಮ ದೇಶಬಾಂಧವರನ್ನೇ ಸೇರಿರುವುದೆಂದರೂ ತಪ್ಪಾಗುವಂತಿಲ್ಲ. ಮುಖ್ಯವಾಗಿ ಸದ್ಗುರುದತ್ತವಾದೀ ಅನನ್ಯಮಾತೃಭಾವನೆಯು ಜಡಭಕ್ತಿಯೇ ನನಗೆ ಸ್ಥಿರವಾಗಿದ್ದು, ನಂದಿನೀ—ಸತೀಪಿತೈಷಿಣಿಯರ ದೆಸೆಯಿಂದ ದೇಶಭಾಷಾ ಮಾತೃಸೇವೆಯಲ್ಲಿ ಇಹಜನ್ಮಧಾರಣೆಯ ಪರಾಕಾಷ್ಟೆಯನ್ನು ಕಾಣುವಂತೆ ಅನುಗ್ರಹಿಸಿ, ಶಾಶ್ವತಸುಖಾನುಭವಕ್ಕೆ ಪಾತ್ರಳನ್ನಾಗಿ ಮಾಡೆಂದು ಪುತ್ರವತ್ಸಲೆಯಾದ ಆ ನಮ್ಮ ಭಗವತಿಯನ್ನೇ ಕುರಿತು ಮೊರೆಯಿಡುತ್ತಿರುವೆನು.

ರಾಕ್ಷಸ ಸಂ॥ ಮಾಘಶುದ್ಧ ತ್ರಯೋದಶಿ, ಬುಧವಾರ.
ಮಾತೃಮಂದಿರಂ. ನಂಜನಗೂಡು

ಇಂತಾಶಿಸುತ್ತಿರುವ
ದೇಶಭಗಿನೀ ವಿದ್ಯಾರ್ಥಿನಿ.

॥ ಶ್ರೀಃ ॥

ದ್ವಿತೀಯ ಮುದ್ರಣದ ನಿವೇದನ

ಸತೀಹಿತೈಷಿಣೀ ಗ್ರಂಥಮಾಲೆಯ 6ನೆಯ ಗ್ರಂಥವಾದ ಈ ಮಾತೃನಂದಿನಿ, ಪ್ರಥಮಮುದ್ರಣವಾಗಿ 1916ನೆ ಮೇ ತಿಂಗಳಲ್ಲಿ ಪ್ರಕಟವಾಗಿ, ದೇಶೀಯ ಸೋದರೀ ಸೋದರರ ಕೇವಲ ದೇಶಭಾಷಾಭಿಮಾನ ಬಲದಿಂದ, ಇಷ್ಟರಲ್ಲಿ ಪ್ರಥಮ ಮುದ್ರಣದ 1000 ಪ್ರತಿಗಳೂ ಮುಗಿದು ಹೋದುವು. ದ್ವಿತೀಯ ಮುದ್ರಣದಲ್ಲಿ ಕೆಲವೆಡೆಗಳಲ್ಲಿ ಹೆಚ್ಚು ವಿಷಯಗಳನ್ನು ಸೇರಿಸಬೇಕೆಂದಿದ್ದೆವು; ಆದರೆ, ಈ ಪುಸ್ತಕವನ್ನು ಮೈಸೂರ ವಿದ್ಯಾಂಗದವರು ಹೈಸ್ಕೂಲ್ V ಫಾರಮ್ಮಿಗೆ 1920—21ನೆಯ ಪರೀಕ್ಷಾ ಪಠ್ಯ ಪುಸ್ತಕವಾಗಿ ನಿರ್ಪಡಿಸಿದುದರಿಂದ ಮತ್ತಾವ ಬದಲಾವಣೆಮಾಡುವ ದಕ್ಕೂ ಅವಕಾಶವಿಲ್ಲವಾಯಿತು. ಆದರೂ, ಪ್ರಥಮ ಮುದ್ರಣಕಾಲದಲ್ಲಿ ನಾಲ್ಕಯ್ದು ಕಡೆಗಳಲ್ಲಿ ತಪ್ಪಿಹೋಗಿದ್ದ ಒಂದೊಂದು ಶಬ್ದ ಅಥವಾ ವಾಕ್ಯಗಳನ್ನಷ್ಟೇ ಅಲ್ಲಲ್ಲಿಗೆ ಸೇರಿಸಿರುವುದಲ್ಲದೆ, ಪ್ರಥಮ ಮುದ್ರಣದಲ್ಲಿದ್ದ ಅಕ್ಷರಸ್ಖಾಲಿತ್ಯಾದಿ ಮುದ್ರಣದ ದೋಷಗಳು ಇದರಲ್ಲಿ ಬರಬಾರದೆಂದು ಸಾಧ್ಯವಾದಷ್ಟು ಜಾಗರೂಕತೆಯಿಂದ ಮುದ್ರಿಸಿರುವುದು. ಆದರೂ, ಪುಸ್ತಕವು ಅತ್ಯಂತ ಜಾಗ್ರತೆಯಾಗಿ ಬೇಕಾಗಿದ್ದು, ಮುದ್ರಣ ಸಾಹಿತ್ಯಗಳನ್ನು ಒದಗಿಸಿಕೊಳ್ಳುವುದೇ ತಡವಾಗಿ, ಮುದ್ರಣಕಾರ್ಯವು ಅತ್ಯಂತ ತ್ವರೆಯಾಗಿ ನಡೆದಿರುವುದರಿಂದ, ಅಲ್ಲಲ್ಲಿಗೆ ಅಲ್ಪಸ್ವಲ್ಪ ದೋಷಗಳು, ಒಂದು ನೇಳೆ ಇರಬಹುದಾದರೂ ವಾಚಕರು ಸರಿಪಡಿಸಿಕೊಳ್ಳಬೇಕೆಂದು ಕೋರುವೆವಲ್ಲದೆ, ಪ್ರಥಮಮುದ್ರಣದ ಪ್ರತಿಗೂ, ದ್ವಿತೀಯ ಮುದ್ರಣದ ಪ್ರತಿಯು ಪುಟಸಂಖ್ಯೆ ಕಡೆಮೆಯಾಗಿದ್ದರೂ ಅದರಲ್ಲಿ ಯಾವಭಾಗ ಯಾವಶಬ್ದಗಳನ್ನೂ ಕೂಡ, ತೆಗೆದಿಲ್ಲವೆಂದೂ ಕೇವಲ ವಿದ್ಯಾರ್ಥಿಗಳಿಗೆ ಅಪ್ರಕೃತವಾಗಿ ತೋರಿದ ಪುಸ್ತಕದ ಕೊನೆಯುಲ್ಲಿದ್ದ "ಮಾತೃವಂದನೆ" ಎಂಬ ಕವಿತೆಯನ್ನೂ ಆದಿಯಲ್ಲಿದ್ದ ಭಗವತಿಯ ಆಶ್ವಾಸನವೆಂಬ ಲೇಖನಭಾಗವನ್ನೂ ಮಾತ್ರ ತೆಗೆದು ಹಾಕಿರುವುದರಿಂದ, ಮತ್ತು ಕಾಗದದ ಬೆಲೆ ವಿಪರೀತವಾಗಿ ಏರಿಹೋಗಿರುವುದರಿಂದ ನಿರ್ವಾಹವಿಲ್ಲದೆ, ಸತೀಹಿತೈಷಿಣಿಯ ಚಂದಾದಾರರಿಗೆ 0-14-0 ರಿಂದ 1-2-0 ಗೆ ಇದರ ಬೆಲೆಯೇರಿಸಬೇಕಾಯ್ತೆಂದೂ ಅದಕ್ಕಾಗಿ ವಾಚಕ

ಮಹಾಯರು ಕ್ಷಮೆಯನ್ನು ತಾಳಬೇಕೆಂದೂ ನಿವೇದಿಸಿ, ಇದನ್ನು ಪತ್ಯ ಪುಸ್ತಕವಾಗಿ ಏರ್ಪಡಿಸಿದ ವಿದ್ಯಾಂಗದವರಿಗೂ ಈ ವರೆಗೆ ವಿಶೇಷವಾಗಿ ಪ್ರೋತ್ಸಾಹ-ಸಹಾಯಗಳನ್ನು ಕಲ್ಪಿಸಿಕೊಡುತ್ತ ಬಂದಿರುವ ಮಹನಿಯರಿಗೂ ಕೃತಜ್ಞತೆಯನ್ನೊಪ್ಪಿಸಿ, ಮುಂದೆಯೂ ಹೀಗೆಯೇ ಪ್ರೋತ್ಸಾಹಿಸುತ್ತ ಬರವಂತೆ ಭಗವತಿಯನ್ನು ಪ್ರಾರ್ಥಿಸುತ್ತ ವಿರಮಿಸುವೆವು.

28-6-1920.
ಮುಕ್ಕಾಂ — ಹುಬ್ಬಳ್ಳಿ.

ಹಿಂಡೆಕೃಷ್ಣ.

ಪ್ರಥಮ ಮುದ್ರಣದ ವಿಷಯಸೂಚಿಕಾ ಪುಟಸಂಖ್ಯೆ

ಪರಿಚ್ಛೇದ.	ವಿಷಯ.	ಪುಟಸಂಖ್ಯೆ.
ಪ್ರಥಮ ...	ಮಾತಾಪುತ್ರರ ಸಂಭಾಷಣ ...	1 — 6
ದ್ವಿತೀಯ ...	ದೇವೀಸಾಮಿಪ್ಯ	7 — 15
ತೃತೀಯ ...	ಸಪೇಸಂಭಾಷಣಾವು	15 — 25
ಚತುರ್ಥ ...	ನಂದಿನೀ ಜಯಲಾಭ	25 — 38
ಪಂಚಮ ...	ಭಾತೃಭಗಿನಿಯರ ಸಲ್ಲಾಪ ...	39 — 55
ಷಷ್ಠ ...	ನಿರ್ಮತ್ಸರಪ್ರೇಮ	56 — 63
ಸಪ್ತಮ ...	ನಂದಿನೀ ಸಂದೇಶ	63 — 75
ಅಷ್ಟಮ ...	ಸಮಾಜಶಾಸನ	75 — 88
ನವಮ ...	ಗೃಹಿಣೀಧರ್ಮ	88 —104
ದಶಮ ...	ಅತ್ಯಾಚಾರಕ್ಕೆ ಪ್ರತೀಕಾರ ...	104—121
ಏಕಾದಶ ...	ಸಂಘಶಕ್ತಿ	121—135
ದ್ವಾದಶ ...	ಸಂಪ್ರಾರ್ಥನೆ ಇತ್ಯಾದಿ ...	136—154
ತ್ರಯೋದಶ ...	ಸ್ವಾಭಿಪ್ರಾಯ ನಿವೇದನ ...	155—169
ಚತುರ್ದಶ ...	ಅಭಯಪ್ರದಾನ	170—173
ಪಂಚದಶ ...	ಮಾತೃಸಮ್ಮುಖದಲ್ಲಿ, ಇತ್ಯಾದಿ ...	174—198
ಷೋಡಶ ...	ತಪಸ್ವಿನೀ ಹಿತೋಪದೇಶ ...	199—208
ಸಂಕಲ್ಪಸಿದ್ಧಿ ...	ನಂದಿನೀಕಲ್ಯಾಣ-ದೇಶಸೇವಾದೀಕ್ಷೆ	209—217
ಇತ್ಯಾದಿ—	ಇತ್ಯಾದಿ—	ಇತ್ಯಾದಿ—

(ದ್ವಿತೀಯ ಮುದ್ರಣ)

ವಿಷಯ ಸೂಚಿಕಾ.

ಪರಿಚ್ಛೇದ.	ವಿಷಯ.	ಪುಟಸಂಖ್ಯಾ.
ಪ್ರಥಮ ...	ಮಾತಾಪುತ್ರರ ಸಂಭಾಷಣ ...	1 — 6
ದ್ವಿತೀಯ ...	ದೇವೀಸಾವಿಧ್ಯ	6 — 14
ತೃತೀಯ ...	ಸಖೀಸಂಭಾಷಣ	14 — 23
ಚತುರ್ಥ ...	ನಂದಿನೀ ಜಯಲಾಭ	23 — 36
ಪಂಚಮ ...	ಭ್ರಾತೃಭಗಿನಿಯರ ಸಲ್ಲಾಪ ...	36 — 51
ಷಷ್ಠ ...	ನಿರ್ಮತ್ಸರಪ್ರೇಮ	52 — 59
ಸಪ್ತಮ ...	ನಂದಿನೀ ಸಂದೇಶ	59 — 70
ಅಷ್ಟಮ ...	ಸಮಾಜಶಾಸನ	70 — 82
ನವಮ ...	ಗೃಹಿಣೀಧರ್ಮ	82 — 97
ದಶಮ ...	ಅತ್ಯಾಚಾರಕ್ಕೆ ಪ್ರತೀಕಾರ ...	97 —112
ಏಕಾದಶ ...	ಸಂಘಶಕ್ತಿ	113—125
ದ್ವಾದಶ ...	ಸಂಪ್ರಾರ್ಥನೆ, ಇತ್ಯಾದಿ... ...	126—142
ತ್ರಯೋದಶ ...	ಸ್ವಾಭಿಪ್ರಾಯನಿವೇದನ ...	143—156
ಚತುರ್ದಶ ...	ಅಭಯಪ್ರದಾನ	157—160
ಪಂಚದಶ ...	ಮಾತೃಸಮ್ಮುಖದಲ್ಲಿ	161—183
ಷೋಡಶ ...	ತಪಸ್ವಿನೀ ಹಿತೋಪದೇಶ ...	184—192
ಸಂಕಲ್ಪಸಿದ್ಧಿ ...	ನಂದಿನೀ ಕಲ್ಯಾಣ-ದೇಶಸೇವಾದೀಕ್ಷೆ	193—200
ಇತ್ಯಾದಿ—	ಇತ್ಯಾದಿ—	ಇತ್ಯಾದಿ—

॥ ಶ್ರೀಃ ॥

॥ ಶ್ರೀಮ್ಮಿನಮಃ ॥

ಕರ್ನಾಟಕ

ಮಾತೃನಂದಿನಿ.

"ಸಜ್ಜಲ್ಪಕಲ್ಪಲತಿಕಾಮವಧೀಂ ಕ್ಷಮಾಯಾ-ಸ್ಯೇಚ್ಛಾ
ವರಾಹಮಹಿಷೀಂ ಸುಲಭಾನುಕಮ್ಪಾಮ್ ॥
ವಿಶ್ವಸ್ಯಮಾತರಮಕಿಞ್ಚನ ಕಾಮಧೇನುಂ—
ವಿಶ್ವಂಭರಾಮಶರಣಶ್ಶರಣಂ ಪ್ರಪದ್ಯೇ ॥—"

ಪ್ರಥಮ ಪರಿಚ್ಛೇದ.

(ಮಾತಾಪುತ್ರರ ಸಂಭಾಷಣ)

ಶ್ರೀವಪುರದ ರಾಜಬೀದಿಯಲ್ಲಿ ಮೊದಲ ಉಪ್ಪರಿಗೆಯ ಮನೆಯೇ ಶ್ರೀಮಂತ ನಗೇಶರಾಯನ ನಾಸಸ್ಥಲ. ನಗೇಶರಾಯನು ದೊಡ್ಡ ಜಮೀನ್ದಾರನೂ ವಿದ್ಯಾ-ವಿನಯ ಸಂಪನ್ನನೂ ಆದ ಪುಣ್ಯಪುರುಷನು. ಈತನು ಇನ್ನೂ ನಡುಹರೆಯ (ಮಧ್ಯಮ ವಯಸ್ಕ) ದವನು. ಈತನ ಸಂಸಾರದಲ್ಲಿ ಪತ್ನಿಯಾದ ಚಿತ್ರಕಲೆ, ಮತ್ತು ಮದುವೆಗೆರುವ ಮಗಳು, ಮಗನು, ಇವರು ಮಾತ್ರವೇ ಇದ್ದರು. ಉಳಿದ ನಂಟರಿಷ್ಟರ ವಿಚಾರವು ನಮಗೇಕೆ?

ಪ್ರಕೃತದಲ್ಲಿ, ಮನೆಯ ಮುಂಗಡೆಯ ತೋಟದಲ್ಲಿ, ಕಲ್ಲು ಜಗಲಿಯ ಮೇಲೆ ನಮ್ಮ ಆದರ್ಶಮಹಿಳೆಯೆನ್ನಿಸಿದ ಚಿತ್ರಕಲೆಯೊಬ್ಬಳೇ ಕುಳಿತು,

ನಿರಾಮಯವಾಗಿ ಮೃದುಮಧುರಕಂಠದಿಂದ ದೇವತಾಸ್ತುತಿ ಮಾಡುತ್ತಿದ್ದಳು. ಇವಳ ರೂಪ, ಗುಣ, ವಿದ್ಯಾ ವಿಚಾರಗಳನ್ನು ಕುರಿತು ಹೆಚ್ಚಿಗೆ ಹೇಳಬೇಕೇನು? ಪತಿಗೆ ಸತಿಯೇ ಷಡ್ಗುಣಗಳಿಂದ ಪರಿಪೂರಿತೆಯಾದ ಶಕ್ತಿಯೆಂಬ ವಾಕ್ಯವು. ಈ ನಮ್ಮ ಚಿತ್ರಕಲೆಯಿಂದೆಯೇ ಸಾರ್ಥಕವೆನಿಸಿರುವುದೆಂದರೆ ಸಾಕು.

ಸಾಯಂಕಾಲದ ಅರು ಗಂಟೆಯ ವೇಳೆಯಲ್ಲಿ ಇಷ್ಟರೇ ಕುಳಿತು ಮೆಲ್ಲ ಮೆಲ್ಲನೆ ಗೀತೆಯನ್ನು ಹಾಡುತಿದ್ದ ಚಿತ್ರಕಲೆಯ ಬಳಿಗೆ ಸುಮಾರು ಹತ್ತೊಂಬತ್ತು—ಇಪ್ಪತ್ತು ವರ್ಷದ ಸುಂದರ ತರುಣಾನೂಬ್ಬನು ಬಂದು ನಿಂತನು. ಗೀತಾಸ್ವಾರಸ್ಯದಲ್ಲಿ ಗಮನಕೊಯಾಗಿದ್ದ ಚಿತ್ರಕಲೆ. ಆತನು ಬಂದುದನ್ನು ಕೆಲವು ಯಲಿಲ್ಲವಾದುದರಿಂದ ಮೊದಲಿನಂತೆಯೇ ಕದಲದೆ ನೆಲವನ್ನೇ ನೋಡುತ್ತಾ ಕುಳಿತಿದ್ದಳು.

ತರುಣ:—ಕೈಚಪ್ಪಳಿ ಹೊಡೆದು—"ಅಮ್ಮ! ಇದೇನು, ನಿದ್ದೆಯೇ? ಕುಳಿತಂತೆಯೇ ಇದಾವ ಯೋಗವೋ?"

ಚಿತ್ರಕಲೆ:—ತಲೆಯೆತ್ತಿ ಸ್ನೇಹಿತ್ಯಂಜಕಸ್ವರದಿಂದ—"ನಾದಾನಂದ! ಇದೇನಿಂದು ಇಷ್ಟು ಬೇಗ ಬಂದಿರುವೆ? ಬಿಡುವಾಯ್ತೇನು? ಕುಳಿತುಕೊ." (ಈತನೇ ಚಿತ್ರಕಲೆಯ ಮಗನು.)

ನಾದಾ:—ತಾಯಿ ಬಳಿಯಲ್ಲಿಯೇ ಕುಳಿತು,—"ಅಮ್ಮ! ಅಂದಿನಿಂದ ನಿನ್ನಲ್ಲಿ ಕೆಲವು ವಿಷಯಗಳನ್ನು ಕುರಿತು ಹೇಳಿ ಕೇಳತಕ್ಕುದಿತ್ತು; ಆದರೂ ಈವರೆಗೆ ಸರಿಯಾದ ಸಮಯವೇ ದೊರೆಯದಿದ್ದುದರಿಂದ ಹೇಳಲಾಗಲಿಲ್ಲ. ಇಂದು, ಶಾಲಾಕಾರ್ಯವೂ ಮುಗಿದು, ಸಮಯವೂ ಸರಿಯಾಗಿ ಕಂಡು ಬಂದಿರುವುದರಿಂದ ಸಂಚಾರಕ್ಕೆಂದು ಹೊರಗೆ ಹೋಗದೆ, ಇಲ್ಲಿಗೇ ಬಂದೆನು.

ಚಿತ್ರ:—ಅಷ್ಟು ಆವಶ್ಯಕ ವಿಚಾರವಾವುದು?

ನಾದಾ:—ಆತ್ಯಾವುದೂ ಅಲ್ಲ, ನಂದಿನೀ ವಿಚಾರವೇ!

ಚಿತ್ರ:—ಹೇಳಿ-ಕೇಳುವುದಿದ್ದರೆ ತಡೆಯೇಕೆ?

ನಾದಾ:—ಉಗುಳು ನುಂಗುತ್ತ,—'ನೀನು ಬೇರೆಯಾಗಿ ಬಗೆಯಬಾರದೆಂದು ಈಗಲೇ ಕೇಳಿಕೊಳ್ಳುವೆನು.'

ಚಿತ್ರ:—'ಸರಿ, ಇನ್ನೂ ನಿನ್ನ ನಾಂದಿ (ಪೀಠಿಕೆ) ಮುಗಿವಂತಿಲ್ಲ?'

ನಾದಾ:—ತಲೆದೂಗುತ್ತ,— 'ಅಮ್ಮ! ನಾಂದಿ ಅಷ್ಟೇನೂ ದೊಡ್ಡ ದಾಗಿಲ್ಲ. ಬೇಸರವಾಗದ್ದರೆ ಬೇಡ. ಅಮ್ಮ! ನಂದಿನಿ ಇಲ್ಲಿಗೆ ಬಂದು. ಈಗಾಗಲೇ ಎರಡು ವರ್ಷಕ್ಕೆ ಬಂತಲ್ಲವೇ?'

ಚಿತ್ರ:—ಇರಬಹುದು, ಏಕೆ?

ನಾದಾ:—ಅವಳನ್ನು ನೋಡುವುದಕ್ಕೆಂದು ಅವಳ ತಾಯ್ತಂದೆಗಳಾರೂ ಬಂದಂತೆ ಕಾಣುತ್ತಿಲ್ಲ) ಕಾರಣವೇನು?

ಚಿತ್ರ:—ಅವಳು, ತಾಯ್ತಂದೆಗಳಿಲ್ಲದ ಅನಾಥೆಯಂತೆ!

ನಾದಾ:—ಹಾಗಾದರೆ, ಇವಳನ್ನು ಕರೆತಂದು ಬಿಟ್ಟಹೋದ ಬ್ರಹ್ಮಚಾರಿಯಾರು?

ಚಿತ್ರ:—ಅವಳ ಬಾಲಕ ಪಿತನಂತೆ!

ನಾದಾ:—ತಪಸ್ವಿನಿಯೋ?

ಚಿತ್ರ:—ಬ್ರಹ್ಮಚಾರಿಯು ಸಹಾಧ್ಯಾಯಿನಿಯೂ, ನಂದಿನಿಯು ಬ್ರಹ್ಮಚಾರಿಣಿಯೂ ಆದ ಯೋಗಿನಿಯಂತೆ!

ನಾದಾ:—ಅವರಾದರೂ ಬಂದಿಲ್ಲವಷ್ಟೆ?

ಚಿತ್ರ:—ಅವರು, ದೇಶಸಂಚಾರಕ್ಕೆಂದು ಹೋಗಿರುವರು.

ನಾದಾ:—ಯಾವ ಉದ್ದೇಶದಿಂದ?

ಚಿತ್ರ:—ನನಗೆ ಗೊತ್ತೇ?

ನಾದಾ:—ಹೋಗಲಿ; ಈಗ ಅವಳಿಗೆ ಕರ್ತರಾರು?

ಚಿತ್ರ:—ಸದ್ಯಕ್ಕೆ ನಾವೇ ಕರ್ತರಾಗಿರುವಂತೆ.

ನಾದಾ:—ಹಾಗಿದ್ದೂ, ಅವಳು ಇಲ್ಲಿಗೆ ಬಂದುದು ಸೊಗಸು. ಕಾಡು ಹೆಂಗಸರಂತೆ ಅಲಂಕಾರವನ್ನು ಬಿಟ್ಟಿರುವುದು ಸಮ್ಮತವೊ?

ಚಿತ್ರ:—ಅವಳಿಗೆ ಅದೇನೂ ಬೇಕಾಗಿಲ್ಲವಂತೆ!

ನಾದಾ:—ಕುತೂಹಲದಿಂದ,— 'ಏನು, ಬೇಕಿಲ್ಲವೇ? ಅವಶ್ಯವಾಗಿ ಹೆಂಗಸಲ್ಲವೇ? ಹಾಗಿರಲು ಕಾರಣವೇನೋ ಇರಬೇಕು!'

ಚಿತ್ರ:—ಕಾರಣ-ಗೀರಣಗಳನ್ನು ನೀನೇ ಹೇಳಬೇಕು!

ನಾದಾ:—ಸ್ವಜನರನ್ನು ಬಿಟ್ಟು ಬಂದೆನೆಂಬ ಕೊರತೆಯೊ? ಇಲ್ಲವೆ ಪ್ರೌಢೆಯಾಗಿದ್ದೂ.....

ಚಿತ್ರ:—ಅಂತಹದೇನೂ ಕಾಣುತ್ತಿಲ್ಲ. ಯಾವಾಗಲೂ ಅವಳ ಮನಸ್ಸು ಆತ್ಮವಿಚಾರದಲ್ಲಿರುವೇ ಇರುವಂತೆ ನನಗೆ ತೋರುತ್ತಿದೆ.

ನಾದಾ:—ತಲೆದೂಗುತ್ತ,—'ಅದು ಸುಳ್ಳು! ಅಮ್ಮ! ವಯಸ್ಸಾದ ನಳು ಲೋಕಾನುಭವ ವಿಷಯಗಳಿಗೆ ದೂರವಾಗಿರುವಳೆಂದರೆ ನಂಬುವವರಾರು? ಈಗವಳ ಮನಸ್ಸು ಸರಿಯಾಗಿಲ್ಲವೆಂದೇ ನನ್ನ ಭಾವನೆ!'

ಚಿತ್ರ:—ಓಹೋ! ಅದೂ ಒಂದು ರಹಸ್ಯವುಂಟೋ? ನನಗೆ ತಿಳಿಯದು. ಆಗಲಿ, ಅದು ಹೇಗೆಂಬುದನ್ನಾದರೂ ಹೇಳಬಲ್ಲೆಯೊ?

ನಾದಾ:—"ಹೇಳಬೇಕೇ? ಯೋಚಿಸಿದರೆ ತಿಳಿಯಲಾರದೇ? ಅಲಂಕಾರ–ಸುಗಂಧಾನುಲೇಪನ–ವಿಲಾಸ–ವಿಭ್ರಮಾದಿಗಳಿಂದ ಯಾವಾಗಲೂ ನಲಿನಲಿದಾಡುತ್ತಿರಬೇಕಾದ ಈ ಕಾಲವು, ಹೀಗೆ ಇಷ್ಟು ಬೇಸರವಾಗಿ ಕಳೆಯುತ್ತಿರುವುದೇಕೆ? ನೀನೇ ಹೇಳಲಾಗದೇನಮ್ಮ?"

ಚಿತ್ರ:—ನನಗೆ ಅದಾವುದೂ ತಿಳಿಯದು; ನಸ್ಸಲ್ಲ ಅವಳು ಇದನ್ನು ಹೇಳುವಂತೆಯೂ ಇಲ್ಲ.

ನಾದಾ:—ಅಮ್ಮ! ನೀನು ಸರಿಯಾಗಿ ವಿಚಾರ ಮಾಡಿಯೇ ಇಲ್ಲ. ಹೇಗೂ ಅವಳು ಈ ಬಗೆಯಾಗಿರುವುದು ನನಗೇನೋ ತೃಪ್ತಿಕರವಾಗಿಲ್ಲ.

ಚಿತ್ರ:—ವಿಸ್ಮಯದಿಂದ—'ಏತರಿಂದ?'

ನಾದಾ:—ಅರಳಿದ ಕಣ್ಣಿಂದ ತಾಯಿ ಮುಖವನ್ನೇ ನೋಡುತ್ತ,—"ಏಕೆಂದರೆ, ಹೇಳಬೇಕೇನಮ್ಮ? ಒಂದೇ ಮನೆಯಲ್ಲಿರುವ ನಮಗೆ ಪರಸ್ಪರ ಸ್ನೇಹವೆಷ್ಟಿರಬಹುದೆಂಬುದನ್ನಾದರೂ ತಿಳಿಯಬಾರದೇನು?"

ಚಿತ್ರ:—ಹೆಚ್ಚಾಗಿಯೇ ಇರಬಹುದು; ಆದರೇನು?

ನಾದಾ:—ಮತ್ತೇನು? ಸ್ನೇಹಕ್ಕೆ ತಕ್ಕವಸ್ತು ಕಾಂತಿಯಿಂದ ಬಗೆಗೊಳ್ಳುವಂತಿರಬೇಕೆಂಬುದು, ಪ್ರತಿಮಾನವನ ಅಭಿಲಾಷೆಯೂ ಆಗದೆಯೆಂದರೆ, ಅವಳು ಹಾಗಿರುವುದು ದುಃಖವಲ್ಲದೆ ಸುಖಕರವೋ?

ಚಿತ್ರ:—ಆದಿರಲಿ; ಅವಳನ್ನು ನೀನೇ ಮದುವೆಯಾಗುವೆಯೊ?

ನಾದಾನಂದನು ನಿರುತ್ತರನಾಗಿ ತಾಯಿ ಮುಖವನ್ನೇ ನೋಡುತ್ತ ಕುಳಿತನು. ಆ ವೇಳೆಯಲ್ಲಿ ಅವನ ಮುಖದಲ್ಲಿ ತೋರಿದ ರಕ್ತತೆಯೂ, ಕಣ್ಣಳಲ್ಲಿ ಹೊರಹೊಮ್ಮುತಿದ್ದ ವಿಜಾತೀಯ ಕಟಾಕ್ಷಕಾಂತಿಯೂ ಅನು

ಭವಶಾಲಿಗಳಿಗೆ ಮತ್ತು ಪ್ರತ್ಯಕ್ಷದರ್ಶಿಗಳಿಗೆ ಮಾತ್ರವೇ ತಿಳಿಯಬೇಕಲ್ಲದೆ ಹೇಳಿ–ಕೇಳುವುದರಿಂದ ತಿಳಿಯಲಾರದು.)

ಚಿತ್ರ:—ದರ್ಪಿತಸ್ವರದಿಂದ—'ನಾದಾನಂದ! ಇದೇಕೆ ಉತ್ತರವಿಲ್ಲ? ಇಷ್ಟವಿಲ್ಲವೊ? ಹೋಗಲಿ, ಬಿಡು; ಅಷ್ಟೇನೂ ಬಲಾತ್ಕಾರವಿಲ್ಲ! ನಿನ್ನ ಮನಸ್ಸಿಗೆ ಬಿಟ್ಟದವಳನ್ನೇ ಮದುವೆಯಾಗಬಹುದು. ಅವಳಿಗೂ ಬೇರೊಬ್ಬ ವರನು ದೊರೆಯದೇ ಹೋಗುವುದಿಲ್ಲವಷ್ಟೆ?'

ನಾದಾ:—ಅಮ್ಮ! ಬಲ್ಲೆ; ನೀನು ನನ್ನನ್ನು ಪರೀಕ್ಷಿಸಬೇಕೆಂದೇ ಹೀಗೆ ಕೇಳುವೆ! ಈ ಮಾತಿಗೆ ಉತ್ತರವನ್ನು ಕೊಡುವುದು ನನಗೆ ಸರಿಯಾ.. ಕಾಣುತ್ತಿಲ್ಲವಾದರೂ. ಹೆತ್ತ ತಾಯಿ ಕೇಳುತ್ತಿದ್ದರೆ, ಹೇಳದಿರುವುದಕ್ಕೆ ಸನ್ನಿಂವಾಗದು. ನೀನು ಹೇಗಾದರೂ ಹಾಸ್ಯಮಾಡಬಹುದು. ಬಿಂದೇ ಮಾತಿನಿಂದ ಮುಗಿಸುವೆನು. 'ನಂದಿನಿಯು ಕೈ ಹಿಡಿದವನು ಧನ್ಯಾತ್ಮನೇ ಸರಿ!'

ಚಿತ್ರ:—ಹಾಗೆಂದೇ ಹೇಳು. ನಾನೇಕೆ ಹಾಸ್ಯಮಾಡುವುದು? ನಾದಾ! ನಿನಗೆ ಪೂರ್ಣಾಭಿಪ್ರಾಯವಿಷ್ಟೆ?

ನಾದಾ:—ಮತ್ತೆಮತ್ತೆಯೂ ಕೇಳುವುದೇಕೆ? ನನಗೆ ಸಮ್ಮತವುಂಟು. ಆದರೆ, ಈಗಲೇ ಇದನ್ನು ಅಪ್ಪನ ಕಿವಿಗೆ ಮುಟ್ಟಿಸಲಾಗದು.

ಚಿತ್ರ:—ಏಕೆ?

ನಾದಾ:—ಅತನು, ಮನಸ್ಸಿನಿಂದಾದರೂ, ಮಗನು ವ್ಯಾಮೋಹಕ್ಕೆ ಸಿಕ್ಕಿ ವಿದ್ಯಾವ್ಯಾಸಂಗದಿಂದ ಚಾರಿತೋದನೆಂದೆಣಿಸಿ, ನನ್ನನ್ನು ತಿರಸ್ಕರಿಸಬಹುದಾಗಿದೆ.

ಚಿತ್ರ:—ನಾದಾ! ಅವರವರೆಗೂ ಹೋಗಬೇಕೇ? ನಾನೇ ಹೇಳುವೆನು. ನಿನಗೆ ಬರಿಯ ಮೋಜುಗಾರಿಕೆಯಿದ್ದಾಗಲೇ ನನ್ನ ಮನಸ್ಸು ಶಂಕಿಸುತ್ತಿತ್ತು; ಈಗ ಕೇಳಬೇಕೆ? ಈ ಹಂಬಲಿಗೆ ಎಡೆಯಾದ ಒಳಿಕ ವಿದ್ಯೆ ಹತ್ತುವುದೆಂಬುದನ್ನು—.

ನಾದಾ:—ಅಷ್ಟುದೂರ ಸಿಟ್ಟು ಮಾಡಬೇಡವಮ್ಮ! ಇನ್ನೂ ನಾನು ಅಷ್ಟರ ಮುಠಾಳನಾಗುವಂತಿಲ್ಲ. ತಕ್ಕಮಟ್ಟಿಗೂ ತಿಳಿದೇ ನುಡಿಯುತ್ತಿರುವೆನು. ಆದರೆ, ಇಂದಿನ ನನ್ನ ಅಧಿಕಪ್ರಸಂಗಕ್ಕೆ ಕ್ಷಮೆಯನ್ನು ಕೇಳಿಕೊಳ್ಳು

ನೆನು. ನಿನ್ನ ಮುಂದೆ ಏಂದೂ ಹೀಗಿ ಮಾತಾಡುವುದಿಲ್ಲವೆಂದು ನಂಬು ಕ್ಷಮಿಸು!

ಚಿತ್ರ:- ನಾದಾ! ಇಷ್ಟಕ್ಕೇ ಹೆದರಿಕೆ? ತಾಯ್ತಂದೆಗಳಲ್ಲಿ ಮಕ್ಕಳು ಕ್ಷಮೆಯನ್ನು ಕೇಳಿದರೂ ಕೇಳದಿದ್ದರೂ ಕ್ಷಮಿಸುವುದೇ ಅವರ ಗುಣವಷ್ಟೆ! ನಿನ್ನ ಬುದ್ಧಿ ಸಾದದಂತೆ ಮಾತಾಡಿದೆಯೇ ಮಂಗಳಾಕಾರಿಣಿ! ನಿನ್ನ ಕರ್ತವ್ಯವನ್ನು ಗಮನಿಸಿದರೆ ಇದಕ್ಕಿಂತ ಎಷ್ಟೋ ಸಂಕೋಚ!

ನಾದಾ. -ಅಮ್ಮ! ತಪ್ಪಾಗಿ ಕ್ಷಮೆ ಬೇಡುವುದು ನನ್ನ ಕರ್ತವ್ಯವೂ. ನಾನು ಹೊರಡಬಹುದೇ?

ಚಿತ್ರ:- ಹೊರಡಬಹುದು. ವಿವೇಕಿಯಾದ ನಿನಗೆ ಮತ್ತೇನನ್ನೂ ಹೇಳಬೇಕಾದುದಿಲ್ಲವಾದರೂ ತಕ್ಕಮಟ್ಟಿಗೆ ಧೈರ್ಯ ಸ್ಥೈರ್ಯ ಏಂಬ ಕರ್ತವ್ಯವನ್ನು ಗಮನಿಸುತ್ತಿರಬೇಕೆಂದು ಹೇಳುವೆನು.

ನಾದಾ.- ಅಮ್ಮ! ನಿನ್ನ ಅನುಗ್ರಹವಿದ್ದರಾಯಿತು. ಎಂದು ಹೊರಟುಹೋದನು.

ಚಿತ್ರಕಲೆಯೂ ನಾಳಿನಾಂತರವನ್ನು ಕುರಿತು ತೆರಳಿದಳು.

(ಮಾತಾ-ಪುತ್ರರ ಸಂಭಾಷಣದ ಸಾರಾಂಶವನ್ನು ನಮ್ಮ ತರುಣ ಸೋದರೀ ಸೋದರರೆಲ್ಲರೂ ಚೆನ್ನಾಗಿ ಮಥಿಸಿ ಸಂಗ್ರಹಿಸಬಹುದಲ್ಲವೇ?)

॥ ೨ನೇ ॥

ದ್ವಿತೀಯ ಪರಿಚ್ಛೇದ.

(ದೇವೀ ಸಾಮಿಪ್ಯ)

ರಾತ್ರಿ ಒಂಬತ್ತು ಗಂಟೆ ಹೊಡೆದು ಹೋಗಿದೆ. ನಗೇಶರಾಯನ ಮನೆಯ ವಿಶ್ರಾಂತಿಮಂದಿರದಲ್ಲಿ, ದೀಪದ ಮುಂದೆ ಲಾವಣ್ಯಮಯಿಯಾದ ರಮಣೀಮೂರ್ತಿ, ಪೀಠದ ಮೇಲೆ ಮಂಡಿಸಿ ಬಗೆಗೊಳ್ಳುವಂತಿದೆ.

ಮೂರ್ತಿಯ ಕೈಗಳಲ್ಲಿ ಯಾವುದೋ ಪುಸ್ತಕವೊಂದು ಹಿಡಿಯಲ್ಪಟ್ಟಿದೆ. ಮೂರ್ತಿಯ ದೃಷ್ಟಿಯು ಪುಸ್ತಕಾವಲೋಕನದಲ್ಲಿಯೇ ನೆಲೆಗೊಂಡಿರುವುದಲ್ಲದೆ ಅತ್ತಿತ್ತ ಚಲಿಸುವಂತಿಲ್ಲ.

ರಮಣಿಯು ಈ ವಿಚಿತ್ರವಾದ ಸಮಾಧಿಯೋಗವನ್ನು ನೋಡಿ ಕೆಲವು ನಿಮಿಷಗಳ ತನಕ ಸ್ತಬ್ಧಳಾಗಿ ನಿಂತುಬಿಟ್ಟಳು. ನಾದಾನಂದನು ಈ ತರಹದ ಯೋಗವನ್ನು ಸಹಜವಾಗಿ ಸಾಧಿಸಿರುವುದನ್ನು ನೋಡಿದನು. ಪರಿಸ್ಥಿತಿಯು ಹೀಗಿರಲು ಮೂರ್ತಿಯ ಧ್ಯಾನಭಂಗವಾಗುವುದು ಹೇಗೆ! ತಲೆದೂಗುತ್ತಾ ಸದ್ದಿಲ್ಲದೆ ರಮಣಿಯು ಮುಂದೆ ಬಂದುನಿಂತಳು. ಆಗಲೂ ಮೂರ್ತಿಯ ತಲೆಯೆತ್ತಿ ನೋಡದಿರುವುದನ್ನು ಕಂಡಳು. ನಾದಾನಂದನು ಉಪಾಹಾರದಿಂದ ರಮಣಿಯ ಕೈಯಲ್ಲಿದ್ದ ಪುಸ್ತಕವನ್ನು ಕಿತ್ತುಕೊಂಡನು.

ರಮಣಿ. ಇಂತೆಯಾಗಿ ತಲೆಯೆತ್ತಿ ನೋಡಿದಳು: ಮುಖವು ಗಂಭೀರ ಮನೋಭಾವವನ್ನು ತಳೆದುದು: ಸೌಮ್ಯಳಾಗಿ ಕೇಳಿದಳು: "ನಾದಾನಂದ! ಇದೇನಿಂದು ಇಷ್ಟು ಹೊತ್ತಿನಲ್ಲಿ?"

ನಾದಾ: "ಕೆಲವು ನಿಮಿಷಗಳಿಂದ ನಂದಿನೀ ಸಂದರ್ಶನಕ್ಕೆ ನಾದವು ಬರಲಾಗದೋ?"

ರಮಣಿ: "ಆಗದೇಕೆ? ಅಂತರಂಗಕ್ಕೆ?

ನಾದಾ: ದೇವಿಯ ಅಪ್ಪಣೆಯಿಲ್ಲದೆ ಕುಳಿತುಕೊಳ್ಳುವುದು ಸರಿಯೆ?

ರಮಣಿ: ಯಾವಾಗಲೂ ನಿನ್ನನ್ನು ಈ ಕುತರ್ಕವು ಬಿಡುವಂತಿಲ್ಲ!

ನಾದಾ: ಕೆಟ್ಟುದೇನು, ನಂದಿನಿ? ಅದಕ್ಕೆಂದೇ ನಾದವು ದೇವೀ ಪಾದಪ್ರದೇಶದಲ್ಲಿ ಕುಳಿತಿರುವುದನ್ನು ನೋಡು! (ನಂದಿನಿಯು ಹೇಳದೆ ಒಳಬಂದಿದ್ದಳೆಂದು ನಂದಿನಿಯು ಹೇಳದೆ ಒಳಬಂದಿದ್ದಳೆಂದು ನಟಿಸಿದನು.)

ರಮಣಿ(ನಂದಿನಿ)ಯೂ ತಲೆದೂಗುತ್ತಾ ಸರಿದು ನೆಲದಮೇಲೆ ಕುಳಿತಳು.

ನಾದಾ: ಛಲೆ! ಇದೀಗ ದೇವಿಯ ಸುಪ್ರಸನ್ನತೆ!

ನಂದಿನಿ: ನಾದಾ! ಈ ಕಣಿಯನ್ನು ಎಲ್ಲಿಂದ ಕಲ್ತು ಬಂದುದು?

ನಾದಾ: ಬಹುದೂರದಿಂದ, ನಿನಗಾಗಿಯೇ ಕಲ್ತುಬಂದುದು.

ನಂದಿನಿ: ಹಾಗಾದರೆ, ನೀನು ನಿಜವಾದ ವಿದ್ಯಾರ್ಥಿಯಲ್ಲವೇ? ನನಗಾಗಿಯೇ ಇವೆಲ್ಲವನ್ನೂ ಕಲ್ತುಬಂದುದು?

ನಾದಾ:—ಸಂಶಯವೇಕೆ?

ನಂದಿನಿ:--ಸಂಶಯವಿಲ್ಲ; ಆದರೆ.....ನ್ಯಾಸಂಗವೂ ನನಗಾಗಿಯೇ ನಡೆಯುತ್ತಿರಬೇಕು?

ನಾದಾ:--ಓಹೋ! ಅದೂ ನಿನಗಾಗಿ, ಅಥವಾ ಅನ್ಯರಿಗಾಗಿಯೇ?

ನಂದಿನಿ:--ತಲೆದೂಗಿ--"ಛಲೆ, ನಾದಾನಂದ! ನೀನು ಪರಾರ್ಥವಾದಿಯೇ ಸರಿ. ಅಹುದು! ಎಲ್ಲರೂ ನಿನ್ನಂತಹ ವಿದ್ಯಾವ್ಯಾಸಂಗಗಳೇ ಆದಪಕ್ಷದಲ್ಲಿ ಬೋಧಕರೆಲ್ಲರೂ ಬಲುಬೇಗ ಕೆಲಸದ ಗೊಂದಲದಿಂದ ಬಿಡುಗಡೆ ಹೊಂದಬಹುದು!"

ನಾದಾ: --ನಂದಿನಿ! ಈ ಕಾಲದ ಉಪಾಧ್ಯಾಯರಿಗೆ ಅಥವಾ ಬೋಧಕರಿಗೆ ತಿಳಿವಿದ್ದರಲ್ಲವೇ, ನಮಗೆ ತಿಳಿವು ಬೇಕೆಂಬುದು? ಅವರನ್ನು ನೋಡಿದರೆ ನಾನೇ ಸುವೃತ್ತರೆಂದೂ ಸೂಕ್ಷ್ಮದೃಷ್ಟಿಗಳೆಂದೂ ತಿಳಿದುಬರುವುದು. ಈಗಿನ ಬೋಧಕರಿಗೇನು? ದಿನದಬ್ಬುವುದೊಂದು ಗೊತ್ತು; ಕೈಗೆ ಹಣ ತುಂಬುವುದೊಂದು ಲೆಕ್ಕ!! ಕಾಲಹರಣಕ್ಕೆಂದರೆ, ಹರಟೆಗೆ ಮಕ್ಕಳಿದ್ದರೆ ನಲವೇ!!!--ಇಲ್ಲವಾದರೆ, ಒಕ್ಕಲಗಿತ್ತಿಯಾದರೂ ಇದ್ದೇ ಇರುವಳು? ಅವರ ಗತಿಯೇ ಹೀಗಾಗಿಹೋಗಿದೆ. ಇನ್ನು ನಮ್ಮನ್ನು ಕೇಳಿದರೆ ಹೇಳುವುದೇನು? ಕಂಡಂತೆಯೇ ಇರುವುದು!

ನಂದಿನಿ:--ತಲೆದೂಗುತ್ತ--"ನಾದಾ! 'ಗುರುವಿನಂತೆಯೇ ಶಿಷ್ಯರು' ಎಂಬುದು ನಿಜವಾಗಿದ್ದರೂ ಗುರುವು ಮಾಡುವ ಕೆಟ್ಟಕೆಲಸಗಳನ್ನು ತಿಳಿತಿಳಿದೂ ಗುರುಪ್ರಸಾದವೆಂದು ಅದನ್ನೇ ಅನುಸರಿಸುವುದು ನಮ್ಮ ಧರ್ಮವಲ್ಲ. ಅವರಲ್ಲಿರುವ ಗುಣಭಾಗಗಳನ್ನು ನಾವು ಅನುಸರಿಸಬೇಕಾದುದೇ ಮುಖ್ಯವು. ದೋಷವನ್ನು ಹುಡುಕುತ್ತ ಹೋದರೆ, ಎಷ್ಟೆಷ್ಟೋ ಕಂಡುಬರುವುವು. ಅದರೆ, ಹೆರವರ ಕುಂದನ್ನೇ ಅರಿಸಿ ಅಕ್ಷೇಪಿಸುವುದು ಸರಿಯಲ್ಲವೆಂದ ಬಳಿಕ, ಗುರುಗಳ ವಿಚಾರದಲ್ಲಿಯೇ ದೋಷವನ್ನು ಚಿಂತಿಸುವುದು ಎಂತಹ ಪಾತಕವೋ ತಿಳಿದು ಹೇಳಲಾರೆಯೋ?"

ನಾದಾ:--ನಂದಿನಿ! ನೀನು ಹೇಗೆ ಬೇಕಾದರೂ ಹೇಳು. ಆದರೆ, ನಿನ್ನನ್ನು ಕುರಿತು, --"ಯಾವಾಗಲೂ ನಿಜವನ್ನೇ ಹೇಳು; ಚಿತೇಂದ್ರಿಯಳಾಗಿಯೇ ಇರು." ಎಂದು ಉಪದೇಶ ಮಾಡಲು ನಾನೂ ಬಲ್ಲೆನು. ಹಾಗೆ ಉಪದೇಶಿಸುವ ನನ್ನಲ್ಲಿಯೇ ನೂರಾರು ಕುಟಿಲ ನಟನೆಗಳಿದ್ದರೆ ನೀನು ನನ್ನ

ಉಪದೇಶಕ್ಕೆ ಕಿವಿಗೊಡುವೆಯೋ? ನಿನ್ನನ್ನು ಜಿತಜಿತ್ತಳಾಗಿರೆಂದು ಹೇಳುವ ನಾನೇ ನೂರೆಂಟು ನಂದುಗೊಂದುಗಳಲ್ಲಿ ತಿರುಗುವ ನಿಷಯಲಂಪಟನಾಗಿದ್ದರೆ, 'ನಿನ್ನ ನಡೆಯೆಷ್ಟು ಭದ್ರವಾಗಿದೆಯೆಂಬುದನ್ನು ತಿಳಿದು ಹೇಳು' ಎಂದು ನೀನೇ ನನ್ನನ್ನು ಭಂಗಿಸಿರುವೆಯೊ? ಚೆನ್ನಾಗಿ ವಿಚಾರಮಾಡಿ ಹೇಳು. ನಂದಿನಿ! ಈ ಕಾಲದ ಸಂನ್ಯಾಸಜೇಷಧಾರಿಗಳ ಸೊಬಗು ಕೂಡ, ಇಂತಹ ಕಪಟನಾಟಕವೆಂಬುದು ನಿನಗೆ ಗೊತ್ತಿಲ್ಲವೇನು? ಅದರಿಂದಲ್ಲವೇ ಸನಾತನ ಧರ್ಮವೂ ಬರುಬರುತ್ತ ಕಳಿಲವಾಗುತ್ತಿರುವುದು? ಸರ್ವಸಂಗ ಪರಿತ್ಯಾಗ ಮಾಡಿದೆವೆಂದು ಹೇಳಿಕೊಳ್ಳುವವರೇ ಹೀಗಾದರು! ಇನ್ನು ಸಂಸಾರತಾಪತ್ರಯಕ್ಕೆ ಸಿಕ್ಕಿ ನರಳುತ್ತಿರುವ ಬೋಧಕವರ್ಗದವರನ್ನು ಕುರಿತು ಹೇಳಬೇಕೊ? ಅವರಲ್ಲಿ ಎಷ್ಟೋ ವಿಚಾರಗಳು ನಮಗೆ ಅತೃಪ್ತಿಯನ್ನುಂಟುಮಾಡುತ್ತಿವೆ!

ನಂದಿನಿ:– ಹೇಗೆ?

ನಾದಾ:—ಹೇಗೆಂದರೆ. ಶಾಲೆಗೆ ಬರುವವರಲ್ಲಿ ಕೆಲವರು ಉದರಂಭರಣಾರ್ಥಕ್ಕೆಂದು ಬರುವರು. ಮತ್ತೆ ಕೆಲವರು, ಬರಿಯ ಕಾಲಹರಣಕ್ಕೆಂದೇ ಬರುವರು. ಇನ್ನುಳಿದ ಕೆಲವರಲ್ಲಿ ಜನಮೆಚ್ಚಿಗೆಗಾಗಿ ಬರುವವರೂ ಉಂಟು. ಹೇಗೂ ಸರಿಯಾದ ಗುರುವೆಂದರೆ,—ಬೋಧಕನೆಂದೆ,—ಅಥವಾ ಉಪಾಧ್ಯಾಯನೆಂದರೆ ನೂರುಮಂದಿಗೆ ಒಬ್ಬ ನಾದರೂ ಇರಬಹುದೋ ಇಲ್ಲವೋ ಹೇಳುವಂತಿಲ್ಲ.

ನಂದಿನಿ:—ಇರಬಹುದು; ಅದರೂ, ನಾವುಕೂಡ ಅವರ ದಾರಿಯನ್ನೇ ಹಿಡಿದು ನಡೆವುದೆಂದರೆ ತಿಳಿಗೇಡಿತನವೇ ಸರಿ. ನಿಜವಾದ ಗುರುಜನವು ಮಕ್ಕಳನ್ನು ಅವಿವೇಕಾಂಧತೆಯಿಂದ ಬಿಡಿಸಿ, ಜ್ಞಾನವಿಶಿಷ್ಟರನ್ನಾಗಿ ಮಾಡಬೇಕಾದ ತಮ್ಮ ಕರ್ತವ್ಯದಲ್ಲಿ ಗಮನವಿರಿಸುವುದಾದರೆ, ಮೊದಲು ತಮ್ಮ ನಡೆಯಲ್ಲಿರಬಹುದಾದ ಕೊರತೆಗಳನ್ನು ಕ್ರಮಪಡಿಸಿಕೊಳ್ಳದೆ ಮುಂದಕ್ಕಡಿಯಿಡಲಾರರು! ಅಂತವರು ತಮ್ಮ ನಡೆನುಡಿಯನ್ನು ಮೇಲುಪಂಕ್ತಿಯಾಗಿಟ್ಟು, ತಮ್ಮ ಬಾಲಕರನ್ನೂ ಅದೇ ದಾರಿಯಲ್ಲಿಯೇ ಸರಿಯಾಗಿ ನಡೆಯಿಸಬಲ್ಲವರು, ಅವರೇ ಸದ್ಗುರುಶಬ್ದಕ್ಕೆ ಪಾತ್ರರು! ಅದಿರಲಿ. ನೀನು ಬಂದ ಕೆಲಸವೇನೆಂಬುದನ್ನು ಮೊದಲು ತಿಳಿಯಿಸು?

ನಾದಾ:—ಕುತೂಹಲದಿಂದ.—" ನೀನು ಇನ್ನೂ ಎಷ್ಟು ದಿನಗಳನ್ನು

ಈ ಪ್ರಶ್ನೆಯೆಲ್ಲಿ ಕಳೆಯಬೇಕೆಂದಿದೆ?"

ನಂದಿನಿ:- ಅಮರತ್ವವುಳ್ಳ ಪ್ರಶ್ನೆಯೆಗೂ ಮರ್ತ್ಯಕ್ಕೂ ಅವಸಾನ (ಅಂತ) ವೆಲ್ಲಿಯದು?

ನಾದಾ:- ಮಾಗೇದು ನಾಯುಸಪತೆಗೂ ಮೀಗುವೇ ಇರಬೇಕೆನ್ನ ಬೇಕೋ?

ನಂದಿನಿ: ಇನ್ಸೈನಸ್ಸು ಬೇಕಬೇಕಾ?

ನಾದಾ:--ಈ ನಮಸ್ಯೆಯನ್ನು ಬಂಡಿಯಲ್ಲು ನಮಸ್ಯೆಯುಗಳೆಲ್ಲ ನೀನು ಸೀರಿಯಸ್ಸಾಗಿಯುವುದೇಕೆ? ಜೀವನಸ್ಸನ್ನು ನಿಕಸನಮಯಸುವುದು ಇನ್ನೆಂದು?

ನಂದಿನಿ:- ಇದೇ ವಿದ್ಯಾರ್ಥಿ ಸಿಯಮವಷ್ಟೆ! ಪುಸ್ತೋಪಿಕಸನಕ್ಕೆಂದು ಬದಂಬಿನದಲ್ಲು, ಮನಸ್ಸನ್ನಿಟ್ಟು ವಿಲಾಸ-ವಿಭವಾದಿಗಳಿಗೆ ಮರುಳಾಗುವಂತಾದರೆ ವಿದ್ಯಾರ್ಜನವಾದೀತೇ? ಅಥವಾ ಒಬ್ಬಿಯಾದರೂ ನೆಟ್ಟಗಿರುವುದೆಂದು ಹೇಳಬಲ್ಲೆಯೊ?

ನಾದಾ:- ಓಹೋ! ಅದೇನು? ಈಗ ಎಷ್ಟು ಮಂದಿ ಹೆಂಗಸರು ವ್ಯಾಸಂಗ ಮಾಡುತ್ತಿಲ್ಲ? ಅವರಲ್ಲಿ ನಿನ್ನಂತೆ ಆಲಂಕಾರವನ್ನು ಬಿಟ್ಟಿರುವವರು ಒಬ್ಬರಾದರೂ ಇರುತ್ತಾರೆಯೊ? ಅವರಿಗೇನು, ವಿದ್ಯೆ ಒದುವುದೇ ಬಿಲ್ಲವೋ? ಅವರ ವಿಲಾಸಾದಿಗಳು ಎಂತಹ ಗಂಡಸರನ್ನಾದರೂ ಮರುಳು ಮಾಡುವಂತಿಲ್ಲವೋ?

ನಂದಿನಿ:- ಬೇಕಾದವರು ಬೇಕಾದಂತೆ ಹೆಸರಿಯಲಿ!! ನಾಮಮಾತ್ರದ ವಿದ್ಯಾರ್ಥಿನಿಯರಾಗಿ ಬಿಯು ಫಾಷಾನಿಶ್ರಮದಿಂದ ಬಿ. ಬಿ.—ಎಮ್. ಎ. ಎಂಬೀ ಪಟ್ಟಿಹೊಂದಿದ ಮಾತ್ರಕ್ಕೆ ಅವರಲ್ಲಿ ಪಾಂಡಿತ್ಯವುಂಟಾಯ್ತೆಂದೋ? "ವಿದ್ಯಾರ್ಥಿನಾಮಕ್ಕೆ ಪಾತ್ರರಾರು? ವಿದ್ಯಾರ್ಥಿ ಹೇಗಿರಬೇಕು?" ಎಂಬಿವ ನ್ನಾದರೂ ತಿಳಿದಿರಬೇಡವೇ?

ನಾದಾ:- ನನಗೆ ನಿನ್ನ ಶ್ರೀರಂಗನೀತಿ ಬೇಕಾಗಿಲ್ಲ. ಇವೆಲ್ಲವೂ ಹೆಂಗಸರ ಕಾಯುಕ್ತೆಯ ಮಾತುಗಳೇ ಸರಿ. ಅಷ್ಟೇಕೆ? ಘನವಿದ್ಯಾಶಾಲೆಯಲ್ಲಿ ವ್ಯಾಸಂಗಮಾಡಿ ವಿಜ್ಞಾನಾಗಮವರ್ಗ ಪರೀಕ್ಷೆಯಲ್ಲಿ ಸೇರಿ, ಪ್ರಶಸ್ತಿ ಪತ್ರಿಕೆಗಳನ್ನೂ ಗೌರವದ ಹೊದಿಕೆಗಳನ್ನೂ ಹೊಂದಿ ಬಗೆಗೊಳ್ಳುತಿರುವ

ಮಹಿಳೆಯರನ್ನಾದರೂ ನೋಡಿದ ? ಅವರ ಪಾಂಡಿತ್ಯವೂ, ವ್ಯಾಕರಣ್ಯವೂ, ಕೌಶಲ್ಯವೂ ಎಷ್ಟಿರಬಹುದೆಂದು ಊಹಿಸಲು ಶಕ್ತನಾಗಿರುವೆಯಾ? ಅಷ್ಟಾವಧಾನ ವಿದ್ಯಾಪತಿಯರಲ್ಲವೇ? ಸಿದ್ಧಾಂತಿಸಾರ್ವಭೌಮರಲ್ಲವೇ? ಅಥವಾ ಅವರು, ನ್ಯಾಸಂಗಮಾಡಿದರೇ ಸಾಕೆ? ಅವರಲ್ಲಿ ಆಲಂಕಾರಿಕ ವಿದೂಷಿಯರು ಗಳಿಗೆ ಗಳಿ [illegible] ಸುಮ್ಮನೆ ಗಂಭೀರವಾಗಿರದಿದ್ದರೆ ನಿಮ್ಮ [illegible] ಈ ಅಧ್ಯೌಢ್ಯವನ್ನು ಹಾಳುಮಾಡ ತ್ತಿರಬಹುದೆಂಬುದನ್ನು [illegible]!

ನಂದಿನಿ: ಏನು! ನಿಮ್ಮಲ್ಲಿ ಏನಾದರೂ ಪಾಂಡಿತ್ಯ ಪ್ರಭೆಯಿಲ್ಲವೆಂದು ಹೇಳಿಕೊಳ್ಳುವವರಾರೂ ಇಲ್ಲ. ಪೂರ್ಣಪಾಂಡಿತ್ಯವೇ ನಿಮಗಿಹುದು! ಅದನ್ನು ಸಂಪಾದಿಸಿಕೊಂಡಿರುವುದೇ ಸಾಕೆ? ಜ್ಞಾನಪ್ರಕಾಶವು ಬಂಬಲವನ್ನು ಸಿರಾಕರಿಸಿ, ಅದರ ಬಾಯಿ ತೆರೆಯಾದ ಅಲ್ಪಸ್ವಲ್ಪ ಕಾಂತಿಗೂ ಸರಿಬಾರದ ಸಿಂಚನಲ್ಲಿ ಮೋಹಗೊಂಡಿರುವವರನ್ನು ಪಂಡಿತರೆನ್ನಬೇಕಲ್ಲವೆ? ಅವರ ಪಾಂಡಿತ್ಯಪ್ರಭೆಗೆ, ತಪಃ ಸೈಜಸಮುದಾಯಾನುಭವಕ್ಕೆ ಪಾತ್ರವಾವುದೆಂಬುದನ್ನಾದರೂ ತಿಳಿದಿರಬಹುದೇ? ಹೋಗಲಿ: ಅವರ ಪಾಂಡಿತ್ಯವೆಂತಹದು? ಚತುಃಷಷ್ಟಿಕಲೆಗಳಿಗೆ ಸೇರಿದುದಲ್ಲವೆ. ವಿದ್ಯಾನಾಮನರ್ಥಕ್ಯದಿಂದ ಪ್ರತಿ ಪತಿಷ್ಯದೋ? ಸೀನುಕೂಡ, ಲಾಭಾಭ್ಯರ್ಥಿಯಾಗಿರುವೆ ವಿದ್ಯಾರ್ಥಿಯಾಗಿರು' ಆತ್ಮಾನಂದಜ್ಞಾನವೇ ವಿದ್ಯೆಯೆಂಬುದು?"

ನಾದಾ:—ಹಾಗೋ? ಸರಿ: ಅದು ಹೇಗೆ ಬರುವುದು?

ನಂದಿನಿ: ಉತ್ತ್ಯೋಚಿತಪ್ರವರದಿಂದ. —ಅದೇ ಮಾನವಜನ್ಮಸಾರ್ಥಕತೆಗೆ ಆಧಾರವಾದ ಮತ್ತು ಭಗವತ್ಸ್ವರೂಪಸಾಕ್ಷಾತ್ಕಾರಕ್ಕೆ ಸಾಧನವಾದ ದಿವ್ಯಜ್ಞಾನ. ಅದನ್ನು ಪರಿಶುದ್ಧವಾದ ಬ್ರಹ್ಮಚರ್ಯೆಯಿಂದೆಯೇ ಸಂಪಾದಿಸಬೇಕು. ವಿದ್ಯಾಧನವನ್ನು ಸಂಪಾದಿಸುವವನು ವಿಷಯಗಳಿಗೆ ಅಧೀನನಾಗದೆ ಭೋಗಾಭಿಲಾಷೆಯನ್ನು ಕಟ್ಟಿಡಬೇಕು. ವಿದ್ಯಾಧನವು, ಅಶುದ್ಧಯುಳ್ಳವರಿಗೆ ದೊರೆಯಲಾರದು. ಮನಸ್ಸನ್ನು ತಡೆಗಟ್ಟಿ ಬುದ್ಧಿಯ ವಶದಲ್ಲಿ ನಿಲ್ಲಿಸಬೇಕಾದರೆ ಕ್ಷಮೆಯೇ ಮುಖ್ಯಾಶ್ರಯವು. ಇದನ್ನು ಗಳಿಸಬೇಕಾದುದೇ ವಿದ್ಯಾರ್ಥಿಗಳ ಪ್ರಥಮಕರ್ತವ್ಯವು.'

ನಾದಾ:—ಪರಿಹಾಸದಿಂದ.—ಅವಕ್ಕೆಲ್ಲಾ ಅಂತವುಂಟೋ, ಇಲ್ಲವೋ?'

ನಂದಿನಿ:--ಗಂಭೀರಭಾವದಿಂದ, --"ಅಂತಪೆಲ್ಲಿಯದು? ವಿದ್ಯೆಯೇ-ಬುದು ಅನಂತವೂ ಅಮೋಘವೂ ಆದುದಲ್ಲವೇ?"

ನಾದಾ:—ಹಾಗಾದರೆ, ನೀನು ವಿದ್ಯಾರ್ಥಿನಿಯೋ? ಬ್ರಹ್ಮಚರ್ಯೆಯೋ ನಿನ್ನ ವ್ರತವೋ?

ನಂದಿನಿ:— ನಾನು, ಇನ್ನೂ ವಿದ್ಯಾರ್ಥಿನಿಯಾಗಿಲ್ಲ. ಆಗಬೇಕೆಂದು ಪ್ರಯತ್ನಪಡುತ್ತಿರುವ ಅಭ್ಯರ್ಥಿನಿ! ಭಗವತಿಯೊಲ್ಮೆಯಿದ್ದರೆ ವಿದ್ಯಾರ್ಥಿನಿಯಾಗದಿರಲಾರೆನು. ಈ ಬ್ರಹ್ಮಚರ್ಯೆಯೇ ನನ್ನ ನೈಷ್ಠಿಕ ವ್ರತವು.

ನಾದಾ:—ತಲೆದೂಗುತ್ತ,--"ಏನು? ಈ ವಯಸ್ಸಿಯಾದ ಯೋಗಿನಿಯಾಗಬೇಕೆಂಬುದೇ ನಿನ್ನ ಸಂಕಲ್ಪವೋ?

ನಂದಿನಿ:—ಹಾಗೆಂದೇ ಹೇಳಬಲ್ಲೆನು. ನಾನು ಮಾತೃಭೂಮಿಯ ಉಜ್ಜೀವನಕಾರ್ಯದಲ್ಲಿ ಏನಾದರೂ ದಕ್ಷಳೆನಿಸಬಲ್ಲೆನೋ ಅಂದಿನವರೆಗೂ, ಕಡೆಗೆ ಮರಣಾವಧಿಯೆಂದರೂ ಸರಿ, ಹೀಗೆಯೇ ಇರತಕ್ಕವಳು.

ನಾದಾ:—"ಈಗಾಗಿರುವ ಅಪಾಯವೇನು? ಉಜ್ಜೀವನವೆಂಬುದು ಹೇಗೆ?

ನಂದಿನಿ:—ಕಂಪಿತಸ್ವರದಿಂದ,—"ಕಾಣುತ್ತಿಲ್ಲವೇ, ನಾದಾ? ಸದಾಚಾರನ ಪರಾಜಯ! ಶೀಲೆಯ ಕ್ಷಯ!! ತೃಷ್ಣಾದುರಾಚಾರರ ಅಭ್ಯುದಯ!!! ಇನ್ನೂ ಹೇಳಬೇಕೆ? ಎಲ್ಲೆಲ್ಲಿಯೂ ಅನಾಹುತವೇ ತುಂಬಿ ತುಳುಕುತ್ತಿಲ್ಲವೇ? ಎಲ್ಲೆಲ್ಲಿಯೂ ಆಲಸ್ಯ-ಉದಾಸೀನಗಳ ಮೂರ್ತಿಗಳೇ ಕಾಣುತ್ತಿಲ್ಲವೇ? ಸ್ವದೇಶಾಭಿಮಾನವೂ, ದೇಶಭಾಷಾವತ್ಸಲತೆಯೂ, ಕರ್ತವ್ಯ ಕ್ಷಮತೆಯೂ ಯಾವ ಮಹಾತ್ಮರಲ್ಲಿರುವುದು? ಒಂದು ಬಾರಿ ಹೇಳು, ಸ್ವಜನವಿನಾಶದಲ್ಲಿ ಎಷ್ಟು ಮಂದಿ ಪ್ರವರ್ತಿಸಿಲ್ಲ? ಧರ್ಮಸ್ಥಾಪಕರೆಂದು ಮೆರೆಯುವರೇ ಅಧರ್ಮದಲ್ಲಿ ಮುಖಂಡರಾಗಿ ವರ್ತಿಸಿದರೆ ಹೇಳುವುದೇನು? ನಾದಾ! ನಮ್ಮೀ ಕರ್ಣಾಟಮಾತೆ, ಎಂತಹ ಮರ್ಮಾಂತಿಕ ಯಾತನಾವೇಗಕ್ಕೆ ಗುರಿಯಾಗಿರುವಳು?"

ನಾದಾ:—ಚಕಿತನಾಗಿ, --"ನಂದಿನಿ! ಇದೇಕೆ ವಿವರ್ಣಿಯಾದೆ! ಹೀಗೇಕೆ ತಪಿಸುತ್ತಿರುವೆ?"

ನಂದಿನಿ:—ವಿಕೃತಸ್ವರದಿಂದ,-- "ನಾದಾನಂದ! ಮತ್ತೆಮತ್ತೆಯೂ

ನನ್ನನ್ನೇಕೆ ಕೆಣಕುತ್ತಿರುವೆ? ದೇಶಮಾತೆಯೇ ನಿವರ್ಣಕ್ಕೆ ತಿರುಗಿ ಕ್ಷಯಿಸುತ್ತಿರುವಳು! ಅಂತವಳ ಸಂತಾನವು, ವಿವರ್ಣಕ್ಕೆ ಗುರಿಯಾಗದಿರುವದೇನು! ವೃಥಾಶೋಕವೆಂದು ಸುಮ್ಮನೆ ಕುಳಿತಿರಬೇಕೇ?"

ನಾದಾ:—ಮತ್ತೇನು ಮಾಡಬೇಕೆನ್ನುವೆ? ನಿನ್ನೊಬ್ಬಳಿಂದೇನಾದೀತು?

ನಂದಿನಿ:—ದರ್ಪಿತಸ್ವರದಿಂದ,—"ನಾನು, ನನ್ನ ಜನ್ಮದಾತಾರರಿಂದ ಈವರೆಗೂ ರಕ್ಷಿಸಲ್ಪಟ್ಟಿದ್ದೇಕೆ? ನನ್ನನ್ನು 'ದೇಶಮಾತೆಗೆ-ನಂದಿನಿ'ಯಾಗಿ ಒಪ್ಪಿಸಿರುವುದಾದರೂ ಯಾವ ಉದ್ದೇಶದಿಂದ? ಗೊತ್ತಿಲ್ಲವೇ? ಆ ಉದ್ದೇಶವನ್ನು ನಾನು, ಕಾರ್ಯ-ಕರಣ-ಕಲಾಪಗಳೆಲ್ಲವುಗಳಿಂದೆಯೂ ಸಾರ್ಥಿಕ್ಯ ಪಡಿಸಿಕೊಳ್ಳದಿದ್ದರೆ ಪತಿತೆಯಾಗುವೆನಲ್ಲವೆ? ಇದಲ್ಲವೇ ನಾನು ಮಾಡಬೇಕಾದುದು?"

ನಾದಾ:—ಸಂಕುಚಿತಸ್ವರದಿಂದ,—"ಹೇಗೆ? ಸಾಧ್ಯವೇ?"

ನಂದಿನಿ:—ಸಾಧ್ಯಾಸಾಧ್ಯವು ಆ ಭಗವತಿಯ ಕಟಾಕ್ಷಕ್ಕೇ ಸೇರಿದುದು. ನಮ್ಮ ಕರ್ತವ್ಯಕ್ಕೆ ಸೇರಿದುದೆಲ್ಲವನ್ನೂ ನಾವು ಮಾಡಿಯೇ ತೀರಬೇಕಲ್ಲದೆ ಹಿಂದೆಗೆಯಬಾರದು! ಭಗವತಿಯೊಲ್ಮೆಯೊಂದಿದ್ದರೆ ನನ್ನೀ ಉದ್ದೇಶವೂ ಪ್ರಯತ್ನವೂ ಸಫಲವಾಗುವುದರಲ್ಲಿ ಸಂಶಯವಿಲ್ಲ. ಹೊತ್ತು ಮೀರುತ್ತಿದೆ. ನನಗೂ ಸಂತಾಪವು ಹೆಚ್ಚುತ್ತಿದೆ. ಯಾವ ಕೆಲಸವಿದ್ದರೂ ನಾಳೆಯಾಗಬಹುದು. ಇಂದು ನನಗೆ ವಿರಾಮವನ್ನು ಕೊಡು?

ನಾದಾ:—ತಲೆದೂಗಿ ಎದ್ದು ನಿಂತು, ಕುತೂಹಲದಿಂದ ನಂದಿನಿಯನ್ನೇ ನೋಡುತ್ತ,—"ನಂದಿನಿ! ನಿನ್ನನ್ನು ಹೆಚ್ಚಾಗಿ ಒಳಪಡಿಸಲಾರೆನು. ಸಾಮ್ಯವಾಗಿ ನೀನು ಹೀಗೆ ವಿರಕ್ತವೃತ್ತಿಯೊಂದನ್ನೇ ಹಿಡಿದು ಕೃಶಕಾಗಬಾರದೆಂಬುದೇ ನನ್ನ ಪ್ರಾರ್ಥನೆ! ಮತ್ತೆ ನಾಳೆ ಬಂದು ನಿನ್ನಲ್ಲಿ ಉಳಿದುವನ್ನು ಹೇಳಿ, ಕೇಳುವೆನು."

ನಂದಿನಿ:—"ನನಗೂ ಅದೇ ಇಷ್ಟ!" ಎಂದು ಹೇಳಿ ಎದ್ದು ನಿದ್ರಾಗನಾಸೇವೆಗೆ ಅಭಿಮುಖಳಾದಳು.

ನಾದಾನಂದನೂ ತಲೆದೂಗುತ್ತ ಹೊರಟುಹೋದನು.

ವಿದ್ಯಾರ್ಥಿಗಳಾದ ಸೋದರೀ ಸೋದರರೇ!

ನಂದಿನೀ—ನಾವಾನಂದರೆ ಸಂಸಾರದಿಂದ ನೀವೇನನ್ನು ತಿಳಿದಿರಿ? ನಿಮ್ಮೀ ವ್ಯಾಸಂಗವೂ, ಭಾಷಾಪರಿಶ್ರಮವೂ, ಸುತಪ್ತ ನಿಮ್ಮ ಜನ್ಮಧಾನ್ಯವೂ ಸಾರ್ಥಕ್ಯಕ್ಕಾಗಿ ಪಿನಿಯೋಗವಾಗಬೇಕೆಂಬುದನ್ನು ಚೆನ್ನಾಗಿ ತಿಳಿದುಕೊಳ್ಳಬೇಕಲ್ಲವೇ? ನಿಮ್ಮನ್ನು ಬಿಟ್ಟರೆ, ನಮ್ಮೀ ಪಾತ್ಯಬೇಗೋರ್ಗಾದ್ಧಾರಕ್ಕೆ ಶಕ್ತರಿನ್ನಾರು? ಪರ್ತ್ತಮಾದ್ದು ಪ್ರಯತ್ನಿಸಬೇಡಿ ಜಡಬಂಧನ್ನು ಕಾದುಸ್ಯಗಳೆಯನ್ನಬೇಕಲ್ಲದೆ ಮತ್ತೇನಂದು ಕರೆಯಲಾದೀತು? ಪಾತ್ಯಬೇಗೋರ್ಗಾದ್ಧಾರಪ್ರತಸನ್ನು ಬದಾಬದರಾಗಿ ನಿರ್ವಹಿಸಬೇಕು ನೀವಾದರೆ, ಅಂದಲ್ಲವೇ ನಿಮಗೆ ನಮ್ಮೀ ಧನ್ಯವಾದಗಳು! (ಅಂತಾಗಲಿ).

॥ ಶ್ರೀಃ ॥

ತೃತೀಯ ಪರಿಚ್ಛೇದ.

(ಸಖಿಯರ ಸಂಭಾಷಣೆವು)

ಪ್ರಾತಃಕಾಲ; ಒಳು ಗಂಟೆಯ ಸಮಯ: ನಂದಿನಿ ಪ್ರಾತಃಕೃತ್ಯಗಳನ್ನು ಸರಿಸೇರಿಸಿಕೊಂಡು, ತೋಟದಲ್ಲಿ ಬಗೆಬಗೆಯಾಗಿ ಬಿರಿದಿದ್ದ ಬಗೆಬಗೆಯವುಷ್ಪಲತೆಗಳ ಮುಂದೆ ಪೆಲ್ಲುಡಿಯಿಡುತ್ತ ನಲಿದಾಡುತ್ತಿದ್ದಳು. ನಂದಿನಿಯು ಬಾಲಾಶ್ಲೇಷ ಸುಸ್ಥರಪೂರ್ಣವಯಸ್ಕಳಾದ ಪ್ರಮದೆಯಾಗಿದ್ದಳು. ಗೆಳತನದಿಂದ ಬಲು ಸಲ್ಲಿಗಾಗಿ ಪಾತನಾಡುತ್ತಿದ್ದಳು. ಈ ಮಾತಿನ ತಲೆಯಿಂದ ಕಾಲವರೆಗೂ ಉಡುವುತೊಡುವುಗಳೇ ತೊಡರಿದ್ದುವು. ಇವಳು ನಂದಿನಿಗೂ ಹೆಚ್ಚಿನ ಸುಂದರಿಯೇ ಆಗಿದ್ದಳಲ್ಲದೆ, ಮುಡಿಯಲ್ಲಿ ಮುಡಿದಿದ್ದ ಹೂವಿನ ಕಂಪೂ, ತೊಟ್ಟಿದ್ದ ತೊಡವುಗಳ ಕಾಂತಿಯು ಪೆಂಪೂ ಮತ್ತಿಷ್ಟು ಬಗೆಗೊಳ್ಳುವಂತಿದ್ದುವೆಂದರೆ ಸಾಕಲ್ಲವೇ?

ಬೆಳಗಾಗಿ ಇನ್ನೂ ಹೆಚ್ಚು ಹೊತ್ತಾಗಿಲ್ಲ; ಈಗಲೇ ಹುಡುಗಿ ನಾಲಂ ಕೃತಿಯಾಗಿ ಬಂದು, ಪ್ರತ್ಯಕ್ಷ ವನದೇವಿಯಂತೆ ಕಂಗೊಳಿಸುತ್ತಿರುವಳು. ನಮ್ಮ ನಂದಿನಿಯ ಬಿಡಾರವು ಹಾಗಿಲ್ಲ. ಕಪ್ಪು ಬಿಳ್ಳಿದಿಂದ ಸುಮನೂ ಹರವಾ.. ತೋರುತ್ತಿರುವ ಅವಳ ಸಿಡುಜಿಪೆಮಾತ್ರ ಕಪರಿಯಂತೆ ಸುತ್ತ ಕಪ್ಪಿಲ್ಲಪ್ಪಿರುವುದು. ಮಣಿಯಲ್ಲರುವ ಕುಂಕುಮರೇಖೆಯೊಂದೇ ಅವಳ ರಮಣೀಯಾಕೃತಿಯನ್ನು ಮತ್ತೂ ಕಮನೀಯವಾಗಿ ಮಾಡಿರುವುದು. ಇಷ್ಟಲ್ಲದೆ ಅವಳು ಮತ್ತಾವ ಅಲಂಕಾರಗಳನ್ನೂ ಮಾಡಿಕೊಂಡಿರುವುದಿಲ್ಲ. [ಹೀಗೆಂದರೆ, ನಮ್ಮ ಸೋದರಿ ಸಮುದಾಯವು ಬೇಸರಿಸಬಹುದಲ್ಲವೇ?]

ಹುಡುಗಿ:--ನಂದಿನಿಯ ಕೈಹಿಡಿದು,-- ಅಕ್ಕಾ! ಬರಲೊಲ್ಲೆಯೇನು? ಎಷ್ಟು ಬಾರಿ ನಿನ್ನನ್ನು ಕರೆಯಬೇಕು? ಹೂವು ಮುಡಿಯಲಿಕ್ಕೆ ಅಮ್ಮನು ಈಗಲೇ ಕರತರಹೇಳಿರುವಳು. ನಮೆ!'

ನಂದಿನಿ: ಒಂದರಾಯ್ತು; ಈಗಲೇ ಅವಸರವೇನು?

ಹುಡುಗಿ:--ಹುಬ್ಬುಗಂಟಿಂದ--ಏಕೆ, ಅಕ್ಕ! ಎಂದು ಕರೆದರೂ ಹೀಗೆಯೇ ಉಡ್ಡಪೋರೆ ಮಾಕುತ್ತಿರುವೆ"

ನಂದಿನಿ:-- ಮತ್ತೇನು?

ಹುಡುಗಿ:- ನಾನೇನು ಹೇಳುವುದು? ನೀನು ನನಗೆಷ್ಟೋ ಭಾಗ ಹೆಚ್ಚಿನವಳಿರುವೆ; ದೊಡ್ಡವಳೂ ಅಹುದು. ಅಲ್ಲದೆ ವಿದ್ಯಾಬುದ್ಧಿಗಳಲ್ಲಿಯೂ ಮಿಗಿಲು; ಹೀಗಿದ್ದೂ ಯಾವಾಗಲೂ ಸಂತೋಷವಿಲ್ಲದವಳಂತೆ ಇರಬೇಕೆ?

ನಂದಿನಿ:-- ಸಂತೋಷವಿಲ್ಲದೆ ಸಂಕಟಪಡುವೆನೇನು. ಸ್ವರ್ಣ?

(ಸ್ವರ್ಣ) ಹುಡುಗಿ :— ಅಷ್ಟೆಲ್ಲಾ ನನಗೆ ತಿಳಿಯದು. ಹೇಗೋ ಯಾವಾಗ ನೋಡಿದರೂ ಬೈರಾಗಿಗಳಂತೆಯೇ ಕಾಣುತ್ತಿರುವೆ!

ನಂದಿನಿ:—ಕಿರುನಗೆಯಿಂದ,—'ಸ್ವರ್ಣ! ನೀನು ಹೇಳಿದೆ? ಮತ್ತೊಮ್ಮೆ ವಿಚ್ಚಿಹೇಳು?'

ಸ್ವರ್ಣ:—ವಿಚ್ಚಿಹೇಳಬೇಕೇ? ನನ್ನನ್ನು ನೋಡು? ತಲೆಗೆ ಕೇಶ ಸುವಾಸನೀ ತೈಲವನ್ನು ಹಚ್ಚಿರುವೆನು. ಉಡುವು–ತೊಡವುಗಳಿಗೂ ಪರಿಮಳ (ಅತ್ತರ) ವನ್ನು ಸೇರಿಸಿರುವೆನು. ಮುಡಿದಿರುವುದಂತೂ ವಾಸನೆಕಟ್ಟಿದ

ಯಾಸಾ (?) ಹೂವು!!! ನಿನ್ನನ್ನೂ ನೋಡಿಕೋ? ಪರಿಮಳದ ಹೆಸರೇ ಕಾಣುತ್ತಿಲ್ಲ!!

ನಂದಿನಿ:—ನಸುನಕ್ಕು ಸ್ವರ್ಣಾಯ ಬೆನ್ನುತಟ್ಟುತ್ತ,—'ಸ್ವರ್ಣಾ! ಈ ಬಗೆಯ ಆಡಂಬರದಿಂದ ಬರುವ ಲಾಭವೇನು? ಇವುಗಳು ನಮ್ಮಂತಹ ವಿದ್ಯಾರ್ಥಿನಿಯರಿಗೆ ಯೋಗ್ಯವಾದವುಗಳಲ್ಲವಷ್ಟೆ!'

ಸ್ವರ್ಣಾ:—ಓಹೋ! ಅದೇನಮ್ಮ, ನಿನ್ನ ಹೆಕ್ಕುಪ್ಪುಗಾರಿಕೆ? ಈಗ ನಾವೂ ಓದುವವರೇ ಅಲ್ಲವೋ? ನೀನೊಬ್ಬಳೆಯೇ ಓದುವವಳೋ? ಯಾವಾಗ ನೋಡಿದರೂ ಗಂಡನಿಂದ ಬಿಡಲ್ಪಟ್ಟವಳಂತೆ ಹೀಗೇಕೆ ಇರಬೇಕು? ಇದಾವ ವ್ರತವೋ ಹೇಳಬಾರದೇ?

ನಂದಿನಿ:—ಸ್ವರ್ಣಾ! ಕೇಳು; ನೀನಿನ್ನೂ ಚಿಕ್ಕವಳು. ನಿನಗೆ ಇದರ ತತ್ತ್ವವೇ ಗೊತ್ತಾಗುತ್ತಿಲ್ಲ. ನಮ್ಮ ಮನಸ್ಸು ದೃಢವಾಗಿರಬೇಕಾದರೆ, ನಾವು ಬಾಲ್ಯದಿಂದೆಯೂ ಸುಶಿಕ್ಷಿತೆಯರಾಗಿ, ಅದನ್ನು ಅಭ್ಯಾಸಕ್ಕೆ ತಂದಿರಬೇಕು. ಅಂತಹ ಉತ್ತಮತರದ ಅಭ್ಯಾಸಕ್ಕೆ ಈತರದ ಅಲಂಕಾರ-ಆಡಂಬರಗಳು ಆತಂಕವನ್ನೇ ಉಂಟುಮಾಡುವುವು. ಬಾಲ್ಯವೆಂಬುದು, ಶುದ್ಧ ಬಂಗಾರದಂತಹದು. ಆ ಬಂಗಾರವನ್ನು ಮುತ್ತಿನ ಮತ್ತನ್ನುಂಟುಮಾಡುವ 'ಆಶೆ, ಅಭಿಮಾನ, ವಿಲಾಸ'ಗಳೇ ಮೊದಲಾದ ಹಿತ್ತಾಳೆ-ತಾಮ್ರಗಳೊಡನೆ ಕಲೆಯಿಸಿದರೆ ಅದು, ಅಂದವೂ ಬಹುಕಾಲ ಬೆಲೆಬಾಳತಕ್ಕುದೂ ಆಗಿರದೆ, ಬಲು ಬೇಗ ಕೆಟ್ಟುಹೋಗುವುದು. ಹಾಗಾಗುವುದರಿಂದ ಅನಾದರಕ್ಕೂ ಅವಹೇಳನೆಗೂ ಏಪೆಯಾಗುವುದಲ್ಲದೆ, ನಮಗೆ ಎಷ್ಟೆಷ್ಟೋ ನಷ್ಟಗಳೂ ಉಂಟಾಗಬಹುದು. ಆದರೆ, ಅದೇ ಬಂಗಾರವನ್ನೇ, 'ತಾಳ್ಮೆ, ವಿನಯ, ಸತ್ಯ, ಶುಚಿತ್ವ, ಶ್ರದ್ಧೆ, ಭಕ್ತಿ' ಎಂಬೀತೆರದ ಜಾತಿರತ್ನಗಳಿಂದ ಕೂಡಿಸಿದುದೇ ಆದರೆ, ಅತ್ಯುತ್ತಮವಾದ ಆಭರಣವೆನ್ನಿಸುವುದು. ಅಂತಹ ಅನರ್ಘಾಭರಣವನ್ನು ಧರಿಸಬೇಕೆಂಬುದೇ ನನ್ನ ಅಭಿಲಾಷೆ! ಅದಕ್ಕೆಂದೇ ನಾನು ಇವುಗಳ ವಿಷಯದಲಿ ಇಷ್ಟು ಬೇಸರಿಸುತ್ತಿರುವುದು.

ಸ್ವರ್ಣಾ:—ಬೆರಗಾಗಿ ನೋಡುತ್ತ—'ಓಹೋ! ಅದೇನು, ಇವುಗಳಲ್ಲಿ ಇಷ್ಟು ಬೇಸರ? ಇವುಗಳು ನಿನಗೆ ಮಾಡಿದ ಕೆಡುಕಾದರೂ ಯಾವುವು? ನಿನ್ನ ರೂಪ-ಲಾವಣ್ಯಗಳನ್ನು ಮತ್ತೂ ಹೆಚ್ಚಿಸುವುವೆಂಬ ಬಂದೇ ತಪ್ಪಿತವಲ್ಲವೇ?'

ನಂದಿನಿ:—ಸ್ವರ್ಣಾ! ನನಗೆ ಬೇಸರವೇಕೆಂಬೆಯೋ? ಹೇಳಬೇಕೋ? ಹಾಗೂ ಆಗಲಿ, ಇವುಗಳ ಗುಣಾವಗುಣಗಳು ನನ್ನ ಅನುಭವಕ್ಕೆ ಚೆನ್ನಾಗಿ ಬಂದಿರುವುವು.

ಸ್ವರ್ಣಾ:—ಕುತೂಹಲದಿಂದ.— "ಏನು—ಏನು? ಅನುಭವವೇ' ಹೇಗೋ, ಹೇಳು ನೋಡುವ? ನಾನೂ ಅದರಂತೆಯೇ ನಡೆಯಲಾದೀತೋ, ಯೋಚಿಸಬಹುದು.'

ನಂದಿನಿ:— 'ನಡೆಯಬಹುದು-ಕೂಡದು;' ಎಂಬುದನ್ನು ನಾನೇಕೆ ಹೇಳಲಿ? ನಡೆದಷ್ಟಾ ಒಳ್ಳೆಯದೆಂದು ಮಾತ್ರ ಹೇಳದಿರಲಾರೆನು.

ಸ್ವರ್ಣಾ:—ಸರಿ.ಬಿಡು! ಇನ್ನೂ ನಿನ್ನ ಲೌಕಿಕಾ ಪ್ರಕರಣದಲ್ಲಿಯೇ ಹೊತ್ತು ಕಳೆಯುತ್ತಿರುವೆ? ವಿಷಯವೇನೆಂಬುದನ್ನು ಹೇಳುವುದೇ ಇಲ್ಲವಷ್ಟೆ?

ನಂದಿನಿ:—ಕೋಪಿಸಬೇಡ, ಸ್ವರ್ಣಾ! ಕೇಳು. ನಾನು ಹುಡುಗಿಯಾಗಿದ್ದಾಗ—ಎಂದರೆ ನನ್ನ ಆರೇಳು ವರ್ಷದ ಎಳೆತನದಲ್ಲಿ ಅಲಂಕಾರವೆಂದರೆ ನನಗೆ ನಿನಗೂ ಹೆಚ್ಚಾಗಿಯೇ ಆಶೆಯಿತ್ತು. ಆಗ ನನ್ನ ತಾಯಿ, ನನ್ನನ್ನು ದಿನಕ್ಕೆ ಮೂರು ಬಗೆಯಾಗಿಯಾದರೂ ಅಲಂಕರಿಸದೆ ಇರುತ್ತಿರಲಿಲ್ಲ!

ಸ್ವರ್ಣಾ:—ಕುತೂಹಲದಿಂದ,—'ಅಬಳಿಕ?'

ನಂದಿನಿ:—ಹಾಗೆ ಅಲಂಕಾರ ಮಾಡಿದಷ್ಟಷ್ಟಕ್ಕೂ ನನಗೆ ಆಶೆಯೂ ಹೆಚ್ಚುತ್ತಬಂತಲ್ಲದೆ ತಗ್ಗುವಂತಿರಲಿಲ್ಲ. ಒರುಬರುತ್ತೆ ನಾನು ಯಾವಾಗ ನೋಡಿದರೂ ಉಡುವು-ತೊಡಪುಗಳೆಂಬ ವೇಷಧಾರಣೆಗಳಲ್ಲಿಯೇ ಮನಸ್ಸಿಟ್ಟಿನಲ್ಲದೆ ಮತ್ತಾವ ಕೆಲಸದಲ್ಲಿಯೂ ಗಮನಿಸುತ್ತಿರಲಿಲ್ಲ.

ಸ್ವರ್ಣಾ:—ಸರಿ; ಅಷ್ಟು ಎಳೆತನದಲ್ಲಿಯೇ ಮಾಡಬೇಕಾದ ಕೆಲಸವೇನಿತ್ತು?

ನಂದಿನಿ:—ಮುಂದೆ ಕೇಳು, ಆಗ ಆಟಕ್ಕಾದರೂ ನಾನು ಹೋಗುತ್ತಿರಲಿಲ್ಲ. ಬಂದುವೇಳೆ ಜತೆಗಾರ್ತಿಯರ ಬಲವಂತದಿಂದ ಹೋದರೂ, ಅವರನ್ನು ಕುರಿತು,—'ನಾನೇ ರಾಣಿ, ನನ್ನನ್ನು ನೀವೆಲ್ಲರೂ ಗೌರವಿಸಬೇಕು. ನಾನು ಹೇಳಿದ ಮಾತಿಗೆ ಯಾರೂ ಅಡ್ಡಿಯಾಗಬಾರದು. ನನ್ನನ್ನು ಯಾವ ಕೆಲಸಕ್ಕೂ ಬಲಾತ್ಕರಿಸಲಾಗದು.' ಎಂದು ಹೇಳುತ್ತಿದ್ದೆನಲ್ಲದೆ ಮತ್ತೆ ಮತ್ತೆಯೂ ಅವರಲ್ಲಿ,—'ನಾನೇ ಚಲುವೆ; ನನಗೆ ಸಮಾನರಾರೂ ಇಲ್ಲ.

ಎಲ್ಲಾಭಾಗಕ್ಕೂ ಎಲ್ಲರಿಗೂ ನಾನೇ ಹೆಚ್ಚಿನ ಅದೃಷ್ಟವಂತೆ.' ಇನ್ನೂ ಇದೇ ಬಗೆಯಾಗಿ ನನ್ನ ಹೆಮ್ಮೆಯನ್ನು ತೋರಿಸುತ್ತಿದ್ದೆನು. ಅದಕ್ಕೆ ಪ್ರತಿಯಾಗಿ ಹೇಳಿದವರೊಡನೆ ಇಲ್ಲದ ಗಂಟುಜಗಳವನ್ನು ತಂದಿಟ್ಟು, ಅವರನ್ನು ಬಯ್ದುದು, ಹೊಡೆವುದು, ಕಚ್ಚಿಗೆ ಅವರು ಸೋಲಿ ಅಲ್ಲದ-ಸಲ್ಲದ ತಪ್ಪುಗಳನ್ನು ಹೊರೆಯಿಸಿ, ಮನೆಯವರಲ್ಲಿ ಚಾಡಿಯೇಳಿ, ಒಗಬಗೆಯಾಗಿ ದಂಡಿಸುವುದೂ. ಅದರಿಂದ ಅವರು ಅಳುತ್ತಿದ್ದರೆ ನಿಂತುನೋಡಿ-ನೋಡಿ ನಲಿದಾಡುವುದು.....' ಇನ್ನೂ ಎಷ್ಟೆಷ್ಟೋ ಕೆಟ್ಟ ಕೆಲಸಗಳನ್ನು ಮಾಡಿರುವೆನು. ಅದನ್ನು ನೆನೆದಾಗಲೆಲ್ಲಾ ನನಗೆ ಅಧಿಕ ಸಂತಾಪವಾಗುತ್ತಿರುವುದು. ಅದೂ ಹಾಗಿರಲಿ.

ಸ್ವರ್ಣ! ಈಗ ನಿನ್ನನ್ನು ನೋಡಿ ನೀನೇ ತಿಳಿಯಬಹುದು! ಈ ಅಲಂಕಾರಗಳಿಂದ ನಿನ್ನಲ್ಲಿ ನೀನೇ ಎಷ್ಟು ಹಿಗ್ಗುತ್ತಿರುವೆಯೆಂಬುದನ್ನು ತೋರಿಸಿ ತಿಳಿ! ಇದರಿಂದ ನಿನಗೆ ಎಷ್ಟರ ಹೆಮ್ಮೆಯಾಗಿರಬಹುದೆಂಬುದನ್ನೂ ನಿರ್ಧರಿಸಿ ಹೇಳು? ಹೆಮ್ಮೆಯೆಂಬುದು ತಲೆಹಾಕಿತೆಂದರೆ ನಾಕು ಬಾರುಬಾರುತ್ತೆ ಅದೇ ದೊಡ್ಡ ವಿಪತ್ತಿಗೆ ಗುರಿಮಾಡುತ್ತಿರುವುದಲ್ಲದೆ ಹಿತವನ್ನೆಂತೂ ಉಂಟುಮಾಡಲೊಲ್ಲದು. ಹೆಮ್ಮೆಯಿಂದಲ್ಲವೇ, ಇಂದ್ರನು ಕೂಡ ಸ್ವರ್ಗಭ್ರಷ್ಟನಾಗಿದ್ದುದು?

ತಾಯೀ! ನೀನಿನ್ನು ನನ್ನನ್ನು ಬಯ್ದರೂ ಏಂತೆಯಿಲ್ಲ. ನಿನ್ನನ್ನು ಅಂದಗೊಳಿಸುವಂತಹ ಆಭರಣಗಳು ಇವಲ್ಲ. ಇವು ಒರಿಯು ಆಶಾ-ಲೋಭಗಳೆಂಬ ಕೆಲುವಿನ ಪರಿಕರಣಗಳು ಮಾತ್ರವೇ! ಇವುಗಳಿಂದ ದೇಹದ ಹೊರಗನ್ನೆಗೆ ಅಂದವಾಗಿ ಕಂಡುಬರುವುದೆಂದರೂ, ದೇಹದ ಒಳಗೂ-ಹೊರಗೂ ಮತ್ತಾ ಕೇಳಿ ಸೋಡತಕ್ಕವರ ಕಣ್ಣು-ಕಿವಿ-ಮನಸ್ಸುಗಳಿಗೂ ಸುಖವುಂಟು ಮಾಡುವ ತೊಡವೆಂದರೆ. ನಮ್ಮ ಸದ್ವರ್ತನವೊಂದೇ! ಅಂತಹ ಶಾಶ್ವತಸುಖಾನಂದದಾಯಕವಾದ ಅನರ್ಘಾಭರಣವನ್ನು ಧರಿಸಬೇಕಾದರೆ. ಮೊದಲು ನಾವು, ಎಳೆತನದಿಂದ ಈಬಗೆಯ ವಿಲಾಸ-ಶೃಂಗಾರ ಆಡಂಬರಗಳಿಗೆ ಅಪ್ಪಾಗಿ ಮನಸ್ಸನ್ನು ಹೋಗಗೊಡಬಾರದು.

ಸ್ವರ್ಣ:—ಹಾಗಾದರೆ, ನನ್ನನ್ನೂ ಬಿಡಹೇಳುವೆಯಾ?

ನಂದಿನಿ:- ನಿನ್ನನ್ನು ಬಿಟ್ಟೀಬಿಡಬೇಕೆಂದು ನಾನು ಹೇಳಲಿಲ್ಲ. ಮಿತವಾಗಿರಲಿ. ಸ್ವಲ್ಪಸ್ವಲ್ಪವಾಗಿ ಅಲಂಕರಿಸಿಕೊ. ಅದಕ್ಕೂ ಕಾಲವು

ಗೊತ್ತಾಗಿರಲಿ. ಆದರೆ, ನಿನ್ನ ಮನಸ್ಸನ್ನು ಮಾತ್ರ, ಸದ್ಗುಣಗಳೆಂಬ ಆಭರಣಗಳಿಂದ ಚೆನ್ನಾಗಿ ಬೆಳಗುವಂತೆ ಮಾಡುವ ಪ್ರಯತ್ನವನ್ನು ನೀನು ಯಾವಾಗಲೂ ಬಿಡದೆ, ತಪ್ಪದೆ, ಮಾಡುತ್ತಿರು. ಹಾಗೆ ಮಾಡುವೆಯಾದರೆ, ನೀನೇ ನನ್ನ ಸಹೋದರಿಯಲ್ಲಿ ಮೊದಲನೆಯವಳಾಗಿ ಗಣಿಸಲ್ಪಡುವೆ. ಆಗಲೇ ಈಗ ನಾನು ಅನುಭವಿಸುತ್ತಿರುವ ಆತ್ಮಾನಂದದ ಅನುಭವಕ್ಕೆ ನೀನೂ ಪಾತ್ರಳಾಗುವೆ.

ಸ್ವರ್ಣ:—ಹಾಗೆಯೇ ಮಾಡಬೇಕೆಂದಿರುವೆನು. ಆದರೆ, ನೋಡಲು ನಿನಗಿದ್ದ ಆಶೆ, ಈಗ ಇಲ್ಲವಾಯ್ತೇಕೆ? ನಿನ್ನ ಮನಸ್ಸು ಇಷ್ಟು ಬೇಸರ ಗೊಂಡಿರುವ ಕಾರಣವೇನು? ಹೀಗೆ ಮಾಡಿದವರಾರು?

ನಂದಿನಿ:—ನನ್ನ ತಾಯಿ ಸತ್ತಬಳಿಕ, ನಿರಕ್ತರಾದ ನಮ್ಮ ತಂದೆ, ಎಂಟು ವರ್ಷದವಳಾದ ನನ್ನನ್ನು ಯಾವಾಗಲೂ ತಮ್ಮ ಬಳಿಯಲ್ಲಿಯೇ ನಿಲ್ಲಿಸಿ ಕೊಂಡು, ತಮ್ಮ ನಿತ್ಯನೈಮಿತ್ತಿಕಗಳೆಲ್ಲವನ್ನೂ ನನ್ನ ಎದಿರಾಗಿಯೇ ಮಾಡುತ್ತಿದ್ದರು. ತಮ್ಮ ವಿರಾಮಕಾಲದಲ್ಲೆಲ್ಲಾ ನನ್ನ ಮನಸ್ಸಿಗೆ ಸುಲಭವಾಗಿ ಹಿಡಿವಂತೆ ಪಾರಮಾರ್ಥಿಕ ವಿಚಾರವನ್ನು ತಿಳಿಯೆಹೇಳುತ್ತಲೂ, ನನಗೆ ದೇಶ ಭಾಷೆಯಲ್ಲಿಯೇ ಅನನ್ಯ ಮಾತೃಭಕ್ತಿ ನೆಲೆಗೊಳ್ಳುವಂತೆ ಬೋಧಿಸುತ್ತಲೂ, ಪರಮಾತ್ಮನ ತೇಜೋರೂಪವನ್ನೇ ಮನದಲ್ಲಿ ಧ್ಯಾನಿಸುವಂತೆ ಅಭ್ಯಾಸಮಾಡಿಸುತ್ತಲೂ ಬಂದರು. ಅವರ ತತ್ತ್ವಬೋಧಾವೃತವೇ ನನಗೆ ಜಗವನ್ ಸೃಷ್ಟಿಕ್ರಮವನ್ನು ತಿಳಿದು, ಸಕಲ ಚರಾಚರಾತ್ಮಕ ಪ್ರಪಂಚವನ್ನೂ ಅತನ ಅಂಶರೂಪದಿಂದ ಸಂಭಾವಿಸುವಂತೆ ಮಾಡಿರುವುದಲ್ಲದೆ, ಈ ಕಿಡಿ ನಶ್ವರ ಸುಖ—ಸಂಪದ—ಭೋಗಾನುಭವಗಳಲ್ಲಿ ಬೇಸರವನ್ನು ಹುಟ್ಟಿಸಿರುವುದು. ಹಾಗಾಗದಿದ್ದರೆ, ನಾನು ಈವರೆಗೆ ಏನಾಗುತಿದ್ದೆನೋ ಹೇಳಲಾರೆನು.

ಸ್ವರ್ಣ:—ನಾನೂ ಅಭ್ಯಾಸ ಮಾಡುವೆನು. ನನಗೂ ಕಲಿಸುವೆಯಾ?

ನಂದಿನಿ:—ನಾನು, ಕಲಿಸುವುದೇನು? ನಿನ್ನ ಮನದಲ್ಲಿ ಆಸಕ್ತಿಯುಂಟಾದರೆ ಯಾವ ಕಾರ್ಯವೇ ಆದರೂ ಸುಲಭವಾಗಿ ನಾಗುವುದು. ಆದರೂ ನನ್ನಿಂದಾದಷ್ಟನ್ನು ಹೇಳಿಕೊಡಲು ತಡೆಯುಲ್ಲ.

ಸ್ವರ್ಣ:—ಅಹುದು; ನನಗೆ ಆಸಕ್ತಿಯೇನೋ ಇರುವಂತೆ ಕಾಣುತ್ತದೆ. ಆದರೆ ಅಮ್ಮನು ಬಯ್ದರೆ?

ನಂದಿನಿ:—ತಾಯಿವಿಷಯದಲ್ಲಿ ನಾನು ಹೆಚ್ಚಾಗಿ ಹೇಳಲಾರೆನು. ಏಕೆಂದೆಯೋ? ತಾಯಿಗೂ ಹೆಚ್ಚಿದ ದೈವವಿನ್ನಾವುದೂ ಈ ಜಗತ್ತಿನಲ್ಲಿಲ್ಲ. ಅಂತಹ ಪ್ರೇಮಮಯ ಮೂರ್ತಿಯಾದ ತಾಯಿಗೆ ಪ್ರತಿಯಾಗಿ ನಡೆವುದು ನಮಗೆ ಎಂದಿಗೂ ತಕ್ಕುದಾಗಿರದು. ಆದುದರಿಂದ, ನೀನು ತಾಯ ವಿಷಯದಲ್ಲಿ ಭಕ್ತಿ—ವಿನಯಗಳಿಂದ ನಡೆದುಕೊಳ್ಳುವುದೇ ನಿನ್ನ ಕರ್ತವ್ಯವು. ಅಲ್ಲದೆ. ನಿನ್ನ ನಡೆಯಲ್ಲಿ ಆಡಂಬರಾದಿ ದುರ್ಗುಣಗಳು ಸೇರದಂತೆ ಎಚ್ಚರತ್ತುಕೊಳ್ಳುವ ವಿಚಾರದಲ್ಲಿ, ತಾಯ ಅನುಮತಿಯನ್ನೇ ಹೊಂದುವುದು ನಿನ್ನ ಮುಖ್ಯಧರ್ಮವೆನ್ನಿಸಿದೆ. ಅಲ್ಲದೆ, ಆಕೆ, ಅಪೇಕ್ಷಿಸಿದ ಅಥವಾ ಕಟ್ಟು ಮಾಡಿದ ವೇಳೆಗಳಲ್ಲಿ ಸಿಂಗರಿಸಿಕೊಳ್ಳುವುದೂ ಒಳ್ಳೆಯದೇಸರಿ. ಹೀಗಲ್ಲದೆ, ಉಳಿದ ನಿನ್ನ ವ್ಯಾಸಂಗಕಾಲದಲ್ಲೆಲ್ಲ ಹೀಗೆ ನೀನು ಪ್ರಾಂಭಿಕಕ್ರಮೆಯಲ್ಲಿಯೇ ಮನನಿಟ್ಟು, 'ಅಲಂಕಾರ ವಿದ್ಯಾರ್ಥಿನಿ' ಎಂದೆನ್ನಿಸಲಾಗದೆಂಬುದೇ ನಾನು ನಿನಗೆ ಹೇಳುವ ಹಿತವೂ ನಾನು ಕೋರುತ್ತಿರುವ ವರವೂ ಆಗಿದೆ.

ಸ್ವರ್ಣ:—ಅಕ್ಕಾ! ಒಪ್ಪಿತು; ನನಗೆ ಇವೆಲ್ಲವೂ ಒಪ್ಪಿತು. ಇನ್ನು ಹಾಗೆಯೇ ಅಭ್ಯಾಸ ಮಾಡುವೆನು.

ನಂದಿನಿ:—ಸ್ವರ್ಣ! ನೀನು ಸ್ವತಃ ಬುದ್ಧಿಯುಳ್ಳವಳು. ಅಲ್ಲದೆ ತಾಯ್ತಂದೆಯರ ಸುಶಿಕ್ಷಣೆಯಿಂದ ಪ್ರಾಪಂಚಿಕ ತತ್ತ್ವವನ್ನೂ ತಿಳಿಯಬಲ್ಲವಳಾಗಿರುವೆ. ನಿನ್ನ ಮನಸ್ಸಾ ಅಕೃತ್ರಿಮವಾದ ಸ್ನೇಹಕ್ಕೆ ನೆಲೆಯಾಗಿದೆ. ನಿನಗೆ ಹೆಚ್ಚಾಗಿ ಹೇಳುವುದೇನೂ ಕಾಣುತ್ತಿಲ್ಲ. ಆದರೂ. ಇಷ್ಟನ್ನು ಹೇಳುವೆನು. ನಾವು, ಎಳೆಯರಾಗಿರುವಾಗ ವಿನೋದದಲ್ಲಿಯೇ ಕಾಲ ಕಳೆವ ದುರಭ್ಯಾಸವನ್ನು ಸಾಧ್ಯವಾದಷ್ಟು ಬಿಡುತ್ತೆ ಬರಬೇಕು. ಕರ್ತವ್ಯವನ್ನು ಕೆಡಿಸುವ ಅತ್ಯಾಶೆ—ಅಸೂಯೆ—ಅಲಸ್ಯಗಳೇ ಮೊದಲಾದುವನ್ನು ಬಳಿಗೂ ಸೇರಗೊಡದಂತೆ ಮಾಡುವ ಧೈರ್ಯಸ್ಥೈರ್ಯಗಳು ಪೋಷಕರ ಸುಶಿಕ್ಷೆಯಲ್ಲಿಯೇ ನೆಲಸಿರುವುದು. ಇದಕ್ಕೆಂದೇ ತಮ್ಮ ಮಕ್ಕಳನ್ನು ಬಾಲ್ಯದಿಂದ ಸಾಧ್ಯವಾದಷ್ಟು ವಿರಕ್ತವೃತ್ತಿ, ಶ್ರಮಸಹಿಷ್ಣುತೆಗಳಲ್ಲಿ ಪರಿಶ್ರಮವುಳ್ಳವರನ್ನಾಗಿ ಮಾಡಬೇಕೆಂದು ಹೇಳುವರು.

ಸ್ವರ್ಣ:—ಅಹುದು; ನೀನು ಹೇಳುವುದು ನಿಜವೇ ಆಗಿರಬಹುದು. ನಿನ್ನ ಬುದ್ಧಿವಾದದಿಂದ ನನಗೂ ಅದರಂತೆಯೇ ನಡೆಯಬೇಕೆಂಬ ಅಭಿಲಾಷೆ.

ಹುಟ್ಟಿದೆಯೆಂದೂ ಹೇಳಬಹುದು. ಆದರೆ. ಅದರಲ್ಲಿ. ಬಂದೇಬಂದು ಆತಂಕವು ಕಂಡುಬರುತ್ತಿದೆ?

ನಂದಿನಿ:—ಕುತೂಹಲದಿಂದ,—'ಅದಾವುದು ಆತಂಕ?'

ಸ್ವರ್ಣಾ:—ಮತ್ತಾವುದೂ ಅಲ್ಲ. ನಮ್ಮ ಅಣ್ಣನು ನನ್ನನ್ನು ಕಂಡಾಗಲೆಲ್ಲಾ—'ಹೇಗಾದರೂಮಾಡಿ, ನಂದಿನಿಯನ್ನು ನಿನ್ನಂತೆ ವಿಲಾಸಕ್ಕೆ ತಿರುಗಿಸು.' ಎಂದು ಹೇಳುತ್ತಿರುವನು. ಅಂತಪನು ನನ್ನನ್ನೂ ನಿನ್ನದಾರಿಗೆ ಹೋಗಗೊಡುವನೇ?

ನಂದಿನಿ:—ಸ್ವರ್ಣಾ! ನಿನ್ನ ಅಣ್ಣನಿಗೆ ಸದಸದ್ವಿವೇಚನೆಯೇ ಮರೆಯಾಗಿರುವಂತಿದೆ. ಈ ಶಾಂತಹೃದಯದ ಸಂತೃಪ್ತಿಯೂ, ಇದರಿಂದ ದೊರೆಕೊಳ್ಳಬಹುದಾದ ನಿರಾತಂಕ ಸುಖಾನುಭವವೂ ಅವನ ವಿಚಾರಕ್ಕೆ ಬಂದಿಲ್ಲವೆಂದೇ ಹೇಳಬೇಕಾಗಿದೆ. ಮುಖ್ಯವಾಗಿ, ಸ್ತ್ರೀ-ಪುರುಷರಲ್ಲಿ ಯಾರೇ ಆಗಲಿ, ತಮ್ಮ ವಿದ್ಯಾಭ್ಯಾಸಕಾಲದಲ್ಲಿ ಶುದ್ಧಿಯಾಗಿಯೂ. ಸತ್ಯವಂತರಾಗಿಯೂ ನಡೆಯುವುದೇ ಕೇಂದ್ರವಾದನ್ನು ಅವರೆಂದೂ ಮರೆಯಬಾರದು. ಅದೊಂದು ಅವರ ಮನದಲ್ಲಿ ನೆಟ್ಟಿದ್ದರೆ, ಅದರಿಂದ ಮುಂದೆ ಮುಂದೆ ಹೋದಂತೆಲ್ಲಾ ದಾರಿಯೂ ಸುಲಭವಾಗಿ ಪ್ರಕಾಶಿಸುತ್ತಿರುವುದು. ಹಾಗಿಲ್ಲದೆ ಸ್ವೇಚ್ಛೆಯಾಗಿ ಬೆಳೆದು ಬೆಳೆಯುತ್ತಿರುವುದರಿಂದಲೇ ಈಕಾಲದ ನಮ್ಮ ಸೋದರ ಸೋದರೀವರ್ಗವು ನಾನಾಬಗೆಯ ಕೆಟ್ಟವಿಚಾರಗಳಲ್ಲಿ ತಿರುಗಿ, ಮರುಳರಂತಾಗಿರುವದು. ಇದರ ಚಿಂತೆಯೇ ನನ್ನನ್ನು ಇರಳೂ ಹಗಲೂ ಈಬಗೆಯಾಗಿ ಕೊರಗಿ-ನರಳುವಂತಾಗಿಸಿರುವುದು. ಇದಕ್ಕಾಗಿಯೇ ನಾನು,.....'

ನಂದಿನಿಯು ಮಾತು ಮುಗಿಯುವುದಕ್ಕೆ ಮೊದಲೇ ಸ್ವರ್ಣಾಕುಮಾರಿಯು ತಲೆಯೆತ್ತಿ ತಿರುಗಿನೋಡಿ ಸಂಭ್ರಮದಿಂದ ನಂದಿನಿಯ ಬೆನ್ನತಟ್ಟುತ್ತಾ 'ಅಕ್ಕಾ! ಹಿಂದೆ ನೋಡು ನೋಡು! ನಿಂತಿರುವರಾರು? ಅಪ್ಪನಲ್ಲವೇ?'

ನಂದಿನಿಯು ವಿಸ್ಮಯ-ಕುತೂಹಲಗಳಿಂದ ತಿರುಗಿ ನೋಡಿದಳು; ಹಿಂದೆ ನಿಂತುನೋಡಿ ನಗುತಿದ್ದ ಮಧ್ಯಮ ವಯಸ್ಕನಾದ ತೇಜೋಮಯ ರೂಪವನ್ನು ಕಂಡಳು: ಗಂಭೀರ ಮುದ್ರೆಯಿಂದ ತಲೆಬಾಗಿ ನಿಂತಳು. (ಈತನೇ ನಮ್ಮ ನಗೇಶಬಾಬುವೆಂದು ಬೇರೆ ಹೇಳಬೇಕಾದುದಿಲ್ಲವಷ್ಟೆ!)

ನಗೇಶ:—ನಂದಿನಿಯ ತಲೆಯಮೇಲೆ ಎಡಗೈಯಿರಿಸಿ. ಪ್ರೀತಿ ವ್ಯಂಜಕ

ಸ್ವರದಿಂದ,—'ನಂದಿನಿ! ಇಷ್ಟೇಕೆ ಭೀತಿ? ನನ್ನಲ್ಲಿಯೂ ನಿನಗೆ ಸಂಕೋಚವೇ? ತಾಯೀ! ಈ ಮುಗ್ಧಭಾವವಿನ್ನು ಸಾಕು. ನನ್ನ ಶಕ್ತಿಮಂಚನೆಯಿಲ್ಲದೆ, ನಿನ್ನ ಕಾರ್ಯದಲ್ಲಿ ಸಹಾಯಕನಾಗಿದ್ದು ಸಂಕಲ್ಪವು ಈಡೇರುವಂತೆ ಮಾಡುವೆನು. ಮುಖ್ಯವಾಗಿ ನೀನು ಈ ಸುಸಮಯಕ್ಕೆ ಬಂದುದು, ನಮ್ಮಲ್ಲಿ ಭಗವತೀ ಸಾಂತ್ವಕಾಕ್ಷವೇ ಸಾಕ್ಷಾತ್ಕರಿಸಿದಂತಾಯ್ತೆಂದು ನಂಬಿರುವೆನು.' (ಸ್ವರ್ಣಾ ಕುಮಾರಿಯನ್ನು ನೋಡಿ)—'ಮಗು! ನಂದಿನಿಯ ಹಿತೋಪದೇಶವನ್ನು ಕೇಳಿದೆಯಮ್ಮಾ?'

ಸ್ವರ್ಣಾ:—'ಅಪ್ಪ! ಕೇಳಿದೆನು. ಹಾಗೆಯೇ ನಡೆಯುವೆನೆಂದೂ ಮಾಡಿರುವೆನು. ಆದರೆ, ನೀನು ಇಲ್ಲಿಗೆಬಂದು ಎಷ್ಟು ಹೊತ್ತಾಯ್ತು? ಅವರೆಗೂ ಎಲ್ಲಿದ್ದುದು?'

ನಗೇಶ:—ಕಿರುನಗೆಯಿಂದ,—'ನಾನು ಒಂದು ಮುಕ್ತಾಲುಗಂಟೆ ಹೊತ್ತಾಗಿರಬಹುದು. ನೀನು ಓದಬಂದು ನಂದಿನಿಯ ಕೈಹಿಡಿದೆಳೆದುದನ್ನು ನಾನು ಜೀರಿಯಿಂದ ಒರುತ್ತೆ ದೂರದಲ್ಲಿಯೇ ಕಂಡು, ಸಂಗತಿಯೇನೆಂಬುದನ್ನು ತಿಳಿಯಬೇಕೆಂದು ಕುತೂಹಲಗೊಂಡು ಬಂದು, ಈವರೆಗೂ ಇಲ್ಲಿ ಮರದ ಮರೆಯಲ್ಲಿ ನಿಂತು, ನಿಮ್ಮಿಬ್ಬರ ಸಂವಾದವನ್ನೂ ಕೇಳುತಿದ್ದೆನು.'

ನಂದಿನಿ:—ವೈದುಸ್ವರದಿಂದ,—'ಅಪ್ಪ! ಈವರೆಗೂ ನಾನು ಉನ್ಮತ್ತ ವಿನಿಯಂತೆ ಮಯ್ಯರೆದು ಮಾಡಿದ ವಿವಾದದಿಂದ ನೀನು ಬೇಸತ್ತಿರಬಹುದು. ಅದಕ್ಕಾಗಿ ಕ್ಷಮೆಬೇಡುವೆನು?'

ನಗೇಶ:—ತಲೆದೂಗಿ,—'ನಂದಿನಿ! ಕ್ಷಮೆಬೇಡುವೆಯಾ? ಹೇಳು, ಹೀಗೆಯೇ ಹೇಳುತ್ತಿರು. ಇಂತಹ ಉನ್ಮಾದವೇ ಸ್ಥಿರವಾಗಿರಲಿ! ಮತ್ತೆ ಮತ್ತೆಯೂ ವಿವಾದ ಮಾಡುತ್ತಿರು!! ಪಿದಪೇಡ. ಹೀಗೆಯೇ ಛಿದೆಯಿಲ್ಲದೆ ಅಡಿಗಡಿಗೂ ಹೇಳುತ್ತಿರು! ಇಂತಹ ವಿವಾದವೇ ನಿನ್ನ ಅನುಜಾತೆಯರೆನ್ನೂ ಹುರಿಗೊಳಿಸತಕ್ಕುದು. ಇದರಿಂದಾಗುವ ಆನಂದೋತ್ಸಾಹಗಳು ನನಗೆ ಪುತ್ತೇತರಿಂದೆಯೂ ಆಗಲೊಲ್ಲದು.

ಈವೇಳೆಗೆ ಸರಿಯಾಗಿ ಭವನದೊಳಗಡೆಯ ಗವಾಕ್ಷದಲ್ಲಿ ಮುಖವಿಟ್ಟು ನೋಡುತಿದ್ದ ಚಿತ್ರಕಲೆ, ನಸುನಗೆಯಿಂದ,—'ಚೆನ್ನಾಗಿದೆ! ಸ್ವರ್ಣಾ! ಹೋದ ಪಳು ಅಲ್ಲಿಯೇ ಬೆರಗಾಗಿ ನಿಂತೆಯೇನು? ತಂದೆಮಕ್ಕಳ ಚಿತಲ್ಲಾಟದಲ್ಲಿ

ಹೊತ್ತೇ ತಿಳಿಯಲೊಲ್ಲದೊ?'

ನಗೇಶ:—ತಲೆದೂಗುತ್ತೆ,—'ಬಂದೆವು, ಇದೇ ಬಂದೆವು.' ಎಂದು ಸ್ವರ್ಣಕುಮಾರಿ ಮತ್ತು ನಂದಿನಿಯರ ಕೈಗಳನ್ನು ತನ್ನೆರಡು ಕೈಗಳಿಂದೆಯೂ ಪಿಡಿದು,—'ಇನ್ನು ನಡೆಯಿರಿ. ಯಜಮಾನಿ ಆಗ್ರಹಮಾಡುತ್ತಿರುವಳು. ಆಗಲೇ ಗಂಟೆ ಎಂಟಾದಂತಿದೆ.' ಎಂದು ಹೇಳುತ್ತೆ. ಅವಸರದಿಂದ ಇಬ್ಬರನ್ನೂ ಜೊತೆಗೊಂಡು ತೆರಳಿದನು.

ಸುಹೃದರೇ!

ನಂದಿನೀ--ಸ್ವರ್ಣಕುಮಾರಿಯರ ಸಂಭಾಷಣೆಯಿಂದ ವಿದ್ಯಾರ್ಥಿ ಕರ್ತವ್ಯವೂ, ಪೋಷಕರ ಅಥವಾ ಕರ್ತೃರ ಕರ್ಮಸ್ವರೂಪವೂ ವ್ಯಕ್ತವಾಗಿರಬೇಕಲ್ಲವೇ? ಅಂತಾದರಿನ್ನು ನಮ್ಮ ಎಳೆಯರಾಗಿರುವ ಸೋದರೀ-ಸೋದರರನ್ನು ಸುಧಾರಿಸುವ ಕಾರ್ಯವು ಸಮಂಜಸವಾಗಿಯೇ ನಡೆದು, ನಮ್ಮ ದೇಶ ಮಾತೆಯ ಮನೋವ್ಯಾಕುಲವೂ ಶಾಂತಿಹೊಂದುವಂತಾದೀತೆಂದು ದೃಢ ವಿಶ್ವಾಸದಿಂದ ನಿರೀಕ್ಷಿಸಬಹುದಲ್ಲವೇ? ಅಂತಾಗಲಿ!

॥ ೪ ॥

ಚತುರ್ಥ ಪರಿಚ್ಛೇದ.

(ನಂದಿನೀ ಜಯಲಾಭ)

ಮಧ್ಯಾಹ್ನ: ಮಹಾಮಾರ್ತಂಡ (ಸೂರ್ಯ)ನ ಉದ್ದಂಡ ಕಿರಣಾಳಿಯಿಂದೆ ಜಗತ್ತೇ ತಣಿವಂತಾಗುತ್ತಿದೆ. ಸಮಸ್ತ ಜೀವರಾಶಿಗಳೂ ಕ್ಷುತ್ಪಿಪಾಸೆಯಿಂದ ಬಳಲಿ ಬೆಂಡಾಗಿ ಆಹಾರಸಂಗ್ರಹದಲ್ಲಿ ನಿರತವಾಗಿರುವುವು. ಇಂತಹ ಸುಸಮಯದಲ್ಲಿ ಮಾಡುವ ಮಹೋಪಕಾರವೆಂದರೆ, ಅನ್ನದಾನ

ವೆಲ್ಲದೆ ಮತ್ತಾವುದು? ... ಅನ್ನದಿಂದಲೇ ಪ್ರಾಣವೂ, ಪ್ರಾಣದಿಂದಲೇ ಪರಾಕ್ರಮವೂ ವೃದ್ಧವಾಗಬೇಕಲ್ಲವೇ?" ಈ ಧರ್ಮಸೂಕ್ಷ್ಮವನ್ನು ತಿಳಿದ ನಗೇಶರಾಯನೇ ಧನ್ಯಾತ್ಮನೆಂದು ಹೇಳಲು ಆಕ್ಷೇಪವೇನು?

ನಗೇಶರಾಯನ ಮನೆಯ ಊಟದ ಅಂಗಳದಲ್ಲಿ ನಾಲುನಾಲ್ಕಾದ ಮಣೆಗಳೂ, ಮುಂದೆಯೆಯಲ್ಲ ಎಲೆಗಳೂ, ಬಳಿಯಲ್ಲಿಯೇ ಸೀನೀರುತುಂಬಿದ ಬೆಳ್ಳಿಯ ಪಾತ್ರೆಗಳೂ ಒಗೆಗಾನಂದಪನ್ನುಂಟುಮಾಡುತ್ತಿದ್ದುವು. ಪುಣ್ಯಾ ಪುರುಷನಾದ ನಮ್ಮ ನಗೇಶರಾಯನು, ಅತಿಥಿ-ಅಭ್ಯಾಗತರಾಗಿ ಬಂದಿರುವ ನಂಟರಿಷ್ಟರೊಡನೆ ಊಟಕ್ಕೆ ಕುಳಿತಿದ್ದನು. ಪರಿಚಾರಕರು ಬಡಿಸುವ ಕೆಲಸ ದಲ್ಲಿ ಬಲು ಎಚ್ಚರಿಕೆಯುಳ್ಳವರಾಗಿದ್ದರು. ನಗೇಶರಾಯನ ಎಡಗಡೆಯ ಅಡ್ಡಸಾಲಿನಲ್ಲಿ, ಸ್ವರ್ಣಕುಮಾರಿಯೊಡನೆ ನಂದಿನಿಯೂ ಊಟಕ್ಕೆ ಕುಳಿತಿದ್ದಳು. ನಂದಿನಿಗೆ ಇದಿರಾಗಿಯೇ ನಾವಾನಂದನು ಕುಳಿತು, ಕ್ಷಣಕ್ಷಣಕ್ಕೂ ತಲೆಯೆತ್ತಿ ನೋಡಿ ನಗುತ್ತ ಊಟಮಾಡುತ್ತಿದ್ದನು. ಊಟಮಾಡುತ್ತಿದ್ದವರಲ್ಲಿ ನರೆದಲೆಯುವ (ಬಿಳಿಯ ಕೂದಲ) ಸೊಬ್ಬನು, ನಗೇಶರಾಯನನ್ನು ಕುರಿತು,—"ಏನಯ್ಯಾ, ನಗೇಶರಾಯ! ನಿನ್ನ ಮಗಳಿಗೆ ಮದುವೆಯಾಗಿಲ್ಲವಾ?"

ನಗೇಶ:—ಏನು ಹೇಳಿದಿರಿ, ಗಣೇಶಪಂತರೇ! ಮಗಳಿಗೆ ಮದುವೆಯೆ? ಇನ್ನೂ ಎರಡು ವರ್ಷಗಳು ಬೇಕು.

ಗಣೇಶ:—ಕುಳಿತಂತೆಯೇ ಬೆದರಿ,—"ಏನು, ಏನು!! ಇನ್ನೂ ಎರಡು ವರ್ಷ!!! ಆವರೆಗೂ ವಿಳಂಬ? ಈಗಲೇ ಹನ್ನೆರಡುವರ್ಷ! ಸಾಲದುದಕ್ಕೆ ಮತ್ತೆರಡೇ? ಹದಿನಾಲ್ಕರಮೇಲೆ ಮದುವೆಯೇ? ಇದೇನು ಸಂಪ್ರದಾಯ? ಎಲ್ಲಿಯ ನ್ಯಾಯ?" (ಎಡಗಡೆಯಲ್ಲಿ ಕುಳಿತಿದ್ದ ಮತೆತ್ತಿಪ್ಪ ಮುದುಕನನ್ನು ನೋಡಿ)—"ಕೇಳಿದೆಯೇನಯ್ಯಾ, ವಿಶ್ವನಾಥರಾಯ! ನಗೇಶರಾಯನು ಏಂತಹ ಸಾಂಪ್ರದಾಯಕಸ್ಥ!"

ವಿಶ್ವನಾಥ:—ತಿರಸ್ಕಾರಭಾವದಿಂದ, "ಎಷ್ಟಾದರೂ ಈಗಿನ ನಾಗರಿಕನಯ್ಯಾ? ಇವರ ಸಂಪ್ರದಾಯವೆಂಬುದೆಲ್ಲವೂ ಹೂಣಾಕಲೆಯನ್ನೇ ಆಶ್ರಯಿಸಿ ಜೀವಿಸಿರುವುದು. ನಾವೇನು ಮಾಡಲಾಗ್ತದು? ಕಾಲವೇ ಕೆಟ್ಟು ಹೋಗಿದೆ. ಇವರೆಲ್ಲಾ ಶ್ರೀಮಂತರಪ್ಪ! ಏನೇನು ಮಾಡಿದರೂ ಜಯಿಸಿ

ಕೊಳ್ಳಬಲ್ಲರು. ಮುಖ್ಯವಾಗಿ ನಮ್ಮಂತಹ ಬಡವರಿಗೆ ಇದು ಕಾಲವಲ್ಲಯ್ಯಾ?"

ನಗೇಶ:—ಕರುನಗೆಯಿಂದ,— "ಮಾವ! ಕಾಲವು ಹೇಗೆ ಕೆಟ್ಟು ಹೋಗಿದೆ? ಹೇಳಬಹುದಷ್ಟೆ!"

ವಿಶ್ವನಾಥ:—ಕೆಡದೆ ಮತ್ತೇನಯ್ಯಾ? ಮಗನಿಗೆ ಇಪ್ಪತ್ತೈದವರ್ಷವಾದರೂ ಅವನು ಇನ್ನೂ ಬ್ರಹ್ಮಚಾರಿಯಂತೆ ಓಲೆಪಾಡಿ ಸಾಯುತ್ತಿರಬೇಕಂತೆ! ಮಗಳು ಹನ್ನೆರಡು—ಹದಿನಾಲ್ಕು ವರ್ಷದವಳಾಗಿ, ತಾನೇ ಗಂಡನನ್ನು ಹುಡುಕಿ ಕರೆತರುವವರೆಗೂ ಮದುವೆ ಮಾಡಬಾರದಂತೆ! ಅದೇನು ಪೈಶಾಚ್ಯವೋ ಕಾಣೆನಯ್ಯಾ! ಎಲ್ಲವೂ ವಿಷಮವಾಗಿಯೇ ಕಾಣುತ್ತಿವೆ.

ನಗೇಶ:—ತಲೆದೂಗಿ, ಅಹುದು! ನ್ಯಾಯವಿದೆ! ಏನುಮಾಡಲಾದೀತು! ಕನ್ಯಾಪಿತೃತ್ವವೇ ದುಃಖಿಕ್ಕೋಸ್ಕರವಾಗಿದೆ! ಮಗಳಿಗೆ ಮದುವೆ ಮಾಡಬೇಕೆಂದರೆ, ಕುಲ-ಶೀಲ-ವಯೋ-ವಿದ್ಯೆ-ಗುಣ-ಶೀಲಸ್ವಭಾವಾದಿಗಳನ್ನು ನೋಡಿ ಕೊಡಬೇಕೆಂಬುದು ನಮ್ಮ ಮನೋಗತವಾಗಿದೆ. ಆದರೆ, ಮಹಾಜನರಾದ ತಮ್ಮುಂಥವರಿಗೆ ಅದು ಮುಖ್ಯವಾಗಿರಲಾರದು! ಧನ-ರೂಪಗಳೆರಡಿದ್ದರೆ ಸಾಕೆಂಬುದೇ ತಮ್ಮವರ ತಿಳಿವಿಗೆ ಸಾಕಾಗಿರುವುದು. ಸಾಲದುದಕ್ಕೆ ಮಗಳಿಗೆ ಹತ್ತುವರ್ಷಕ್ಕೆ ಮೊದಲೇ ಮದುವೆಮಾಡದಿದ್ದರೆ ಪಾತಕವೆಂಬುದನ್ನು ಎಂದೆಂದೂ ಮರೆಯದೆ ಹೇಳುವಿರಿ? ಮತ್ತು ೧೫-೧೬ ವರ್ಷದ ಶುದ್ಧ ಶುಂಠನಿಗಾದರೂ ೧೨ ವರ್ಷದ ಹುಡುಗಿಯನ್ನು ಗಂಟುಹಾಕಿಬಿಡುವ ದೊಳ್ಳಿಯದೆನ್ನುವಿರಿ."

ನಗೇಶ:—ನಿಜ! ನಿನ್ನ ಮತವೇನು?

ನಗೇಶ:—ನನ್ನ ಮತವಿಷ್ಟೇ! ತಿಳಿವಿಲ್ಲದ ಎಳೆಯರನ್ನು ಬಲಾತ್ಕರಿಸಿಕ್ಕಿದವರಿಗೆ ಕೊಡುವುದು ತಪ್ಪು. ವರವಿಕ್ರಯವೆಂಬ ಸಾಂಕ್ರಾಮಿಕ ರೋಗವು ಹುಟ್ಟದಿಗಿಹೋಗುವವರೆಗೂ, ನಾನೂ ನನ್ನ ಮಿತ್ರಪರಿವಾರದವರೂ ಕನ್ಯೆಯರನ್ನು ವೃಥಾ ಕಟುಕರ ಬಾಯಲ್ಲಿ ಹಾಕಲಾರೆವು. ಹೆಂಡತಿಯರ ತವರ್ಮನೆಯವರಿಂದ ದೊರೆಕೊಳ್ಳುವ ದ್ರವ್ಯವೆಂದೆಯೇ ಜೀವಿಸಬೇಕೆಂಬ ಹೆಂಗಂಡುಗಳಿಗೆ ನಮ್ಮ ಹೆಣ್ಣುಮಕ್ಕಳನ್ನು ಕೊಟ್ಟು, ಸುಖಸಮಾಧಾನದ ಮಾತಿಲ್ಲದೆ ನಿರಂತರವೂ ಹಲುಬುವವರ ಸಂತಾಪಕ್ಕೂ ಶಾಪಕ್ಕೂ

ನಾನೇ ಕಾರಣರಾಗಬೇಕೆಂಬ ದುರಾಶೆ, ನಮ್ಮನ್ನು ಎಂದೂ, ಹೇಗೂ ಸುಟ್ಟಬಿಡುವುದಿಲ್ಲ. ನಮ್ಮವರೆಲ್ಲರೂ ಈಬಗೆಯಾದ ಮತ್ಸರೈಕ್ಯದಿಂದ ಹತ ತೊಟ್ಟು ನಿಂದರೆ ನಿಮ್ಮವರ ಹೆಮ್ಮೆಯೂ ಮಗ್ಗಿಹೋಗಬಹುದು.

ಗಣೇಶ:—ಹಾಗೆಯೇ ಹೇಳು; ನಿನಗೆ ಸ್ವಾತಂತ್ರ್ಯವಿದೆ. ಆದರೆ, ನಿನ್ನ ಮಗನಿಗೆ ಮದುವೆಯಾಗಿದೆಯೋ?

ವಿಶ್ವನಾಥ:— ಈವರೆಗೂ ಹೇಳಿದುದೇನು? ಮಗನಿಗೆ ಈಗಲೇ ಮದುವೆಯೇಕೆ?

ನಗೇಶ:—ಕಿರುನಗೆಯೊಂದಿಗೆ.—"ನಾವಾನಂದನಿಗೆ ಮದುವೆಗೆ ಆತುರವೇನು?"

ವಿಶ್ವನಾಥ:—ವ್ಯಂಗವಾಗಿ ನಕ್ಕು,—"ಛೀ, ಛೀ!! ಆತುರವೇ? ಹುಡುಗನಲ್ಲದ ಆತುರವು ಹುಡುಗನಿಗೇನು?"

ನಗೇಶ:—ಹೌದಿರಿ, ಹೌದಿರಿ! ಮಾವ! ನಮ್ಮನ್ನೆ ಕೂಗಿದರಾಯ್ತೇ? ಬಾಲ್ಯವಿವಾಹದ ಸಾಧಕನೇನು? ಪ್ರೌಢಿಮೆಯುಂಟಾದ ಒಳಿಕ ಮಾಡುವ ವಿವಾಹದಲ್ಲಿ ಬಾಧಕನೇನು? ಸರಿಯಾಗಿ ತಿಳಿಯುವೆನೆಂದರೆ, ಆಬಳಿಕ ಉಚಿತ ವಾದುದನ್ನು ಮಾಡಲಾದೀತು!

ವಿಶ್ವನಾಥ:—ಹಾಗೋ? ಬಾಲ್ಯದಲ್ಲಿ ಮದುವೆ ಮಾಡುವುದರಿಂದ ಹೆಣ್ಣುಮಕ್ಕಳು, ನಮ್ಮ ಅಧೀನದಲ್ಲಿರುತ್ತಾರೆ. ಅಲ್ಲದೆ, ಅವರಿಗೆ ಪೂರ್ವಾ ಚಾರದಲ್ಲಿ ನಂಬಿಕೆಯೂ, ಹಿರಿಯರಲ್ಲಿ, ಗುರುಜನರಲ್ಲಿ, ಮತ್ತು ದೇವರಲ್ಲಿ ಭಯ-ಭಕ್ತಿ-ಗೌರವಗಳೂ ನೆಲೆಗೊಂಡು, ಮನೆಯವರಿಗೆ ಅನುಕೂಲವಾ ಗಿರುವರು. ಬುದ್ಧಿ ಬಂದಬಳಿಕ ಮಾಡಬೇಕೆಂದರೆ, ಅವರು ನಮ್ಮ ಇಚ್ಛೆ ಯಂತೆ ನಡೆಯಲೊಲ್ಲರು. ಸ್ವಾತಂತ್ರ್ಯದಿಂದ ತಮ್ಮ ಇಚ್ಛೆತವುರುಷನನ್ನೇ ಹುಡುಕಿಕೊಂಡು ವಾಂಛೆಯನ್ನುಂಟು ಮಾಡುವರು. ಅಂತವರು ನಮ್ಮ ಕಟ್ಟಳೆಗಳಿಗೆ ಒಳಪಡುವರೆಂಬುದು ಕನಸಿನಲ್ಲಾಯಾದರೂ ನಂಬಲಾಗದ ವಿಚಾರ! ಇದಕ್ಕೆಂದೇ ನಮ್ಮವರು, ಬಾಲ್ಯವಿವಾಹವನ್ನೇ ರೂಢಿಯಾಗಿಟ್ಟು ಅದರಂತೆ ನಡೆಸುತ್ತ ಬಂದಿರುವರು. ಹೇಗೂ ನಮ್ಮ ಹಿರಿಯರು ನಡೆದಂತೆ ನಡೆಯಬೇಕಲ್ಲದೆ ಬೇರೆವಾರಿಗೆ ಹೋಗಬಾರದು.

ನಗೇಶ:—ನಿಜ! ತಾಯ್ತಂದೆಗಳು ಕುರುಡರಾಗಿದ್ದರೆ, ಮಕ್ಕಳೂ

ಕಣ್ಣು ಮುಚ್ಚಿಕೊಂಡು ಕುರುಡರಂತಿರಬೇಕಾದುದೇ ಮುಖ್ಯವಲ್ಲವೇ? ಅವೀತು!

ಗಣೇಶ:—ನಿಮ್ಮ ವಿತ್ತಂಡವಾದವು ನಮಗೆ ಬೇಕಾಗಿಲ್ಲ. ಹೆಣ್ಣಾ ಮಕ್ಕಳಿಗೆ ಬಾಲ್ಯವಿವಾಹವೇ ಶ್ರೇಯಸ್ಕರವೆಂಬುದನ್ನು ನಾವು ಎಂದೆಂದೂ ಮರೆಯಲಾರೆವು.

ನಾದಾ:—ನಂದಿನಿಯನ್ನು ಕುರಿತು,— "ನಂದಾ! ಕೇಳಿದೆಯೋ? ತಾತಯ್ಯನವರ ತತ್ತ್ವವನ್ನು? ಏನೆಂದು ಹೇಳುವೆ?"

ನಂದಿನಿ:—ಹೇಳುವುದೇನು? ಸಕಾರಣವಲ್ಲದ ವಿಚಾರವನ್ನು ನಂಬುವುದು ಹೇಗೆ?"

ವಿಶ್ವನಾಥ:—ಅದಾರ ಕಂತ? ಹೆಂಗಸರದೇನು? ಅವಳಾರಯ್ಯಾ-ನಗೇಶರಾಯ? ಏನೇನನ್ನೋ ಹೇಳುತ್ತಿರುವಳು?

ನಗೇಶ:—ಇವಳೇ ನನ್ನ ಸಾಕುಮಗಳು: ಇನ್ನೂ ಅವಿವಾಹಿತೆಯಾದ ನೋಡಪ!

ವಿಶ್ವನಾಥ:—ಬೆದರಿ ನೋಡುತ್ತೆ,—"ಹಾ! ಏನು? ಏನು ಕೇಡುಗಾಲದ ಸುದ್ದಿಯಿದು!! ವಯಸ್ಸು ಮಿತಿಮೀರಿ ಹೋಗಿದೆ. ಈ ವಯಸ್ಸಿಗೆ ಎರಡು ಮಕ್ಕಳಿಗೆ ತಾಯಾಗಿರಬೇಕು. ಇನ್ನೂ ಮದುವೆಯಿಲ್ಲವಂತೆ! ಗಣೇಶರಾವ್! ನೀನೆಲ್ಲಿಯಾದರೂ ಇಂತಹ ವಿಚಿತ್ರವನ್ನು ನೋಡಿರುತ್ತೀಯೇನಯ್ಯಾ? ಇನ್ನು ನಮಗೆ ಹೇಗೂ ಮಾನ-ಮರ್ಯಾದೆಗಳು ಉಳಿಯಲಿಕ್ಕಿಲ್ಲ?"

ಗಣೇಶ:—ನಗೇಶನನ್ನು ಕಿಡಿಕಿಡಿಯಾಗಿ ನೋಡುತ್ತೆ, "ಮಹರಾಯ! ನಿಮ್ಮ ಅತ್ಯಾಚಾರದಿಂದ ನಾವೆಲ್ಲರೂ ಕರ್ಮಭ್ರಷ್ಟರಾದೆವು! ಇನ್ನು ಇದಕ್ಕಾಗಿ ನಾವು ಮಹಾಪ್ರಾಯಶ್ಚಿತ್ತಗಳನ್ನೇ ಮಾಡಿಕೊಳ್ಳಬೇಕಾಯ್ತು. ಕಾಲವೆಷ್ಟು ಕೆಟ್ಟುಹೋಯ್ತಯ್ಯಾ? ಛಿಃ! ಛಿಃ!! ಹಾಳು-ಕಲಿಕಾಲ!!!"

ನಗೇಶ:—ಸ್ವಾಮೀ! ಕೂಗಾಟದಿಂದ ಕಾರ್ಯವನ್ನು ಕೆಡಿಸಬಾರದು! ತಾಳ್ಮೆಯಿಂದ ವಿಚಾರಮಾಡಿರಿ! ಕಾಲವೇನೂ ಕೆಟ್ಟುಹೋಗಿಲ್ಲ. ನಿಮಗೆ ವಿಚಾರ-ವಿಮರ್ಶೆ ಮಾತ್ರವೇ ಮರೆಯಾಗಿದೆ!

ವಿಶ್ವನಾಥ:—ಮತ್ತೇನಯ್ಯಾ? ಇಷ್ಟು ದೊಡ್ಡ ಹೆಂಗಸಿಗೆ ಮದುವೆ

ಯಿಲ್ಲವೆಂದರೆ ನಗೆಗೇಡಲ್ಲವೇ? ದೇವರಿಗೆಂದು ಏನಾದರೂ ಮುದ್ರೆಯೊತ್ತಿ ಬಿಟ್ಟಿರುವಿರೋ?

ನಾದಾನಂದ:—ಇದ್ದೀತು; ಹೇಗೂ ಇವಳು ಬ್ರಹ್ಮಚಾರಿಣಿಯಂತೆ!

ವಿಶ್ವನಾಥ:—ವ್ಯಂಗ್ಯಸ್ವರದಿಂದ,— "ಅಬ್ಬಬ್ಬಾ! ಬ್ರಹ್ಮಚಾರಿಣಿ!' ಹೂಂ! ಎಂತಹ ಬ್ರಹ್ಮಚಾರಿಣಿ? ಶಾಂಡಿಲಿಯೋ? ಶಬರಿಯೋ? ಅಲ್ಲವೆ, ಈ ಕಾಲದ ಮಹಾಬ್ರಹ್ಮಚಾರಿಣಿಯೋ?"

ನಗೇಶ:—ಹೇಗಾದರೂ ಹೇಳಿ ಹಳಿದಾಡಿರಿ. ಹೇಗೂ ಇವಳು ನಿಮ್ಮ ಮಹೋಪಕಾರದಿಂದಲೇ ಹೀಗೆ ಕಠಿಣವಾದ ಬ್ರಹ್ಮಚರ್ಯದಲ್ಲಿರುವಳು. ನಿಮ್ಮ ಸಂಶಯಗಳೆಷ್ಟಿದ್ದರೂ, ಇವಳೇ ತಕ್ಕ ಉತ್ತರಗಳನ್ನು ಕೊಡಬಲ್ಲಳು.

ಈ ಮೇಳೆಗೆ ಸರಿಯಾಗಿ ಭಕ್ಷ್ಯಗಳನ್ನು ತಂದ ಚಿತ್ರಕಲೆ, ನಸುನಗು ತ್ತಿಂದ, ವಿಶ್ವನಾಥ ಮತ್ತು ಗಣೇಶರನ್ನು ಕುರಿತು,—"ಮಾವ! ಬಾವ! ಸುಮನೆಯಿಂದ ಕುಳಿತು ಊಟಮಾಡಿರಿ. ಸುಮ್ಮನೆ ಸಿಟ್ಟುಮಾಡಿ ಒಳಲು ಬಾರದು. ಸಾವಧಾನದಿಂದ ಕೇಳಿದರೆ ತಕ್ಕ ಸಮಾಧಾನಗಳೂ ದೊರೆಯು ಬಹುದು!" ಎಂದು ಮತ್ತೆ ಮುಂದೆಬಂದು ನಂದಿನಿಯನ್ನು ನೋಡಿ, — "ನಂದಿನಿ! ಇವರಾರೂ ನಿನಗೆ ಕಾಣದಿದ್ದವರಲ್ಲ. ಸಂಕೋಚವಿಲ್ಲದೆ ಇವರ ಪ್ರಶ್ನೆಗಳಿಗೆ ಉತ್ತರವನ್ನು ಕೊಡಬಲ್ಲೆಯಷ್ಟೆ? ಇದೇ ಸಕಾಲ." ಎಂದಾಡಿ ಎಲ್ಲರಿಗೂ ಬಡಿಸಿ ಹಿಂದಿರುಗಿ ಹೊರಟುಹೋದಳು.

ವಿಶ್ವನಾಥ:—ಏಂತಹ ಕಾಲವಪ್ಪ? ನಾವು ಈ ವರೆಗೂ ಹೆಂಗಸಿನ ಕೂಜೆ ನಾದಕ್ಕೆ ನಿಂತಿರಲಿಲ್ಲ. ಇವರ ಮನೆಗೆ ಬಂದುದರಿಂದ ಅದೂ ಆಯ್ತು ಲ್ಲವೇ? ಆಗಲಿ; ಎಲ್ಲಮ್ಮಾ? ಬ್ರಹ್ಮಚಾರಿಣಿ! ನಿನ್ನ ಪ್ರೌಢಿಮೆಯೆಷ್ಟಿದೆಯೋ ಅಷ್ಟನ್ನೂ ಹೆರಗಡಹಿ ತೋರಿಸು! ನೋಡಿ ನಾವೂ ಸಂತೋಷಪಡುವೆವು.

ನಂದಿನಿ:—ಬೆಲ್ಲನೆ,—"ಹಾಸ್ಯಮಾಡುವಿರೇಕೆ? ನಾನು ಪ್ರೌಢೆಯೆಂ ದಾಗಲೀ ಪಾಂಡಿತ್ಯವುಳ್ಳವಳೆಂದಾಗಲೀ ಹೇಳಿಲ್ಲ; ಹೇಳುವಂತೆಯೂ ಇಲ್ಲ. ಪ್ರಾಪಂಚಿಕ ಸ್ಥಿತಿ-ಗತಿ-ವಿಚಾರಗಳಾಗಲೀ, ವಿಷಯಪರಿಜ್ಞಾನವಾಗಲೀ ಶಾಸ್ತ್ರಪರಿಶ್ರಮವಾಗಲೀ ಇಲ್ಲದ ಕೇವಲ ಬಾಲಿಶೆಯಾದ ನಾನು, ನಿಮ್ಮಲ್ಲಿ ವಾದಿಸಬಲ್ಲೆನೇ? ನಾನೂ ತವ್ವ ಮಕ್ಕಳಂತೆಯೇ ಅಲ್ಲವೇ?"

ವಿಶ್ವನಾಥ:—ಏನು! ಏನೆಂದೆಯಮ್ಮ? ನಮ್ಮ ಮಕ್ಕಳಂತೆಯೋ?

ಭಲೆ! ನಮ್ಮ ಹುಡುಗಿಯರು ನಿನ್ನಂತೆ ಮದುವೆಯಿಲ್ಲದೆ ಗೊಡ್ಡಾಕಳಾಗಿ ನಿಂತಿರಲಿಲ್ಲ. ನಿನ್ನೀ ವಯಸ್ಸಿಗಾಗಲೇ ಅವರು ಗಂಡನಮನೆಯಲ್ಲಿ ಸಂಸಾರ ಸುಖವನ್ನೂ ಚೆನ್ನಾಗಿ ಅನುಭವಿಸುವವರಾಗಿದ್ದರು.

ನಂದಿನಿ:—ಇರಬಹುದು; ಅದರಿಂದಾದ ಲಾಭವೇನೆಂಬುದು ಮಾತ್ರ ತಿಳಿಯಲಿಲ್ಲ?

ಗಣೇಶ:—ವ್ಯಂಗ್ಯವಾಗಿ ನಗುತ್ತೆ,—'ಹಾ! ಹಾ!! ಹಾ!!! ಬಲು ಸೊಗಸು! ಬಲುಸೊಗಸು!! ಲಾಭವನ್ನು ಹೇಳಬೇಕು? ಕಾಣುತ್ತಿಲ್ಲ? ಗಂಡನಿಗೆ ಹೆಂಡತಿ; ಮನೆಗೆ ಒಡತಿ! ಬೆಂದೆರಡು ಮಕ್ಕಳಿಗೂ ತಾಯಿ! ಇಷ್ಟೇನಾಗಬೇಕು? ಇದಕ್ಕೂ ಹೆಚ್ಚಿಗೆ ಮತ್ತೇನಾಗಬೇಕು?'

ನಂದಿನಿ:—ಗಂಭೀರಮುದ್ರೆಯಿಂದ,—"ಅದೀತು; ಸುಖವೇ ಅದೀತು! ಅದರೆ, ಅದು ಸರಿಯಾದ ರೀತಿ—ನೀತಿಗಳಂದ ಸಾರ್ಥಕವೆನ್ನಿಸಿರುವುದೆಂದಾಗಲೀ, ಚಿರಕಾಲ ವೃದ್ಧಿಂಗತವಾಗಿ ಬೆಳಗುತ್ತಿರುವುದೆಂದಾಗಲೀ, ನಾನು ಹೇಳಲಾರೆನು!"

ವಿಶ್ವನಾಥ:—ಕೋಪದಿಂದ,—"ಇದೇನು ವಕ್ರತೆ? ಇದೆಂತಹ ಶತತೆ? ಸರಿಯಾದ ನೀತಿ-ರೀತಿಗಳಾವುವು? ಚಿರಕಾಲ ವೃದ್ಧಿಂಗತವಾಗಿ ಬೆಳಗುವುದು ಹೇಗೆ?"

ನಂದಿನಿ:—ಅಪ್ಪ! ನಾನಿನ್ನೂ ಚಿಕ್ಕವಳು. ಅಷ್ಟುದೂರ ವಿಚಾರ ಮಾಡಿ, ನಿಮಗೆ ಬೇಸರವುಂಟುಮಾಡಲಾರೆನು. ನೀವು ತಿಳಿದವರು; ಸಕಲ ಶಾಸ್ತ್ರ ಪ್ರವಚನಗಳನ್ನೂ (ಸೂತ್ರಗಳನ್ನು) ಕಂಠಪಾಠ ಮಾಡಿಕೊಂಡಿರುವಿರಿ. ನಿಮ್ಮಲ್ಲಿ ನಾನು ಹೇಳುವುದು ಸರಿಯಾಗಿದ್ದೀತೇ?

ನಾದಾನಂದ:—ಹೋ! ಹೋ!! ಇದರ ತತ್ವವನ್ನು ನಾನೂ ಬಲ್ಲೆನು! ಅಪರ ಮಾತಿಗೆ ಸರಿಯಾದ ಉತ್ತರವನ್ನು ಕೊಡಲಾರದುದಕ್ಕೆ ಇದೊಂದು ಕುಂಟೆಯುಕ್ತಿ!!!

ಗಣೇಶ:—ತಲೆದೂಗಿ ಬೆರಲು ಕುಣಿಸುತ್ತೆ,—'ಭಲೆ! ಚೆನ್ನಾಗಿ ಹೇಳಿದೆ! ಮತ್ತೊಮ್ಮೆ ಹೇಳು?

ನಗೇಶ:—ದರ್ಪತಪ್ಪರದಿಂದ,—'ಈಗಲೇ ಇಷ್ಟೇಕೆ ಹಾರಾಟ? ನಂದಿನಿ! ಯಾರು ಹೇಗೆ ಬೇಕಾದರೂ ಹಳಿದಾಡುತ್ತಿರಲಿ, ನಾನು ನಿನಗೆ

ಬೆಂಬಲವಾಗಿರುವೆನು. ನಿರ್ಭಯವಾಗಿ ಇವರಿಗೆ ಉತ್ತರವನ್ನು ಕೊಡು.'

ವಿಶ್ವನಾಥ:—ಮತ್ತೊಂದು! ಹೇಳಮ್ಮಾ! ಇನ್ನೇಕೆ ತಡೆ? ಸಂಪನ್ನನಾದ ನಗೇಶರಾಯನೇ ನಿನಗೆ ಬೆಂಬಲವಾಗಿದ್ದೂ ಭಯವೇ? ಹೂಂ. ಸೊದಲು ಮಾಡು! ಆಗಲಿ. ವಿವಾದ!

ನಂದಿನಿ:—ಕೂಗುವೆನೇಕೆ? ಅಪ್ಪ! ಎಷ್ಟಾದರೂ ಹೆಂಗಸರ ಬುದ್ಧಿ ಲದ್ದಿಯೇ ಸರಿ!

ಗಣೇಶ:- ತಲೆದೂಗಿ,—'ಅದೀಗ ತಕ್ಕಸುಡಿ! ಒಳ್ಳೆಯ ಹೆಂಗಸು! ಚೆನ್ನಾಗಿ ಹೇಳಿದಳು. ಇದಕ್ಕೆಂದೇ ಹೆಂಗಸರಿಗೆ ಸ್ವಾತಂತ್ರ್ಯವನ್ನು ಕೊಡದಿರುವುದು?'

ನಂದಿನಿ:- ನಿಜ! ಅದಕ್ಕೆಂದೇ ಹೆಂಡಿರು—ಮಕ್ಕಳನ್ನು ಕಾಡುಮೃಗಗಳನ್ನು ಕಂಡಂತೆ ಕ್ರೂರವಾಗಿ ದಂಡಿಸುತ್ತಿರುವಿರಿ! ಅಲ್ಲವೇ?'

ವಿಶ್ವನಾಥ:—ಸಂದೇಹವೇನು? ಆ ಬರಬಿತನದ ಮೂಢಪ್ರಾಣಿಗಳನ್ನು ಇನ್ನು ಹೇಗಡಬೇಕು?

ನಂದಿನಿ: —ನ್ಯಾಯ! ಅವರನ್ನು ಹಾಗೆಯೇ ಕೊಲ್ಲಬೇಕು. ಆದರೆ. ಆ ದೋಷವು ಯಾರನ್ನು ಸೇರಬೇಕು? ತಿಳಿಯೆ ಹೇಳಲಾದೀತೇ?

ಗಣೇಶ:- -ಅದ್ದರಲ್ಲಿ ದೋಷವೇನುಬಂತು?

ನಂದಿನಿ:- ನಿಷ್ಕಾರಣವಾಗಿ ಮೂಢಪ್ರಾಣಿಗಳನ್ನು ಹಿಂಸಿಸುವುದು ದೋಷವಲ್ಲವೇ?

ವಿಶ್ವನಾಥ:—ಮೂಢರನ್ನು ಬಿಡಿವುದೇ ಲೋಕಸ್ವಭಾವ! ಅದರಲ್ಲಿ ದೋಷವೆಂದು ಯಾರೂ ಹೇಳಲಾರರು! ಹಾಗೂ ಅದರಲ್ಲಿ ದೋಷವೆಂದರೆ, ಅದು ಮೂಢರ ತಪ್ಪಿತವಲ್ಲದೆ ನಮಗೆ ಸೇರತಕ್ಕದಲ್ಲ!

ನಂದಿನಿ:- ಶಪತೆಯಿಂದ,—'ಮಹಾಶಯ! ನಿನೇಕಪಿದ್ದಾ. ಅಲ್ಲದ ಸಲ್ಲದ ದುರ್ಭಾವನೆಗಳಿಂದ ವಿಪರೀತ ಮಾರ್ಗದಲ್ಲಿ ನಡೆವಂತವರಿಗೆ, ಎಂತಹ ಮೂರ್ಖ ಸನ್ಮಾನವು ದೊರೆಯಬೇಕೋ?-'

ನಗೇಶ:—ಕೇಕೆಹಾಕಿ ನಗುತ್ತ,—'ಹೇಗಿದೆ? ಇದಕ್ಕೇನು ಸಮಾಧಾನ?-'

ಗಣೇಶ:—ತಿರಸ್ಕಾರದಿಂದ. —'ಅಹುದಮ್ಮಾ, ಅಹುದು! ಒಳ್ಳೆಯ

ಮಾತಿಂದೆಯೇ ನಮ್ಮನ್ನು ಮೂರ್ಖರೆಂದು ಅಲ್ಲಗಳೆದೆ! ಹೋಗಲಿ: ನೀನಾ ದರೂ ಬುದ್ಧಿಸಂಪನ್ನೆಯಾಗಿರುವೆಯಲ್ಲ! ಅಷ್ಟೇ ಸಾಕು!

ವಿಶ್ವನಾಥ:—ಕ್ರೋಧದಿಂದ,—ಬರಿಯ ಬಾಯಿಬಡಕುತನದಿಂದೇನು? ಸರಿಯಾಗಿ ಪಿಚ್ಚಹೇಳು! ನಮಗೆ ಮೂರ್ಖಸಮಾಜದಲ್ಲಿಯೇ ಎಂತಹ ಸನ್ಮಾನವನ್ನು ಕೊಡಬಲ್ಲೆ?'

ನಂದಿನಿ:—ಅದನ್ನೇ ಯೋಚಿಸುತ್ತಿರುವೆನು. ಯಾವ ಶಬ್ದಪ್ರಯೋಗದಿಂದ, ಎಂತಹ ಸ್ವರಸಂಧಾನದಿಂದ ಸಂಬೋಧಿಸಬೇಕೆಂಬುದೇ ಇನ್ನೂ ಬಗೆಹರಿದಿಲ್ಲ. ಆದರೂ, ಹೊದಲು ಬಂದು ನಿಂತಾರ.—

ನಗೇಶ:—ಅದೇನು? ಎಲ್ಲವನ್ನೂ ಬಿಡರಿಬಿಡು! ಆದುವಾಗಲಿ, ಕತೆಯುವರೆಗೂ ಕೇಳಿ-ನೋಡಿಯೇ ಹೋಗುವೆವು.

ನಂದಿನಿ:—ಇದರಿಂದ ನೀವು ನನ್ನನ್ನು ವಾಚಾಳಿಯೆಂದು ಹೇಳಿ ವಿರೋ ಹೇಗೋ ತಿಳಿಯದು! ಆದರೂ ಹಿಂತೆಗೆವಂತಿಲ್ಲ. ವಾಚಾಳಕತೆ ಯಿಲ್ಲವಿದ್ದರೆ ನೀಡಸೇವೆಗೆ ಕೈಯಾಡಬೇಕಾದೀತು!-

ವಿಶ್ವನಾಥ:—ಸರಿ-ಸರಿ: ಒಲುಸೊಗಸು! ಪ್ರತಿಮಾತಿನಲ್ಲಿಯೂ ಯತಿ. ಗಣ, ನಿಯಮ, ಪ್ರಾಸ, ವ್ಯಾಕರಣ, ಛಂದಸ್ಸು. ಉದಾಹರಣೆ-ಎಲ್ಲವನ್ನೂ ಸೇರಿ ಹೊಳೆಯುತ್ತಿರುವುವು.

ನಂದಿನಿ:—ದರ್ಪತಸ್ವರದಿಂದ.—ಅನ್ಯಾಯ! ಬಹು ಅನ್ಯಾಯ!! ಅಲ್ಲವೇ ಮಹಾಶಯ! ನಿಮ್ಮಾ ಅಭಿಮಾನದಿಂದಲ್ಲವೇ ನಮ್ಮಿ ಮಾತೃ ಭಾಷೆ ವೈತ್ಯಮಯವಾದಲ್ಲಿ ಬಿದ್ದು ನಲಸುವಂತಾಗಿರುವುದು? ನಿಮ್ಮಂತಹ ಮಹಾಪುರುಷಸಂತಾನವುಂಟಾಗದೂ ನಿಮ್ಮವರ ಉದಾಸೀನದಿಂದಲ್ಲವೇ ನಮ್ಮ ದೇಶಮಾತೆ. ಬಂಜೆಯಂತೆ ಒಗೆಗೆಟ್ಟು ಬೇಗೆಪಡುತ್ತಿರುವುದು?'

ನಗೇಶ:—ಸಂಭ್ರಮದಿಂದ,—ಭಲೆ! ನಂದ! ಮೇಲುಮಾತಾಡಿದೆ!! ಮತ್ತೊಮ್ಮೆ ಹೇಳು? ವಿಶ್ವನಾಥನ ಕಡೆಗೆ ತಿರುಗಿ ಇನ್ನು ಹೇಳುವರೆ? ನ್ಯಾಯವಾ! ಕೇಳಿದಿರೋ? ಎಷ್ಟು ಅರ್ಥವತ್ತಾದ ಭಾಷಣ?'—

ವಿಶ್ವನಾಥ:—ಕ್ರೋಧಾವೇಶದಿಂದ, ನಾಕಯ್ಯಾ, ನಾಕು!! ಜೀವ ಯಲ್ಲಿ ಎಲ್ಲರೋ ಹೋಗುತಿದ್ದ ಭಿಕ್ಷುಕನ ಮಗಳು, ಸ್ವೇಚ್ಛೆಯಿಂದ ಬೆಳ ದವಳನ್ನು ಕರೆತಂದು ಮನೆಯೆಲ್ಲಿರಿಸಿಕೊಂಡು, ಈಮೂಲಕ ಶಾಸ್ತ್ರ-ಸಂಪ

ನ್ನರೂ, ಅಧ್ಯಯನಶೀಲರೂ, ಆಚಾರನಿಷ್ಠರೂ, ವೈದಿಕರೂ ಆದ ಹಿರಿಯರನ್ನು ತಿರಸ್ಕರಿಸುವೆಯಲ್ಲವೇ? ಒಳ್ಳೆಯದು!"

ಸ್ವರ್ಣ:—"ತಾತಯ್ಯಾ! ನೀವು ಹೇಗಾದರೂ ಹಳಿದಾಡಿರಿ. ನಮ್ಮ ನಂದಿನಿಯ ಬುದ್ಧಿ-ಚಾತುರ್ಯಗಳು ಬೇರೆ ನಿಮಗೆ ಬರಲಾರವಪ್ಪ!"

ನಂದಿನಿ:—ಸ್ವರ್ಣ! ಹಾಗೆ ಹೇಳಲಾಗದು; ಸುಮ್ಮನಿರು. ಎಷ್ಟಾದರೂ, ಅವರು ಹಿರಿಯರು.

ಗಣೇಶ:—"ಇದೂ ಒಂದು ಚಾಟೂಕ್ತಿಯೇ ಸರಿ! ಚೆನ್ನಾಗಿದೆ! ಕಂಕುಳಲ್ಲಿ ದೊನ್ನೆ; ಕೈಯಲ್ಲಿ ಶರಣು!' ಅಹುದು! ಇದೇ ಈ ಕಾಲದ ನಾಗರಿಕತೆ!! ನಮ್ಮಿಂದ ದೇಶಮಾತೆ, ಬಂಜೆಯಾಗಿ ನಶಿಸುತ್ತಿರುವಳು! ನೀನಾದರೂ, ಉದ್ಧರಿಸಬಹುದಲ್ಲ; ತಡೆಯೇಕೆ?"

ನಂದಿನಿ:—ಈ ಮಾತುಗಳಿಂದ ಒಂದು ವಿಧವಾದ ಆವೇಶದಿಂದ ಜೋರಾದಂತಾಗಿ "ಮಹಾಶಯ! ಪುರುಷರ ಇಹಪರಸುಖಸಿದ್ಧಿ(ಧರ್ಮ, ಅರ್ಥ, ಕಾಮ, ಮೋಕ್ಷಗಳೆಂಬ ಚತುರ್ವಿಧ ಪುರುಷಾರ್ಥ)ಕ್ಕೂ ಆಧಾರಪಾತ್ರೆಯರಾಗಿ, ಅನುವರ್ತಿಸಬೇಕಾಗಿರುವ ಸ್ತ್ರೀವರ್ಗವನ್ನು, ಸರಿಯಾದ ವಿದ್ಯಾ-ಬುದ್ಧಿಗಳಿಂದ ಧರ್ಮಮಾರ್ಗದಲ್ಲಿ ದೃಢಪಡಿಸಲೊಲ್ಲದೆ, ಅವರನ್ನು ವಿವಿಧ ನಿರ್ಬಂಧಗಳಿಗೆ ಗುರಿಮಾಡಿ, ಅವರ ಸ್ವಭಾವಸಿದ್ಧವಾಗಿರುವ ಬುದ್ಧಿ, ಗಾಂಭೀರ್ಯ, ಊಹಾಪೋಹ ವಿಚಾರಗಳೇ ಮೊದಲಾದ ಗುಣಗಳನ್ನು ಮಣ್ಣುಪಾಲುಮಾಡಿ, ಕೇವಲ ನಿರ್ದಯರಾಗಿ ಅವರನ್ನು ಪಶುಜೀವಿಗಳೆಂಬ ಅಪವಾದಕ್ಕೆಡೆಯಾಗಿತ್ತು, ನಿರಂತರವೂ ನರಳಿಸುತ್ತಿರುವ ಪುರುಷರೆಂಬ ಕಟುಕರಾದ ನಿಮ್ಮವರ ಕಲ್ಲೆದೆ. ಕರಗಿ-ನೀರಾಗಿ ಸುರಿವುದಕ್ಕೆ ಮೊದಲು, ತಾಯಿ, ಅಕ್ಕ, ತಂಗಿಯರೆಂಬ ಸದ್ಭಾವನೆಯಿಂದ ಸ್ತ್ರೀಸಂತಾನವನ್ನು ಸಂಭಾವಿಸುವಂತಾಗಲಿಕ್ಕೆ ಮೊದಲು, ನಮ್ಮ ದೇಶಮಾತೆ, ಹೇಗೆ ಅಭ್ಯುದಿತೆಯಾಗಬೇಕು?"

"ಮಹಾಶಯ! ನೀವು ನಿಮ್ಮ ಮಕ್ಕಳನ್ನು ಬಾಲ್ಯವಿವಾಹವೆಂಬ ಕಟ್ಟಳೆಯಲ್ಲಿ ಕೆಡಹುವ ಪ್ರಯತ್ನಕ್ಕೆ ನಿಂತು, ವಯೋ-ವಿದ್ಯಾ-ಗುಣ-ಶೀಲಗಳಲ್ಲಿ ಪರಸ್ಪರ ಹೊಂದಿಸಲಾಗದ ಸಂಬಂಧವೆಂಬ ಅಳವಾದ ಭಾವಿಗೆ ತಳ್ಳಿ, ಅವರನ್ನು ನೀವಾಗಿ ಕೆಡಿಸುತ್ತಿರುವಿರಿ! ಅವರು, ಜ್ಞಾನಮಯ ಪ್ರಪಂಚವನ್ನು

ಕಾಣುವುದಕ್ಕೆ ಪ್ರತಿಯಾಗಿ, ಕಾಮ, ಕ್ರೋಧ, ಅಹಂಕಾರ, ಮಾತ್ಸರ್ಯಾದಿ ತಾಮಸ ಪ್ರಪಂಚದಲ್ಲಿರೇ ಸಿಕ್ಕಿ, ಭ್ರಾಂತಿಯಿಂದ ಕರ್ತವ್ಯವನ್ನರಿಯಲಾರದೆ ಅಪ್ರಯೋಜಕರೆನ್ನಿಸುತ್ತಿರುವುದನ್ನೂ ನೋಡಿರುವಿರಿ. ಬಂದುವೇಳೆ ಅವರು ನಮ್ಮ–ಭಯಗಳಿಂದ ವರ್ತಿಸುವರೆಂದು ಹೇಳುವುದಾದರೆ ಕೂಡ, ಸುಗುಣ–ಸಮಾಲೋಚನಾದಿಗಳಿಂದ ಮನೋ–ಬುದ್ಧ್ಯಾದಿ ಪ್ರತ್ಯಂಗಗಳೂ ಚೆನ್ನಾಗಿ ಬೆಳೆದು ದೃಢವಾಗುವುದಕ್ಕೆ ಮೊದಲೇ ಅವರನ್ನು ಗಭೀರಸಂಸಾರಚಕ್ರ ವೇಗಕ್ಕೆ ಗುರಿಮಾಡಿಟ್ಟು, ಅವರು ಅಶಕ್ತಿ–ಅಧೈರ್ಯಗಳಿಂದುಂಟಾಗುವ ಬಗೆ ಬಗೆಯ ರೋಗ–ಶೋಕ–ಸಂತಾಪಗಳಿಂದ ಕುಂದಿ–ಕುಂದುವುದನ್ನು ನೋಡಿ ಯೂ ಸುಮ್ಮನಿರುವಿರಿ. ಇದು, ನಿಮ್ಮ ತಪ್ಪೆಂದು ತಿಳಿದೂ ತಿಳಿಯದವರಂತೆ ಅವರವರ ಅದೃಷ್ಟಾಯತ್ತವೆಂದೂ, ಎಲ್ಲವೂ ದೈವೇಚ್ಛೆಯೆಂದೂ ನಿರ್ವಿಚಾರವಾಗಿ ಹೇಳುತ್ತಿರುವಿರಿ. ಇನ್ನಾದರೂ ತಿಳಿಯಿರೇನು? ಆ ನಿಮ್ಮ ಬುದ್ಧಿ ತಿಳಿಯದ ಹುಡುಗಿಯರು, ತಾವಾಗಿಬಂದು,—ತಮ್ಮನ್ನು ಸಂಸಾರಚಕ್ರಗತಿಗೆ ಈಗಲೇ ಬಲಿಯಾಗಿ ಒಪ್ಪಿಸಿಬಿಡಬೇಕೆಂದು' ನಿಮ್ಮನ್ನು ಕಾಡಲಿಲ್ಲವಷ್ಟೆ? ಹಾಗಾದರೆ, ಅವರನ್ನೇಕೆ ಹಾಗೆ ಮುರ್ಖರಾಗುವಂತೆ ಮಾಡಬೇಕು? ಬಾಲ್ಯಶಿಕ್ಷಣದಲ್ಲಿ ಅವರಿಗೆ ತಕ್ಕಷ್ಟು ವಿದ್ಯಾ–ವಿವೇಚನಾದಿಗಳಿಗೆ ಅವಕಾಶ ನನ್ನೇಕೆ ಕೊಡಬಾರದು? ಆ ನಿಮ್ಮ ಗೃಹಿಣಿಯರು, ನಿಮ್ಮ ಮನೆಗಳಲ್ಲಿ, ಅಡಲಿಕ್ಕೆ ಮಾತ್ರವೇ ಗೊತ್ತಾಗಿ ಬಂದಿರುವ ತೊತ್ತುಗಳೆಂದೇ ತಿಳಿದಿರುವಿರಲ್ಲವೇ? ಅವರು, ನಿಮಗೆ ಶಕ್ತಿಸ್ವರೂಪರಾಗಿದ್ದು ನಿಮ್ಮನ್ನು ಕಾಲೋಚಿತ ನೀತಿ–ನೀತಿಗಳಿಂದ ಪ್ರೋತ್ಸಾಹಿಸುತ್ತ, ನಿಮ್ಮ ಸುಖ–ಭೋಗ–ಸಂಪದಗಳೆಲ್ಲಕ್ಕೂ ಆಶ್ರಯರಾಗಿರಬೇಡವೇ? ಅದಕ್ಕಾಗಿ ಅವರಿಗೆ ವಿದ್ಯೆಯೂ ತಕ್ಕಂತೆ ಪ್ರೋತ್ಸಾಹವೂ ಮತ್ತು ನಿಮ್ಮವರ ಸಹಾಯಸಂಪತ್ತಿಯೂ ಅವಶ್ಯಕವಾಗಿರಬೇಡವೇ? ತಿಳಿದು ಹೇಳಿರಿ!

ಮಹಾಶಯರೇ! ನೀವು ಭಾವಾಭಿಜ್ಞರೂ, ಜ್ಞಾನಸಂಪನ್ನರೂ ಆಗಿರಬಹುದು! ಆದರೂ, ಆನಿಮ್ಮ ಶಾಸ್ತ್ರಜ್ಞಾನವನ್ನು ಕಾರ್ಯಕರಣಗಳಲ್ಲಿಯೂ ಅನ್ವಯಿಸುವಂತೆ ಮಾಡಿಕೊಳ್ಳುವ ಶಕ್ತಿ, ನಿಮಗಿನ್ನೂ ಉಂಟಾದಂತೆ ಕಾಣಲಿಲ್ಲ! ಅತ್ಯೋನ್ನತಿಗೆ ಮಾರ್ಗವೇನೆಂದಾದರೂ ವಿಚಾರಮಾಡಿರುವಂತೆ ತೋರಲಿಲ್ಲ! ಈನಿಮ್ಮ ಅಭಿಮಾನವು ನಶಿಸಿ, ಸುಬೋಧರಾಗುವ ತಲೆದೋರು

ವರೆಗೂ ನಮ್ಮ ದೇಶಮಾತೆ, ಅಭ್ಯುದಯಕ್ಕೆ ಬರುವುದೆಂದರೇನು? ನಿಮ್ಮ ವರ ಸ್ವಾರ್ಥಪರತೆಯುಂಗುವವರೆಗೂ, ಜಡಪ್ರಾಣಿಗಳಾಗಿ ನಮೆದು ಹೋಗುತ್ತಿರುವ ನಮ್ಮ ಸೋದರಿಯರು, ಅಭ್ಯುದಯವನ್ನು ಕಾಣುವ.....

(ಮುಂದೆ ನಂದಿನಿಯಿಂದ ಮಾತು ಹೊರಡಲಿಲ್ಲ. ಕಣ್ಣೀರುತುಂಬಿ, ಮೌನದಿಂದ ತಲೆಬಾಗಿ ಕುಳಿತುಬಿಟ್ಟಳು. ನಂದಿನಿಯ ಕಣ್ಣಿಂದ ನೀರು ಸೋರುತ್ತಿದ್ದುದನ್ನು ನೋಡಿ, ಸ್ವರ್ಣಕುಮಾರಿಯೂ ಅಳುತ್ತ ಕುಳಿತಳು. ನಾದಾನಂದನೂ ಸಂಭ್ರಾಂತನಾಗಿ ಕುಳಿತು ನೋಡುತ್ತಿದ್ದನು. ವಿಶ್ವನಾಥ, ಗಣೇಶ ಮೊದಲಾದವರ ಬಾಯಿಂದ ಯಾವ್ಮಮಾತೂ ಹೊರಡಲಿಲ್ಲ; ಉದರ ಗುಹೆಗೆ ಎಲೆಗಳಲ್ಲಿದ್ದ ಭಕ್ಷ್ಯಗಳನ್ನು ಅವಸರದಿಂದ ತುಂಬುತ್ತಿದ್ದರು.)

ನಗೇಶ:—ವೈದುಸ್ವರದಿಂದ,—'ತಾಯಿಾ! ನಂದಿನಿ! ಏಕ್ಷರಿಕೆ!! ಭಗವತಿಯೊಲ್ಮೆಯಿರುವಲ್ಲಿ ನಿನಗೇಕೆ ಶಂಕೆ?'

ನಂದಿನಿ:—ತಲೆಯೆತ್ತಿ ಸ್ಥಿರಭಾವದಿಂದ ಮತ್ತೆ,—'' ಗುರುಸಮರೇ! ಕ್ಷಮಿಸಿರಿ! ಹಿಂದೆ ನಡೆದ ವಿಚಾರವು ನೆನಪಿಗೆಬಂದು ನಿಮ್ಮಲ್ಲಿ ಸಹಸೆಯಿಲ್ಲದೆ ಶೋಕಾತಿರೇಕದಿಂದ ಮೆಯ್ಮರೆದು, ಮರ್ಯಾದೆಯೀರಿ ಹೇಳಿದ ನನ್ನ ಕಟೂಕ್ತಿಗಳಿಗಾಗಿ ಕೆರಳದೆ ಕ್ಷಮಿಸಿರಿ! ದೈವವಿಲಾಸವು ಹಾಗಿದ್ದುದರಿಂದ ನೀವು ಹಾಗೆ ಮಾಡಿದಿರೇ ಹೊರತು ಬೇರಿಲ್ಲ. ನಡೆದುದನ್ನು ಕುರಿತ. ಈಗ ವಿಚಾರಪಡುವುದು ನಿಷ್ಫಲ; ಇಂದಿನ ನನ್ನ ಅಪಚಾರಕ್ಕಾಗಿ ಪಶ್ಚಾತ್ತಾಪವೇ ನನಗೆ ಪ್ರಾಯಶ್ಚಿತ್ತವಾಗಿರಲಿ. ಆದರೂ, ಮತ್ತೊಂದು ಮಾತನ್ನು ಹೇಳಲಾರೆನು. ತಾವು ನನ್ನನ್ನು ಸ್ವೇಚ್ಛಾಚಾರಿಣಿಯೆಂದು ಹೇಳಿದಿರಿ. ಹಾಗೆಂದೂ ತಿಳಿಯಬಾರದು. ನಾನು ಭಿಕ್ಷುಕನ ಮಗಳಾಗಿದ್ದರೂ ಭಗವತೀಕಟಾಕ್ಷದಿಂದ ನನಗೆ ತಕ್ಕಷ್ಟಿ ಆಶ್ರಯಸಂಪತ್ತಿ ದೊರೆತೇ ಇರುವುದು.

ಮತ್ತೊಂದು ವಿಚಾರ:—ವಿದ್ಯೆಯಿಂದ ಕೇಡೆಂದಿಗೂ ಉಂಟಾಗದು. ಬಾಲ್ಯದಿಂದ ಮಕ್ಕಳಿಗೆ ಸುಶಿಕ್ಷಾರೂಪವಾದ ವಿದ್ಯಾಭ್ಯಾಸಮಾಡಿಸಿದರೆ, ಅದರಿಂದ ಅನಂತಸುಖವುಂಟು. ಅಶಿಕ್ಷಿತೆಯರಿಗೆ ಬಾಲ್ಯವಿವಾಹವಾದರೂ, ಅವರು ನಮ್ಮ ನಿರ್ಬಂಧಕ್ಕೆ ಒಳಪಡುವರೆಂಬದು ಸುಳ್ಳು! ಅವರ ಕುಮಾರ್ಗವು, ಅವರಿಗೆ ಸಿದ್ಧವಾಗಿಯೇ ಇರುವುದು. ಆದರೆ, ಬಾಲ್ಯದಿಂದ ಸುಶಿ

ಸ್ಥಿತಿಯುರಾಗಿದ್ದರೆ, ಅವರು, ಅವಿವಾಹಿತೆಯುರಾಗಿಯೇ ಇದ್ದರೂ, ವಿಷಯಾಭಿಲಾಷೆಯಿಂದ ಮನಸ್ಸನ್ನು ಹೊಲಗೆಡಿಸುವ ಮೂರ್ಖರಾಗರು. ಇದಕ್ಕೆ ಉದಾಹರಣೆಗೆಂದರೆ, ನಿಮ್ಮ ಸುತ್ತಮುತ್ತಲಿರುವವರನ್ನೇ ನೋಡಿ ತಿಳಿಯಬಹುದು! ಅಂತವರಲ್ಲಿಯೂ, ವಿಧವೆಯುವರಾಗಿಯೋ ಅಥವಾ ವಿರಹಿಣಿಯುರಾಗಿಯೋ ಇದ್ದು, ಗುಪ್ತಮಾರ್ಗದಲ್ಲಿ ತಿರುಗುತ್ತಿರುವವರೆಷ್ಟುಮಂದಿಯೆಂಬುದನ್ನು ಎಣಿಸಿ, ಗುಣಿಸಿ ಹೇಳಬಲ್ಲಿರೋ? ಅಂತವರಿಂದಾಗುತ್ತಿರುವ ಪ್ರಾಣಹಾನಿ, ಮಾನಹಾನಿ, ಧನಹಾನಿಗಳೆಂಬ ಘೋರವಾದ ವಿಷಮಸನ್ನಿಪಾತರೋಗಗಳಾದರೂ ಎಷ್ಟರವೆಂಬುದನ್ನು ತಿಳಿಸಬಲ್ಲಿರೋ? ಹಾಗೂ ಅವರಲ್ಲಿ ಎಷ್ಟು ಮಂದಿಯನ್ನು ನೀವು ಪ್ರಾಯಶ್ಚಿತ್ತಗಳೆಂಬ ಡಾಂಭಿಕ ಕ್ರಿಯಾಕಲಾಪಗಳಲ್ಲಿ ಕುಣಿಸಿ ತಣಿಸಿರುವಿರಿ? ಅವರ ಆ ಬಗೆಯ ಪಾತಕಕ್ಕೆ ಹೊಣೆಯಾರು? ಅನುಭವಿಸುವವರು ಅವರೇ ಆದರೂ, ಅವರನ್ನು ಅಂತಹ ದುರವಸ್ಥೆಗೆ ಕರೆತಂದುಬಿಟ್ಟು, ಮತ್ತೆ ಸುಸ್ಥಿತಿಗೆ ತರಲೊಲ್ಲದೆ ಅಲಸರಾಗಿರುವ ನಿಮ್ಮವರಿಗಲ್ಲವೇ, ಹೆಚ್ಚಿನ ಪ್ರಾಯಶ್ಚಿತ್ತವಾಗಬೇಕು? ಮತ್ತೆ ಮತ್ತೆಯೂ ಕೇಳಿಕೊಳ್ಳುವೆನು; ಹುಡುಗಿಯು ಮಾತಿದೆಂದು ಕಡೆಗಣಿಸದೆ, ಸತ್ಯವೂ ಪಥ್ಯವೂ ಆದುದೆಂದು ತಿಳಿದು, ಮನಸ್ಸಿಗೆ ತಂದುಕೊಳ್ಳಿರಿ. ಇನ್ನು ಮುಂದೆಯಾದರೂ, ಅನಮ್ಮ ಬಾಲಿಶ ಸೋದರೀವರ್ಗವನ್ನು ದುಃಖಾರ್ಣವದಲ್ಲಿ ಬೀಳದಂತೆ ಎಚ್ಚರಿಸಿ ಆನಂದಪಥದಲ್ಲಿ ನೆಲೆಗೊಳಿಸಿರಿ; ಧನ್ಯಾತ್ಮರೆನಿಸಿರಿ!!! ಅಷ್ಟುಮಾತ್ರ ಮಾಡಿರಿ? ಆರ್ಯರೇ! ಇದೇ ನನ್ನ ಅನಂತ ಪ್ರಾರ್ಥನೆ! ಇದೇ ನಿಮ್ಮಿಂದ ನನಗಾಗಬೇಕಾದ ಮನ್ನಣೆ!!!"

ವಿಶ್ವನಾಥ—ಗಣೇಶರ ವಾಕ್‌ಶಕ್ತಿ ಲೋಪವಾಯ್ತು; ಸಹಜೋಕ್ತಿಗಳಿಂದ ತಮ್ಮ ಸ್ವಭಾವವನ್ನೇ ತೆಗೆದು ಮುಂದಿಟ್ಟಳೆಂದೋ ಹೇಗೋ, ಇಬ್ಬರ ಮುಖವೂ ವಿವರ್ಣಕ್ಕೆ ತಿರುಗಿತು. ಅಷ್ಟರಲ್ಲಿಯೇ ಊಟವೂ ಮುಗಿಯಿತು; ಮರುನುಡಿಯಿಲ್ಲದೆ ಎದ್ದುನಿಂತರು.

ನಗೇಶ:—ಆನಂದವಾರವಶ್ಯತೆಯಿಂದ, ಎದ್ದುನಿಂತು,—"ಜಯು! ಭಗವತಿ! ಜಯಜಯು!! ಇಂದು ನಿನ್ನ ನಂದಿನಿಯೇ ವಿಜಯು! ಹೂಂ! ಆಗಲಿ;—ಜಯುಧ್ವಜಸ್ಥಾಪನೆ!!!"

ವಿಶ್ವನಾಥ–ಗಣೇಶರಿಬ್ಬರೂ, ವಿಕೃತಸ್ವರದಿಂದ—ಆಗಲಿ; ಅವಳೇ ವಿಜಯಿಯಾಗಿರಲಿ. ನಮಗೆ ಕುಂದಿಲ್ಲ.' ಎಂದಾಡಿ ನಿಲ್ಲದೆ ಹೊರಟು ಹೋದರು.

ನಂದಿನಿಯೂ ಸ್ವರ್ಣಕುಮಾರಿಯೊಡನೆ ಎದ್ದುಹೋದಳು.

ಆರ್ಯಸಂತಾನರೇ!

ನೀವೂ ಹೀನಸ್ಥಿತಿಯಲ್ಲಿರುವ ನಿಮ್ಮಾ ಮಾತೃಭೂಮಿಯನ್ನೂ, ಸನಾತನ ಧರ್ಮರಹಸ್ಯವನ್ನೂ, ನಿಮ್ಮ ಪುತ್ರಕರ್ತವ್ಯವನ್ನೂ ಪುನರುತ್ಥಾಪನ ಮಾಡಲು, ದೃಢನಿಶ್ಚಯದಿಂದ ಮುಂದಾಗುವಿರಲ್ಲವೇ? ಸಾಧು! ಹಾಗಾದರೆ, ಆನಿಮ್ಮ ಸತ್ಸಂಕಲ್ಪವು ಪರಮಸಾಧು!!!

++———————++

॥ ೫ ॥

ಪಂಚಮ ಪರಿಚ್ಛೇದ.

(ಭ್ರಾತೃ-ಭಗಿನಿಯರ ಸಲ್ಲಾಪ)

ನಂದಿನಿ, ಸಮಾಲೋಚನಾಮಂದಿರದಲ್ಲಿ ಒಬ್ಬಳೇ ಕುಳಿತು, ಪುಸ್ತಕಾವಲೋಕನದಲ್ಲಿ ನಿರತೆಯಾಗಿದ್ದಳು. ಚೇಟಿಯೊಬ್ಬಳು ಬಂದು, ಕುಮಾರ ಚಂದ್ರನಾಥರು ಬಂದಿರುವರೆಂದು ಹೇಳಿದಳು.

ನಂದಿನಿ:—ಯಾರು? ಅಚಲಚಂದ್ರನೇ?

ಚೇಟಿ:—ಅಹುದು:

ನಂದಿನಿ:—ತಡೆಯೇಕೆ? ಬರಹೇಳು.

ಚೇಟಿ:—ನಮ್ಮ ಕುಮಾರರೂ ಬಂದಿರುವರು.

ನಂದಿನಿ:—ಕೆಲಸವೇನೂ ಇಲ್ಲದಿದ್ದರೆ ಬರಬಹುದು.

ಚೇಟಿಯು ಹೊರಟುಹೋದಳು. ಇವಳು ಹೋದ ಬಂದೆರಡು ನಿಮಿಷದೊಳಗಾಗಿಯೇ ಇಪ್ಪತ್ತೈರಡು ವರ್ಷದ ಉಜ್ವಲ ಶ್ಯಾಮಲನೊಬ್ಬನು ಬಂದು, ನಂದಿನಿಯ ಮುಂದೆ ನಿಂತು, ಪ್ರೀತಿವ್ಯಂಜಕಸ್ವರದಿಂದ,—"ನಂದಿನಿ! ಏನುಮಾಡುತ್ತಿದ್ದೆ!"

ನಂದಿನಿ:—ಕುಳಿತಿದ್ದ ಕಾಲುಮಣೆಯನ್ನು ಬಿಟ್ಟು, ಅಗಂತುಕನನ್ನು ಕುಳ್ಳಿರಹೇಳಿ, ತಾನೂ ಕೆಳಗೆ ಕುಳಿತು ಮೆಲ್ಲನೆ,—"ಮಾಡುವುದೇನು! ಕಂಡಂತೆಯೇ ಇದೆ!"

ಅಗಂತುಕ:—ಕುಳಿತು,—"ಇಂದಿನ ಕಾಲಕ್ಷೇಪವು ಎಷ್ಟರಮಟ್ಟಿಗಾಯ್ತು?"

ನಂದಿನಿ:—ಅಚಲಚಂದ್ರ! ತಿಳಿದೂ ಕೇಳುತ್ತಿರುವೆಯಲ್ಲಪೆ? ಅಗಲಿ; ಈ ದಿನದ ಪ್ರಥಮ ಕಾಲಕ್ಷೇಪವಾಗಿ ಸ್ವರ್ಗಯೊಡನೆ ವಿಜಾತಾದಿಗಳ ಫಲಾನುಭವ, ವಿರಕ್ತಿಯ ಪ್ರಭಾವ, ಇವುಗಳ ವಿಚಾರಗಳೂ, ಮಧ್ಯಾಹ್ನದಲ್ಲಿ ಸುಶಿಕ್ಷೆಯ ಸತ್ಫಲ, ಅಶಿಕ್ಷೆಯ ಅಲಂಘ್ಯಫಲ, ದೇಶಮಾತೆಯ ವ್ಯಾಕುಲಸ್ಥಿತಿ, ನಮ್ಮವರ ದುರಭಿಮಾನ ಮೊದಲಾದವುಗಳೂ ವಿಮರ್ಶಿಸಲ್ಪಟ್ಟುವು.

ಅಚಲ:—ಕಿರುನಗೆಯಿಂದ,—'ನಾದಾನಂದನಿಂದೆಯೇ ಎಲ್ಲವೂ ತಿಳಿದುವು. ಆದರೆ, ಆ ಬಿಳಿಕೂದಲು-ದೊಡ್ಡತಲೆಯವರು, ಅಷ್ಟಕ್ಕೇ ಸೋತು ಹೋದುದು ಆಶ್ಚರ್ಯವೇ ಸರಿ.'

ನಂದಿನಿ:—ನಿನ್ನ ಶಿಕ್ಷಣಾಕೌಶಲ್ಯವೂ ಭಗವತಿಯ ಅನುಗ್ರಹವೂ ಸಹಕರಿಸುತ್ತಿದ್ದರೆ, ದುಸ್ತರವಾವುದು? ಆಶ್ಚರ್ಯವೇನು? ಅದಿರಲಿ; ಇಂದೇನು, ನೀನು ವಿರಾಮವಾಗಿರುವೆ?

ಅಚಲ:—ಇಂದು ಶಾಲೆಯಲ್ಲಿ ಕೆಲಸವಿರಲಿಲ್ಲ. ಈವರೆಗೂ ಉಳಿದಿದ್ದ ಹಿಂದಿನ ಕೆಲಸಗಳೆಲ್ಲವನ್ನೂ ಕ್ರಮಪಡಿಸಿದುದಾಯ್ತು; ಆಯಾಸ-ದೀಸರಗಳನ್ನು ಹೋಗಲಾಡಿಸಿಕೊಳ್ಳಲಿಕ್ಕೆಂದು ನಿನ್ನಲ್ಲಿಗೇ ಬಂದೆನು.

ನಂದಿನಿ:—ನನ್ನ ಮನದಲ್ಲಿದ್ದುದೂ ಇದೇ! ಇದನ್ನು ಕುರಿತೇ ನಿನಗೆ "ನಾವು ಪರೋಕ್ಷದಲ್ಲಿದ್ದರೂ, ಪ್ರತ್ಯಕ್ಷದಲ್ಲಿಯೇ ಇರುವಂತೆ ಭಾವನೆಯಾಗುವುದೆಂದೂ ಹಾಗೂ ನಮ್ಮಿಬ್ಬರ ಮನಸ್ಸೇ ಹೇಳಿ-ಕೇಳುತ್ತಿರುವುದೆಂದೂ" ಹೇಳಿದ್ದೆನು.

ಅಚಲ:—ತಲೆದೂಗುತ್ತೆ,—"ನಿಜ! ನಿಜ!! ಮನೋಯೋಗಶಕ್ತಿ ಯೆಂಬುದೇ ಇದೆಂದು ತಿಳಿ! ಇದರ ಅದ್ಭುತಪ್ರಭಾವವನ್ನು ವಿವರಿಸುವುದ ಕ್ಕಾಗದು. ಅದಕ್ಕೆಂದೇ ನಮ್ಮ ಕವಿತಾಲೋಲನು ಕೂಡ ತನ್ನ ಸೋದರಿ ಗೊಮ್ಮೆ ಹೀಗೆ ಹೇಳಿರುವನು;—

ಕಂದ॥—"ಬಗೆಕೇಳ್ದುಂ ಬಗೆಯೊರೆಗುಂ,
ಬಗೆತಿಳಿಗುಂ ಬಗೆಯೆ ತಿಳಿಪುಗುಂ ಬಗೆವಗೆಯಿಂ॥
ದೊಗೆದೊಗೆವಾವಗೆ ಸೇವೆಗೆ
ಬಗೆದೆಯೆ ಬಗೆಗೊಳ್ವ ಬಗೆಯೊಳಣ್ಣನ ಬಗೆಯಂ॥"

ಈಬಗೆಯ ಆಕರ್ಷಣಾಯಂತ್ರವೇ ನನ್ನನ್ನು ಮತ್ತೆಲ್ಲಿಗೂ ಹೋಗಗೊಡದೆ ಇಲ್ಲಿಗೇ ಬರಮಾಡಿತೆಂದು ತಿಳಿಯೆಯೋ ?"

ನಂದಿನಿ:—ಹಾಗಾದರೆ, ಆಕರ್ಷಣಾಶಕ್ತಿಯೇ ನಿನ್ನನ್ನು ಎಳೆತಂದಿರು ವುದೋ? ನಿನ್ನಲ್ಲಿರುವ ಈ ಅವ್ಯಾಜಭ್ರಾತೃಸ್ನೇಹವು ನಿನ್ನನ್ನು ಪ್ರೇರಿಸ ಲಿಲ್ಲವೋ?

ಅಚಲ:—ಹೇಗೆ ಬೇಕಾದರೂ ಹೇಳಬಹುದು. ಅದಿರಲಿ; ನಿನ್ನ ಕೈಯಲ್ಲಿರುವ ಗ್ರಂಥವಾವುದು?

ನಂದಿನಿ:—"ಸುಭಾಷಿತ."

ಅಚಲ:—ತಲೆದೂಗಿ—"ಸಂತೋಷವಾಯಿತು. ಆದರೆ, ನಂದಿನಿ! ಮೊದಲು ನೀನು ನಮ್ಮ ಕರ್ಣಾಟದೇಶಭಾಷೆಯನ್ನು ಭದ್ರಪಡಿಸಿಟ್ಟು, ಆಬಳಿಕ ದೇವಭಾಷೆಯನ್ನು ಅಭ್ಯಸಿಸಬೇಕೆಂಬುದೇ ನನ್ನ ಅಭಿಲಾಷೆ!"

ನಂದಿನಿ:—ನನ್ನ ಇಷ್ಟವೂ ಬೇರೆಯಾಗಿಲ್ಲ. ಈವರೆಗೂ ಕರ್ಣಾಟಕ ಕಾವ್ಯಗಳನ್ನೇ ನೋಡುತ್ತಿದ್ದೆನು. ಕೆಲವು ಸೂತ್ರಗಳನ್ನು ನೋಡಬೇಕೆಂಬ ಉದ್ದೇಶದಿಂದ ಈಗಲೇ ಇದನ್ನು ಕೈಕೊಂಡಿರುವೆನು.

ಅಚಲ:—ಸಂಭ್ರಮದಿಂದ,—"ನಂದಿನಿ! ಸತ್ಯವಾಗಿ ನೀನೇ ನಂದಿನಿ!! ನೀನೇ ಸಾರ್ಥಕನಾಮಸಂಶೋಭಿತೆಯಾದ ಕರ್ಣಾಟ **ಮಾತೃನಂದಿನಿ!!!** ತಾಯೀ! ಧನ್ಯಳೆನ್ನಿಸಿದೆ! ಯಾರು, ತಮ್ಮ ಜನ್ಮಭೂಮಿಯನ್ನೂ ದೇಶಭಾಷೆ ಯನ್ನೂ ನಿಂದಿಸುವರೋ, ಅವರೇ ಮಾತೃಘಾತಕರು. ಅವರಿಗೂ ಕೀಳಾದ

ಕೃತಘ್ನರು ಈ ಜಗತ್ತಿನಲ್ಲಿರಲಾರರು. **"ಜನನೀ ಜನ್ಮಭೂಮಿಶ್ಚ ಸ್ವರ್ಗಾದಪಿ ಗರೀಯಸಿ"** ಎಂಬೀ ಉಪದೇಶಾಮೃತವನ್ನು ನಿರಂತರವೂ ತ್ರಿಕರಣಶುದ್ಧವಾಗಿ ಯಾರು ಸೇವಿಸುವರೋ, ಅಂತಹರೇ ಸತ್ಪುತ್ರರು! ಅವರೇ ಕೃತಾರ್ಥರು!! ಅಂತಹ ಸತ್‌ಸಂತಾನರಿಗೇ ನನ್ನ ಸಹಸ್ರ-ಸಹಸ್ರ ವಂದನೆಗಳು!!!"

ನಂದಿನಿ:—ತಲೆಯೆತ್ತಿ ಗಂಭೀರಸ್ವರದಿಂದ,—"ಅಣ್ಣಾ! ನೀನೇನೋ ಹೀಗೆ ಹೇಳುತ್ತಿರುವೆ? ನವನಾಗರಿಕರೆನಿಸಿ, ಸಮಾಜಸುಧಾರಕರಲ್ಲಿ ಅಗ್ರೇಸರರಾಗಿರುವ ಮಹಾಜನರನ್ನು ನೋಡಿದರೆ, ನಮ್ಮೀ ಕರ್ಣಾಟಭಾಷಾಮಾಸಿನಿಯ, ಮತ್ತು ಜನ್ಮಭೂಮಿಯ ಅಭಿಮಾನವು ಎಷ್ಟರಮಟ್ಟಿಗೆ ತೋರುತ್ತಿರುವುದೋ ತಿಳಿದುಬರುವುದು. ಅಂತವರಿಂದ ದೇಶಭಾಷೆಗೆ ಉಂಟಾಗುವ ಪ್ರೋತ್ಸಾಹವಂತೂ ಹೇಳಿ-ಕೇಳುವಂತಿಲ್ಲ."

ಅಚಲ:—ವಿಷಾದದಿಂದ,—"ತಾಯೀ! ಆ ವಿಚಾರವು, ನನಗೆ ಸಹನಾತೀತವಾದ ಯಾತನೆಯನ್ನೇ ಉಂಟುಮಾಡುತ್ತಿರುವುದಾದರೂ ಅಲ್ಲೆಲ್ಲಿ ಒಬ್ಬಬ್ಬರಂತೆ ದೇಶಕ್ಕೂ ಭಾಷೆಗೂ ಅಳುತ್ತಿರುವ ನಮ್ಮ ದೇಶಬಾಂಧವರನ್ನು ನೋಡಿ, ಮನದಳಲನ್ನು ತಡೆಗಟ್ಟುತ್ತಿರುವೆನು. ಆದರೆ, ನಿನಗೆ ಈಗ ನಾನು ಹೇಳಬೇಕಾದುದು ಇಷ್ಟೆ! ದೇಶವು ಅಭಿವೃದ್ಧಿಸ್ಥಿತಿಗೆ ಬರಬೇಕಾದರೆ, ದೇಶಭಾಷೆಯು ಸರ್ವತ್ರ ಪ್ರಸಾರವಾಗಿರಬೇಕು. ಹಾಗಾಗುವುದಕ್ಕೂ ಸ್ತ್ರೀಜನಾಂಗದವರೇ ಮುಖ್ಯ ಪಾತ್ರರಾಗಿ ನಿಂತು, ತಮ್ಮ ತಮ್ಮ ಪುರುಷವರ್ಗವನ್ನು ಹುರಿಗೊಳಿಸಬೇಕು. ಅಸ್ಪರ ಧೈರ್ಯ-ಸ್ಥೈರ್ಯ-ದೃಢಪ್ರಯತ್ನಗಳು ಈ ನಮ್ಮ ಅಬಲಾವರ್ಗವನ್ನೇ ಬಿಟ್ಟು ಎಲ್ಲಿಯೋ ಅವಿತುಕೊಂಡಿರುವುದು. ಆದರೂ ಬಿಡದೆ ಪ್ರಯತ್ನಮಾಡಿದರೆ, ಕ್ರಮಕ್ರಮವಾಗಿ ಸುಧಾರಿಸಲ್ಪಟ್ಟು, ಬಹುಕಾಲಾನಂತರದಲ್ಲಾದರೂ ಮತ್ತೆ ಮೊದಲಿನಂತೆ ಬೆಳಗಲಾರದೇತಕೆಂದು ನನಗೆ ತೋರುತ್ತಿದೆ. ಇದನ್ನು ಚೆನ್ನಾಗಿ ನೆನಪಿಟ್ಟು, ನೀನೇ ಮುಂದಾಗಿ ನಿಂತು, ಇದನ್ನು ಸಾಧಿಸಬೇಕು."

ನಂದಿನಿ:—ಹೇಗೆ? ಸಾಧಿಸುವ ಕ್ರಮವೇನು?

ಅಚಲ:—ಮೊದಲು, ಮಕ್ಕಳಿಗೆ ತಾಯಹಾಲು ಹೇಗೆ ಮುಖ್ಯವೋ, ಹಾಗೆಯೇ ದೇಶಭಾಷೆಯೂ ಮುಖ್ಯವಾಗಿರಬೇಕು. ದೇಶಭಾಷೆ ಸ್ಥಿರವಾ

ಗಿರಬೇಕಾದರೆ, ಸಮಸ್ತ ಭಾಷೆಗಳಿಗೂ ಉತ್ಪತ್ತಿಸ್ಥಾನವಾದ ದೇವಭಾಷೆ (ಸಂಸ್ಕೃತ)ಯೇ ಜೀವಾನಂದದಾಯಕವಾದ ಕಲ್ಪಭೂರುಹವೆಂದು ತಿಳಿ! ಈ ನಮ್ಮ ಆರ್ಯಮಹಿಳಾವರ್ಗಕ್ಕೆ ದೇಶಭಾಷೆಯೂ ದೇವಭಾಷೆಯೂ ಅತ್ಯವಶ್ಯವಾಗಿ ಅನುಸ್ಮೇಯವಾಗಿರಬೇಕು.

ನಂದಿನಿ:—ಹಾಗಿದ್ದರೆ, ಉಳಿದ ಭಾಷೆಗಳ ಅಗತ್ಯವಿಲ್ಲವಷ್ಟೆ? ಅವನ್ನೇಕೆ ನನಗೆ ಅಡಿಗಡಿಗೂ ತಿಳಿಸುತ್ತಿರುವೆ?

ಅಚಲ:—ಅವುಗಳು ಬೇಕಾದುವಲ್ಲವೆಂದು ಹೇಳಬಾರದು. ಅಗತ್ಯವಾಗಿ ಬೇಕು. ಆದರೆ, ಅವನ್ನೇ ನಿತ್ಯಾನುಸಂಧಾನವಾಗಿಡಬೇಕೆಂದಲ್ಲ! ದೇಶಭಾಷೆಯ ಮತ್ತು ದೇವಭಾಷೆಯ ಗುಣೋತ್ಕೃಷ್ಟತೆಯನ್ನು ಪ್ರಸಾರಕ್ಕೆ ತರಬೇಕಾದರೆ, ಉಳಿದ ಭಾಷೆಗಳ ಪರಿಶ್ರಮವು ತಕ್ಕಷ್ಟಿ ಉಂಟಾಗಿರಬೇಕು.

ನಂದಿನಿ:—ಇಲ್ಲದಿದ್ದರೆ ನಷ್ಟವೇನು?

ಅಚಲ:—ನಷ್ಟವೇನೆಂಬೆಯೋ? ವಿಚಾರಮಾಡುವಲ್ಲಿ, ನಮ್ಮೀ ದೇಹದ ಪ್ರತ್ಯಂಗಗಳೂ ಬೇರೆಬೇರೆ ಕಾರ್ಯದಲ್ಲಿ ನಿಯಮಿತವಾಗಿರುವುವಾದರೂ, ಅವುಗಳೆಲ್ಲ ಪರಸ್ಪರ ಸಾಮರಸ್ಯದಿಂದ ಇರದೆಹೋದರೆ, ದೇಹಕ್ಕೂ ಆತ್ಮನಿಗೂ ಕ್ಷೋಭೆಯುಂಟಾಗುವುದಿಲ್ಲವೇ? ಹಾಗೆಯೇ, ನಮ್ಮೀ ಭಾರತಮಾತೆಯ ಸಂತಾನರಾದ ನಾವೆಲ್ಲರೂ ಐಕ್ಯಮತ್ಯದಿಂದಿರದಿದ್ದರೆ, ದೇಶವೂ ಉನ್ನತ ಸ್ಥಿತಿಗೆ ಬರಲಾರದು. ಹಾಗಾಗದೆ, ನಮ್ಮನಮ್ಮಲ್ಲಿ ಪರಸ್ಪರ ಬಂಧುಪ್ರೇಮವನ್ನು ಹೆಚ್ಚಿಸಿ, ನಮ್ಮ ಭ್ರಾತೃವರ್ಗದಲ್ಲಿಯೂ, ನಮ್ಮ ಸುತ್ತಮುತ್ತಲ ಪ್ರದೇಶಗಳಲ್ಲಿಯೂ ಇರಬಹುದಾದ ವಿಶೇಷ ಗುಣಗಳನ್ನು ನಾವೂ ಸಂಗ್ರಹಿಸಿ, ಅಮೂಲಕ ಈಗ ಅನ್ಯಾಕ್ರಾಂತವಾಗಿ ನರಳುತ್ತಿರುವ ದೇಶಭಾಷಾಮಾನಿನಿಯ ಪುನರುಜ್ಜೀವನಕಾರ್ಯವು ಸುಲಭವಾಗಿ ಸಿದ್ಧಿಸುವಂತೆ ಮಾಡಬೇಕಾದರೆ, ನಮಗೆ ಭ್ರಾತೃಭಾಷಾಪರಿಶ್ರಮವೂ ಮುಖ್ಯವಾಗಿರಬೇಕು. ಇದಕ್ಕೆಂದೇ ಅವಕಾಶ ದೊರೆತಾಗಲೆಲ್ಲಾ ನಿನಗೆ ಸ್ವಲ್ಪಸ್ವಲ್ಪವಾಗಿ ತಿಳಿಸುತ್ತಿರುವುದು.

ನಂದಿನಿ:—ಅಣ್ಣಾ! ನನಗೂ ಆಶೆಯೇನೋ ಇದೆ. ಆದರೆ ಅದಕೊಡನೆಯೇ ಭಯ-ಸಂಶಯಗಳೂ ಇರುತ್ತಿದ್ದು, ನನ್ನನ್ನು ಹಿಂದುಮಾಡುತ್ತಿವೆ.

ಇದನ್ನು ಸರಿಯಾಗಿ ಹೇಳಿ–ತಿಳಿಸುವುದಕ್ಕೆ ನಿನ್ನಿಂದಲ್ಲದೆ ಮತ್ತಾರಿಂದೆಯೂ ಆಗದೆಂದು ಬಗೆದು ಸುಮ್ಮನಿದ್ದೆನು.

ಅಚಲ:—ಅವೆಲ್ಲಾ ಈಗ ಸರಿಯಾಯಿತಲ್ಲವೆ? ಅದಿರಲಿ; ಇದೇನಿಂದು, ನಿನ್ನ ನಚ್ಚಿನತಂಗಿ ಬದಲಾಯಿಸಿದಂತಿದೆ!

ನಂದಿನಿ:—ಕುತೂಹಲದಿಂದ,—'ಯಾರು? ಸ್ವರ್ಣಕುಮಾರಿಯೋ?'

ಅಚಲ:—ಅಹುದು.

ನಂದಿನಿ:—ನೀನೇ ಕಾರಣನಲ್ಲವೇ?

ಅಚಲ:—ಹೇಗೆ?

ನಂದಿನಿ:—ಹೇಗೋ, ನೀನೇ ಹೇಳಬೇಕು! ಅವಳ ಆಲಂಕಾರ–ವಿಲಾಸಾದಿಗಳನ್ನು ಕುರಿತು, ನೀನು ಎಷ್ಟುಬಾರಿ ಕುಚೋದ್ಯ ಮಾಡಿಲ್ಲ?

ಅಚಲ:—ಅಷ್ಟಕ್ಕೇ ಬಿಡಲಾದೀತೋ?

ನಂದಿನಿ:—ಕೂಡದೋ?

ಅಚಲ:—ಏಕೆ?

ನಂದಿನಿ:—ಏಕೆಂದರೆ, ನನಗೇನು ಗೊತ್ತೇ? ದಕ್ಷಿಣಾಮೂರ್ತಿಯ ದಯೆಗೆ ಪಾತ್ರಳಾಗಬೇಕೆಂದು ದಾಕ್ಷಾಯಿಣಿಯೇ ತಾಪಸವೃತ್ತಿಯನ್ನು ಕೈಕೊಂಡಳಲ್ಲವೇ?

ಅಚಲ:—ಪರಿಹಾಸದಿಂದ,—'ಹಾಗೋ? ಸರಿ–ಸರಿ!! ಗೊತ್ತಾಯ್ತು. ಅದರೆ, ಇಲ್ಲಿ ದಾಕ್ಷಾಯಿಣಿಯನ್ನು ಕಟಾಕ್ಷಿಸಲುಳ್ಳ ದಕ್ಷಿಣಾಮೂರ್ತಿ ಯೊಬ್ಬನಿರಬೇಕಲ್ಲವೇ? ಅತನೆಲ್ಲಿರುವನೋ?'

ನಂದಿನಿ:—ಎಲ್ಲಿಯಾದರೂ ಹುಡುಕಬೇಕೇ? ಇಲ್ಲಿರುವವನೇ ಆಗಲೊಲ್ಲನೋ?

ಅಚಲ:—ಅದು ಸುಳ್ಳುಮಾತು! ಇವನನ್ನು ದಕ್ಷಿಣಾಮೂರ್ತಿಯಾಗಿ ಮಾಡಬೇಕಾದರೆ ಬಹುಕಷ್ಟಪಡಬೇಕು!

ನಂದಿನಿ:—ವ್ಯಂಗ್ಯಸ್ವರದಿಂದ,—''ಬಹುಕಷ್ಟ? ಹೇಗೆ? ವರದಕ್ಷಿಣೆಯನ್ನೇನಾದರೂ ಕೊಡಬೇಕೋ?"

ಅಚಲ:—ತಲೆದೂಗಿ,—''ಬೇಡವೇ? ದಾಕ್ಷಿಣಾತ್ಯರನ್ನು ದಕ್ಷಿಣಾ

ಮೂರ್ತಿಗಳಾಗಿ ಮಾಡಲು, ದಕ್ಷಿಣೆಯೇ ಮುಖ್ಯವಲ್ಲವೋ? ಹಾಗೂ ಇಲ್ಲಿರುವವನೆಂದರೆ ಮತ್ತೂ ಹೆಚ್ಚು!"

ನಂದಿನಿ:—ಹೋಗಲಿ; ಎಷ್ಟು ಬೇಕೆಂಬುದನ್ನಾದರೂ ಹೇಳಲಾದೀತೋ?

ಅಚಲ:—ಆದೀತು; ಎಷ್ಟೇ ಕಡಮೆಯೆಂದರೂ ಇವನಿಗೆ ಲಕ್ಷವಾದರೂ ಕೊಡಬೇಕು?

ನಂದಿನಿ:—ಅದರಿಂದಲೇ ಜೀವಿಸಬೇಕೆಂದೋ?

ಅಚಲ:—ಹಾಗೆಂದೇ ಹೇಳು; ನಷ್ಟವೇನು? ಈಗ ನೋಡು! ನಮ್ಮವರಲ್ಲಿ ಯಾವ ತರುಣನನ್ನೇ ಕೇಳು; ಅವನ ಬಾಯಿಂದ—"ತಮಗೆ ಸಾವಿರಕ್ಕೆ ಕಡಮೆಯಿಲ್ಲದೆ ಯಾರು ವರದಕ್ಷಿಣೆ ಕೊಡಬಲ್ಲವರೋ, ಅವರ ಮಗಳನ್ನು ಮದುವೆಯಾಗಲು ನಮ್ಮ ತಡೆಯಿಲ್ಲವೆಂದೇ" ಹೊರಡುತ್ತಿದೆ.

ನಂದಿನಿ:—ನಕ್ಕು—"ಬುದ್ಧಿಯಿಲ್ಲದೆ ಕೊಡುವವರು ಕೆಡಲಿ! ಜೀವನವನ್ನು ಕಲ್ಪಿಸಿಕೊಳ್ಳಲಾರದೆ, ಹೆರವರ ಹಣಕ್ಕೆ ಕೈಯೊಡ್ಡಿ, ಜೀವಿಸಬೇಕೆಂಬ ಹೇಡಿಗಳಿಗೆ, ನಮ್ಮ ಹೆಣ್ಣುಮಕ್ಕಳನ್ನು ನಾವು ಹೇಗೂ ಕೊಡಲೊಲ್ಲೆವು!"

ಅಚಲ:—ಓಹೋ! ಹಾಗೂ ಇಷ್ಟವೋ? ಆದರೆ, ನಿಮ್ಮ ಹುಡುಗಿಯರನ್ನು ಮದುವೆಯಿಲ್ಲದೆಯೇ ಇರಿಸಿಕೊಂಡಿರುವಿರೋ?

ನಂದಿನಿ:—ಅಹುದು; ನಿಮ್ಮವರನ್ನು ಸುತ್ತಿಮುತ್ತಿ ಕಾಡುತ್ತಿರುವ ವರದಕ್ಷಿಣೆಯೆಂಬ ನಿಷಮಸನ್ನಿಪಾತರೋಗವು ನಾಶವಾಗುವವರೆಗೂ ನಮ್ಮವರೆಲ್ಲರೂ ಹಾಗೆಯೇ ಇರಬೇಕು. ಹಾಗೆ ಮಾಡಿದಮೇಲೆಯೇ ನಿಮ್ಮವರ ಮಿದುಳಿನಲ್ಲಿಯೂ ರಸೋತ್ಪತ್ತಿಯಾಗಬೇಕು!

ಅಚಲ:—ಹೇಗೋ?

ನಂದಿನಿ:—ಹೇಗೆಂದರೆ, ನಮ್ಮವರೆಲ್ಲರೂ ಹಟತೊಟ್ಟು ಒಗ್ಗಟ್ಟಿನಿಂದ ಮೇಲಕ್ಕೇರಿ ಕುಳಿತರೆ, ನಿಮ್ಮವರ ಹೆಮ್ಮೆ ಹಳ್ಳಕ್ಕೆ ಬಿದ್ದು, ನಮ್ಮವರನ್ನೇ ಬೇಡುವಂತಾದೀತು. ಹಾಗಾಗುವಂತೆ ಮಾಡಬೇಕೆಂಬುದೇ ನನ್ನ ಅಭಿಲಾಷೆ!

ಅಚಲ:—ಹಾಗಿದ್ದರೆ ನಿಮ್ಮ ಇಷ್ಟ! ಹೇಗೂ ಲಕ್ಷವಾದರೆ ದಕ್ಷಿಣಾಮೂರ್ತಿಯಾಗಬಹುದು.

ನಂದಿನಿ:—ಲಕ್ಷವೊಂದೇ ಸಾಕೇ? ಎರಡಾದರೆ.....?

ಅಚಲ:—ಅದಾದರೆ ಮತ್ತಾ ಸೊಗಸು! ಹಾಗಿದ್ದರೆ ಈಗಲೇ ಹೇಳಿಬಿಡು!

ನಂದಿನಿ:—ಹೇಳಬೇಕೇ? ಆಗಲಿ; ಕೊಡಬಹುದು. ಆದರೆ ಅಷ್ಟಕ್ಕೆ ಅಶಕ್ತರಾಗಿದ್ದರೋ?

ಅಚಲ:—ಗೊತ್ತಿಲ್ಲವೇ? ಸ್ಥಿರ-ಚರ-ಸ್ವತ್ತುಗಳನ್ನೆಲ್ಲಾ ಮಾರುವುದು; ಸಾಲದಿದ್ದರೆ ಮಕ್ಕಳನ್ನು ಹೆರವರಿಗೆ ದತ್ತಕೊಡುವುದು, ಅದೂ ಸಾಲದಿದ್ದರೆ ಹೆಂಡಿರನ್ನು ಕಂಡವರ ಪಾಲು ಮಾಡುವುದು; ಹಾಗೂ ಸಾಲದೆಂದರೆ, ತಾನುಕೂಡ ಚಂಡಾಲರ ಆಳಾಗಲೊಪ್ಪಿಕೊಳ್ಳುವುದು. ಮತ್ತೇನು?

ನಂದಿನಿ:—ಮತ್ತೇನು? ಎಲ್ಲವೂ ನಪೆಯತಕ್ಕವುಗಳೇ ಆಗಿವೆ. ಆಗಲಿ; ಮಾಡಿರಿ! ಸ್ನೇಹಲತಾದೇವಿ ಹತ್ತಿಸಿದ ಕಿಚ್ಚು, ಇನ್ನೂ ಆರಿಸಿ ಹೋಗಿಲ್ಲವಷ್ಟೆ?

ಅಚಲ:—ಆರಿಸಿಯೂ ಇಲ್ಲ; ಆರಿಸುವಂತೆಯೂ ಇಲ್ಲ. ಅದು, ಬರುತ ಬರುತ ನಾಲ್ಕಾರು ಕಡೆಗಳಿಗೂ ಹಬ್ಬುತ್ತಿದೆ. ಕೈಯಿಂದಾದಷ್ಟು ಅದನ್ನು ಆರಿಸಬೇಕೆಂಬುದೇ ನಾನು ಕೇಳುತ್ತಿರುವ ಲಕ್ಷಕ್ಕೆ ಕಾರಣ.

ನಂದಿನಿ:—ಹೇಗೆ?

ಅಚಲ:—ಹೇಗೆಂದರೆ, ಹಣಕ್ಕಾಗಿ ಹೆಣಗಾಡಿ ಸಾಯುತ್ತ, ತಮ್ಮ ತಮ್ಮ ಮಕ್ಕಳನ್ನೇ ಮಾರುತ್ತಿರುವ ಈಕಾಲದ ಮಹಾಜನರ ಕೈಕಾಲುಗಳಿಗೆ ಬೇಡಿಗಳನ್ನು ತೊಡಿಸಲಿಕ್ಕಾ, ಲಜ್ಜಾ-ಭಯಗಳಿಲ್ಲದೆ ಹಲ್ಕಿರಿದು, ವರದಕ್ಷಿಣೆ ಕೊಟ್ಟರೆ ನಿಮ್ಮ ಮಗಳನ್ನು ನಮ್ಮ ಮಗನಿಗೆ ಕೊಳ್ಳುವೆನೆಂದಾಡುವವರ ನಾಲಿಗೆಗೆ ಕರಗಿಸಿದ ಸೀಸವನ್ನು ಸುರಿಸಲಿಕ್ಕಾ ತಗಲುವ ಪೆಚ್ಚಕ್ಕಾಗಿ ಕೊಡಬೇಕೆಂಬುದೇ—

ನಂದಿನಿ:—ಹಾಗೆ ಮಾಡಬಲ್ಲೆಯಾದರೆ ಸಂತೋಷದಿಂದ ಕೊಡಲಾ ದೀತು. ಆಗಲಿ; ಸ್ವರ್ಗಕ್ಕೆ ವರನಾಗುವೆಯೋ?

ಅಚಲ:—ಆಗುವಂತಿಲ್ಲ.

ನಂದಿನಿ:—ಏಕೆ? ಒಪ್ಪಿಲ್ಲವೋ?

ಅಚಲ:—ಒಪ್ಪಿಲ್ಲವಾದುದರಿಂದೆಯೇ ಹಾಗೆ ಹೇಳಿದುವುದು.

ನಂದಿನಿ:—ಏತರಿಂದ?

ಅಚಲ:—ವಿಲಾಸಪ್ರಿಯರಿಂದಾಗುವ ಪುರುಷಾರ್ಥಸಾಧನೆಗೆಳಾವು ವೆಂಬುದನ್ನೇ ತಿಳಿಯದ ನನಗೆ ಒಪ್ಪುಗೆಯಾವುದು? ವಿವಾಹವೆಂಬುದೇನು, ವಿಷಯತೃಪ್ತಿಗೊಂದಕ್ಕೆ ಮಾತ್ರವೊ?

ನಂದಿನಿ:—ನಾದಾನಂದನನ್ನು ಕೇಳಿದರೆ ಹೇಳುವನು? ನನ್ನನ್ನು ಕಂಡಾಗಲೆಲ್ಲಾ ಕಾಡು ಹೆಂಗಸೆಂದೂ, ನಾಗರಿಕತೆಯ ಗಂಧವನ್ನೇ ತಿಳಿಯಲೊಲ್ಲದ ಜಡಳೆಂದೂ ಬಗೆಬಗೆಯಾಗಿ ಹಳಿದಾಡುತ್ತಿರುವನು. ನೀನೊಬ್ಬನೇ ಈ ಬಗೆಯಾಗಿ ವಿಲಾಸವನ್ನು ನಿರಾಕರಿಸುತ್ತಿರುವವನು.

ಅಚಲ:—ನಂದಿನಿ! ಯಾರು, ಹೇಗೆ ಹೇಳಿದರೂ ಹೇಳಲಿ. ಸೊಕ್ಕಿನ ಮಕ್ಕಳನ್ನು ಸಾಹಸದಿಂದೆಯೇ ಭಂಗಿಸಬೇಕಲ್ಲದೆ ಬಾಯಿಮಾತಿನಿಂದಾಗದು. ನಾದನಿಗೆಂದರೆ ಸಹವಾಸನೇ ಹಾಗೆ ಮಾಡಿಸಿರುವುದು. ಅತನು ವ್ಯಾಸಂಗದಲ್ಲಿ ಶ್ರದ್ಧಾಳುವಾಗಿದ್ದರೂ, ತನ್ನ ಸದ್ವೃತ್ತವನ್ನು ಸಂರಕ್ಷಿಸಿಕೊಳ್ಳುವಷ್ಟು ಧೈರ್ಯವುಳ್ಳವನಾಗಿಲ್ಲ. ಚಾಂಚಲ್ಯವು ಅತಿಯಾಗಿರುವುದು. ಅದು ನನಗೆ ಸರಿ ತೋರದು. ಅದೂ ಹಾಗಿರಲಿ; ನನ್ನ ತಂಗಿ ಸುರಸೆಯೇ ದೃಷ್ಟಾಂತಕ್ಕಿರುವಳಷ್ಟೆ! ನನ್ನ ಬೋಧನಾಬಲದಿಂದ ಅವಳು, ವಿಲಾಸಾದಿಗಳನ್ನು ತಕ್ಕಷ್ಟು ಬಿಟ್ಟಿರುವಳು. ಅವಳ ಗಂಡನೆಂದರೆ, ಅವನು ಈ ಕಾಲದ ಮೋಜುಗಾರನೇ ಸರಿ. ಸಾಲದುದಕ್ಕೆ ಹಣದಕೊಬ್ಬು, ವಿದ್ಯಾವಂತನೆಂಬ ಹೆಮ್ಮೆಯೂ ತಲೆಗೇರಿ ಹೋಗಿವೆ. ಯಾರ ಮಾತೂ ಕಿವಿಮುಟ್ಟುವಂತಿಲ್ಲ. ತನ್ನ ಪತ್ನಿಯಾದರೂ ತನ್ನಂತೆಯೇ ತಕ್ಕಿ-ಬಲ್ಕಿ ನಲಿಯುತ್ತಿರಬೇಕೆಂಬುದೂ, ಅವಳು ಯಾವ ಕೆಲಸವನ್ನೂ ಮಾಡಲಾಗದೆಂಬುದೂ ಅವನ ಅಭಿಲಾಷೆಯಾಗಿದೆ. ಆದರೆ, ನನ್ನಲ್ಲಿ ಮಾತ್ರ ಅವನ ಬೀಳೆ ಬೆಯ್ಯುವಹಾಗಿಲ್ಲ. ನನ್ನಲ್ಲಿ ಮಾತನಾಡಬೇಕೆಂದರೆ ಅತನಿಗೆ ನಾಲಿಗೆಯೇ ಬರುವುದಿಲ್ಲ. ಸುರಸೆಯಂತೂ ಈ ಕಾಲದ ನಮೂನೆ (Fashion)ಯನ್ನು ದೂರದಲ್ಲಿ ಬಿಟ್ಟಿರುವಳೇ?

ನಂದಿನಿ:—ಹೇಗೆ?

ಅಚಲ:—ಮತ್ತೇನು? ಗಂಡನ ಮುಖೋಲಾಸಕ್ಕೆಂದು ಅತನಿದಿರೆ ಅಲಂಕರಿಸಿಕೊಳ್ಳುವಳಾದರೂ ಅವನತ್ತ ಹೊರಟನೆಂದರೆ, ಇತ್ತ ಎಂದಿನಂತೆ ಕೆಲಸಕ್ಕೆ ಹೊರಡುವಳು. ನಾನು, ಪತ್ಯಾಜ್ಞೆಯನ್ನು ವಿಾರುವುದು

ಸತ್ಕರ್ಮವಲ್ಲವೆಂದು ಹೇಳಿ, ಅವಳನ್ನು ಹೆಚ್ಚಾಗಿ ಒಲಾತ್ಕರಿಸುವುದಿಲ್ಲ.

ನಂದಿನಿ:—'ಸರಿ; ನೀನೇನು ಲೋಕೋತ್ತರ ವ್ಯಕ್ತಿಯಾಗಿರುವೆ?'

ಅಚಲ:—ಅಷ್ಟಲ್ಲದೆ ಮತ್ತೇನು? ಈ ಕಾಲದ ಹುಡುಗರಂತೆ ತುಟ್ಟಾ, ಸಿಗರೆಟ, ಬೀಡಿ, ಭಂಗಿ ಮೊದಲಾದವುಗಳ ಸೇವನೆಯಿಂದೆಯೂ, ಮುಖ ಕ್ಷೌರ, ವೇಷಧಾರಣೆ ಮೊದಲಾದ ಹೇಯಕಾರ್ಯಗಳಿಂದೆಯೂ ಪತ್ರು-ಕೆಟ್ಟು-ಸುತ್ತುತ್ತಿರಬೇಕೇನು? ನನ್ನಿಂದ ಅದೆಂದೂ ಆಗದು!

ನಂದಿನಿ:—ಆಗದೇಕೆ? ಅವುಗಳೇನು, ಚೆನ್ನಾಗಿಲ್ಲವೋ?

ಅಚಲ:—ಹೇಗಾದರೂ ಇರಲಿ; ನನಗೆ ಬೇಡ! ನಂದಿನಿ! ಎಲ್ಲರೂ ನಿದ್ರಾಜಡತೆಯಿಂದ ಮೈಮರೆತು ಬರಗಿದ್ದರೆ ನಿದ್ದೆತಿಳಿದೆಚ್ಚತ್ತವರೂ ಅವರ ಜೊತೆಯಲ್ಲಿ ಬಿದ್ದು ಒದ್ದಾಡುತ್ತಿರಬೇಕೋ? ಬೇಕಾದವರು ಹಾಗೆಯೇ ಮಲಗಿ ನರಳಿ ಸಾಯುತ್ತಿರಲಿ. ನಾನು !ನನ್ನ ಶಕ್ತಿಯಿದ್ದಷ್ಟು ಎಚ್ಚರದಲ್ಲಿದ್ದು ಹೀಗೆಯೇ ಕೂಗುತ್ತಿರುವೆನು. (ಇವರೀರ್ವರ ಸಂಭಾಷಣೆಯ ಮಧ್ಯದಲ್ಲಿಯೇ ಸ್ವರ್ಣಕುಮಾರಿಯೂ ಓಡಿಬಂದಳು. ಬಂದವಳು ಅಚಲಚಂದ್ರನನ್ನು ಕಂಡು, ಲಜ್ಜೆಯಿಂದ ತಲೆಬಾಗಿ ನಂದಿನಿಯಬಳಿಗೆ ಬಂದುನಿಂತು ಮೆಲ್ಲನೆ)—'ಅಕ್ಕಾ! ಅಮ್ಮನು, ನಿನ್ನನ್ನು ಬೇಗ ಕರೆತರಹೇಳಿದಳು.'

ನಂದಿನಿ:—ಸ್ವರ್ಣಕುಮಾರಿಯ ಕೈಹಿಡಿದೆಳೆದು ನಿಲ್ಲಿಸಿ, 'ಸ್ವರ್ಣ! ಬರುತ್ತೇನೆ. ಆದರೆ ಇತ್ತ ನೋಡು! ಕುಳಿತಿರುವಾತನು ಯಾರು?'

ಸ್ವರ್ಣ:—ತಲೆಯನ್ನು ಕೊಂಕಿಸಿ,—'ನನ್ನ ಕೈಯನ್ನು ಬಿಡು, ನಾನು ಹೋಗಬೇಕು.'

ಅಚಲ:—ಅದೇನಿಷ್ಟು ಆತುರ? ಏಕೆ ಓಡಿ ಹೋಗುವೆ?

ಸ್ವರ್ಣ:—(ಉತ್ತರನಿಲ್ಲದೆ ತಲೆಬಾಗಿ ನಿಂತಳು.)

ನಂದಿನಿ:—'ಅಣ್ಣ! ಅದೇನೇನನ್ನೋ ಹೇಳುತ್ತಿರುವಳು. ನೀನೇ ವಿಚಾರಿಸು.'

ಅಚಲ:—ತಲೆದೂಗಿ,—'ಹಾಗೂ ಆಗಲಿ' ಎಂದು ಸ್ವರ್ಣಕುಮಾರಿಯ ಕೈಹಿಡಿದು.—'ಸ್ವರ್ಣ! ಬಗ್ಗಿಹೋಗಿರುವ ತಲೆಯನ್ನು ಮೇಲಕ್ಕೆ ಎತ್ತಲಾರೆಯೋ? ಒಲ್ಲೆಯೋ? ಇದೇಕೆ, ಕುರಿಯಮರಿಯಾಗಿರುವೆ? ನನ್ನಲ್ಲಿಯೂ ನಿನಗೆ ನಾಚಿಕೆಯೆಂಬೋ? ಎಂದೂ ನಿಮ್ಮ ಮನೆಗೆ ಬಾರದ ನವಾಗಂತುಕ

(ಹೊಸಬ) ವ್ಯಕ್ತಿಯೆಂದು ನನ್ನನ್ನು ತಿಳಿದೆಯೇನು? ಅಥವಾ ವಿಶೇಷಾಭಿ ಪ್ರಾಯವೇನಾದರೂ ಉಂಟಾಯೆ್ತಾ? ಹೇಳು. ಅಂತಹದೇನಿದ್ದರೂ ದೂರ ದಲ್ಲಿ ಕಟ್ಟಿಟ್ಟು ಸಲ್ಲಿಯಿಂದ ಮಾತನಾಡು,"

ಸ್ವರ್ಣಕುಮಾರಿಯಿಂದ ಉತ್ತರವು ಹೊರಡಲಿಲ್ಲ.

ಅಚಲ:—ಸ್ವರ್ಣ! ನನ್ನ ಬಳಿಯಲ್ಲಿ ಈ ಬಗೆಯ ಹೇಡಿತನವು ಕೂಡದು. ನನ್ನಲ್ಲಿ ಮತ್ತಾವ ಅಶೋತ್ತರಕ್ಕೂ ಅವಕಾಶವಿರುವುದಿಲ್ಲ. ಮಾತನಾಡು.

ಸ್ವರ್ಣಕುಮಾರಿಗೆ ನಗುವು ಬಂತು. ಆಗಲೂ ಉತ್ತರವು ಹೊರಡ ಲಿಲ್ಲ.

ಅಚಲ:—ಕೃತಕಕೋಪದಿಂದ,—"ಈ ಮಯಸ್ಸಿಗಾಗಲೇ ಇಷ್ಟು ಲಜ್ಜೆಯೋ? ಹಾಗಿದ್ದರೆ ಬಿಟ್ಟಿನು; ಹೊರಟು ಹೋಗಬಹುದು. ನೀನು ಇಷ್ಟರ ಹೇಡಿಹುಡುಗಿಯೆಂದು ಮೊದಲೇ ತಿಳಿದಿದ್ದರೆ ನಿನ್ನನ್ನು ಮಾತನಾಡಿ ಸುತ್ತಿರಲಿಲ್ಲ. ಈಗಲೂ ಮುಳುಗಿ ಹೋಗಲಿಲ್ಲ. ಉತ್ತರಕೊಡಲಿಷ ವುಂಟೋ? ಇಲ್ಲವೋ?"

ಸ್ವರ್ಣ:—ಮೆಲ್ಲನೆ—"ಏನುತ್ತರ ಕೊಡಬೇಕು!"

ಅಚಲ:—ನನಗೀ ಸಂಕುಚಿತಭಾವವು ರುಚಿಸುವುದಿಲ್ಲ. ಸರಿಯಾಗಿ ಉತ್ತರಕೊಟ್ಟರೆ ಸರಿ; ಇಷ್ಟವಿಲ್ಲವೆಂದರೆ, ನಾಳೆನಿಂದ ನಿಮ್ಮ ಮನೆಗೆ ಬರುವಷ್ಟರ ಶ್ರಮವಾದರೂ ನನಗಿರುವುದಿಲ್ಲ.

ಸ್ವರ್ಣ:—ತಲೆಯೆತ್ತಿ ಕಂಪಿತಸ್ವರದಿಂದ,—'ನಾನು ಮಾತನಾಡದಿದ್ದರೆ ಮತ್ತಾರೂ ಬರಲಾಗದೇ?'

ಅಚಲ:—ನಗುತ್ತ ಸ್ವರ್ಣಕುಮಾರಿಯ ಬೆನ್ನುತಟ್ಟಿ—'ಛಲೆ! ಸ್ವರ್ಣ! ಈಗಲೀಗ ನನಗೆ ಸಂತೋಷವಾಯ್ತು; ಈಗಲೀಗ ನೀನು ನಮ್ಮ ನಂದಿನಿಗೆ ಸಖಿಯಾಗಲು ತಕ್ಕವಳಾದೆ. ಆದರೆ, ನಾನು ಬಂದೆಯೆಯಲ್ಲಿ ವಿದ್ಯಾರ್ಥಿ ನಿಯರಾದ ಬಾಲಕಿಯರನ್ನು ಕಂಡರೆ ನುಡಿಸದೆ ಹೋಗಲಿಕ್ಕೆ ನನ್ನಿಂದಾ ಗದು! ಅಂತವರಲ್ಲಿ ಹೇಡಿತನವೆಂಬುದನ್ನು ಕಂಡರೂ ನನಗಾಗದು.'

ಸ್ವರ್ಣ:—ಕೆರುನಗೆಯಿಂದ,—'ನನ್ನಲ್ಲಿ ಹೇಡಿತನವೇನು!'

ನಂದಿನಿ:—ಅಚಲ! ಸ್ವರ್ಣಗೆ ಈಗ ನೀನೇನು ಹೇಳುವೆ!'

ಅಚಲ:—ತಲೆದೂಗಿ,—'ಹೇಡಿತನವೆಂದರೆ, ಈವರೆಗೂ ಮೂಗಿಯಂತಿದ್ದುದೇ!'

ಸ್ವರ್ಣ:—ಅಷ್ಟಕ್ಕೇ ಹೇಡಿಯಾದೆನೋ?

ಅಚಲ:—ಮತ್ತೇನು? ಕೇಳಿದುದಕ್ಕೆ ಸದುತ್ತರವನ್ನು ಕೊಡದಿದ್ದರೆ ಹೇಡಿಯಲ್ಲವೋ?

ಸ್ವರ್ಣ:—ಉತ್ತರ ಕೊಡುವಷ್ಟರ ಶಕ್ತಿಯಿದ್ದೂ ಕೊಡದಿದ್ದರೆ ಹೇಡಿತನವಾದೀತು. ಅರ್ಥಜ್ಞಾನವೇ ಇಲ್ಲದ ಬಳಿಕ ಹೇಡಿತನವೆಲ್ಲಿ! ನನಗೆ ಅಷ್ಟರ ಅರ್ಥಜ್ಞಾನವೇ ಉಂಟಾಗಿಲ್ಲ.

ಅಚಲ:—ಸಂಭ್ರಮದಿಂದ,—'ಛಲೆ! ಸ್ವರ್ಣ! ಇಂದು ನೀನು ನಿಜವಾಗಿಯೂ ಸ್ವರ್ಣಕುಮಾರಿಯೇ ಸರಿ! ನಿನ್ನ ಮನಸ್ಸು ನಿಜವಾಗಿಯೂ ಪುಟಕ್ಕಿಟ್ಟ ಬಂಗಾರವೆಂದೇ ಹೇಳಬಹುದು!'

ಸ್ವರ್ಣ:—ಇಷ್ಟೇನೋ? ಇನ್ನೂ ಏನಾದರೂ ಉಂಟೊ?'

ಅಚಲ:—ಕುತೂಹಲದಿಂದ,—'ಮತ್ತೇನಾಗಬೇಕು?'

ಸ್ವರ್ಣ:—ಸ್ವರ್ಣಕ್ಕೆ ಬಹುಮಾನ!

ಅಚಲ:—ಬಹುಮಾನವು ಬೇಕೋ? ಧಾರಳವಾಗಿ, ಎಷ್ಟು ಬೇಕಾದರೂ ದೊರೆಯಬಹುದು?

ಸ್ವರ್ಣ:—ಅಗಲಿ; ಎಷ್ಟಿವೆಯೋ ಅಷ್ಟಿ ಈಗಲೇ ಕೊಡಲ್ಪಡಲಿ!

ಅಚಲ:—ಈಗಲೇ ಎಲ್ಲವನ್ನೂ ಮುಗಿಸಿಬಿಡೆಂದು ಹೇಳುವೆಯೋ?. ನಾಳೆಗೆ ಬೇಡವೋ?

ಸ್ವರ್ಣ:—ಬೇಡ; ಮತ್ತೆ ಯಾವಾಗಲೂ ಸ್ವರ್ಣಕ್ಕೆ ಸ್ತುತಿ ಬೇಡ!

ಅಚಲ:—ಪರಿಹಾಸದಿಂದ,—'ಸ್ತುತಿ ಬೇಡವೆಂದರೆ ಮತ್ತೇನುಬೇಕು?

ಸ್ವರ್ಣ;—ಮತ್ತೇನು ಬೇಕೆಂದರೆ,.....(ಅರ್ಧೋಕ್ತಿಯಲ್ಲಿಯೇ ನಿಲ್ಲಿಸಿ ತಲೆವಾಗಿದಳು.)

ಅಚಲ:—ಹೇಳು-ಹೇಳು! ಅದೇಕೆ, ಅರ್ಧೋಕ್ತಿಯಲ್ಲಿಯೇ ಸುಮ್ಮನಾದೆ? ಏನುಬೇಕು? ಶೃಂಗಾರವೇ?

ಸ್ವರ್ಣ:—ತಲೆವಾಗಿದಂತೆಯೇ,—"ಶೃಂಗಾರಕ್ಕೂ ಸ್ತುತಿಗೂ ಭೇದವೇನು!"

ವಿಷಯವನ್ನೇ ಸೂಚಿಸುತ್ತಿವೆ. ಇಂದು ಅವಳು ಯಾವುದೋ ಬಂದು ದೃಢಸಂಕಲ್ಪವನ್ನು ಕೈಕೊಂಡಿರುವಂತೆ ನನ್ನ ಭಾವನೆಯಾಗಿದೆ. ಏನೆಂಬುದನ್ನು ಸ್ತ್ರೀಮನೋಧರ್ಮವನ್ನು ಚೆನ್ನಾಗಿ ತಿಳಿದಿರುವ ನಿನಗೆ ಹೆಚ್ಚಾಗಿ ಹೇಳಬೇಕಾಗಿಲ್ಲ."

ನಂದಿನಿ:--ನೀನೇನೋ ನನ್ನನ್ನು ಬಹುಪ್ರಾಜ್ಞೆಯೆಂದೇ ಹೇಳುವೆ? ಆದರೆ, ನನಗೆ ಅಷ್ಟು ಪ್ರೌಢಿಮೆಯಿಲ್ಲ. ಹೇಗಾದರೂ ಆಗಲಿ; ನಿನ್ನ ಮಾತಿನಂತೆಯೇ ಆದರೂ, ನಾದಾನಂದನಿಗೆ ಅಸಮಾಧಾನ,.....

ಅತಲ:--ಅಷ್ಟಕ್ಕೇ ತಡೆದು,--"ಅತನಿಗೇಕೆ ಅಸಮಾಧಾನ? ಸ್ವರ್ಣಯ ಸರಿವರ್ತನದಿಂದ ಅವನು ಅಸಮಾಧಾನಹೊಂದುವ ಕಾರಣವಿಲ್ಲ. ಬಂದು ವೇಳೆ ನಿನ್ನ ವಿಷಯದಲ್ಲಿ ಹೇಳಿದರೆ ನಂಬಲಾದೀತು!

ನಂದಿನಿ:--ತಲೆದೂಗಿ,--"ಅದನ್ನೇನೂ ಕೇಳಬೇಕಾದುದೇ ಇಲ್ಲ. ಯಾವಾಗಲೂ ಇದ್ದೇ ಇದೆ."

ಅತಲ:--ಕುತೂಹಲದಿಂದ,--"ನಂದಿನಿ! ನಿನ್ನ ನಿಜವಾದ ಅಭಿಪ್ರಾಯವನ್ನು ಬಿಚ್ಚಿಹೇಳು? ನಾದನಿಗೂ ಉತ್ತಮನಾದ ವರನು ನಮಗೆ ದೊರೆಯುವಾರನು! ಅವನು ಸಕಲಘಾಗದಲ್ಲಿಯೂ ನಿನಗೆ ಅನುಗುಣಪಾತ್ರನೆಂಬುದು ನನ್ನ ನಂಬಿಕೆಯಾಗಿದೆ."

ನಂದಿನಿ:--ಸ್ಮಯದಿಂದ,--"ಇದೇಕೆ? ಅಣ್ಣ! ನೀನೇ ಹೀಗೇಕೆ ಬೋಧಿಸುತ್ತಿರುವೆ? ನಾದನನ್ನು ಈಗ ಸುತ್ತಿಕಾಡುತ್ತಿರುವ ಅಧೀರಭಾವದಿಂದ ಬಿಡಿಸಲಾರದೆಯೋ? ಸರ್ವವಿಧದಿಂದ ಅವನನ್ನು ಅತಿಚಲನನ್ನಾಗಿ ಮಾಡುವ ಪುರುಷಪ್ರಯತ್ನವಾದರೂ ನಿನ್ನನ್ನು ಬಿಟ್ಟು ಹೋಗಿರುವುದೋ? ಅಥವಾ ನನ್ನಲ್ಲಿ ಅನುಮಾನವೇನಾದರೂ ಕಂಡುಬಂದಿರುವುದೋ? ಹೇಳು; ಏತರಿಂದ ಹೀಗೆ ಹೇಳಿದೆ?"

ಅತಲ:--ಅಂತಹದೇನೂ ಇಲ್ಲ. ನಂದಿನಿ! ಈಗಲೇ ನೀನು ಅವನನ್ನು ಮದುವೆಯಾಗಬೇಕೆಂದು ಹೇಳಲಿಲ್ಲ. ಅತನು ವಿದ್ಯಾವ್ಯಾಸಂಗದ ಇಚ್ಛಿತಫಲವನ್ನು ಹೊಂದುವಂತಾದಬಳಿಕ,--ನಿನ್ನ ಸಂಕಲ್ಪಸಿದ್ಧಿಯೋಗವು ಕಂಡುಬಂದಬಳಿಕ,--ಹಾಗೂ ಸತೀಕರ್ತವ್ಯವನ್ನು ಕೈಕೊಳ್ಳುವುದು ಶ್ರೇಯಸ್ಕರವೆಂಬುದು ನಿನ್ನ ಮನಸ್ಸಿಗೆ ನಿರ್ಧಾರವಾದ ಬಳಿಕ,- ನಾದಾನಂದನನ್ನೇ

ಸ್ವಾಮಿಯಾಗಿ ವರಿಸಬೇಕೆಂಬುದು ನನ್ನ ಕೋರಿಕೆಯಾಗಿದೆ. ಇದಕ್ಕೆ ಬೇರೆಬೇರೆಯಾಗಿ ಭಾವಿಸಬಾರದು.

ನಂದಿನಿ:—ಉದಾಸೀನದಿಂದ,—"ಅಂತಹ ಸಂಭವವು ಕಂಡುಬಂದಾಗ ನೋಡಿಕೊಳ್ಳುವ! ಹಾಗೂ ಆ ವೇಳೆಯಲ್ಲಿ ನಿನ್ನ ಹಿತಸೂಚನೆಯನ್ನೂ, ಗುರುಜನರ ಅಪೇಕ್ಷೆಯನ್ನೂ ನೀರಿ, ವ್ಯತಿರಿಕ್ತವಾಗಿ ನಡೆಯುತಕ್ಕವಳೆಂದು ನೀನೇನಾದರೂ ಸಂದೇಹಪಡುವೆಯೋ? ಅಂತಹ ಸಂಶಯವಿದ್ದರೆ ಚಿಟ್ಟೆ ಜಿಡು! ನನಗೆ ಈಗ ಬೇಕಾಗಿರುವ ವರವೆಂದರೆ, ನಾದಾನಂದನು ನಿಜವಾದ ವಿದ್ಯಾರ್ಥಿಯಾಗಬೇಕು. ಸೊಕ್ಕಿನ ಮಕ್ಕಳನ್ನು ದಾರಿಗೆ ತರಬಲ್ಲ ಧೈರ್ಯ-ಸ್ಥೈರ್ಯ-ಸಾಹಸಾದಿಗಳು ಅತನಲ್ಲಿ ಬಲವಾಗಿ ಬೇರೂರಿರಬೇಕು. ಅಂತಪರಿಂದ ನಮ್ಮ ದೇಶಮಾತೆಯು ಬೇಗೋದ್ಧಾರ ಕಾರ್ಯವು ಸ್ವಲ್ಪಕ್ಕೆ ಸ್ವಲ್ಪವಾದರೂ ಸಾರ್ಥಕ್ಯವಾಗಬೇಕು. ಇಷ್ಟಾದರೆ ಸಾಕು.

ಅಚಲ:—ಜಗನ್ಮಾತೆಯ ಅನುಗ್ರಹವಿದ್ದರಾಯಿತು!

ಸ್ವರ್ಣಕುಮಾರಿ ಮತ್ತೆ ಬಂದು,—"ಅಣ್ಣನು ಈಗ ಇಲ್ಲಿಗೆ ಬರಲೊಲ್ಲನಂತೆ. ಅಮ್ಮನು ನಿಮ್ಮಿಬ್ಬರನ್ನೂ ಅಲ್ಲಗೇ ಬರುವಂತೆ ಹೇಳಿರುವಳು." ಎಂದು ಹೇಳಿ ನಿಲ್ಲದೆ ಹೊರಟು ಹೋದಳು.

ಅಚಲಚಂದ್ರನೂ ನಂದಿನಿಯೂ ಎದ್ದು ಉಪಾಹಾರಕ್ಕಾಗಿ ನಡೆದರು.

ಪ್ರಿಯಸೋದರಿಯರೇ! ಸುಹೃತ್ಸಹೋದರರೇ!!

ಈ ಪರಿಚ್ಛೇದಾದ್ಯಂತವೂ ನಿಮ್ಮಿಂದ ಮಥಿಸಲ್ಪಟ್ಟಿದಷ್ಟೆ! ಆದರೆ ನಂದಿನೀ-ಅಚಲಚಂದ್ರರ ನಿಶ್ಚಲ ಮನೋಧರ್ಮವೂ, ಅವರಲ್ಲಿ ನೆಲೆಗೊಂಡಿರುವ ದೇಶಭಾವಾಭಿಮಾನವೂ, ಸ್ವಲ್ಪಕ್ಕೆ ಸ್ವಲ್ಪವಾದರೂ ನಿಮಗೆ ಮನನವಾಗಿರಬೇಕಲ್ಲವೇ? ಹಾಗಿದ್ದರೆ, ನಮ್ಮ ಆರ್ಯಭೂಮಾತೆಯ ಪ್ರಾಶಸ್ತ್ಯವು ಮತ್ತೆ ಪ್ರಕಾಶಕ್ಕೆ ಬರುವುದೆಂದು ದೃಢವಾಗಿ ನಂಬಬಹುದು! ಅಗಲಿ.

॥ ಶ್ರೀಃ ॥

ಷಷ್ಠ ಪರಿಚ್ಛೇದ.

(ನಿರ್ಮತ್ಸರ ಪ್ರೇಮ)

ಮತ್ಸರವೆಂಬುದು ಸ್ತ್ರೀಸಾಮಾನ್ಯಕ್ಕೆ ತಪ್ಪಿದುದಲ್ಲವೆಂದು ಅಭಿಮಾನ ಪರರಾದ **ಪುರುಷ**ರಾಡುವರು. ಆದರೆ, ಅದು ಎಷ್ಟರ ಮಟ್ಟಿಗೆ ನಿಜವಿರ ಬಹುದೆಂಬದನ್ನು ಇಲ್ಲಿ ವಿಚಾರಮಾಡುವುದು ನಮ್ಮ ಕರ್ತವ್ಯಕ್ಕೆ ಸೇರಿದ್ದರೂ, ಅದನ್ನು ನಾವೇ ನಿರ್ಣಯಿಸುವುದನ್ನು ಬಿಟ್ಟು, ಪ್ರತ್ಯಕ್ಷ ಉದಾಹರಣೆಯಿಂದ ಅವರವರೇ ತಿಳಿದು ಹೇಳಬಹುದೆಂದೆಣಿಸಿ ನಮ್ಮ ಆದರ್ಶರಮಣಿಯರಾದ **ಚಿತ್ರಕಲಾ** ಮತ್ತು ಅವಳ ಸಖಿ, **ಚಂದ್ರಮತೀದೇವಿ**ಯರ ಸರಸ ಸಲ್ಲಾಪ ವನ್ನೇ ಮುಂದಿಡುವೆವು; ವಾಚಕವರ್ಗವು ಸಾವಧಾನದಿಂದ ಸಮಾಲೋಚಿಸಲಿ !

ರಮಣಿಯರಿಬ್ಬರೂ ಬೀದಿಯು ಕಡೆಯು ಅಂಗಳದಲ್ಲಿ ಕುಳಿತು, ತಮ್ಮ ನೈಸರ್ಗಿಕ ಪ್ರೇಮಮಯಮೂರ್ತಿಗಳ ಕಾಂತಿಯಿಂದ ತಮ್ಮ ಸುತ್ತಮುತ್ತಲ ಪ್ರದೇಶವನ್ನೇ ಬೆಳಗಿಸುತ್ತಿರುವರು. ಹೊತ್ತು, ಸಾಯಂಕಾಲ ನಾಲ್ಕುಗಂಟೆ ! ಉಳಿದ ವಿಚಾರ ನಮಗೇಕೆ?

ಚಂದ್ರ:—ಚಿತ್ರಕಲಾ ! **'ಭಿನ್ನರುಚಿರ್ಹಿ ಲೋಕಃ'** ಎಂಬುದು ನಿಜವಾಗಿರಬೇಕಲ್ಲವೇ? ನಾದಾನಂದನ ಮನೋಭಾವಕ್ಕೂ ನಮ್ಮ ಅಚಲ ಚಂದ್ರನ ಮನೋಭಾವಕ್ಕೂ ಇರುವ ಅಂತರವೆಷ್ಟೆಂಬುದನ್ನು ನೋಡಿದರೆ ಸಾಕಲ್ಲವೇ?

ಚಿತ್ರ:—ಹೇಗೆ ?

ಚಂದ್ರ:—ನಮ್ಮವನು ಶುದ್ಧ ಸನಾತನ ಧರ್ಮಾನುಯಾಯಿಯೆಂದೂ ಜಡಬ್ರಹ್ಮಚಾರಿಯೆಂದೂ ಹೆಸರ್ಗೊಂಡಿರುವನು. ನಿಮ್ಮವನು ನಾಗರಿಕನೆಂದೂ ಸುಧಾರಕ ಮಹಾಶಯನೆಂದೂ ಪ್ರಸಿದ್ಧಿಹೊಂದಿರುವನು. ಇವರಿ

ಬ್ಬರೂ ಒಬ್ಬರನ್ನೊಬ್ಬರು ಅಗಲಿರದಿದ್ದರೂ ಇಬ್ಬರಿಗೂ ತಾರತಮ್ಯವೆಷ್ಟೋ ಇದೆಯಲ್ಲವೆ ?

ಚಿತ್ರ:—ನಿಜ! ಆದರೆ, ಅವರ ಮಾತೂ ಹಾಗಿರಲಿ; ಈ ಮನೆಯಲ್ಲಿನೋ ನೋಡು? ನಂದಿನಿಯ ನಿಶ್ಚಲವ್ರತಕ್ಕೂ, ಸ್ವರ್ಣಿಯ ಚಾಪಲ್ಯಕ್ಕೂ ಎಷ್ಟರ ತಾರತಮ್ಯವಿರಬಹುದು?

ಚಂದ್ರ:—ಸ್ವರ್ಣಿಯೊಬ್ಬಳಲ್ಲ; ಈ ಕಾಲದ ಹುಡುಗಿಯರೆಲ್ಲರೂ ಹಾಗೆಯೇ! ನಂದಿನಿಯಂತೆ ಬಾಲ್ಯದಿಂದ ವಿರಕ್ತಿಸುಖದಲ್ಲಿರುವವರು ಸಾವಿರಕ್ಕೆ ಒಬ್ಬಿಬ್ಬರಂತಾದರೂ ಕಾಣುವುದು ಮುಸ್ತರವೇ ಸರಿ!

ಚಿತ್ರ:—ನಿಜ! ಹುಡುಗಿಯರನ್ನು ಹಡೆದವರೇ ಬೆಡಗಿಂದ ನಲಿಯುತ್ತಿರುವುದೂ, ಉಡುವು-ತೊಡವುಗಳಿಗೆಂದು ಕೈ ಹಿಡಿದ ಗಂಡಂದಿರನ್ನು ಕಾಡುತ್ತಿರುವುದೂ ಎಷ್ಟೋ ಕಡೆಯಲ್ಲಿ ನಮ್ಮ ಕಣ್ಣಿಗೆ ಬೀಳುತ್ತಿವೆ. ತಾಯಿಯರೇ ಹಾಗೆ ವಿಲಾಸಪ್ರಿಯರಾಗಿರುವಲ್ಲಿ ಮಕ್ಕಳನ್ನು ಕೇಳುವುದೇನು ! ಅದೆಲ್ಲಾ ನನಗೇಕೆ? ನಮ್ಮ ಸ್ವರ್ಣಿಯ ಆಶೆಯನ್ನು ನೋಡಿಯೇ ನನಗೆ ಬೆಗಡು ತೋರುತ್ತಿದೆ. ಅವಳೂ ನಿನ್ನ ಸುರಸೆಯಂತೆ ತಿಳಿದುಕೊಂಡರೆ ನನಗೆ ಎಷ್ಟೋ ಸುಖವುಂಟು !

ಚಂದ್ರ:—ನಕ್ಕು—'ಚಿತ್ರ ! ಸುರಸೆಗೆ ಆಶೆ ಕಡಿಮೆಯಾಗಿರಲಿಲ್ಲ! ಸ್ವರ್ಗಕ್ಕಿದ್ದ ಆಶೆಗೆ ಎರಡರಷ್ಟೇ ಇತ್ತೆಂದು ತಿಳಿ!'

ಚಿತ್ರ:—ನೀನು ಬೇಕೆಂದೇ ಹೇಳುವೆಯಲ್ಲದೆ, ನನಗೆ ಬೇರೆ ನಂಬಿಕೆಯಾಗುವಂತಿಲ್ಲ.

ಚಂದ್ರ:—ನಿನ್ನಲ್ಲಿಯೂ ನಾನು ಎರಡು ಬಗೆಯಾಗಿ ಹೇಳುವೆನೆಂದಿರುವೆಯೋ? ಆ ಭಾವವಿದ್ದರೆ ಬಿಟ್ಟುಬಿಡು! ಅವಳ ಆಶೆಯೆಲ್ಲವೂ ನಮ್ಮ ಅಚಲಚಂದ್ರನ ಸುಶಿಕ್ಷಾಬಲದಿಂದ ಮಾಯವಾಯಿತೆಂದು ನಂಬು! ಹಾಗೆ ಅವನ ಹಿತದೋಷ ಅವಳನ್ನು ಎಚ್ಚರಿಸದಿದ್ದರೆ, ಅವಳು ನಮ್ಮ ಮಾತಿನಿಂದಲೇ ಹೀಗೆ, ಇಷ್ಟರ ಪರಿಪಕ್ವಸ್ಥಿತಿಗೆ ಬರುತ್ತಿದ್ದಳೇನು? ಎಂದಿಗೂ ಇಲ್ಲ.

ಚಿತ್ರ:—ಇನ್ನೂ ನನ್ನ ಮನಸ್ಸಿಗೆ ಸರಿಯಾಗಿ ಹಿಡಿಯಲಿಲ್ಲ?

ಚಂದ್ರ:—ಚಿತ್ರಕಲೆ! ನಮ್ಮ ಅಚಲಚಂದ್ರನನ್ನು ಬಲಮಗನೆಂದು ನಾನೆಂದೂ ತಿಳಿದಿಲ್ಲ. ಅವನನ್ನು ನನ್ನ ಕಣ್ಣಿಗೂ ಹೆಚ್ಚಾಗಿ ತಿಳಿದಿರುತ್ತೇನೆ.

ನಮ್ಮ ಸಂಸಾರಕ್ಕೆಲ್ಲಾ ನಾರರತ್ನವೆಂದರೆ ಅವನೇ ಸರಿ! ಅವನಲ್ಲಿರುವ ಶೀಲ, ವಿದ್ಯಾ, ವಿನಯ, ವಿವೇಚನೆಯೇ ಮೊದಲಾದ ಸುಗುಣಗಳನ್ನು ನೋಡಿ ನೋಡಿಯೇ ನಮಗೆ ಪರಮಾನಂದವಾಗುತ್ತಿದೆ. ಅತನ ಶಕ್ಷಣಾಕೌಶಲ್ಯ ದಿಂದಲೇ ನಮ್ಮ ಸುರಸೆ, ನಿಜವಾದ ಸುರಸೆಯಾಗಿದ್ದಾಳೆ. ಹೆಚ್ಚೇಕೆ? ಅತಲ ನೆಂದರೆ ನಮ್ಮವರಿಗೆ ಪ್ರಾಣ: ಉಳಿದವರ ಮಾತು ಹಾಗಿರಲಿ.

ಚಿತ್ರ: -ಅಂತಹ ಸುಪುತ್ರನನ್ನು ಹೊಂದಲಕ್ಕ ಏಷ್ಟೋ ಸುಕೃತ ಮಾಡಿರಬೇಕು. ಚಂದ್ರಮತಿ! ಅತಲಚಂದ್ರನ ಸ್ವಭಾವವು ನನಗೆ ಹೊಸ ದಲ್ಲ. ಅನನಲ್ಲೆ ಬಗೆಗೊಳ್ಳುತ್ತಿರುವ ವಿದ್ಯಾರ್ಥಿಲಕ್ಷಣದಲ್ಲ ಸ್ವಲ್ಪಕ್ಕೆ ಸ್ವಲ್ಪವಾದರೂ, ನಮ್ಮ ನಾದಾನಂದನಲ್ಲಿ ತೋರುವಂತಾಗಬೇಕೆಂಬುದೇ ನನ್ನ ಆಶೆ! ಆದರೇನು? ಇನ್ನೆಷ್ಟು ದಿನಗಳು ಅತನೊಡನೆ ವ್ಯಾಸಂಗಿಸುತ್ತಿ ದ್ದರೂ ಇವನು ಬೇರೆ, ಅಂತಹ ದೃಢಭಾವವನ್ನು ಹೊಂದಲಾರನು!

ಚಂದ್ರ: —ಸಹವಾಸಮಾಡಿದ ಮಾತ್ರಕ್ಕೇ ಸದ್ಗುಣಗಳೂ ಬರುವುವೆಂ ಬುದು ಸುಳ್ಳು! ಅಭ್ಯಾಸವೂ ಆಸಕ್ತಿಯೂ ತಕ್ಕಂತೆ ಬಲವಾಗಿರಬೇಕು!

ಚಿತ್ರ:—ಹೇಗೂ ಇರಲಿ. ಅಚಲನನ್ನು ನಮ್ಮ ಅಳಿಯನನ್ನಾಗಿ ಮಾಡಿಕೊಳ್ಳಬೇಕೆಂಬುದೇ ನನ್ನ ಬಲವಾದ ಆಶೆಯಾಗಿದೆ!

ಚಂದ್ರ:—ಆ ವಿಷಯದಲ್ಲಿ ಆಶೆಯು ನನಗೇನೂ ಕಡಿಮೆಯಾಗಿದೆ ಯೆಂದು ತಿಳಿಯಬೇಡ. ಸ್ವರ್ಣಯನ್ನು ಹೆರವರ ಮನೆಗೆ ಕೊಡಬಾರದೆಂ ಬುದೇ ನನ್ನ ಇಷ್ಟವಾಗಿದೆ. ಅಲ್ಲದೆ ನಮ್ಮ ಸುರಸೆಯ ಮದುವೆಕಾಲದಲ್ಲಿ ನಾದಾನಂದನಿಗೆ ಇನ್ನೂ ವಯಸ್ಸಾಗಿರಲಿಲ್ಲವೆಂದು ಬಿಟ್ಟು ಬಿಟ್ಟುದಾಯ್ತು. ಈಗ ನಮ್ಮವನಿಗೇನೋ ವಯಸ್ಸಾಗಿದೆ. ಆದರೂ, ಈ ವಿಚಾರವನ್ನು ಈಗಲೇ ಅವನ ಕಿವಿಗೆ ಮುಟ್ಟಿಸಬೇಡ.

ಚಿತ್ರ:—ಏಕೆ? ಸ್ವರ್ಣಯನ್ನು ಅವನು ಒಪ್ಪಲೊಲ್ಲನೇನು?

ಚಂದ್ರ:—ಅವಳನ್ನು ಒಪ್ಪಲೊಲ್ಲನೆಂದು ಹೇಳಲಿಲ್ಲ, ಅವಳ ಗುಣ ವನ್ನೂ, ಪ್ರತಿಭಾಶಕ್ತಿಯನ್ನೂ ಕುರಿತು, ಎಷ್ಟೋಬಾರಿ ನನ್ನ ಬಳಿಯಲ್ಲಿಯೇ ಹೊಗಳಿರುವನು. ಆದರೆ, ಅದರ ಜೊತೆಯಲ್ಲಿಯೇ ಅವಳ ವಿಲಾಸಾದಿಗಳ ವಿಚಾರವಾಗಿ ಹಾಸ್ಯಮಾಡಿಯೂ ಮಾಡುತ್ತಿರುವನು.

ಚಿತ್ರ:—ಹಾಗಿದ್ದರೆ, ನೀನು ಏಂದಾದರೂ ಪ್ರಸ್ತಾಪಮಾಡಿರುತ್ತೀಯೇನು?

ಚಂದ್ರ:—ಪ್ರಸ್ತಾಪಕ್ಕೇನು? ಅದು. ಹೇಗೂ ದಿನಕ್ಕೆ ಒಂದು ಬಾರಿಯಾದರೂ ತಪ್ಪದೆ ಸ್ವಾಜಾಂತರವಾಗಿ ನನೆಯುದೆ ಬಿಡಲಿಕ್ಕಿಲ್ಲ. ಆದರೆ, ನೆಟ್ಟಗೆ ಹೇಳಿದ ಬೇಕಾಯಿಲ್ಲಿ ಅವನು ಸಿಟ್ಟಿಗೇಳದೆ ಇರುವುದಿಲ್ಲ.

ಚಿತ್ರ:—ಸಿಟ್ಟಿಗೇಕೆ? ಏನೆಂದುದಕ್ಕೆ ಸಿಟ್ಟಿಗೇಳಬೇಕು?

ಚಂದ್ರ:—ಯಾರು ಬಲ್ಲರು? ನಾನೂ,—'ಸ್ವರ್ಣಕುಮಾರಿಗೆ ಮಯಸ್ಸು ಮೂರುತ್ತಿದೆ; ನೀನೂ ಮಯಸ್ಕನಾಗಿರುತ್ತೀಯೆ; ಹುಡುಗ ಒಲು ಬುದ್ಧಿಮಂತೆ! ಸಂಬಂಧವೂ ಒಳ್ಳೆಯದು;' ಎಂದು ಹೇಳುತ್ತಿದ್ದೆನು. ಅವನು ಅಷ್ಟಕ್ಕೇ ಸಿಟ್ಟುಮಾಡಿ ಎದ್ದುಬಿಟ್ಟನು.

ಚಿತ್ರ:—ಏನೂ ಹೇಳದೆಯೇ ಹೋದನೇ?

ಚಂದ್ರ:—'ಸ್ವರ್ಣಾಯ ಮದುವೆಗೆ ನಾನೇನೂ ಅಡ್ಡಿಯವನಲ್ಲ. ಈಗಲೇ ನಾನು ಮದುವೆಗೆ ಒಪ್ಪಲಿಕ್ಕಾ ಆಗುವಂತಿಲ್ಲ. ಮಕ್ಕಳಿಗೆ ಕೊಡಬೇಕಾದ ಶಿಕ್ಷಣವು ಹೇಗಾದರೂ ಇರಲಿ. ಅವರನ್ನು ಈ ಎಳೆ ಮಯಸ್ಸಿನಲ್ಲೆಯೇ ಅಲಂಕಾರಾದಿ ವಿಲಾಸಾದಿಗಳಿಂದ ಕೊಬ್ಬಿಸಿ, ಯಾವನಾದರೂ ಒಬ್ಬನ ಕೊರಳಿಗೆ ಜೋಡು ಹಾಕಿದರೆ, ಧನ್ಯರಾದೇವೆಂಬುದೇ ಕುಲಾಚಾರವೋ?' ಎಂದು ಹೇಳಿದನು. ಹಾಗೂ ನಾನು ಸುಮ್ಮನಿರದೆ ಮತ್ತೆಯೂ ಮಾತೆತ್ತ ಹೋದುದಕ್ಕೆ ಇನ್ನೂ ಬೇಸರಗೊಂಡು "ಅಮ್ಮ! ಈ ವಿಚಾರವಾಗಿ ನೀವೇ ಹೀಗೆ ಬಲಾತ್ಕಾರ ಮಾಡಿದರೆ ಹೇಗೆ? ಇನ್ನು ಮುಂದೆ ಈ ವಿಚಾರವಾಗಿ ನೀವು ಹೇಳುವುದಾದರೆ, ಅಲ್ಲಿಗೆ ನಮ್ಮ ನಂದಿನಿಯನ್ನು ನೋಡಹೋಗುತ್ತಿರುವುದನ್ನು ಕೂಡ ನಿಲ್ಲಿಸಬೇಕಾದೀತು! ಈ ಬಗೆಯ ಮಾತುಗಳು ನಾವಾನಂದನಂತಪರಿಗಲ್ಲದೆ, ನನ್ನಂತಹ ಗೊಡ್ಡರಿಗೆ ರುಚಿಸುವುದಿಲ್ಲ." ಎಂದಾಡಿ ನಿಲ್ಲದೆ ಹೊರಟುಹೋದನು. ಅಂದಿನಿಂದ ನಾನೂ ಈ ಪ್ರಸ್ತಾಪವನ್ನು ನಿಲ್ಲಿಸಿಬಿಟ್ಟಿರುವೆನು.

ಚಿತ್ರ:—ಹಾಗಿದ್ದರೆ ನಾನೂ ಪ್ರಸ್ತಾಪಿಸುವುದಿಲ್ಲ. ಹೇಗಿದ್ದರೂ, ನಮ್ಮವರೇನೋ 'ಮಗಳಿಗೆ ಮಯಸ್ಸು ಮೂರಿದರೂ ಸರಿ, ಅಚಲನಿಗೇ ಕೊಡಬೇಕು; ಬಂದುವೇಳೆ ಅವನು ಈ ಕಾಲದವರಂತೆ ಧನಲೋಭದಿಂದ

ವಂಚಿತನಾಗಿ ಸ್ವರ್ಗ್ಯವನ್ನು ಮದುವೆಯಾಗಲೊಲ್ಲೆನೆಂದು ಬಿಡುವಪಕ್ಷದಲ್ಲಿ, ಇವಳೂ ನಂದಿನಿಯ ಜೊತೆಯಲ್ಲಿ ಮದುವೆಯಿಲ್ಲದೆಯೇ ಬೆಳೆಯಲಿ; ಇಷ್ಟ ಲ್ಲದೆ ಮತ್ತಾರಿಗೂ ಇವಳನ್ನು ಕೊಡಲಾರೆನು!' ಎಂದು ಹಟತೊಟ್ಟಿರುವರು. ಸಮಾಜಶಾಸನವೆಂದರೆ-''ಯಾವಶಾಸನವಾದರೂ ಇರಲಿ. ನೋಡಿಕೊಳ್ಳು ವೆ" ನೆನ್ನುವರು. ಇದರಮೇಲೆ ದೇವರ ಚಿತ್ತವು ಹೇಗಿದೆಯೋ ಬಲ್ಲವರಾರು?

ಚಂದ್ರ:—ಅದೇನೋ ನಿಜ! ಯಾವುದು ಹೇಗೆ ಆಗಬೇಕೆಂದು ಭಗ ವತ್‌ಸಂಕಲ್ಪದಲ್ಲಿದೆಯೋ, ಅದು ಹಾಗೆಯೇ ಆಗುವುದು. ಅದಿರಲಿ, ಇಂಡೀನು, ನಿನ್ನ ಮಗಳು ಬದಲಾಯಿಸಿದಂತಿದೆ?

ಚಿತ್ರ:—ಬೆಳಿಗ್ಗೆ ನಂದಿನಿಗೂ ಇವಳಿಗೂ ಏನೇನೋ ಚರ್ಚೆ ನಡೆಯು ತು. ಅದಾದಬಳಿಕ, ಮಧ್ಯಾಹ್ನದ ಊಟದ ಹೊತ್ತಿನಲ್ಲಿ, ನಮ್ಮ ಬಾಪ, ಮಾನ ಇವರೊಡನೆ ಬಲವಾಪ ಪ್ರಸಂಗವೂ ಬೆಳೆಯಿತು. ಇವುಗಳನ್ನು ಕೇಳಿದಾಗಿಂದ ಇವಳು ಹೀಗೆ ಬದಲಾಯಿಸಿರುತ್ತಾಳೆ. ಅಷ್ಟಲ್ಲದೆ ಕೊರ ತೆಯೇನೂ ಕಾಣುತ್ತಿಲ್ಲ, ನಿತ್ಯಕ್ಕಿಂ ಹೆಚ್ಚಾದ ಉತ್ಸಾಹದಿಂದಲೇ ಕೆಲಸಗಳ ನ್ನು ಮಾಡುತ್ತಿರುವಳು.

ಚಂದ್ರ:—ತಲೆದೂಗುತ್ತ,—''ಈಗ ನಮ್ಮವನು ಬಂದು ಬಾರಿ ಬಂದು ನೋಡಿ ಹೋಗಬಾರದೇ?"

ಚಿತ್ರ:—ಕೆರುನಗೆಯಿಂದ,—'ಬಂದಿದ್ದನು; ಎಷ್ಟೋ ಹೊತ್ತು ಇವ ಳನ್ನು ಹಿಡಿದು ನಿಲ್ಲಿಸಿಕೊಂಡು, ಏನೋದವಾಗಿಯೇ ಸರಸವಾದ ಬೋಧೆ ಯನ್ನೂ ಕೊಟ್ಟುಹೋದನು. ಅದರಿಂದ ಇವಳ ಉತ್ಸಾಹವು ಮತಷ್ಟು ಹೆಚ್ಚಿದೆ.'

ಚಂದ್ರ:—ಕುತೂಹಲದಿಂದ,—''ಈಗ ಇವಳು ಹೇಳುವುದೇನು?"

ಚಿತ್ರ:—'ಅಚಲನ ಇಷ್ಟದಂತೆ ತಾನು ಇನ್ನುಮುಂದೆ ಹೀಗೆಯೇ ಇರ ಬೇಕೆಂದೂ, ಅಲಂಕಾರಾದಿಗಳಿಗೆ ತನ್ನನ್ನು ಯಾರೂ ಹೆಚ್ಚಾಗಿ ಬಲಾತ್ಕರಿಸ ಬಾರದೆಂದೂ, ನಂದಿನಿಯೊಡನೆ ಅಚಲನ ಬಳಿಯಲ್ಲಿ ವ್ಯಾಸಂಗಿಸುವಂತೆ ಮಾಡಬೇಕೆಂದೂ' ಹೇಳುತ್ತಿರುವಳು.

ಚಂದ್ರ:—ಸಂಭ್ರಮದಿಂದ,—'ಹಾಗಾದರೆ ನಿನಗೆ ಕಳವಳವೇಬೇಡ. ಅಚಲನು ನಿಮ್ಮವನೇ ಆಗುವುದರಲ್ಲಿ ಏನೂ ಅನುಮಾನವಿಲ್ಲ. ಆದರೆ, ಅವ

ನನ್ನು ನಿಮ್ಮ ದಾರಿಗೆ ತಿರುಗಿಸುವಂತೆ ಮಾಡಬೇಕಾದಕೀಲು, ನಂದಿನಿಯ ಕೈಯಲ್ಲಿರುವುದೆಂದು ತಿಳಿ. ಅದು ಇನ್ನಾರ ಕೈಗೂ ಸೇರಿಲ್ಲ.'

ಚಿತ್ರ:—ಹಾಗಿದ್ದರೆ, ಮತ್ತಾ ಅನುಕೂಲವೇ ಆಯ್ತಲ್ಲವೇ? ಆದರೆ ನೋಡು, ಸದ್ಯದಲ್ಲಿ ನಮಗೆ ಹಿಡಿದಿರುವ ಯೋಚನೆಯೊಂದು ಬಲವಾಗಿದೆ!

ಚಂದ್ರ:—ಕುತೂಹಲದಿಂದ,—"ಅದಾವುದು?"

ಚಿತ್ರ:—ನಾದಾನಂದನ ಮನಸ್ಸು ಚದರಿ ಹೋಗುತ್ತಿದೆ; ಸ್ಯಾಸಂಗವು ಹತ್ತುವಂತಿಲ್ಲ.

ಚಂದ್ರ:—ಏತರಿಂದ?

ಚಿತ್ರ:—ನಂದಿನೀ ಲಾಭದ ವಿಚಾರವಾಗಿ ತಲೆ ತಿರುಗಿದಂತೆ ಕಾಣುತ್ತಿದೆ.

ಚಂದ:—ಅವಳೇನೆನ್ನುವಳು?

ಚಿತ್ರ:—ಹೇಳುವುದೇನು? ಸ್ಥಿರಚಿತ್ತನಾಗಿ ಸ್ಯಾಸಂಗವನ್ನು ಮುಗಿಸೆಂದೂ, ನಿರ್ದಿಷ್ಟಕಾಲದವರೆಗೂ ಶುದ್ಧಬ್ರಹ್ಮಚಾರಿಯಾಗಿರೆಂದೂ ಹೇಳುತ್ತಿರುವಳು. ಏನೆಂದರೂ ಇದು **ಸಸೇಮಿರದ** ಕಥೆಯಾಗಿದೆ.

ಚಂದ್ರ:—ಇರಲಿ; ಅವಳಿಗೆ ಮದುವೆ ಯಾವಾಗಲಂತೆ?

ಚಿತ್ರ:—ವಿಚಾರಮಾಡಿದುದರಲ್ಲಿ ಆ ಯೋಚನೆಯೇ ಇರುವಂತೆ ಕಾಣಲಿಲ್ಲ.

ಚಂದ್ರ:—ಹಾಗಿದ್ದರೆ, ನಾದಾನಂದನಿಗೆ ಬೇರೆಕಡೆಯಿಂದಾದರೂ ಹೆಣ್ಣು ತಂದು ಮದುವೆ ಮಾಡಬಾರದೇಕೆ?

ಚಿತ್ರ:—ಹಾಗೆಮಾಡುವಂತಿಲ್ಲ. ನಂದಿನಿಗೆ ಮದುವೆಯಾಗುವವರೆಗೂ ಅವನು ಮತೆತ್ತಾಂದುಹೆಣ್ಣನ್ನು ನೋಡಲೊಲ್ಲನಂತೆ!

ಚಂದ್ರ:—ಅವನಿಗೇಕೆ ಈ ಚಾಪಲ್ಯ?

ಚಿತ್ರ:—ನಮ್ಮ ಅದೃಷ್ಟ! ಎಲ್ಲರೂ ಅಚಲನಂತೆಯೇ ಇರಬೇಕೆನ್ನುವುದು ದುರಾಶೆಯಲ್ಲವೇ?

ಚಂದ್ರ:—ಅವನೂ ನಂದಿನಿಯ ತಂದೆಯ ಬಳಿಯಲ್ಲಿ ಗುರುಕುಲವಾಸ ಮಾಡದಿದ್ದಪಕ್ಷದಲ್ಲಿ, ನಾದಾನಂದನಂತೆಯೇ ಆಗುತಿದ್ದನೋ ಏನೋ ಬಲ್ಲವರಾರು?

ಚಿತ್ರ:—ಹೇಗಾದರೂ ಆಗಲಿ: ಈ ಹುಬಲನನ್ನು ಬಿಡಿಸಲಿಕ್ಕೆ ಉಪಾಯವೇನು?

ಚಂದ್ರ:—ಸಾಧ್ಯವಾದಷ್ಟು ಅವಳಲ್ಲಿ ಸಂಭಾಷಣಕ್ಕೆ ಅವಕಾಶವಿರದಂತೆ ನೋಡಿಕೊಳ್ಳಬೇಕು. ಅಷ್ಟಲ್ಲದೆ ಬೇರೆ ಯಾವ ಉಪಾಯವೂ ಇಲ್ಲ.

ಚಿತ್ರ:—ಈ ವಿಚಾರವಾಗಿ ನಂದಿನಿಗೆ ನಾನೇನೂ ಹೇಳಬೇಕಾದುದಿಲ್ಲ. ಅವಳೇ ಎಚ್ಚರಿಕೆಯುಳ್ಳವಳು. ಆದರೂ ಇವನಾಗಿ ಹೋದರೆ ಬೇಡವೆನ್ನಲಾದೀತೇ?

ಚಂದ್ರ:—ಇರಲಿ; ಇದೊಂದೇ ಕೊರತೆಯುಳ್ಳವೇ, ಆತನಲ್ಲಿರುವುದು? ಭಗವತ್ಕಟಾಕ್ಷದಿಂದ ಬಾಗ್ರತೆಯಾಗಿಯೇ ಮುಂದೆ ಬರುವನು. ನೀವು ನಿರು; ವ್ಯಥಿಸಬೇಡ.

ಚಿತ್ರ:—ಚಂದ್ರಮತಿ! ನೀನೂ ನನ್ನ ಪ್ರಾಣಾಪ್ತಸಖಿಯಾಗಿರುವುದರಿಂದ ಎಲ್ಲವನ್ನೂ ಬಿಚ್ಚಿ ಹೇಳಿರುವೆನು. ಬೇರೆ ಬೇರೆಯಾಗಿ ಭಾವಿಸಬೇಡ. ಹೇಗೂ ಅಚಲಚಂದ್ರನ ಸುಬೋಧರಾಗವು, ನಾದನನ್ನೂ ಮೇಲಕ್ಕೆತ್ತಬೇಕೆಂಬುದೇ ನನ್ನ ಕೋರಿಕೆ.

ಚಂದ್ರ:—ಕಿರುನಗೆಯಿಂದ,—ಚಿತ್ರಕಲಾ! ಇಷ್ಟೇಕೆ ನಿನಗೆ ಕಳವಳ? ಸತ್‌ಸಂಕಲ್ಪಕ್ಕೆಳಪಟ್ಟುದು, ಎಷ್ಟೇ ಮಹತ್ತರವಾದುದಾಗಿರಲಿ, ಸಾಧನೆಯಾಗದಿರದೆಂದು ತಿಳಿಯಲಾರೆಯೇನು? ಅಚಲಚಂದ್ರನೂ ನಂದಿನಿಯೂ ಭಗವತಿಯ ಸಂಪೂರ್ಣ ಕೃಪಾಪಾತ್ರರು. ಅವರ ಪ್ರಯತ್ನಕ್ಕೆ ಎಂದಿಗೂ ಅಪವಾದವಿಲ್ಲ. ಅಲ್ಲದೆ, ಅಚಲಚಂದ್ರನ ಸಹವಾಸ, ನಂದಿನಿಯ ಕಾಲೋಚಿತವಾದ-ಮರ್ಮವೇಧಕವಾದ ಹಿತಬೋಧೆ, ಇವುಗಳಿಂದ ನಾದಾನಂದನೂ ಸ್ವರ್ಣಕುಮಾರಿಯೂ ಉತ್ತಮವರ್ಗಕ್ಕೆ ಸೇರಿದವರಾಗಿರುವುದರಲ್ಲಿ ಏನೇನೂ ಸಂಶಯವಿಲ್ಲ. ಹೊತ್ತುಮೀರುತ್ತಿದೆ; ನಾನಿನ್ನು ಹೊರಡಲೇ?'

ಚಿತ್ರ:—ಆನಂದಪಾರವಶ್ಯತೆಯಿಂದ,—'ಚಂದ್ರಮತಿ! ನಿನ್ನ ನಿರ್ಮತ್ಸರ ಪ್ರೇಮದಿಂದ ನಾನು ನನ್ನನ್ನೇ ಮರೆತಿದ್ದೇನೆ. ಈ ನಮ್ಮ ಸ್ನೇಹಬಾಂಧವ್ಯವು ಎಂದೆಂದಿಗೂ ಬಲವಾಗಿದ್ದು, ಅದರೊಡನೆಯೇ ಸಂಬಂಧವಾಶವೂ ಸೇರುವಂತಾಗಬೇಕೆಂಬುದೇ ನನ್ನ ನಿರಂತರ ಪ್ರಾರ್ಥನೆಯಾಗಿದೆ. ಮುಖ್ಯವಾಗಿ ನೀನು ನಮ್ಮವಳಾಗಿದ್ದರೆ, ಮಿಕ್ಕುದೆಲ್ಲವೂ ಕೈಕೂಡಿದಂತೆಯೇ ಸರಿ.'

(ಇಬ್ಬರೂ ಪರಸ್ಪರ ಹಸ್ತಲಾಘವದಿಂದೆದ್ದು ಸ್ಥಾನಾಂತರವನ್ನು ಕುರಿತು ತೆರಳಿದರು. ಇವರ ನಿರ್ಮತ್ಸರ ಪ್ರೇಮಮಯ ಪ್ರಸಂಗವು ನಮ್ಮ ಸೋದರೀವರ್ಗವನ್ನು ಎಚ್ಚರಿಸಬಹುದಲ್ಲವೆ?)

॥ ಶ್ರೀಃ ॥

ಸಪ್ತಮ ಪರಿಚ್ಛೇದ.

(ನಂದಿನೀ ಸಂದೇಶ)

"ಅಪ್ಪ! ನನ್ನನ್ನೇಕೆ ಕರೆಸಿದೆ?"

"ಮುಖ್ಯ ವಿಚಾರವನ್ನು ವಿಮರ್ಶಿಸಬೇಕೆಂದು."

"ನನ್ನ ಮುಂದೆ ವಿಮರ್ಶಿಸಬೇಕಾದುದೇನು?"

"ನಿನ್ನ ಅನುಭವಪೂರ್ವಕವಾದ ಅಭಿಪ್ರಾಯವನ್ನು ತಿಳಿದುಕೊಳ್ಳಲಿಕ್ಕೆಂದೇ ಒರಮಾಡಿದೆನು. ನಿಂತಿರುವೆಯೇಕೆ? ಕುಳಿತುಕೊ?"

"ಇದೋ ಕುಳಿತೆನು. ಇನ್ನು ಏನಿದ್ದರೂ ಹೇಳಬಹುದಲ್ಲವೇ?"

ಈ ಬಗೆಯ ಉತ್ತರಪ್ರತ್ಯುತ್ತರಗಳು, ನಗೇಶರಾಯನಿಗೂ ನಂದಿನಿಗೂ ನಡೆಯುತ್ತಿದ್ದುವು. ನಗೇಶರಾಯನು ತನ್ನ ಸ್ವಂತ ಕೆರುಮನೆಯಲ್ಲಿ ಕುರ್ಚಿಯಮೇಲೆ ಕುಳಿತಿದ್ದನು. ನಂದಿನಿಯು ನಗೇಶನಿಗೆ ಇದಿರಾಗಿ ಕಾಲುಮಣೆಯ ಮೇಲೆ ಕುಳಿತು, ನಗೇಶರಾಯನ ಉತ್ತರನಿರೀಕ್ಷೆಯಲ್ಲಿದ್ದಳು. ಹೊತ್ತು ಇನ್ನೂ ಬೆಳಗಿನ ಒಂಭತ್ತುಘಂಟೆಗೆ ಮೀರಿರಲಿಲ್ಲ. ಈ ವೇಳೆಯಲ್ಲಿ ಇಪರ ವಿಚಾರ-ವಿಮರ್ಶನವು ಯಾವ ಬಗೆಯದಾಗಿತ್ತೆಂದು ನಮ್ಮ ವಾಚಕವರ್ಗವು ಕುತೂಹಲಪಡಬಹುದಲ್ಲವೆ? ಅದು ಸಹಜಗುಣವೇ ಸರಿ! ಅದಕ್ಕೆಂದೇ ಅವರ ವಿಚಾರವಿಮರ್ಶೆಯಲ್ಲಿ ಸ್ವಲ್ಪವೂ ಬಿಡದಂತೆ ಕೆಳಗೆ ವಿವರಿಸಲ್ಪಡುವುದು. ಸಾವಧಾನದಿಂದ ಸಮಾಲೋಚಿಸಿದರೆ, ಸುಖ-ಸಮಾಧಾನಗಳೂ ತೋರಿಬರುವವೆಂಬುದೇ ನಮ್ಮ ಹಿತಸೂಚನೆ.

ನಂದಿನಿಯು ನಾಲ್ಕಾರು ನಿಮಿಷಗಳ ವರೆಗೆ ಇದಿರು ನೋಡಿದಳು; ನಗೇಶನು ನಿರುತ್ತರನಾಗಿಯೇ ಕುಳಿತು ಏನನ್ನೋ ಯೋಚಿಸುತ್ತಿದ್ದನು. ತನ್ನ ಪ್ರಶ್ನೆಗೆ ಉತ್ತರವಿಲ್ಲದಿದ್ದುದನ್ನು ಕಂಡು, ನಂದಿನಿಯು ಮತ್ತೆ ಕೇಳಿದಳು,—'ಅಪ್ಪ! ಉತ್ತರವಿಲ್ಲವೇಕೆ? ಇಷ್ಟರ ಯೋಚನೆಯಾದರೂ ಏಕೆಂಬುದೇ ನನಗೆ ತಿಳಿಯದಿದೆಯಲ್ಲಾ?'

ನಗೇಶ:—ವೆಲ್ಲನೆ,—'ಕನ್ಯಾಪಿತೃತ್ವವೊಂದೇ ವಿಚಾರಕ್ಕೆ ಸಾಕಲ್ಲವೇ, ತಾಯಿ?'

ನಂದಿನಿ:—ಚಕಿತಭಾವದಿಂದ,—'ಈವರೆಗೂ ಇಲ್ಲದಿದ್ದ ವಿಚಾರವು ಇಂದೇನು!'

ನಗೇಶ:—ನಿನ್ನಿನ ಮಧ್ಯಾಹ್ನದಲ್ಲಿ ನಡೆದುದೆಲ್ಲವನ್ನೂ ಚೆನ್ನಾಗಿ ಕೇಳಿದೆಯಷ್ಟೆ?

ನಂದಿನಿ:—ಕೇಳಿದೆನು; ಏಕೆ?

ನಗೇಶ:—ಏಕೆಂದರೆ, ಏನು ಹೇಳಲಿ? ನಂದಿನಿ! ನಿನ್ನಿನಿಂದ ನನಗೆ ಕ್ಷಣಕ್ಷಣಕ್ಕೂ ಮೇಲೆ ಬೀಳಬರುತ್ತಿರುವ **ಸಮಾಜಶಾಸನದ** ಸಂಬಂಧವಾದ ನಿಷ್ಠುರಗಳೇ ಹೀಗೆ ಮಾಡುತ್ತಿರುವುವು!

ನಂದಿನಿ:—ನಿಷ್ಠುರವೇಕೆ?

ನಗೇಶ:—ನಿಷ್ಠುರಕ್ಕೆಂದರೆ, ಮಗಳಿಗೆ ಮದುವೆ ಮಾಡದಿರುವುದೂ ಮದುವೆಯೊಲ್ಲದ ನಿನ್ನನ್ನು ಬಹುಮಾನಿಸುವುದೂ, ಸಾಲದೇ?

ನಂದಿನಿ:—ನಿಷ್ಠುರಕ್ಕೆ ಹೆದರಿ ಅನಿಷ್ಟವನ್ನುಂಟುಮಾಡಿಕೊಳ್ಳುವುದೇ ಮರುಕಾಟಕ್ಕೆ ಮದ್ದೇನು?

ನಗೇಶ:—ಅನಿಷ್ಟವಾಗದಂತೆಯೂ ಇಷ್ಟವೇ ಕೈಕೂಡುವಂತೆಯೂ ಮಾಡಬೇಕೆಂಬುದು ನನ್ನ ಅಭಿಪ್ರಾಯ. ಆದರೆ ಸಕಾರಣವಾಗಿ ವಿಮರ್ಶಿಸದಲ್ಲದೆ ಯಾವುದೂ ನಿರ್ಧಾರವಾಗದೆಂದು ಬಂದೆನು.

ನಂದಿನಿ:—ಹಾಗಿದ್ದರೆ ಈಗ ನನ್ನಿಂದ ಆಗಬೇಕಾದುದೇನಿದೆ?

ನಗೇಶ:—ಮತ್ತೇನೂ ಇಲ್ಲ. ಸ್ವರ್ಣಯು ವಿವಾಹವಿಚಾರದಲ್ಲಿ ನಿನ್ನ ಅಭಿಪ್ರಾಯವೇ ಬೇಕು.

ನಂದಿನಿ:—ನಿನ್ನ ಅಭಿಪ್ರಾಯವೇನು?

ನಗೇಶ:—ನನ್ನ ಅಭಿಪ್ರಾಯದಲ್ಲಿ ಇನ್ನೂ ಎರಡು ವರ್ಷವಾಗ ಬೇಕೆಂಬುದು!

ನಂದಿನಿ:—ಅದೇನು? ಈಗಲೇ ಏಕಾಗಬಾರದು?

ನಗೇಶ:—ಇನ್ನೂ ಅವಳ ಮನಸ್ಸು ಸ್ವರೂಪ-ಸ್ವಧರ್ಮ-ಸ್ವಾವಲಂಬನ ಮತ್ತು ಪ್ರಾಪಂಚಿಕ ಜ್ಞಾನಗಳನ್ನು ಚೆನ್ನಾಗಿ ತಿಳಿದುಕೊಳ್ಳುವಂತಾಗಿಲ್ಲ. ಅದು ತಿಳಿದುಬರುವವರೆಗೂ ಮತ್ತಾವ ತೊಡಕಿಗೂ ಸಿಕ್ಕಿಸಬಾರದೆಂಬುದೇ ನನ್ನ ಮತವು. ಇದರಲ್ಲಿ ನಿನ್ನ ಅಭಿಪ್ರಾಯವೇನು?

ನಂದಿನಿ:—ನಾನು ಹೇಳುವುದೇನು? ನಿನ್ನ ಅಭಿಪ್ರಾಯದಮೇಲೆಯೂ ನನ್ನದೇ? ಹನುಮಂತನ ಮುಂದೆ ಹಾರುವ ಗುಬ್ಬಿಯೇ?

ನಗೇಶ:—ಹಾಗಲ್ಲ, ನಂದಿನಿ! ಈ ವಿಚಾರದಲ್ಲಿ ನಿನ್ನ ಅಭಿಪ್ರಾಯವು ಅತ್ಯಾವಶ್ಯಕವಾಗಿರಬೇಕು. ನಿನ್ನ ಮನಸ್ಸಿಗೆ ಸರಿತೋರಿದುದನ್ನು ಮುಚ್ಚುಮರೆ ಬಿಚ್ಚಿಹೇಳು.

ನಂದಿನಿ:—ನನ್ನ ಅಭಿಪ್ರಾಯವೆಂದರೆ, ಈಗಲೇ ಮಾಡುವುದು ಶ್ರೇಯಸ್ಕರವೆಂದು ಹೇಳಬೇಕಾಗಿದೆ.

ನಗೇಶ:—ಚಕಿತಭಾವದಿಂದ,—"ಈಗಲೇ ಮಾಡಬೇಕೇ? ನಿಜವಾಗಿ ಹೇಳುತ್ತಿಯಾ? ಇದು ನಿನ್ನ ಮನಃಪೂರ್ವಕವಾಗಿ ಹೇಳಿದ ಮಾತೇ?"

ನಂದಿನಿ:— ಮನಃಪೂರ್ವಕವಲ್ಲದೆ ಮತ್ತೇನು? ನಿಜವಾಗಿಯೂ ಹೇಳುವ ಮಾತೇ ಸರಿ. ಸ್ವರ್ಣಿಯ ವಿವಾಹಕ್ಕೆಂದರೆ ಇದೇ ಸಕಾಲವೆಂಬುದು ನನ್ನ ಅಭಿಪ್ರಾಯವು.

ನಗೇಶ:—ಕುತೂಹಲದಿಂದ, —"ಏತರಿಂದ ಹೀಗೆ ಹೇಳುವೆ?"

ನಂದಿನಿ:—ಸ್ವಾನುಭವದಿಂದಲ್ಲದೆ ಮತ್ತೇತರಿಂದೆಯೂ ಅಲ್ಲ.

ನಗೇಶ:—ವಿಸ್ಮಯದಿಂದ,—"ಇದರಲ್ಲಿ ನಿನಗೆ ಸ್ವಾನುಭವವೆಂಬುದು ಹೇಗೆ?"

ನಂದಿನಿ:— ಹೇಗೆಂದರೆ, ಹೆಣ್ಣುಮಕ್ಕಳಿಗೆ ಕಾಲವರಿತು ಮದುವೆ ಮಾಡುವುದರಿಂದ ಶ್ರೇಯಸ್ಕರವೆಂಬುದೂ ಇಲ್ಲದಿದ್ದರೆ, ಅವರ ಎಂದರೆ, ಹೆಣ್ಣುಮಕ್ಕಳ ಮನಸ್ಸಮಾಧಾನಕ್ಕೆ ಕಂಟಕಗಳು ಅಪಾರವೆಂಬುದೂ ನನ್ನ ತಿಳಿವಿಗೆ ಬಂದಿವೆ.

ನಗೇಶ:—ಹೇಗೆ?

ನಂದಿನಿ:—ಹೇಗೆಂದು ಕೇಳುವೆಯಾ? ರೆಪ್ಪೆಯಿಲ್ಲದ ಕಣ್ಣಿನೋಟಕ್ಕೂ ರೆಪ್ಪೆಯುಳ್ಳ ಕಣ್ಣಿನೋಟಕ್ಕೂ ಎಷ್ಟರ ಅಂತರವುಂಟೋ, ಅನೆಕಟ್ಟಿಯುಳ್ಳ ಕೆರೆಗೂ ಅನೆಕಟ್ಟಿಯಿಲ್ಲದ ಕೆರೆಗೂ ಇರತಕ್ಕ ತಾರತಮ್ಯವನ್ನೆಷ್ಟೋ, ಅಷ್ಟೇ ಅವಿವಾಹಿತೆಯುರಿಗೂ ವಿವಾಹಿತೆಯುರಿಗೂ ಇರುವುದೆಂದರೆ ಸಾಲದೇ?

ನಗೇಶ:—ತಲೆದೂಗುತ್ತ,——"ನಂದಿನಿ! ಇದರಲ್ಲಿ ರಸವು ಬಹು ಗರ್ಭಿತವಾಗಿದೆ: ವಿವರಿಸಿ ಹೇಳಿದರೆ ಮತ್ತೂ ಸೊಗಸು ತೋರುವುದಲ್ಲವೆ?"

ನಂದಿನಿ:—ಗಂಭೀರದಿಂದ,——"ಹಾಗೂ ಆಗಲಿ; ಅಪ್ಪ! ಈಗ ನೋಡು! ರೆಪ್ಪೆಯುಳ್ಳ ಕಣ್ಣಿನೋಟವು ಗಂಭೀರವಾಗಿಯೂ ಕಾಂತಿಯುಕ್ತವಾಗಿಯೂ, ನೋಟಕರಿಗೆ ಮರ್ಯಾದಾಸ್ಪದವಾಗಿಯೂ ಇರುವುದು. ರೆಪ್ಪೆಯಿಲ್ಲದ ಕಣ್ಣಿನೋಟವು, ನೋಟವೆನ್ನಿಸುವುದೂ ಇಲ್ಲ; ನೋಟಕರಿಗೆ ಹಿತಕರವಾಗಿಯೂ ಕಾಣುವುದಿಲ್ಲ. ಅದಕ್ಕೆಂದರೆ, ಗಂಡಾಂತರಗಳೂ ಮೇಲೆಮೇಲೆ ಬೀಳುತ್ತಿರುವುವು. ಹಾಗೆಯೇ ಅನೆಕಟ್ಟಿಯುಳ್ಳ ಕೆರೆಯುಕೂಡ ನೋಟಕರಿಗೆ ಆಹ್ಲಾದದಾಯಕವಾಗಿಯೂ, ನಿರ್ಮಾಪಕರಿಗೆ ಆನಂದೋತ್ಪ್ರೇಜಕವಾಗಿಯೂ ಪರಿಶೋಭಿಸುವುದು. ಅದಿಲ್ಲದಿದ್ದರೆ, ಆ ಕೆರೆಯ ನೀರು ನಿಲ್ಲಲವಕಾಶವೇ ಇಲ್ಲದೆ ನೂರಾರು ಕಡೆಗಳಿಗೂ ಹರಿದು ಅತ್ಯಲ್ಪಕಾಲದಲ್ಲಿಯೇ ಬರಿದಾಗಿ ನಿನ್ನಾರವೆನ್ನಿಸುವುದು. ಇದನ್ನು ಬೇರೆ ಬೇರೆಯಾಗಿ ವಿಂಗಡಿಸಿಯೇ ಹೇಳಬೇಕೇ?"

ನಗೇಶ:—ಅದೇನೋ ತಿಳಿದಂತಾಯ್ತು. ಆದರೆ, ಇವಕ್ಕೂ ಮದುವೆಯಿಲ್ಲದ ಹೆಣ್ಣು ಮಕ್ಕಳಿಗೂ ಹೇಗೆ ಸಾಮ್ಯವನ್ನು ಕಟ್ಟುವೆ?

ನಂದಿನಿ:—ಹೇಗೆಂದರೆ, ಅಪ್ಪ! ಮದುವೆಯಾದ ಹೆಂಗಸರಿಗೆ ಅವರ ಗಂಡಂದಿರೇ ಅನೆಕಟ್ಟಿ ಅಥವಾ ಕಣ್ಣಿರೆಪ್ಪೆಗಳಂತೆ ಮರ್ಯಾದಾಸ್ಪದರಾಗಿರತಕ್ಕವರು. ಅವರಿಗೆ ತಾಯ್ತಂದೆಯರೇ ನಿರ್ಮಾಪಕರಾಗಿದ್ದರೂ ನೇತ್ರೋತ್ಸವವನ್ನುಂಟುಮಾಡುವ ಕಾಂತಿಗೆ ಹಾಗೂ ಮರ್ಯಾದೆಗೆಂದರೆ ಅವರ ಪತಿರಾಜರೇ ಆಗಿರುವರು. ಇಂತಹ ಮರ್ಯಾದೆಗೆ ವಿಷಯರಾಗಿರುವವರೇ ಕುಲಕ್ಕೂ ಧರ್ಮಕ್ಕೂ ನೀತಿಗೂ ಸಾರವಾತ್ರೆಯರಾಗಿ, ಆಶ್ರಿತಾನಾಥ

ವರ್ಗಕ್ಕೆ ಚೈತನ್ಯಪ್ರಾಮಿನಿಯರೆನ್ನಿಸಿ ಸನ್ಮಾನಿಸಲ್ಪಡುವರು. ಹಾಗಿಲ್ಲದ ಪಕ್ಷದಲ್ಲಿ, ಆ ಹೆಣ್ಣು ಮಕ್ಕಳಿಗೆ ಗಂಡಾಂತರಗಳು ಪರಂಪರೆಯಾಗಿ ಬೀಳುವು ವಲ್ಲದೆ, ಅವರನ್ನು ಹೆತ್ತವರಿಗೂ ಸಂತಾಪವುಂಟಾಗುವುದು. ಇನ್ನು ಇದಕ್ಕೂ ಹೆಚ್ಚಾಗಿ ವಿವರಿಸುವುದೇಕೆ!

ನಗೇಶ:—ತಲೆದೂಗಿ,—"ನಂದಿನಿ! ನಿನ್ನ ಈ ಬಗೆಯ ಭಾವಗರ್ಭಿತ, ರಸಪರಿಪುಷ್ಟ ಮತ್ತೂ ಅರ್ಥಪರ್ಯಾದ ಭಾಷಣದಿಂದ ನನಗೆ ಮಿತಿಮೀರಿದ ಆನಂದವಾಗಿದೆ. ಆದರೆ, ಇದನ್ನು ಇನ್ನೂ ಚೆನ್ನಾಗಿ ವಿವರಿಸಿದರೆ, ನಿನ್ನ ಇತರ ಎಳದಂಗೆಯರಿಗೂ ತಿಳಿವುಂಟಾಗುವುದಲ್ಲವೆ?"

ನಂದಿನಿ:—ಅಪ್ಪ! ಇನ್ನೂ ವಿವರಿಸಬೇಕೆಂಬರೆ ರಸಾಭಾಸವಾಗಿ ಬಹುದೆಂದು ತೋರುವುದು. ಹಾಗೆ ನಮ್ಮ ಎಳದಂಗೆಯರ ತಿಳಿವಿಗೆ ಇದು ಕಾರಣವಾಗುವುದಾಗಿದ್ದರೆ, ಅವರ ಹಿರಿಯರೇ ಇದರ ತಥ್ಯಾರ್ಥವನ್ನು ವಿವರಿಸುವುದರಿಂದ ಅಷ್ಟಕ್ಕೂ ಹೆಚ್ಚಿನ ಫಲವಾದೀತು! ಇದನ್ನು ನಾನು ನಿಡಿಸಿ ಹೇಳಲಾರೆನು. ಹೇಗೂ ಈಗ ನಾನು ಈಬಗೆಯ ಕನ್ಯಾಪಸ್ಥೆಯಲ್ಲಿರುವೆನೆಂಬುದರಿಂದಲ್ಲವೇ, ನಾದಾನಂದನ ಮನಸ್ಸು ಕಲಕಿಹೋಗುತ್ತಿರುವುದು? ಹಾಗಿಲ್ಲದಿದ್ದರೆ ಅವನ ವ್ಯಾಸಂಗವೂ ನಿರ್ವಿಘ್ನವಾಗಿ ಸಾಗುತ್ತಿತ್ತಲ್ಲವೇನು? ಇದಕ್ಕೆಂದೇ ಸ್ವರ್ಣಯಾದರೂ ಇತರರ ಮನೋವಿಕಾರಕ್ಕೆ ವಿಷಯಳಾಗಿರದೆ ಪರಿಶೋಭಿಸುವಂತಾಗಬೇಕೆಂಬುದು ನನ್ನ ಮನದೆಣಿಕೆಯಾಗಿದೆ.

ನಗೇಶ:—ನಂದಿನಿಯ ಮುಖವನ್ನೇ ನೋಡುತ್ತ,—"ತಾಯೀ! ನಾದಾನಂದನ ವಿಚಾರವನ್ನು ಮುಂದೆ ಪ್ರಸ್ತಾಪಿಸಲಿಕ್ಕಿರುವೆನು. ಆದರೆ, ಮೊದಲು ಸ್ವರ್ಣಯ ವಿಚಾರವು ಇತ್ಯರ್ಥವಾಗಲಿ!"

ನಂದಿನಿ:—ಇತ್ಯರ್ಥವೇನು? ಕಂಡಂತೆಯೇ ಇಲ್ಲವೇ, ಈಗಲೇ ಮದುವೆ ಮಾಡಬೇಕೆಂಬುದು?

ನಗೇಶ:—ಹೇಗೆ? ನೀನು ನಿನ್ನೆ ಹೇಳಿದುದಕ್ಕೂ ಈಗ ಹೇಳುತ್ತಿರುವುದಕ್ಕೂ ಪರಸ್ಪರ ವಿರುದ್ಧಾಭಿಪ್ರಾಯವಿದೆಯಲ್ಲವೆ?

ನಂದಿನಿ:—ವಿರೋಧಾಭಿಪ್ರಾಯ (ಭಿನ್ನಮತ) ಏನಾವುದು?

ನಗೇಶ:—ನಿನ್ನಿನ ಪ್ರಸಂಗದಲ್ಲಿ ಪ್ರೌಢವಿವಾಹವನ್ನು ಶ್ಲಾಘಿಸಿದ ನೀನೇ ಈಗಲೇ ವಿವಾಹಮಾಡುವ ಕಾಲವೆಂದು ಹೇಳುತ್ತಿರುವೆ. ಇದರಿಂದ ಅನೇಕರ ಆಕ್ಷೇಪಗಳಿಗೆ ಅವಕಾಶವಾಗಬಹುದಾಗಿದೆ.

ನಂದಿನಿ:—ಗಂಭೀರಮುದ್ರೆಯಿಂದ,—"ಅಪ್ಪ! ಅರ್ಥಜ್ಞಾನವಿಲ್ಲದ ಮೂರ್ಖರ ವೃತ್ತಿಯೇ ಅದಾಗಿರುವುದು. ತಥ್ಯಾರ್ಥವನ್ನು ಕಂಡುಹಿಡಿದು ಹೇಳುವವರು ಯಾವುದನ್ನೂ ಆಕ್ಷೇಪಿಸಲಾರರು! ಇದು ನಿನಗೆ ತಿಳಿದಿದ್ದರೂ ನನ್ನನ್ನು ಕೇಳುತ್ತಿರುವುದನ್ನು ನೋಡಿದರೆ, ನನ್ನ ನಿಜಾಶಯ(ಸಂದೇಶ)ವನ್ನು ತಿಳಿಯಬೇಕೆಂಬುದೇ ನಿನ್ನ ಇಷ್ಟವಾಗಿ ಕಾಣುತ್ತಿದೆ. ಆಗಲಿ; ಗುರುವೂ ಹಿತೈಷಿಯೂ ಆದ ನಿನ್ನ ಸಂತೋಷವಿದ್ದಂತೆ ನಡೆವುದೇ ನನ್ನ ಕರ್ತವ್ಯವು.

ನಗೇಶ:—ನಿಜ! ಅದೀಗ ಸಹಜೋಕ್ತಿ!! ಎಲ್ಲಿ; ಇನ್ನು ನಿನ್ನ ವ್ಯಾಖ್ಯಾನವಾಗಲಿ?

ನಂದಿನಿ:— ವ್ಯಾಖ್ಯಾನವಿಷ್ಟೇ! ಮಕ್ಕಳಿಗೆ ತಿಳಿವುಂಟಾದ ಒಳಿಕ ವಿವಾಹವಾಗುವುದುತ್ತಮವೆಂದೂ, ತಿಳಿವಿಲ್ಲದಾಗ ಮಾಡುವುದರಿಂದ ಅವರ ಆತ್ಮಸಂತೋಷಕ್ಕೆ ಕೊರತೆಯುಂಟಾಗಬಹುದೆಂದೂ ಹೇಳಿದ ಮಾತಲ್ಲದೆ, ವಯಃಪ್ರಾಬಲ್ಯವನ್ನೇ ಪ್ರೌಢಶಬ್ದಕ್ಕೆ ಗುರಿಯಾಗಿಟ್ಟು ಹೇಳಲಿಲ್ಲ. ಅಂತಹ ವಯಃಪ್ರಾಬಲ್ಯದ ಅನರ್ಥವಿವಾಹಕ್ಕೆ ನಾನೆಂದೂ ಅಭಿಪ್ರಾಯವನ್ನು ಕೊಡುವ ಸಂಭವವೂ ಬರುವುದಿಲ್ಲ.

ನಗೇಶ:—ಅದೇನು?

ನಂದಿನಿ:—ಮತ್ತೇನು? ಸ್ತ್ರೀಯರಿಗೆ ಪ್ರೌಢಾಶಬ್ದವು ಯಾವ ವಯಸ್ಸಿಗೆ ಸಲ್ಲುವುದು? ೨೦-೨೫ರ ಮೇಲಲ್ಲವೇ? ಹಾಗೆ ಪ್ರೌಢವಿವಾಹವಾಗಬೇಕೆನ್ನುವವನು, ೨೦-೨೫ ವರ್ಷಗಳ ಕೊಬ್ಬಿದ ಹುಲಿಯನ್ನಲ್ಲವೇ ಹುಡುಕಬೇಕಾದೀತು? ಹಾಗಾಗುವುದರಿಂದ ಮಾನವಜನ್ಮದ ಇತಿಕರ್ತವ್ಯವೇ ನಾಶವಾಗಿ, ವಿಷಯಲಾಲಸೆಯ ಪಶುವೃತ್ತಿಯೊಂದೇ ಮುಖ್ಯಾಚಾರವಾಗಿ ಪರಿಣಮಿಸಬಹುದು! ಈ ಬಗೆಯ ಉಚ್ಛೃಂಖಲಪ್ರವರ್ತನವನ್ನು ವಿವಾಹವಿಧಿ ಅಥವಾ ಪ್ರೌಢವಿವಾಹವೆಂದು ಹೇಳುವುದು ಸರಿಯಲ್ಲ. ಪ್ರೌಢಶಬ್ದವು ಜ್ಞಾನೇಂದ್ರಿಯದ ವಿಕಸನಕಾಲಕ್ಕೆ ಮಾತ್ರವೇ ಸಲ್ಲಬೇಕಾಗಿದೆ.

ನಗೇಶ:—ಹಾಗೂ ಆಗಲಿ; ನಂದಿನಿ ! ಜ್ಞಾನಪ್ರಕಾಶಕ್ಕೆಂದರೂ ವಯಸ್ಸಾಗಿರಬೇಕಲ್ಲವೇ?

ನಂದಿನಿ:—ನಿಜ ! ವಯಸ್ಸಾಗಬೇಕೆಂಬುದನ್ನು ಒಪ್ಪಬೇಕು. ಆದರೂ ವಿಚಾರಮಾಡಿ ನೋಡಬಾರದೇ ? ಧ್ರುವ, ಪ್ರಹ್ಲಾದಾದಿಗಳ ಜ್ಞಾನ ಪ್ರಸಾರಕಾಲದಲ್ಲಿ ಅವರಿಗೆ ಮುಪ್ಪಡಸಿತ್ತೇನು?

ನಗೇಶ:—ಅದು ಬಹುಕಾಲದ ಹಿಂದಿನ ಮಾತು. ಈ ಕಾಲದಲ್ಲಿ ಅಡನ್ನು ನಂಬುವವರಾರು?

ನಂದಿನಿ:—ನಿಜ ! ಪಾಶ್ಚಾತ್ಯ ನಾಗರಿಕತೆಯು ನಾಸ್ತಿಕವಾದದಮುಂದೆ ಇವನ್ನು ನಂಬುವುದೂ ಕಷ್ಟವೇಸರಿ. ಆದರೆ, ಅದರಿಂದ ನಮ್ಮ ಪೂರ್ವಜರ ಜ್ಞಾನಸಾಮ್ರಾಜ್ಯಕ್ಕೇನೂ ಕೊರತೆಯಾಗದಷ್ಟೆ? ಹೋಗಲಿ; ಈಗಿನ ಮಾತನ್ನೇ ತೆಗೆದುಕೊಳ್ಳುವ:—

ಜ್ಞಾನವೆಂದರೆ, ಬಾಹ್ಯವಸ್ತುಪರಿಚಯ ಮಾತ್ರವಲ್ಲ; ಪಾಪ-ಪುಣ್ಯಗಳ ಸ್ವಭಾವ, ಮತಾಚಾರ, ಸ್ವಧರ್ಮ, ದೈವಭಕ್ತಿ, ಭಗವತ್ಸಂಬಂಧವೂ ಜ್ಞಾನ ಇವುಗಳನ್ನು ಅಂತಃಕರಣಗಳಲ್ಲಿ ಚೆನ್ನಾಗಿ ಧ್ವನಿಸುವಂತೆ ಮಾಡುವ ಪ್ರಜ್ಞಾವಿಶೇಷವಾಗಿದೆ. ಪ್ರಜ್ಞೆ ಮತ್ತೆಲ್ಲಿಂದಲೂ ಬರಬೇಕಾಗಿಲ್ಲ. ಅದು, ಮಾನವಜನ್ಮಸಹಜಗುಣವಾಗಿರುವುದೆಂದು ತಿಳಿದವರೆಲ್ಲರೂ ಹೇಳುವರು. ಇಂತಹ ಜನ್ಮಸಹಜವಾದ ಗುಣವನ್ನು ಕರ್ಮೇಂದ್ರಿಯಗಳ ಅಕ್ರಮದಿಂದ ಹೊಲಗೆಡಿಸಿಕೊಳ್ಳುವಂತೆ ಮಾಡುವ ಮೌಢ್ಯತೆಯಾಗಲೀ, ಜ್ಞಾನೇಂದ್ರಿಯಗಳ ಸಾಧನಬಲದಿಂದ ಪ್ರಸಾರಕ್ಕೆ ಬರುವಂತೆ ಮಾಡುವ ವ್ಯೊತ್ಪತ್ತಿ (ಪ್ರತಿಭಾಶಕ್ತಿ) ಯಾಗಲೀ ಮಾತಾ-ಪಿತರರ ಅಥವಾ ಗುರುಜನರ ಬೋಧನಾಕ್ರಮದ ಅಭ್ಯಾಸಬಲದ ಮೇಲೆಯೇ ನಿಂತಿರುವುವು. ಅವರ ಬೋಧನೆ, ಶಿಕ್ಷಣೆ, ಅಭ್ಯಾಸ, ವಿಚಾರಾದಿಗಳು ಕ್ರಮಕ್ಕೊಳಪಟ್ಟಿದ್ದರೆ, ಪ್ರಜ್ಞೆಯು ಮಾನವನ ಏಂಟು-ಒಂಭತ್ತು ವರ್ಷಗಳಿಗೆ ಹೊರಹೊಮ್ಮಿ ಬರಲಾಗುವುದು. ಹಾಗೆ ಬರುವಂತಾಯ್ತೆಂದರೆ, ಬಾಲಸೂರ್ಯನ ಶಾಂತಕಿರಣಗಳೇ ಸಾಧನ (ಯೋಗ) ಬಲದಿಂದ ಮಧ್ಯಾಹ್ನಕಾಲದಲ್ಲಿ ಚಂಡಕಿರಣಗಳಾಗಿ ಸಮಸ್ತ ಜೀವರಾಶಿಗಳನ್ನೂ ತನ್ನ ತೇಜಸ್ಸಿಗೆ ವಶವಾಗುವಂತೆ ಮಾಡಿಕೊಳ್ಳುವ ರೀತಿಯಲ್ಲಿ, ಹದಿನಾಲ್ಕು ಅಥವಾ ಹದಿನಾರನೆಯ ವರ್ಷಗಳಿಗಾಗಲೇ ಮೇಲೆ

ಹೇಳಿರುವ ಜ್ಞಾನಸ್ವರೂಪವನ್ನು ಸಾಕ್ಷಾತ್ಕಾರ ಮಾಡಿಕೊಡುವಷ್ಟು ಶಕ್ತತೆ (ಪ್ರೌಢಸ್ಥಿತಿ) ಯನ್ನು ಹೊಂದುವುದು. ಉದಾಹರಣೆಗೆ ಬೇಕೆಂದರೆ, ಎಂಟು ವರ್ಷಗಳಿಂದ ಹದಿನಾರು ಬಾಲ-ಬಾಲೆಯರನ್ನು ನಯವಾಗಿದಲ್ಲಿ ಕರೆದು, ಯಾವುದೇ ಒಂದು ಸಣ್ಣ ನೀತಿಯನ್ನು ಬೋಧಿಸಿದರೂ, ಅವರದನ್ನು ಅಕ್ಕರೆಯಿಂದ ಪರಿಗ್ರಹಿಸುವುದಲ್ಲದೆ ಅದರಂತೆ ನಡೆಯಬೇಕೆಂದೂ ಅವರು ತಮ್ಮಿಂದಾದಷ್ಟು ಪ್ರಯತ್ನಿಸುವುದೂ, ಪ್ರಯತ್ನದಲ್ಲಿ ಉಂಟಾಗಬಹುದಾದ ಕುಂದು-ಕೊರತೆಗಳನ್ನು ಕುರಿತು ಮತ್ತೆ ಬೋಧಕರಲ್ಲಿ ಹೇಳಿ-ಕೇಳಿ ತಿಳಿಯಲೆಳಸುವುದೂ, ನಮ್ಮಲ್ಲಿ ಸಚ್ಚಿಗೃಹಸ್ಥರೆನ್ನಿಸುವವರಿಗೆಲ್ಲಾ ಅನುಭವವಾಗಿರಬೇಕಲ್ಲವೆ? ಹೀಗಾಗುವ ಗ್ರಾಹಕಶಕ್ತಿ, ಜ್ಞಾನಪ್ರಕಾಶಕ್ತಿಗಳೇ ಪ್ರಜ್ಞೆಯು ಕಾರುಹಾಗಿದ್ದು, ಜ್ಞಾನಪ್ರಕಾಶಕ್ಕೆ ಮುಖ್ಯ ಕಿರಣಗಳಾಗುವವಲ್ಲವೇನು?

ನಗೇಶ:—ಅಗಲಿ; ಕನ್ಯೆಯರ ಬುದ್ಧಿಯು ಪ್ರೌಢಸ್ಥಿತಿಗೆ ಒರಬೇಕಾದರೆ, ನಿನ್ನ ಅಭಿವ್ಯಾಯದಲ್ಲಿ ಕಾಲನಿರ್ಣಯವೇನು?

ನಂದಿನಿ:—ಅಪ್ಪ! ಪ್ರೌಢಿಮೆಯುಂಟಾಗಲಿಕ್ಕೆ ಕಾಲನಿರ್ಣಯಮಾಡಿ ಹೇಳಲಾರೆನು. ಏಕೆಂದರೆ, ಶಕ್ತಣಾಬಲದಿಂದ ಅವರಿಗಳಿಗಿ ವರ್ಷಗಳಲ್ಲಿಯೇ ಜ್ಞಾನಪ್ರಸಾರವಾಗುವುದು, ಹಾಗಾಗದೆ ಶಕ್ತಣಕ್ಕೇ ಅಭಾವವಾದರೆ ಮರಣದವರೆಗೂ ಮೌಢ್ಯತೆಯೇ ಇರುವುದು. ಇದನ್ನು ತಿಳಿಯಬೇಕೆಂದರೆ, ೬೦-೭೦ ವರ್ಷಗಳ ಮುಪ್ಪಿನಲ್ಲಿಯೂ ಚಾಪಲ್ಯತೋಗದಿಂದ ಮರುಳಾಟವಾಡುತ್ತಿರುವವರನ್ನೂ, ೧೫-೧೫ ವರ್ಷಗಳ ಬಾಲ್ಯದಲ್ಲಿಯೇ (ಎಳಮೆ) ಭಕ್ತಿ-ಜ್ಞಾನ-ವೈರಾಗ್ಯಗಳ ಭದ್ರಕವಚವನ್ನು ಧರಿಸಿ, ಸ್ವಧರ್ಮಪರಿಪಾಲನೆಯಲ್ಲಿ ನಿರತರಾಗಿರುವವರನ್ನೂ ನಾವು ಅಲ್ಲಿಲ್ಲಿಗಲ್ಲಿಗೆ ನೋಡುತ್ತಿಲ್ಲವೇನು? ಇದರಿಂದ ಪ್ರೌಢಸ್ಥಿತಿಯು ಎಂದಿಗೆ, ಹೇಗೆ, ಉಂಟಾಗಬಹುದೆಂಬುದನ್ನು ಸುಲಭವಾಗಿಯೇ ನಿರ್ಧರಿಸಬಹುದಲ್ಲವೇ? ಹಾಗೂ ಮತ್ತೊಂದು ವಿಚಾರವಿದೆ. ಏನಂದರೆ,—

ಸುಶಿಕ್ಷಿತರಾದ ಸ್ತ್ರೀಯರಿಗೆ ಅವರ ೧೦-೧೨ ವರ್ಷಗಳೊಳಗೆ ಉಚಿತಾನುಚಿತ ವ್ಯಾಪಾರಜ್ಞಾನವುಂಟಾಗುವುದು. ಹೀಗೆ ಉಂಟಾದ ಜ್ಞಾನಾಂಕುರದಿಂದ ಅಗಲೇ ಇವರಲ್ಲಿ ಲಜ್ಜಾ-ಮಾನ-ಭಯ-ವಿಚಾರ ವಿಮರ್ಶೆಗಳು ಒಂದನ್ನು ಮತ್ತೊಂದು ಅನುಸರಿಸಿ ಬರುವುವು. ಇವುಗಳು ಹೃದಯಂಗ

ಮನಾದ ಬೌದ್ಧಿಕ, ಧರ್ಮ ಕರ್ಮಗಳ ಸೂಕ್ಷ್ಮ ವಿಚಾರವನ್ನು ಮಾಡುವಷ್ಟರ ವಿವೇಕವುಂಟಾಗಿ, ಯಾವುದು ನೀತಿಗೆ ವಿರುದ್ಧವೋ.— ಯಾವುದು ತಮ್ಮ ಸ್ವಧರ್ಮ-ಸ್ವಕರ್ತವ್ಯಗಳಿಗೆ ಮುಕ್ಯವೋ—ಅಂತವುಗಳನ್ನು ಕಂಡುಹಿಡಿದು ಬಲಪಡಿಸಿಕೊಳ್ಳುವಸರಾಗುವರು. ಈ ಬಗೆಯ ಅಂತರಿಂದ್ರಿಯದ ಪರಿಪಕ್ವ ಫಲವನ್ನು ಹೊಂದಿರುವವರೇ ಮಾನವಜನ್ಮದ ಸಾರ್ಥಕತೆ ಹೊಂದುವುದಕ್ಕೂ, ತಮ್ಮ ಸಂಸರ್ಗ-ಸಹವಾಸಗಳಲ್ಲಿರುವವರನ್ನೂ ಸುಸ್ಥಿತಿಗೆ ತರುವುದಕ್ಕೂ ಅರ್ಹರಾಗುವರು.

ಅಳುವುದು, ಹೋರುವುದು, ಚೀರುವುದು, ಜಗಳವಾಡುವುದು. ಚಾಡಿಹೇಳಿ ಹೆರಪರನ್ನು ದೂರಿಗೆಳೆದಾಡಿ ನಲಿಯುವುದು, ಕಂಡಕಂಡ ವಸ್ತುಗಳನ್ನಾಸಿ ತನಗಾಗಬೇಕೆಂದು ಹಠಕೊಟ್ಟು ತಮ್ಮವರನ್ನು ಕಾಡುವುದೂ ಇಂತಿವೇ ಮೊದಲಾದ ಚಾಪಲ್ಯವೇ ಬಾಲ್ಯತ್ವದ ಕುರುಹಾಗಿರುವುದು. ಆದರೆ, ಮೇಲೆ ಹೇಳಿರುವುವೆಲ್ಲವೂ ಅಶಿಕ್ಷಿತರಾದ ಸ್ತ್ರೀಯರಲ್ಲಿ ವಿಶೇಷವಾಗಿರುವುವೆಂಬುದನ್ನು ನಮ್ಮ ಸುತ್ತಮುತ್ತಲೂ ಕಾಣುತ್ತಿರುವ ಅನೇಕ ಸಂಸಾರಗಳಲ್ಲಿ ನೋಡಿ ತಿಳಿಯಬಹುದು. ಇದಕ್ಕೂ ಹೆಚ್ಚಿಗೆ ಹೇಳಲಾರೆನು. ಬಿಟ್ಟಿನಲ್ಲಿ ನಾನು ಹೇಳುವುದೆಂದರೆ ಇಷ್ಟೇ! ಸ್ವರ್ಗಕ್ಕೆ ಹದಿನಾಲ್ಕು ವರ್ಷಗಳಾಗಲಿಕ್ಕೆ ಮೊದಲೇ ವಿವಾಹವಾಗಬೇಕೆಂಬುದಾಗಿದೆ. ಇಷ್ಟಿದರ ಮೇಲೆ ನಿಮ್ಮಿಷ್ಟ!

ನಗೇಶ:— ನಂದಿನಿಯ ಮುಖವನ್ನು ನೋಡಿ ತಲೆದೂಗುತ್ತ,— "ಅವಳ ಮನಃಸ್ಥಿತಿಯು ಈಗ ಹೇಗಿದೆ? ಪರಿಪಕ್ವವಾಗಿದೆಯೋ? ಇನ್ನೂ ಬಾಲ್ಯಚಾಪಲ್ಯವಲ್ಲಯೇ ಇದೆಯೋ?"

ನಂದಿನಿ:—ಅಪ್ಪ! ಸ್ವರ್ಣಯ ಸ್ವಭಾವವೇ ಕೋಮಲವು. ಹಾಗೂ ಅವಳ ಬುದ್ಧಿಶಕ್ತಿಯುಂತೂ ಅಸಾಧಾರಣವಾದ ಪ್ರತಿಭಾವಿಶೇಷಣದಿಂದ ಮತ್ತೂ ಪ್ರಕಾಶಿಸುವಂತಿರುವುದು. ಹೀಗಿರುವವಳನ್ನು ಪರಿಪಕ್ವಸ್ಥಿತಿಗೆ ಬಂದಿಲ್ಲವೆಂದು ಹೇಳಲಿಕ್ಕಾದೀತೇ? ಅವಳು ತಕ್ಕಮಟ್ಟಿಗೂ ಸಾರಾಸಾರ ವಿಚಾರಜ್ಞಾನವನ್ನು ಹೊಂದಿರುವಳು.

ನಗೇಶ:—ಹಾಗಿದ್ದರೆ ಅವಳಿಗನ್ನು ಒಬ್ಬ ವರನನ್ನು ಸಂಪಾದಿಸಬೇಕಾ

ಯಿತು! ಎಲ್ಲಿಂದ ಹುಡುಕಿ ಕರೆತರಲಿ? ಹೇಳು ನೋಡುವ; ಅನಸುರೂಪನಿಗೆ ಕೊಡುವುದರಿಂದೇನೂ ಸುಖವಿಲ್ಲವಷ್ಟೇ?

ನಂದಿನಿ:— ರೂಪವೊಂದೇ ಅಲ್ಲ. ಗುಣ-ವರ್ಣ-ರೂಪ-ವಯೋ-ವಿದ್ಯೆಗಳೆಂಬ ಶಕ್ತಿಗಳಿಂದ ಕೂಡಿದ ಸಂಪನ್ನನನ್ನೇ ನೋಡಬೇಕು. ಇಲ್ಲದಿದ್ದರೆ ದಾನಕ್ಕೆ ಸರಿಯಾದ ಪಾತ್ರನೆನಿಸುವುದಿಲ್ಲ.

ನಗೇಶ:— ಕೆರುನಗೆಯುಂದ,— 'ಅಂತಹನನ್ನು ಕರೆತರಬೇಕೆಂದರೆ, ನಮ್ಮ ಮನೆಮಾರುಗಳೆಲ್ಲವನ್ನೂ ಮಾರಿಬಿಡಬೇಕಷ್ಟೇ?

ನಂದಿನಿ:— ಏಕೆ?

ನಗೇಶ:—ಏಕೆಂದರೆ, ವರದಕ್ಷಿಣೆ, ವರನಿಗೆ ಅವರೆಗೂ ವಿದ್ಯಾವ್ಯಾಸಂಗ ಕ್ಕಾಗಿ ಮಾಡಿದ ಖರ್ಚಿಗಾಗಿ ವರನತಂದೆಗೆ ಪ್ರತಿಫಲ, ವರನನ್ನು ಪೋಷಿಸಿ ಧಾರಾಳತನದಿಂದ ನಮ್ಮ ಕೈಗೊಪ್ಪಿಸುವ ವರನ ತಾಯಿಗೆ ಬಹುಮಾನ. ಉತ್ಸವಕ್ಕಾಗಿ ಬರುವ ವರನಕಡೆಯವರಿಗೆ ಔತಣ, ಇನ್ನಿದರಮೇಲೆ ವಧೂವರರ ಅರತಕ್ಷಿತೆಗಳಿಗೂ,, ಪುರಪ್ರದಕ್ಷಣಾದಿ ಆಡಂಬರಗಳಿಗೂ ತಗಲುವ ವೆಚ್ಚ; ಇವೆಲ್ಲಕ್ಕೂ ಎಲ್ಲಿಂದ ತರಬೇಕು?ಸಾಕು; ಒಂದು ಕನ್ಯಾದಾನ ಫಲವೇ ಭೂಪ್ರದಕ್ಷಿಣಕ್ಕೂ ಮಿಗಿಲಾಗಿದೆ.

ನಂದಿನಿ:—ಅಪ್ಪ! ಮುಂದಾಲೋಚನೆಯಿಲ್ಲದ ದುಂದುಗಾರರು ಮನ ಬಂದಂತೆ ವೆಚ್ಚಮಾಡಿ ಕೆಡುವರಲ್ಲದೆ, ವಿವೇಕಿಗಳು ಮಾಡುವರೇನು? ಅರ್ಥವನ್ನು ಸಂಪಾದಿಸಲಾರದ ಹೇಡಿಗಳೂ ಕಷ್ಟ-ಸುಖಗಳನ್ನು ತಿಳಿಯಲಾರದ, ಜ್ಞಾನಲೇಶವಾದರೂ ಇಲ್ಲದ, ಮೂರ್ಖರೂ, ದೇಹವಿಕ್ರಯವೆಂಬ ಕೆಟ್ಟ ಚಾಂಡ್ಯಕ್ಕೆ ತುತ್ತಾಗುವರಲ್ಲದೆ, ಉತ್ತಮ ವರ್ಗದವರು ಹಾಗೆಂದೂ ಮಾಡಲಾರರು.

ನಗೇಶ:—ಅಹುದು; ಅಂತಹ ವರನನ್ನು ಎಲ್ಲಿ ಹುಡುಕಲಿ?

ನಂದಿನಿ:—ತಲೆಯೆತ್ತಿ,— 'ಹುಡುಕುವುದೇಕೆ? ಕನ್ಯೆಯ ಮನಸ್ಸಿಗೆ ಒಮ್ಮೆ ಬಂದವನೇ ವರನಾಗುವುದರಿಂದ ಸುಖ-ಭೋಗ-ಸಂಪದಗಳು ಅಕ್ಷಯವಾಗಿ ನಡೆಯುವುವು.'

ನಗೇಶ:—ಹಾಗಿದ್ದರೆ, ನಿನ್ನ ಮಾತಿನಿಂದ ಸ್ವರ್ಣಯ ಮನಸ್ಸಿಗೂ ಒಬ್ಬನು ಬಂದಿರುವಂತೆ ತೋರುತ್ತಿದೆ. ಅವನಾವನು?

ನಂದಿನಿ:—ಅವನಾರೆಂದರೆ, ನಿನ್ನ ಪೂರ್ಣಾಭಿಮಾನಕ್ಕೆ ಪಾತ್ರನಾದ ಅತಿಲಚಂದ್ರನೇ.

ನಗೇಶ:— ಅತನು ಸ್ವರ್ಣಯನ್ನು ಒಪ್ಪುವನೇ?

ನಂದಿನಿ:—ಒಪ್ಪಲಾರನೆಂದು ಹೇಗೆ ಹೇಳಲಿ? ಆದರೆ ಈ ವರ್ಷವೇ ಆಗುವಂತಿಲ್ಲವೆಂದು ಕಾಣುವುದು.

ನಗೇಶ:—ಮುಂದಿನ ವರ್ಷಕ್ಕೇ ಬೆಳೆಯಲಿ; ಮುಳುಗಿ ಹೋಗದು ದೇನು? ಹೇಗೂ ನಿನ್ನ ಅಭಿಪ್ರಾಯದಂತೆ ನಡೆಯಿಸಿದರೆ ಸರಿಯಷ್ಟೆ!

ನಂದಿನಿ:—ನನಗೆ ಸಮ್ಮತವಾಯಿತು. ನಾನಿನ್ನು ಹೊರಡಲೇ?

ನಗೇಶ:—ಮತ್ತೆರ್ತಿಂಕು ಮಾತು.

ನಂದಿನಿ:—ಅಭ್ಯಂತರವೇನು? ಅದಾವುದು?

ನಗೇಶ:—ನಾದಾನಂದನ ವಿವಾಹವಿಚಾರದಲ್ಲಿ,....—

ನಂದಿನಿ:—ಈಗಲೇ ಉತ್ತರವೇನು? ಹಾಗೂ ಇದರಲ್ಲಿ ನಾನು ಹೇಳುವುದೇನು?

ನಗೇಶ:— ಅತನು ನಿನ್ನನ್ನೇ ಭಾರ್ಯೆಯಾಗಬೇಕೆಂದರೆ, ನೀನಲ್ಲದೆ ಮತ್ತಾರು ಹೇಳಬೇಕು? ಅವನಿಗೆ ಈಗಲೇ ಉತ್ತರವಿಲ್ಲದಿದ್ದರೆ ಮುಂದೆಯಾದರೂ ಆಗಬೇಕಷ್ಟೇ? ಇದಕ್ಕೇನು ಹೇಳುವೆ?

ನಂದಿನಿ:—ಗದ್ಗದಸ್ವರದಿಂದ,—'ಅಪ್ಪ! ನನಗಿದೊಂದು ಮಾತ್ರ ನೇರಿಲ್ಲ. ನಾನು ಕೇವಲ ಪಿತ್ರಾಜ್ಞೆಯೊಂದರಲ್ಲಿಯೇ ಇರತಕ್ಕವಳು. ಪಿತ್ರಾಜ್ಞೆಯಿಂದಲೇ ಈ ನೈಷ್ಠಿಕ ವೃತ್ತಿಯನ್ನು ಹಿಡಿದಿರುವುದು. ಇದನ್ನು ನಾನು ಮನೋವಾಕ್ಕರ್ಮಗಳಿಂದಲೂ ರಕ್ಷಿಸುವುದೇ ನನ್ನ ಕರ್ತವ್ಯವೆನ್ನಿಸಿದೆ. ಅವರ ಶಾಸನಕ್ಕೆ ಪ್ರತಿಯಾಗಿ ನಾನು ಮನಸ್ಸಿನಿಂದಾದರೂ ನಡೆಯಲಾರೆನು. ಅವರ ಉದ್ದೇಶಸಾಫಲ್ಯಗೊಳಿಸುವುದಕ್ಕಾಗಿ ಈ ದೇಹವನ್ನಾದರೂ ತ್ಯಜಿಸಲು ಸಿದ್ಧವಾಗಿರುವೆನು. ಈ ಬಗೆಯಲ್ಲಿರುವ ನನ್ನಲ್ಲಿ, ಈ ವಿಚಾರವನ್ನು ಹೇಳುವುದೇಕೆ? ಅಪ್ಪ! ಪಿತ್ರಾಜ್ಞೆಯಿಂದ ಬಂದು ನಿಮ್ಮಲ್ಲಿರುವ ನನಗೆ ನೀನೂ ಪಿತೃವತ್ಪೂಜ್ಯನೇ! ಆದರೆ, ಈವರೆಗೂ ಮೀರಿ ನುಡಿದ ನನ್ನ ಮಾತುಗಳನ್ನು ಪ್ರತಿನ್ಹೆಗಾಗಿ ಹೇಳಿದುದೆಂದು ಭಾವಿಸಬಾರದು. ನನ್ನ ಇದೊಂದು ಕೋರಿಕೆಯು ಮಾತ್ರ ಮಾನ್ಯವಾಗಬೇಕು.

ನಗೇಶ:—ತಲೆದೂಗಿ ಸಂತೋಷದಿಂದ,—'ನಂದಿನಿ! ನಿನ್ನ ಸಂದೇಶವು ಲೋಕಾದರಣೀಯವಾಗಬೇಕೆಂಬುದೇ ನನ್ನ ಅಭೀಪ್ಸವು. ಇದಕ್ಕೆಂದೇ ಇಷ್ಟರವರೆಗೂ ನಿನ್ನಲ್ಲಿ ತರ್ಕಿಸಿದೆನು. ನಿನ್ನ ಹೃದ್ಗತಭಾವಗಳ ನಿಜವಾದ ಸ್ವರೂಪವನ್ನು ತಿಳಿದು ನಾನು ಅತ್ಯಾನಂದಗೊಂಡೆನು. ಹೇಗೂ ನೀನು ನನ್ನ ಪುತ್ರ ವಧುವಾಗಿ ನಮ್ಮ ಕುಲವನ್ನು ಪಾವನ ಮಾಡುವೆಯೆಂಬುದೇ ನನ್ನ ಭರವಸೆಯಾಗಿದೆ. ಇರಲಿ; ಈಗಿದರ ಪ್ರಸ್ತಾಪವಿನ್ನು ಸಾಕು. ತುಂಬಾ ಒಳಲುರು ಸೆಯಾದುದರಿಂದ ಇನ್ನು ನಿನಗೆ ಸಮ್ಮತಿಕೊಟ್ಟೆನು.

ನಂದಿನಿಯು ಎದ್ದು ಹೊರಟುಹೋದಳು. ನಗೇಶನೂ ನ್ಯಾನಾಹ್ನಿಕ ಗಳಿಗೆ ತೆರಳಿದನು.

(ನಂದಿನಿಯು ಸಂದೇಶವನ್ನು ಚೆನ್ನಾಗಿ ತಿಳಿದಬಳಿಕೆನ್ನಾದರೂ, ನಮ್ಮ ವರನ್ನು ಸುತ್ತಿಮುತ್ತಿರುವ ದುರಭಿಮಾನಾಗ್ನಿಯು ನಂದಿ, ಜ್ಞಾನಾಮೃತ ವರ್ಷದಿಂದ ನಮ್ಮವರ ಸುಧಾರಣಾಕಾರ್ಯವು ತೃಪ್ತಿಕರವಾಗಿ ನೆರವೇರು ವುದೆಂದು ನಂಬಿ ನಿರೀಕ್ಷಿಸುವೆವು.)

॥ ಶ್ರೀಃ ॥

ಅಷ್ಟನು ಪರಿಚ್ಛೇದ.

(ಸಮಾಜಶಾಸನ)

ನಂದಿನಿಯು, ವಿಶ್ವನಾಥ—ಗಣೇಶಪಂತರನ್ನು ವಾಗ್ಯುದ್ಧದಲ್ಲಿ ಸೋಲಿಸಿ ಇಂದಿಗೆ ಒಂದು ಪಕ್ಷವಾಗಿರಬಹುದು. ಇಷ್ಟರೊಳಗಾಗಿಯೇ ನಂದಿನಿಯು ಮತ್ತು ನಗೇಶರಾಯನ ಮೇಲೆ ಆಚಾರಭ್ರಷ್ಟತೆಯ ಅಪವಾದಾರೋಪಗಳು ತಲೆಯೆತ್ತಿ, ಶಿವಪುರದ ಆಬಾಲ-ವೃದ್ಧರಾದಿಯಾಗಿ ಎಲ್ಲರ ವದನದ್ವಾರದಲ್ಲಿಯೂ ತಾನೇ ತಾನಾಗಿ ನಿಂತು ನರ್ತಿಸುವಂತಾಗಿದೆ.

ನಂದಿನೀ ನಗೇಶರಾಯರ ವಿಷಯದಲ್ಲಿ ಒಬ್ಬೊಬ್ಬರು ಒಂದೊಂದು ಬಗೆಯಾಗಿ ಟೀಕಿಸುತ್ತಿರುವರು. ಯಾವ ಸಂದು ಗೊಂದುಗಳಲ್ಲಿ ನೋಡಿದರೂ, ಮತ್ತಾವ ಪತ್ರ, ವ್ಯಾಪಾರಾಲಯ, ಮಠ, ಚಾವಡಿಗಳಲ್ಲಿಯೂ ಗುಂಪು ಗುಂಪಾಗಿ ನಿಂತು, ಕೆನ್ನೆನುಡಿ ಬಿರುನುಡಿ ಕೊಂಕುನುಡಿಗಳಿಂದ ಬಗೆಬಗೆಯಾದ ಅಂಗ ವಿಕ್ಷೇಪ ಹಿನ್ಯಾಸಗಳಿಂದ ನಲಿದಾಡುವ ಸ್ತ್ರೀಪುರುಷರ ಸುಖಗೋಷ್ಠಿಗಳೇ ಕಾಣುತ್ತಿರುವುವು. ಹೆಚ್ಚೇಕೆ, - ನಗೇಶರಾಯನ ಮೇಲೆ ಶಿವಪುರವೇ ಮುರಿದು ಬೀಳುವಂತಾಗಿದೆಯೆಂದರೆ ಸಾಕು.

ಹೇಗೂ ಇಂದು ಶಿವಪುರದಲ್ಲಿ ವಿಶೇಷವಾದ ಸಡಗರವು ತೋರುತ್ತಿದೆ. ಓಣಿ-ಸಂದು-ಬೀದಿಗಳಿಂದ ಮೊದಲು, ದೊಡ್ಡ ದೊಡ್ಡ ಬೀದಿಗಳ ವರೆಗೆ ಎಲ್ಲೆಯೆಯಲ್ಲಿಯೂ ಜನಗಳ ಗೊಂದಲವೇ ಗೊಂದಲವಾಗಿದೆ. ಎಲ್ಲಾ ಮನೆಬಾಗಿಲುಗಳಿಗೂ ಬೀಗಹಾಕಲ್ಪಟ್ಟಿವೆ. ಹುಡುಗ-ಹುದುಗಿಯರಿಂದ ಮೊದಲು ತಲೆ ನಡುಗುವ ಮುದುಕರವರೆಗೆ ಎಲ್ಲರೂ ಹಾರಿ ಹಾರಿ ನಡೆದು ಹೋಗುತ್ತಿರುವರು. ಪ್ರಾಸೆಯನ್ನು ತುರಿಮಾಡುವ ಗಂದಸರ ವಿಷಯು ವಂತೂ ಹೇಳಲಳವಲ್ಲ. "ನಡೆಯಿರಯ್ಯ, ಬೇಗ ನಡೆಯಿರಿ; ಸ್ವಾಮಿಗಳ ದರ್ಶನಕ್ಕೆ ಅತಂಕವಾದೀತು. ನಿಲ್ಲದೆ ಬೇಗ ಬೇಗ ನಡೆಯಿರಿ. ಇಂದು ಅವರೇನು ಇತ್ಯರ್ಥಮಾಡುವರೋ ನೋಡಬೇಕು. ಇಷ್ಟು ದಿನಗಳೂ ನಮ್ಮನ್ನು ಹಿಂದೆಮುಂದೆ ನಿಂದಿಸಿದುದಕ್ಕೆ ಈದಿನ ಚೆನ್ನಾಗಿ ದಂಡವನ್ನು ತೆಗೆಯಿಸದೆ ಬಿಡಬಾರದು. ಸಾವೆಲ್ಲರೂ ಸೇರಿ ಹೇಗಾದರೂ ಮಾಡಿ ನಗೇಶರಾಯನ ಹಣದ ಸೊಕ್ಕನ್ನೂ, ಅವಳ (ನಂದಿನಿ) ಕೊಂಕುನುಡಿಯ ಜಂಕ ತನವನ್ನೂ ಮುರಿದೇ ಹಾಕಬೇಕು. ಇಲ್ಲದಿದ್ದರೆ ನಮ್ಮಲ್ಲಿ ಯಾರಿಗೂ ಮಾನ ಮರ್ಯಾದೆಗಳುಳಿಯುವಂತೆ ತೋರುವುದಿಲ್ಲ. ಬನ್ನಿರಿ; ಈಗಲೇ ಅವರು ಬಂದು ಸ್ವಾಮಿಗಳ ಪಾದದಲ್ಲಿ ಕಾಣಿಕೆಯನ್ನು ಒಪ್ಪಿಸಿ, ಅವರು ಹೇಳಿದಂತೆ ದಂಡ—ಪ್ರಾಯಶ್ಚಿತ್ತಗಳಿಗೆ ಹೊಣೆಯಾಗಬೇಕಾಗಿರುವುದು. ಹೇಗೂ ಬಿಡುವಂತಿಲ್ಲ. ಇದರಿಂದ ನಿಮಗಿದೊಂದು ನೋಟವೇ ಆಗಿದೆಯಲ್ಲವೆ? ನಡೆಯಿರಿ. ಅಲ್ಲಿ ಅವಾವ ವಿದ್ಯಮಾನಗಳು ಕಾಣುವುವೋ, ಮತ್ತಾವಾವ ವೈಚಿತ್ರ್ಯಗಳು ತೋರಿಬರುವವೋ ಎಲ್ಲವನ್ನೂ ಚೆನ್ನಾಗಿ ನೋಡಿಬರುವ." ಹೀಗೆಂಬ ಕೌತುಕದ ವಾಜ್ಮಾಲೆಗಳೇ ಹೊರ ಹೊರಡುತ್ತಿರುವುವು.

"ಇಷ್ಟು ಅಬ್ಬರವೇತರಿಂದ?"

ಓಕೆ! ತಿಳಿಯಲಿಲ್ಲವೇ ಸಹೃದಯರೇ? ಅಂದಿನ 'ನಂದಿನೀ ವಿಜಯದ' ದೆಸೆಯಿಂದ ನೊಂದು, ಕುಂದಿ ಹೋದ ಗಣೇಶಪಂತ, ವಿಶ್ವನಾಥ ಭಟ್ಟಾಚಾರ್ಯರ ಕುತಂತ್ರವೇ ಇದಲ್ಲವೇನು? ಪಾಪ! ಗಣೇಶಪಂತರು ತಮ್ಮ ಹದಿನಾರು ವರ್ಷದ ಶುದ್ಧಶುಂಠ ಕುಮಾರನಿಗೆ ಸ್ವರ್ಣಕುಮಾರಿಯನ್ನು ತೆಗೆದುಕೊಳ್ಳಬೇಕೆಂಬ ಉದ್ದೇಶದಿಂದ ಅಂದಿನ ವಿವಾಹಪ್ರಸ್ತಾಪವನ್ನೆತ್ತಿದರು. ಆದರೆ, 'ಸ್ವಾಭಿಮಾನಪರಿಪೂರ್ಣನಾದ ನಗೇಶರಾಯನು ಉದಾಸೀನದಿಂದಾದರೂ ಸುಮ್ಮನಿರದೆ, ರೇಗಿರೇಗಿ ಮೇಲೆ ಬಿದ್ದು ನುಡಿದುದೂ, ನಾಲುದುದಕ್ಕೆ ಅವಕಾಸಳೋ ಬೇದಿಯುವಳನ್ನು ಕರೆತಂದು ಮುಂದೆ ಬಿಟ್ಟು, ಅವಳ ನಿರ್ಲಜ್ಜತನದಿಂದ ತಮ್ಮ ತೇಜೋವಧೆ ಮಾಡಿದುದೂ' ಇವೆರಡು ಕಾರಣಗಳೂ ಅವರಿಬ್ಬರ ಹೃದಯಶಲ್ಯಗಳಾಗಿ ನೆಟ್ಟುಹೋಗಿದೆಯಂತೆ! ಈ ಅಪಮಾನದ ಪರಿಹಾರಕ್ಕಾಗಿ ಅವರಾವಾಗಲೇ ಕಂಕಣವನ್ನು ತೊಟ್ಟಿರುವರು. ಇಷ್ಟಾಪೂರ್ಣಕ್ಕೆಂದರೆ, ಮತಾಚಾರದ ಪದ್ಧತಿಗಳನ್ನು ತೊರೆದು, ಬಲ್ಲವರೆಂಬ ಗುರುಜನರನ್ನು ಜರಿದು, ವಯಸ್ಸಾದ ಹುಡುಗಿಯರನ್ನು ಮದುವೆಯಿಲ್ಲದೆ ಬೆಳೆಯಿಸಿಕೊಂಡಿರುವ ಭಂಡತನದ ಬಂದೇ ದೋಷವೇ ಬಿಟ್ಟದಂತಾಗಿರುವುದಲ್ಲವೇ? ಇನ್ನೇನಾಗಬೇಕು?

ಸರಿ ಸರಿ! ಈಗ ತಿಳಿದೆವು. ಹಾಗಾದರೆ ನಮ್ಮೆಯಿತು. ನಾವು ಉಭಯ ಪಕ್ಷಗಳಿಗೂ ಮಧ್ಯದಲ್ಲಿದ್ದು, ನಮ್ಮೆಯಬಹುದಾದುದೆಲ್ಲವನ್ನೂ ಕಣ್ಣಾರೆ ನೋಡಿ, ಕಿವಿಯಾರೆ ಕೇಳಿಬರುವ! "ಓಹೋ! ನಮಗೂ ಒಪ್ಪಿತು. ಹಾಗಿದ್ದರೆ ನಾವು ಎಲ್ಲಿಗೆ ಹೋಗಬೇಕು? ಮತ್ತೆಲ್ಲಿಗೆ? ಶಿವಪುರದ ಜೀವಾನಂದ ಪರಮಹಂಸರ ಪವಿತ್ರಾಶ್ರಮಕ್ಕೆ!"

"ಏನು, ಆಶ್ರಮಕ್ಕೆ? ಅದೇನು ಪಠಾಶಾಲೆಯನ್ನೂ ಹೊಗಬೇಕೋ?" ಹೀನೇಕೆ ಭೀತರಾಗಿರುವಿರಿ–ವಾಚಕರೇ? ಬಂದುವೇಳೆ ಪಠಾಶಾಲೆಯನ್ನೇ ಹೊಕ್ಕೆವೆಂದರೂ ನಮಗಾಗುವ ನಷ್ಟವೇನು? ಕಷ್ಟವೆಂಬಿರೋ? ಕಷ್ಟ-ಸುಖಗಳನ್ನು ಸಮತುಲನವಾಗಿ ಸಹಿಸದಿದ್ದರೆ ಮನುಷ್ಯರಾಗುವಿರೋ? ಅವಿರಲಿ; ಈ ಕಾಲದ ಸ್ವಾಮಿಗಳ, ಮತಬೋಧಕರ ಅಥವಾ ಪೀಠಾಧಿಕಾರಿಗಳಾದವರ ಸಮೂಹಡಲ್ಲಿ, ವನದಲ್ಲಿ, ಪಠಾಶಾಲೆಯಲ್ಲಿ, ತರುಮೂಲದಲ್ಲಿ

ವಾಸಮಾಡುವಷ್ಟು ಹೆಡ್ಡರಾದರೂ ಯಾರಿರುವರು? ಅವರ ಚಿತ್ಕಾಶ್ರಮವು ಯಾವ ಅರಮನೆಗೆ ಕಡಮೆಯಾಗಿರುವುದು?

ಹಾಗೋ? ಅದರೆ ಸಂತೋಷ. ನೋಡಿ ನಮ್ಮ ಕಣ್ಣುಗಳೂ ತಣಿಯಲಿ!

ಅಬ್ಬ! ಮತ—ಅಲ್ಲ ಅಲ್ಲ! **ಜೀವಾನಂದ ಪರಮಹಂಸರ ಪವಿತ್ರಾಶ್ರಮವು** ಇಂದು ಎಷ್ಟು ಸಂಭ್ರಮಗೊಳ್ಳುತ್ತಿದೆ, ನೋಡಲಾಗದೇ? ಮತದ (ಆಶ್ರಮದ) ಒಳಗೂ ಹೊರಗೂ ಸುತ್ತಲೂ ಬಾಳೆಯ ಕಂಬಗಳೂ, ತಳಿರು-ತೋರಣಗಳೂ ನಳನಳಿಸುತ್ತಿವೆ. ಮತದತುಂಬ ಜನರು ಕಿಕ್ಕಿರಿದು ನಿಂತೂ ಸ್ಥಳ ಸಾಲದೆಂದು ಹೊರಗಡೆಯಲ್ಲಿ ನಿಂತಿರುವರು. ಬಂದಿರುವವರೆಲ್ಲರೂ ಕುತೂಹಲಾವಿಷ್ಟರಾಗಿ ಮತದಕಡೆಯಿಂದ ಹೊರಡುವ ಶಬ್ದವನ್ನೇ ಕೇಳುತ್ತ ಕದಲದೆ ನೋಡುತ್ತಿರುವರು. ಏನನ್ನು ನೋಡಿ ಕೇಳುವರೋ ಬಲ್ಲವರಾರು?

ಸಾಮಾನ್ಯವಾಗಿ ನೋಡಿದರೆ, ಇಬ್ಬರು ಹೆಂಗಸರಿರುವೆಡೆಯಲ್ಲಿಯೇ ಗದ್ದಲವುಂಟೆಂದು ಹೇಳುವರಲ್ಲವೆ? ಹಾಗಾದರೆ, ನೂರಾರುಮಂದಿ ಹೆಂಗಸರೂ, ಅವರ ಉಡಿಯಲ್ಲಿ, ಮಡಿಲಲ್ಲಿ, ಬೆನ್ನಲ್ಲಿ, ಸುತ್ತಮುತ್ತಲೂ ಮಕ್ಕಳೂ, ಸಾಲದುದಕ್ಕೆ ಹುಡುಗರಾದಿಯಾಗಿ ಮುದುಕರವರೆಗೆ ಗಂಡಸರೂ ಸೇರಿದರೆ, ಅಕಡೆಯಲ್ಲಿ ಗದ್ದಲವೆಷ್ಟೆಂಬುದನ್ನು ಹೇಳಲಾದೀತೇ? ಹೆಚ್ಚೇಕೆ, ಈ ದಿನದ ನೋಟದಲ್ಲಿ ಮತವೇ ಒಂದು ದೊಡ್ಡ ಸಂತೆಯ ಗಡಿಯಾಗಿದೆಯೆಂದು ಹೇಳಬಹುದು.

" ಹೋ! ಹೋ! ತಾಳಿರಿ. ಕೂಗದೆ-ಹಾರಾಡದೆ ನಿಲ್ಲಿರಿ. ಕೆವಿ ಕೊಟ್ಟು ಕೇಳಿರಿ. ಕೂಗಿ ಗದ್ದಲಮಾಡುವವರು ಹೊಡೆದೋಡಿಸಲ್ಪಡುವರು! ಸದ್ದು! ಸದ್ದು!! ಸದ್ದು!!!"

" ಇದೇನಿದು! ಘನಘರ್ಜನೆ? ಹೀಗೇಕೆ ಕೂಗುವರು?"

ಅತುರಪಡಬೇಡಿರಿ; ಬಾಂಧವರೇ! ನಿಧಾನಿಸಿ ಕೇಳಿದರೆ ತಿಳಿದೀತು.

ಓಹೋ! ತಿಳಿದೆವು. ಸ್ವಾಮಿ (?)--ಅಲ್ಲ ಜೀಶಾಧಿಕಾರಿ--ಇದೂ ಸಮಂಜಸವಾಗಿಲ್ಲ—ಸಮಾಜಶಾಸನ ಸಂಸ್ಥಾರಿಗಳಾದ ಜೀವಾನಂದ

ಜಗದ್ಗುರು ಪೀತದವರು, "ಸಮಾಜದ ಕಲ್ಯಾಣಕ್ಕಾಗಿ ಹೊಸದಾದ ಶಾಸನವನ್ನು ನಿರೂಪಿಸುತ್ತಿರುವರಲ್ಲವೆ? ಸಿಜ!

ದೇವರಿಗೆ ಪೂಜಾವಿಧಿಗಳೆಲ್ಲವೂ ಮುಗಿದಿವೆ. ಸ್ವಾಮಿಗಳವರ ವಾದ ಪೂಜೆಯೂ ನಡೆದಿರುವುದು. ಇನ್ನು ಉಳಿದಿರುವುದೆಂದರೆ, ಶಿಷ್ಯಮಂಡಲಿಗೆ ಸಿರೂಪ; ಅಬಳಿಕ ಅನ್ನಶಾಂತಿಕ್ರಿಯೆ—ಇವರೇ. ಇವಕ್ಕಾದರೂ ನಮ್ಮ ಪೂರ್ಣ ಗಮನವಿರಬೇಕಾದುದು ಮುಖ್ಯವಲ್ಲವೇ? ಹಾಗಿದ್ದರೆ ನಡೆಯಿರಿ.

ಭಲೆ! ಅಭಿನವ ದತ್ತಾತ್ರೇಯರೆನ್ನಿಸಿದ ನಮ್ಮ ಚಿದಾನಂದ ಪರಮಹಂಸರು ಧರ್ಮಾಸನದಲ್ಲಿ ಮಂಡಿಸಿ ಜಪಮಾಲಿಕಾಹಸ್ತರಾಗಿ ಹೇಗೆ ಪ್ರಕಾಶಿಸುತ್ತಿರುವರು? ಇಕ್ಕೆಲಗಲ್ಲಿಯೂ ಮುಂದೆಯೂ ಕುಳಿತಿರುವ ಧರ್ಮದರ್ಶಿಗಳ ಮತ್ತು ಪೀಠಾಶ್ರಿತರಾದ ಮುಖ್ಯ ಶಿಷ್ಯರ ಬಗೆಯಾದರೂ ಹೇಗಿರುವುದು? ಕೈಕಟ್ಟಿಕೊಂಡು ಬಿಡುಗಣ್ಣಿಂದ ನೋಡುತ್ತಿರುವ ಇವರಿಗೆ ಸ್ವಾಮಿಗಳ ವದನದ್ವಾರದಿಂದ ಹೊರಬೀಳುವ ವಾಗ್ವೃತವನ್ನು ಪಾಸು ಮಾಡಲು ಎಷ್ಟು ಆತುರವುಂಟಾಗಿರುವುದು? ಇವರ ಭಕ್ತಿಯಾದರೂ ಎಷ್ಟಿರಬೇಕು? ಅದೂ ಹಾಗಿರಲಿ; ಸ್ವಾಮಿಗಳ ಮುಂದೆಯೇ ಧರ್ಮಾಧಿಕಾರಿಯಾಗಿ ನೇಮಿಸಲ್ಪಟ್ಟು ಬಂದು ಅಖಂಡವಾದ ಶಾಸನಪತ್ರವನ್ನು ಹಿಡಿದು, ವಾಚಿಸಲುದ್ಯುಕ್ತರಾಗಿ ನಿಂತಿರುವ ನನ್ನ ಗಣೇಶಪಂತರನ್ನು ನೋಡಿರಿ; ಎಷ್ಟರ ಉತ್ಸವದಲ್ಲಿರುವರು? ಇವರ ಉತ್ಸಾಹಕ್ಕೆ ಭಂಗವನ್ನುಂಟುಮಾಡುತ್ತಿರುವ ಜನರ ಗದ್ದಲವನ್ನು ಅಣಗಿಸಲು ಸುತ್ತಮುತ್ತಲಿರುವ ಭಂಟರು ಒಂದೇಸನುವಾಗಿ "ಕೂಗದಿರಿ; ಸದ್ದಿತ್ತದಿರಿ." ಎಂದೀ ಬಗೆಯಾಗಿ ಕೂಗಿಕೊಳ್ಳುತ್ತಿರುವರು. ಅದರೇನು? ಗದ್ದಲವು ಬೇರೆ ಅಡಗಲಿಲ್ಲ. ಹೆಂಗಸರ ಆಭರಣಗಳ ಝಣತ್ಕಾರವೇ ಸಾಕೆನ್ನಿಸಿರುವಲ್ಲಿ, ಅವರ ಕಾಡು ಹರಟೆಗಳೂ ಬಿಸಿಲು-ಹಸಿವು-ಬಾಯಾರಿಕೆಗಳ ತಾಪಗಳಿಂದ ಗೊಣಗಿಡುತ್ತಿರುವ ಮಕ್ಕಳ ಅಳುವೂ ಸೇರಿದರೆ, ಅಲ್ಲಿಯ ಶಾಂತತೆ ಎಷ್ಟರಮಟ್ಟಿಗಿರಬೇಕೋ, ವ್ಯಾಜ್ಞರೇ ಊಹಿಸಲಿ! ಪಾಪ, ಕೂಗಬೇಡಿರೆಂದು ಹೇಳಿ ಹೇಳಿ ಎಲ್ಲರೂ ಬೇಸತ್ತರು; ಫಲವಾಗಲಿಲ್ಲ. ಕಡೆಗೆ ನಿರ್ವಾಹವಿಲ್ಲದೆ ಬಹು ಪ್ರಯಾಸದಿಂದ ಗದ್ದಲಕ್ಕೆ ಕಾರಣರಾಗಿದ್ದ ಮಹಿಳೆಯರೆಲ್ಲರನ್ನೂ ಹೊರಗೆ ಕಳುಹಿ ತಕ್ಕಮಟ್ಟಿಗೆ ಶಾಂತಿಯನ್ನುಂಟುಮಾಡಿದರು. ಇತ್ಯಾಗುವ ವೇಳೆಗೆ ನಿಂತಿದ್ದವರ

ಮತ್ತು ಕುಳಿತಿದ್ದವರ ಮೈಯೆಲ್ಲಾ ಬೆವತು ನೀರಾಗಿ ಕರಗಿ ಹೋಗುವಂತಾಗಿದ್ದಿತು. "ಇನ್ನು ವಿಳಂಬಿಸಿದರೆ ಈ ಹೆಂಗಸರ ಗಲಬೆಯನ್ನು ಅಡಗಿಸುವುದು ಬ್ರಹ್ಮದೇವನಿಗೂ ಆಗದಂತೆ ಬಲವಾಗುವುದು. ಇಷ್ಟರಮಟ್ಟಿನ ಶಾಂತಸ್ಥಿತಿಯಲ್ಲಿರುವಾಗ ನಿರೂಪಣೆಯನ್ನು ಓದಿ ತಿಳಿಸಿಬಿಡಿರಿ," ಎಂಬುದಾಗಿ ಸ್ವಾಮಿಗಳ ಆಜ್ಞೆಯಾಯಿತು. ಅಷ್ಟಕ್ಕೊಂದನ್ನೇ ಕಾದಿದ್ದ ಧರ್ಮಾಧಿಕಾರಿಯು ಸಂಭ್ರಮದಿಂದ ಪತ್ರವನ್ನು ಓದಲು ಮೊದಲುಮಾಡಿದನು.

"ಶ್ರೀಮತ್ಪರಮಹಂಸೇತ್ಯಾದ್ಯನೇಕ ಬಿರುದಾಂಕಿತರಾಗಿ ಜಗತ್ಪ್ರಸಿದ್ಧಿಹೊಂದಿ ಪರಿಶೋಭಿಸುತ್ತಿರುವ ಶ್ರೀಮತ್ ಅಭಿನವ ಜೀವಾನಂದ ಪರಮಹಂಸ ಜಗದ್ಗುರು ವಾದಪೀಠದಲ್ಲಿ ಶಿಷ್ಯಪ್ರಶಿಷ್ಯಪರಂಪರೆಯಿಂದ ಏತತ್ಪರ್ಯಂತರವೂ ಆಶ್ರಿತರಾಗಿರುತ್ತಿರುವವರೆಲ್ಲರಿಗೂ ಸನ್ನಿಧಾನದಿಂದ ನಿರೂಪಿಸುವುದೇನೆಂದರೆ:—

ಕಲಿಪುರುಷನ ಪ್ರಾಬಲ್ಯದಿಂದ ಧರ್ಮದೇವನು ಈಗ ಕೇವಲ ಮಲಿನಸ್ಥಿತಿಗೆ ಬಂದಂತೆ ಕಾಣುತ್ತಿರುವುದೆಂದೂ, ಸುಧಾರಣಾವಾದಿಗಳೆಂಬ ಕಾಳಸರ್ಪಗಳು ಅಲ್ಲಲ್ಲಿಗೆ ತಲೆಯೆತ್ತಿ ಧರ್ಮಶಾಸನವನ್ನು ನಿರ್ಮೂಲಮಾಡುವ ಪ್ರಯತ್ನದಲ್ಲಿರುವುವೆಂದೂ, ವರ್ಣಸಂಕರಗಳ ಮತ್ತು ಜಾತಿಸಂಕರಗಳ ಬಾಧೆಯು ಹೇಗೂ ಹೇಳಿ ಮುಗಿಸುವಂತಿಲ್ಲವೆಂದೂ, ಶ್ವಪಚತೆ, ಕರ್ಮಹೀನತೆ, ಅಸಂಸ್ಕೃತತೆಂಬ ತಾರತಮ್ಯ ಜ್ಞಾನವಿಲ್ಲದೆ, ಎಲ್ಲರೂ ಬಂದಾಗಿ ಕಲೆತು, ದಾನ, ಪರಿಗ್ರಹ, ಭೋಜನವೇ ಮೊದಲಾದ ಸಂಬಂಧ-ಸಹವಾಸ-ಸಂಸರ್ಗಗಳಿಂದ ಸಮಾಜದ ಶಾಂತಿಯನ್ನು ಸೂರೆಗೊಂಡಿರುವುದಲ್ಲದೆ,—ವಿವಾಹಪರಿಷ್ಕರಣ ಸಂಘ'ಗಳೆಂಬ ಕೂಟಗಳನ್ನೇರ್ಪಡಿಸಿಕೊಂಡು ಪ್ರೌಢಾವಿವಾಹ-ವಿಧವಾವಿವಾಹಗಳೆಂಬ ತಾಮಸವ್ಯಾಪಾರವನ್ನು ಹೆಚ್ಚಿಸುತ್ತಿರುವರೆಂದೂ, ಧರ್ಮಶಾಸನ ಕರ್ತರೂ ಮತೋದ್ಧಾರಕರೂ ಆದ ಮಠಾಧಿಪತಿಗಳನ್ನು ತುಚ್ಛೀಕರಿಸುತ್ತಿರುವ ನಾಸ್ತಿಕವಾದಿಗಳೇ ಎಲ್ಲೆಲ್ಲಿಯೂ ಕಾಣುತ್ತಿರುವರೆಂದೂ, ದೇವಾಲಯ ಪ್ರತಿಷ್ಠೆ, ಜೀರ್ಣೋದ್ಧಾರ, ಸತ್ರನಿರ್ಮಾಣ, ಮಠಾರಾಧನೆ, ಸಂತಸೇವೆ, ಪುರಾಣಪರಿಶ್ರವಣ, ನಾರಾಯಣ ಮೊದಲಾದ ಧರ್ಮಕಾರ್ಯಗಳಿಗೆಲ್ಲಕ್ಕೂ ಹೇಳಲಾಗದಷ್ಟು ಕಂಟಕಗಳನ್ನೊಡ್ಡಿ, ನ್ಯಾಯ-ಧರ್ಮಪ್ರವರ್ತಕರಾದ ವೈದಿಕರನ್ನು ತಲೆಯೆತ್ತದಂತೆ ಮಾಡಿ, ಬಹುವಿಧ ಸಂತಾಪಗಳಿಗೆ

ಗುರಿಪಡಿಸಿರುವದೆಂದೂ, ಇನ್ನೂ ಅನೇಕ ವಿಧವಾದ ಅಕಾರ್ಯಗಳು ನಡೆಯುತ್ತಿರುವುದರಿಂದ ಈಗಲೇ ಇದನ್ನು ವಿಚಾರಿಸಿ, ಪರಿಷ್ಕರಿಸಿ, ಸಮಾಜವು ಸ್ಥಾಯಿಯಾಗಿರುವಂತೆ ಶಾಸನಗಳನ್ನು ನಿರೂಪಿಸಿ ವಿಧರ್ಮಿಗಳ ಪುಂಡಾಟ ವಡಗುವಂತೆ ಬಹಿಷ್ಕಾರಾದಿ ಪ್ರಾಯಶ್ಚಿತ್ತಗಳನ್ನು ಕಲ್ಪಿಸುವುದರಿಂದ, ಶಿಥಿಲ ಸ್ಥಿತಿಯಲ್ಲಿಳಿಯುತ್ತಿರುವ ಧರ್ಮಪುರುಷನನ್ನು ಉನ್ನತಿಗೆ ತರಬೇಕೆಂದೂ, ಬಹುಜನರೆಯಾದ ವಾರ್ಥನಾಪತ್ರಗಳು ಅನೇಕ ಕಡೆಗಳಿಂದ ನಮ್ಮಾ ಜಗದ್ಗುರು ಪೀಠದಲ್ಲಿ ಸಮರ್ಪಿಸಲ್ಪಟ್ಟಿರುವುವು. ಇದಕ್ಕಾಗಿ ಪೀಠಾಶ್ರಿತರಾಗಿ ಇಲ್ಲಿ ನೆರೆದಿರುವ ಸಮಸ್ತ ಶಿಷ್ಯ-ಪ್ರಶಿಷ್ಯರೂ ತಿಳಿದುಕೊಳ್ಳಬೇಕೆಂದು ಮಾಡಿರುವ ಶಾಸನವೇನೆಂದರೆ:—

'ಮತದ್ವೇಷಿಗಳಾಗಿ ಅಧರ್ಮದಲ್ಲಿ ಪ್ರವರ್ತಿಸಿರುವ ನಾಸ್ತಿಕವಾದಿಗಳನ್ನು ದಂಡಿಸಿ, ಧರ್ಮಮಾರ್ಗದಲ್ಲಿ ಬದ್ಧರನ್ನಾಗಿ ಮಾಡುವುದೇ ಸಮಾಜದ ಉದ್ದೇಶವಾಗಿದೆ. ಸಮಾಜದ ಉದ್ದೇಶವು ಕೆಡದಂತೆ ಅದಕ್ಕೆ ಮುಖ್ಯಾಶ್ರಯರಾಗಿದ್ದು, ಧರ್ಮಸೂಕ್ಷ್ಮವನ್ನರಿತು, ಬಹುಮುಖದಿಂದ ಪ್ರಜೆಗಳ ಶೀಲ-ಧರ್ಮಗಳು ಕೆಡದಂತೆ ನೋಡಿಕೊಳ್ಳಬೇಕಾದುದು ಪ್ರತಿಯೊಂದು ಗುರುಪೀಠದವರಿಗೂ ಅವಶ್ಯಕರ್ತವ್ಯವೆನ್ನಿಸಿದೆ. ಆದುದರಿಂದ, ಈಗ ನಮ್ಮ ಶಿಷ್ಯ-ಪ್ರಶಿಷ್ಯಮಂಡಲಿಯಲ್ಲಿ ಅನೀತಿಯಲ್ಲಿರುವವರನ್ನಾರಿಸಿ- ಹೊರಬೀಳಿಸಿ, ಅವರಿಂದ ಅವರ ಸ್ಥಿತಿಗತಿಗಳಿಗೆ ತಕ್ಕಷ್ಟು ದಂಡವನ್ನು ತೆಗೆಯಿಸಿ, ಅದರಿಂದ ನಷ್ಟವಾದ ಕರ್ಮಗಳಿಗೆ ಪ್ರಾಯಶ್ಚಿತ್ತಗಳನ್ನು ವಿಧಿಸಿ, ಅದನ್ನು ನೆರವೇರಿಸಿದ ಬಳಿಕ ಅವರನ್ನು ಮತ್ತೆ ಸಮಾಜದಲ್ಲಿ ಸೇರಿಸುವಂತೆ ನಿರ್ಣಯಿಸಿದೆ. ಹೀಗ ಮಾಡುವವರೆಗೂ ಅಂತವರೆಲ್ಲರಿಗೂ ಬಹಿಷ್ಕಾರವು ಕೊಡಲ್ಪಡುವುದೆಂದೂ, ಇದನ್ನರಿತು ಅವರು ಪೊದಮೊದಲೇ ಎಚ್ಚೆತ್ತು ಸುಖಸಮಾಧಾನಗಳಿಗೆ ಭಾಗಿಗಳಾಗಬಹುದೆಂದೂ ಎಚ್ಚರಿಸಿದೆ.'

ಹೀಗೆಂದು ಓದಿ ಮುಗಿಸಿದ ಬಳಿಕ, ಪಾಪ! ಪಂತರವರು ಬಲು ಬಳಲಿದವರಾಗಿ ನಿಟ್ಟುಸಿರುಬಿಡುತ್ತ ನೆಲದಮೇಲೆ ಕುಳಿತುಬಿಟ್ಟರು. ಇವರಿಂದ ಓದಿ ಹೇಳಲ್ಪಟ್ಟ ಶಾಸನವನ್ನು ಕೇಳಿ ಅಲ್ಲಿ ನೆರೆದಿದ್ದವರೆಲ್ಲರೂ ಭೀತರಾಗಿ ಬಂದು, ಒಬ್ಬೊಬ್ಬರಾಗಿ ತಮ್ಮ ಶಕ್ತಿಗೆ ತಕ್ಕಂತೆ ಕಾಣಿಕೆಗಳನ್ನೊಪ್ಪಿಸಿ, ಗುರುವಾದಪೀಠದಲ್ಲಿ ಅಡ್ಡಬಿದ್ದೆದ್ದು ಸ್ವಾಮಿಗಳ ಬಾಯಿಂದ ಹೊರಬೀಳು

ತ್ತಿದ್ದ ನಾರಾಯಣಶಬ್ದದಿಂದ ಪಾವನರಾದೆವೆಂದೆಣಿಸಿ, ಗುರುಗಳು ಸ್ವಹಸ್ತದಿಂದ ಕೊಡುವ ತೀರ್ಥವನ್ನು ಭಕ್ತಿಯಿಂದ ಕೈಕೊಂಡು, ಕೃತಾರ್ಥರಾದೆವೆಂಬ ಉಕ್ಕಿನಿಂದ ಕೆಲಕ್ಕೆ ಸಾರುತ್ತಿದ್ದರು. ಸ್ವಾಮಿಗಳ ಬಳಿಯಲ್ಲಿ ಕುಳಿತಿದ್ದ ಸಂಗ್ರಹಕಾರರಿಬ್ಬರು ಶಿಷ್ಯಮಂಡಲಿಯವರಿಂದ ಸಮರ್ಪಿಸಲ್ಪಡುತ್ತಿದ್ದ ಕಾಣಿಕೆಗಳನ್ನು ಪೀಠದ ಎಡಗಡೆಯಲ್ಲಿದ್ದ ದೇವರ ಹಣದ ಪೆಟ್ಟಿಗೆಗೆ ತುಂಬುತ್ತ, ಕಾಣಿಕೆಗಳನ್ನೊಪ್ಪಿಸಿದವರ ಕುಲ-ಗೋತ್ರಗಳನ್ನು ಉದ್ಘೋಷಿಸಿ, ಅವರಿಂದ ಅಱದ್ದವೋ ಸುಬದ್ಧವೋ, ಹೇಗೂ ಕಂತವಾತ ಮಾಡಿಕೊಂಡಿದ್ದ ಬಂದೆರಡು ಮಂತ್ರಗಳನ್ನು ಹೇಳಿಸಿ, ಪರಿಶುದ್ಧರಾದರೆಂದು ಹೇಳಿ ಅವರನ್ನು ಮೊದಲಿದ್ದೆಡೆಗೆ ಕಳುಹುತ್ತ ಬಂದರು. ಬಂದೆರಡು ಗಂಟೆಯೊಳಗಾಗಿಯೇ ಬಂದಿದ್ದವರೆಲ್ಲರಿಂದಲೂ ಕಾಣಿಕೆಗಳು ಒಪ್ಪಿಸಲ್ಪಟ್ಟಂತಾಯಿತು. (ರಾಜಾಸ್ಥಾನದಲ್ಲಿ ಸಾಮಂತರೂ, ಅಧಿಕಾರಿಗಳೂ, ಪ್ರಸಾದವನ್ನು ಕೋರುವವರೂ ಮಾಡುವ ಸಂಪ್ರದಾಯವನ್ನು ಕೇಳಿ-ತಿಳಿದಿರಬಹುದಾದ ನಾಗರಿಕರಿಗೆ, ಈ ಸಮ್ಮ ಪರಮಪುರುಷರೇ ರಾಜರೆಂಬದಾಗಿಯೂ, ಅವರ ಒಳಯಲ್ಲಿರುವವರೇ ರಾಜಾಸ್ಥಾನದ ಮುಖ್ಯ ಮುಖ್ಯ ಮಂತ್ರಿಗಳೆಂಬುದಾಗಿಯೂ, ಇಂದಿನ ಸಭೆಯೇ ಪೃಥ್ವೀಪಾಲಕರ ಸಭೆಯಾಗಿರಬಹುದೆಂಬುದಾಗಿಯೂ ತೋರುವುದಲ್ಲವೇ? ಅದು ಹೇಗಾದರೂ ಇರಲಿ; ನಮಗೇನು? ಇದ್ದುದನ್ನು ಇದ್ದಂತೆ ವಿವರಿಸುವುದೊಂದೇ ನಮ್ಮ ಕೆಲಸವು. ಮುಂದಿನ ವಿಚಾರ ವಿಮರ್ಶೆಯು ವಾಚಕರದೇ ಸರಿ.)

ಕಪ್ಪಕಾಣಿಕೆಗಳ ಅಬ್ಬರವೆಲ್ಲವೂ ಮುಗಿದುವು. ಈವರೆಗೆ ಸ್ವಾಮಿಗಳವರು ಧ್ಯಾನಾ (ಏಂತಹಧ್ಯಾನ?—ಬಕಧ್ಯಾನವೋ?) ಸಕ್ತರಾಗಿದ್ದು ಈಗಲೇ ಬಹಿರ್ಮುಖರಾದಂತೆ ಕಣ್ಣೆರೆದು ಸುತ್ತಮುತ್ತಲಿದ್ದವರನ್ನೂ ಕುತೂಹಲದಿಂದ ಕಟಾಕ್ಷಿಸಿದರು. ನೆರೆದಿದ್ದವರೆಲ್ಲರೂ ಜಗದ್ಗುರು ಕೃಪಾಕಟಾಕ್ಷವು ತಮ್ಮೆಲ್ಲರನ್ನೂ ಪವಿತ್ರರನ್ನಾಗಿ ಮಾಡಿತೆಂದು ತಿಳಿದು ನಲಿದರು. ಆದರೆ, ಸ್ವಾಮಿಗಳ ಮುಖಬಿಂಬವು ಮಾತ್ರ ಕೌತುಕ-ವಿಸ್ಮಯ-ಕ್ರೋಧಗಳಿಂದ ವಿಶ್ರವರ್ಣಕ್ಕೆ ತಿರುಗಿತಲ್ಲದೆ ಪ್ರಸನ್ನತೆಯನ್ನು ಸೂಚಿಸಲಿಲ್ಲ. ಕಾರಣವೇನಿರಬಹುದೋ ನಮಗೆ ತಿಳಿಯದು.

ಸ್ವಾಮಿಗಳ ಈ ಬಗೆಯ ವೀಕ್ಷಣದಿಂದ ಗಣೇಶಪಂತರು ಚಕಿತರಾಗಿ

ನಿನ್ನುಯಿಂದ ಕೇಳಿದರು:— 'ಸಾಗರೋತ್ತಮನಲ್ಲಿ ಅಪರಾಹ್ಣವೇನಾದರೂ ಸಂಚಿತವಿರುವುದೇನು?'

ಸ್ವಾಮಿಗಳು:— 'ಎಲ್ಲಿ? ನಗೇಶರಾಯನ ಮತ್ತೂ ಅತನ ಅನುಗಾಮಿಗಳ ಸುಳಿವೇ ಇಲ್ಲ? ನಿರೂಪವು ಹೋಗಿದ್ದಿತೋ ಇಲ್ಲವೋ?'

ಗನೇಶ:—ಅವರಿಗೆ ನಿರೂಪವು ಹೋಗದಿದ್ದೀತೇ? ಅವರಿಗಾಗಿಯೇ ಏರ್ಪಟ್ಟ ಇಂದಿನ ಪರಿಷತ್ತಿಗ ನಿರೂಪವೂ ಹೋಗಿದ್ದಿತು: ಜನರನ್ನೂ ಎರಡುಬಾರಿ ಕಳುಹಿದ್ದಿತು. ಆದರೂ ಅವರಾಗಲೀ, ಅವರ ಮನೆಯವರಾಗಲೀ ಮತ್ತು ಅವರ ಅನುಗಾಮಿಗಳಾಗಿರುವ ಅತಲುತೇಂದ್ರ, ಅವನ ತಂದೆ ಶರತ್ಕೇಂದ್ರ, ಅವನ ಪರಿವಾರದವರು, ಕಲೆಕ್ಟರ ಜ್ಞಾನಸಾರಚಕ್ರವರ್ತಿಗಳು ಇವರಲ್ಲ ಒಬ್ಬರಾಗಲೀ ಬಂದಿಲ್ಲ.

ಸ್ವಾಮಿ:—ಏನು? ಬಂದಿಲ್ಲವೆ? ಎಷ್ಟು ಧೈರ್ಯ? ಏನುವಾಹನ? ಎಂತಹ ವ್ಯಾಪಾರ? ಆಗಲಿ;— ಹೋಗಿದ್ದವರಾರು? ಏನುತ್ತರಕೊಟ್ಟರು?

ಪರಿಚಾರಕ:— ಮಹಾಸ್ವಾಮಿ! ವಾದಸೇವಕನು ನಾನೇ ಹೋಗಿ ಕರೆದೆನು. ನಗೇಶರಾಯನು. ತಾನು ಯಾವ ಅಧರ್ಮವನ್ನೂ ಆಚರಿಸಿಲ್ಲ ವಾದುದರಿಂದ ಪ್ರಾಯಶ್ಚಿತ್ತಕ್ಕೆ ಬರತಕ್ಕವನಾಗಿಲ್ಲವೆಂದೂ, ಮನೆಯವರನ್ನೂ ಕಳುಹುವಂತಿಲ್ಲವೆಂದೂ ಹೇಳಿದನು. ಆದರೆ ಅತನ ಮಗನೊಬ್ಬನು ಮಾತ್ರ ಬಂದು, ಮಹಡಿಯಕ್ಕೆ ಬಾರದೆ ಹೊರಗೆ ನಿಂತಿರುವನು. ಶರತ್ಕೇಂದ್ರನು ವಾರಕ್ಕೆ ಮೊದಲು ಯಾತ್ರಾರ್ಥಿಯಾಗಿ ಹೋದವನು ಇನ್ನೂ ಊರಿಗೆ ಬಂದಿಲ್ಲ. ಅತನ ಮನೆಯ ಹೆಂಗಸರು-ಮಕ್ಕಳು ಮಾತ್ರ ಬಂದು ಹೊರಪಳಿಯದಲ್ಲಿ ಕುಳಿತು ನೋಡುತ್ತಿರುವರು; ಅವರೂ ಗಂಡಸರ ಸಮ್ಮತಿಯಿಲ್ಲದೆ ಮತ್ತಾವ ಕೆಲಸವನ್ನೂ ಮಾಡುವರಲ್ಲವಂತೆ? ಕಲೆಕ್ಟರರು ಅಗತ್ಯವಾದ ರಾಜಕಾರ್ಯದಲ್ಲಿ ತೊಡಕಿಕೊಂಡಿರುವುದರಿಂದ ಬರುವಂತಿಲ್ಲವೆಂದೂ, ಇದಕ್ಕಾಗಿ ಸನ್ನಿಧಿಯಲ್ಲಿ ಕ್ಷಮೆಯನ್ನು ಕೋರುವೆನೆಂದೂ ಕೇಳಿಕೊಂಡರು. ಅಚಲಚಂದ್ರನೊಬ್ಬನು ಮಾತ್ರ ಯಾವಾಗಲೂ ಗುರುಪೀಠಕ್ಕೆ ನಿರುದ್ಯಾಚಾರಿಯೂ ಗಿಯೇ ಇರುವುದರಿಂದ ಅತನನ್ನು ಕರೆಯಲು ಹಿಂದೆಗೆದೆನು.

ಸ್ವಾಮಿಗಳು ನಿರುತ್ತರರಾಗಿ ವಿಶ್ವನಾಥಭಟ್ಟಾಚಾರ್ಯರನ್ನು ನೋಡಿದರು.

ವಿಶ್ವನಾಥಃ— ಎದ್ದುನಿಂತು ವಿನಯದಿಂದ ಕೈಜೋಡಿಸಿ,— "ಜಗದ್ಗುರು ಸಾಮಹೋದಯ, ಇಲ್ಲಿ ನೆರೆದಿರುವ ಪ್ರಜೆಗಳ ಪರವಾಗಿ ನನ್ನ ವಿನಂತಿಯೊಂದು:—

"ನಗೇಶರಾಯನು ಶುದ್ಧ ಪಾಷಂಡಮತದವನಾಗಿರುತ್ತಾನೆ. ಅತನು ವಿವಾಹೋಪನಯನಾದಿ ಸಂಸ್ಕಾರಗಳನ್ನು (ಧರ್ಮ) ನ್ಯಾಯಶಾಸ್ತ್ರಕ್ಕೆ ವಿರೋಧವಾಗಿ ನಡೆಸುವುದಲ್ಲದೆ, ಅನೇಕ ಅತ್ಯಾಚಾರಕ್ಕೂ ಕಾರಣನಾಗಿರುತ್ತಿದ್ದಾನೆ. ಮದುವೆಯಕಾಲವು ಮೀರಿದ್ದರೂ ಮಗಳನ್ನು ಹಾಗೆಯೇ ಬೆಳಸುತ್ತಿರುವನಲ್ಲದೆ,- -ಪ್ರಾಯಸಮರ್ಥನಾದ ಮಗನನ್ನೂ ಕೂಡ ಪ್ರಜಾಪತಿಯಾಗಿ ಮಾಡದೆ ಇನ್ನೂ ಬ್ರಹ್ಮಚಾರಿಯನ್ನಾಗಿಯೇ ಮಾಡಿಟ್ಟು, ಮನೆ ಬಾಗಿಲಿಗೆ ಬಂದು ಬೇಡುತ್ತಿರುವ ಕನ್ಯಾಪಿತೃಗಳೆಲ್ಲರನ್ನೂ ಅಪಮಾನಕ್ಕೆ ಗುರಿಪಡಿಸಿ ಕಳಿಸುತ್ತಿರುವನು. ಸಾಲದುದಕ್ಕೆ ಅವಳಾವಳೋ—ಅಜ್ಞಾತ ಗೋತ್ರದ ಭಿಕ್ಷುಕನ ಮಗಳು—ಅವಿವಾಹಿತೆಯಾದ ಸೋಡಶಿಯೊಬ್ಬಳನ್ನು ಬೀರೆ, ಮನೆಯಲ್ಲಿ ಕರೆತಂದಿಟ್ಟು, ಅವಳನ್ನು ಹುರಿದುಂಬಿ ಮುಂದೆ ನಿಲ್ಲಿಸಿ, ಅವಳ ಮೂಲಕ ಗುರು-ಹಿರಿಯರನ್ನೂ, ವೈಷ-ಬ್ರಾಹ್ಮಣರನ್ನೂ ವಿಶೇಷವಾಗಿ ನಿಂದಿಸುತ್ತಿರುವನು. ಇಸ್ಟೇ ಅಲ್ಲ! ಇನ್ನೂ ಎಸ್ಟೆಸ್ಟೋ ಅತಿಕ್ರಮಗಳಿಂದ ನಮ್ಮ ಜನಾಂಗಕ್ಕೂ ಈ ಪಟ್ಟಣಕ್ಕೂ ಮುಖ್ಯ ಶತ್ರುವಾದ ರಕ್ಕಸನಂತೆ ತಿರುಗಿ, ಹಣದ ಉತ್ಕಟದಿಂದ ಸೊಕ್ಕಿ, ಯಾರ ಗಣನೆಯೂ ಇಲ್ಲದೆ ತಿರುಗುತ್ತಿರುವನು. ಅವನ ಹಣಕ್ಕೆ ಬೆರೆದ ಇತರ ನಾಸ್ತಿಕರೂ, ಈಗಿನ ನಾಗರಿಕರೆಂದು ಹೆಸರ್ಗೊಂಡ ಅಧಿಕಾರಿಗಳೂ ಅವನಂತೆಯೇ ನಡೆಯುತ್ತಿರುವರು. ಹೀಗೆಯೇ ಬಿಟ್ಟರೆ, ಇನ್ನು ನಾಲ್ಕಾರು ತಿಂಗಳಲ್ಲಿಯೇ ಈ ಪಟ್ಟಣವೆಲ್ಲವೂ ನಾಸ್ತಿಕವಾವಿಗಳಿಂದ ಕಬಳಿಸಲ್ಪಡುವುದರಲ್ಲಿ ಅನುಮಾನವಿಲ್ಲ. ಈಗಾಗಲೇ ಎಸ್ಟೋ ಸೇವಾಕಾರ್ಯಗಳು ನಿಲ್ಲಿಸಲ್ಪಟ್ಟಿವೆ. ಮಠಕ್ಕೆ ಒರುತ್ತಿದ್ದ ವರಮಾನದಲ್ಲಿ ಈಗ ಅರೆವಾಲು ಕಡಿಮೆಯಾಗಿದೆ. ಸೇವೆ ಸಂತರ್ಪಣೆ-ಸಂಭಾವನೆ ಪಾಯಶ್ಚಿತ್ತಗಳಿಗೆಂದು ಒರುತ್ತಿದ್ದ ಆದಾಯದಲ್ಲಿ ಮೂರು ಪಾಲು ತಡೆಯಲ್ಪಟ್ಟಿವೆ, ಅವೆಲ್ಲವೂ ಜಲಾಶಯ-ನಿರ್ಮಾಣ-ಅನಾಥಾಲಯಸ್ಥಾಪನೆ ಮೊದಲಾದುವಕ್ಕೆಂದು ವಿನಿಯೋಗವಾಗುತ್ತಿವೆ. ಇನ್ನು ಳಿದಿರುವ ಅಲ್ಪಸ್ವಲ್ಪ ಭಾಗಕ್ಕಾದರೂ ಸೊನ್ನೆ ಸುತ್ತುವ ಏರ್ಪಾಟು ಹಗಲೂ

ಇರುಳೂ ನಡೆಯುತ್ತಿವೆ. ಹೆಚ್ಚೇಕೆ? ಒಟ್ಟಿನಲ್ಲಿ ನಗೇಶರಾಯನ ಪುಂಡಾಟದಿಂದ ಈ ಮಠಕ್ಕೂ ಸಮಾಜಕ್ಕೂ ಸಾವಿರಗಟ್ಟಲೆ ರೂಪಾಯಿಗಳವರೆಗೂ ನಷ್ಟವಾಗಿರುವುದಲ್ಲದೆ, ಇನ್ನೂ ಸರ್ವನಾಶವಾಗುವಂತೆ ಮಾಡುವ ಸೂಚನೆಯೂ ಇದೆಯೆಂದರೆ ಸಾಕು. ಇದೆಲ್ಲವೂ ಸುಳ್ಳೋ-ನಿಜವೋ, ನನ್ನ ಒಬ್ಬನ ಅಭಿಪ್ರಾಯ ಮಾತ್ರವೋ-ಎಲ್ಲರ ಅಭಿಪ್ರಾಯವೂ ಅಹುದೋ-ಎಂಬುದನ್ನು ಇಲ್ಲಿರುವವರ ಬಾಯಿಂದ ಕೇಳಬಹುದಾಗಿದೆ.'

ಸ್ವಾಮಿಗಳು ಮತ್ತೊಮ್ಮೆ ಕುತೂಹಲದಿಂದ ಸಭೆಯನ್ನು ನೋಡಿದರು. ಎಲ್ಲರೂ ಏಕಕಂಠದಿಂದ,—'ನಿಜ! ಭಟ್ಟಾಚಾರ್ಯರ ವಿನಂತಿಯೆಲ್ಲವೂ ನಿಜ! ಇದಕ್ಕೆ ನಾವೆಲ್ಲರೂ ಒಪ್ಪಿದ್ದೇವೆ. ಇವರ ವಿನಂತಿಯನ್ನು ಮಾನ್ಯಮಾಡದಿದ್ದರೆ ಧರ್ಮಚ್ಯುತಿಯಾಗದೆ ಬಿಡುವುದಿಲ್ಲವೆಂಬುದೇ ನಮ್ಮ ವಿನಂತಿಯೂ ಆಗಿರುವುದು. ಎಂದು ಕೂಗಿ ಹೇಳಿದರು. ಆಬಳಿಕ ಕೇಳಬೇಕೆ—ಸ್ವಾಮಿಗಳ ಸಂಭ್ರಮವನ್ನು ! ಅವರ ಆ-ಮುಪ್ಪಿನಲ್ಲಿಯೂ ಉತ್ಸಾಹ ಶಕ್ತಿಯುಕ್ಕೇರಿ ಬರುತ್ತಿದ್ದುದರಿಂದ ಘನಗಂಭೀರಸ್ವರದಲ್ಲಿ ಹೀಗೆ ನಿರೂಪಿಸಿದರು:—

ಪ್ರಿಯಶಿಷ್ಯರೇ!

ಈವರೆಗೆ ನಡೆದ ವಿಚಾರಗಳಿಂದ ಧರ್ಮವು ಶಿಥಿಲಸ್ಥಿತಿಗೆ ಬರುತ್ತಿರುವುದೆಂದೂ, ಅದಕ್ಕೆ ವಿದ್ಯಾಬುದ್ಧಿಗಳನ್ನು ಚೆನ್ನಾಗಿ ಕಲಿತು ಸಂಪನ್ನರೆನ್ನಿಸಿರುವವರೇ ಮುಂದಾಳುಗಳಾಗಿ ನಿಂತಿರುವರೆಂದೂ ತಿಳಿದು ವಿಷಾದಿಸಬೇಕಾಗಿರುವುದು. ಇದಕ್ಕಾಗಿ, ಪ್ರಜೆಗಳ ಕ್ಷೇಮಾಭ್ಯುದಯಕ್ಕಾಗಿ, ನಗೇಶರಾಯ ಮತ್ತು ಆತನ ಅನುಗಾಮಿಗಳಾಗಿರುವವರನ್ನೂ ಸರಿಯಾದ ಪ್ರಾಯಶ್ಚಿತ್ತಕ್ಕೆ ಗುರಿಮಾಡಬೇಕೆಂಬ ನಿಮ್ಮ ವಿನಂತಿಯನ್ನು ಮಾನ್ಯಮಾಡಿರುತ್ತೇವೆ. ಅದರಂತೆಯೇ ಈಗ ಉಂಟಾಗಿರುವ ಸಮಾಜದ ಶಾಂತಿಭಂಗ, ಮಠದ ಆದಾಯದ ನಿರೋಧ, ಇವುಗಳಿಗೆ ಪ್ರತಿಫಲವಾಗಿಯೂ, ಮತ್ತು ಮತಾಚಾರಗಳನ್ನು ಅತಿಕ್ರಮಿಸಿ, ವಿಧರ್ಮಿಯಾಗಿ ಬ್ರಹ್ಮತೇಜೋವಧೆಯೇ ಮೊದಲಾದ ಅನುಚಿತ ವ್ಯಾಪಾರಗಳಿಂದ ಇತರರನ್ನೂ ಕುಮಾರ್ಗದಲ್ಲೆಳೆಯುತ್ತಿರುವುದರ ಪ್ರತಿಫಲವಾಗಿಯೂ, ಆತನು ಗುರುಪೀಠಕ್ಕೆ ಐದುಸಾವಿರ ರೂಪಾಯಿಗಳನ್ನು ಒಪ್ಪಿಸಿ, ಅದರಿಂದ ಶಾಂತಿಕ್ರಿಯೆಗಳೆಲ್ಲವನ್ನೂ ನಡೆಯಿಸಿ, ಸನ್ನಿಧಿ

ಯಲ್ಲಿ ಅಪಚಾರ ಕ್ಷಮಾಪಣೆಯನ್ನು ಕೋರಿ, ಆ ಬಳಿಕ ಪರಿಶುದ್ಧನಾಗಬೇಕೆಂದು ವಿಧಿಸಿರುವುದು. ಅಲ್ಲದೆ, ಆತನು ಅಜ್ಞಾತಗೋತ್ರದವಳನ್ನು ಕೂಡಲೇ ಪರಿತ್ಯಾಗ ಮಾಡಬೇಕೆಂದೂ, ಮಗಳಿಗೆ ಈಗಲೇ ಶಾಸ್ತ್ರಸಮ್ಮತನಾಗಿ ವಿವಾಹ ಮಾಡಬೇಕೆಂದೂ ವಿಧಿಸಿರುವುದು. ಹೀಗೆ ಮಾಡುವುದು,-ಇಲ್ಲವೆ ಮಾಡುವೆನೆಂದು ಸಭಾಮಧ್ಯದಲ್ಲಿ ಪ್ರಮಾಣಪೂರ್ವಕವಾಗಿ ಹೇಳುವುದು; ಇವೆರಡರಲ್ಲಿ ಯಾವುದನ್ನಾದರೂ ಮಾಡಬೇಕು. ಇದನ್ನು ಮಾಡುವವರೆಗೂ ಅವರೊಡನೆಯಾಗಲೀ, ಅವರ ಹೆಂಡತಿ-ಮಕ್ಕಳು-ಪರಿವಾರದವರೊಡನೆಯಾಗಲೀ ಮತ್ತು ಅಡಲಾಂದ್ರ-ಶರಚ್ಚೆಂದ್ರರೇ ಮೊದಲಾದವರೊಡನೆಯಾಗಲೀ ಯಾರೂ-ಹೇಗೂ (ಸಹವಾಸ-ಸಂಸರ್ಗ) ಕಲೆಯಬಾರದೆಂದು ವಿಧಿಸಲ್ಪಟ್ಟಿದೆ. ಇದನ್ನು ಯಾರಿ ನಡೆದವರಿಗೂ ಇದೇ ಪ್ರಾಯಶ್ಚಿತ್ತವಾಗ ತಕ್ಕುದೆಂದು ಪುನಃ ಪುನಃ ಎಚ್ಚರಿಸಿದೆ.....'

ಸ್ವಾಮಿಗಳ ಬಾಯಿಂದ ಇನ್ನೂ ಅವಾವ ನಿರೂಪಗಳು ಹೊರಡುತ್ತಿದ್ದವೋ ತಿಳಿಯದು. ಆದರೆ, ಅಷ್ಟರಲ್ಲಿ ಆದೆಲ್ಲವನ್ನೂ ಕೇಳಿ ತಿಳಿವಷ್ಟರ ತಾಳ್ಮೆಯು ಸಭಿಕರಲ್ಲಿರಲಿಲ್ಲ. ನಗೇಶ ಮತ್ತು ಆತನ ಅನುಗಾಮಿಗಳಿಗಾದ ಶಾಸನಗಳಿಂದ ಅಲ್ಲಿದ್ದವರೆಲ್ಲರೂ ಹಬ್ಬದ ಹೋಳಿಗೆ-ಚಿತ್ರಾನ್ನದೂಟಗಳನ್ನು ತಿಂದುದಕ್ಕೂ ಹೆಚ್ಚಾದ ಸಡಗರದಿಂದ ಉತ್ತರೀಯಗಳನ್ನು ಹಾರಿಸುತ್ತಲೂ, ಕೈತಟ್ಟುತ್ತಲೂ ಬಳಿಯಲ್ಲಿರುವವರ ಬೆನ್ನಮೇಲೆ ಹೊಡೆಯುತ್ತಲೂ ಇನ್ನೂ ಬಗೆಬಗೆಯ ಉತ್ಸಾಹಪ್ರದರ್ಶನಗಳಿಂದ—'ಸಮ್ಮತವು-ಸಮ್ಮತವು; ನಮ್ಮೆಲ್ಲರಿಗೂ --ಇದು ಸಮ್ಮತವು. ನಿರೂಪವನ್ನು ಶಿರಸಾವಹಿಸಿ ನಡೆಯುವೆವು; ನಮ್ಮಲ್ಲಿ ಯಾರೂ ಅವರೊಡನೆ ವ್ಯವಹರಿಸುವುದಿಲ್ಲ. ಅವರು ಪ್ರಾಣಬಿಡುತ್ತಿದ್ದರೂ ನಮ್ಮವರು ಅವರಿಗೆ ಸಹಾಯವನ್ನೂ ಮಾಡುವುದಿಲ್ಲ.' ಎಂದೀ ಬಗೆಯಿಂದ ಕೂಗಿ ಕೂಗಿ ಹೇಳುತ್ತ ದೊಡ್ಡ ಸಂತೆಯ ಕೋಲಾಹಲವನ್ನೆಬ್ಬಿಸಿಬಿಟ್ಟರು.

ಸ್ವಾಮಿಗಳಿಗೆ, ವಾಪ, ಮುಂದೆ ಕ್ಷಣವೂ ತಡೆಯಲಾಗಲಿಲ್ಲ. ಕೋಲಾಹಲದ ಮಧ್ಯದಲ್ಲಿ ಇನ್ನು ಕುಳಿತಿರಲಾರದೆ, ಬೆವತು ಬೆವತು ಬೀಸತ್ತ ದೇಹಕ್ಕೆ ವಿಶ್ರಾಂತಿಯನ್ನುಂಟುಮಾಡಲು ಬೇರೆಕಡೆಗೆ ಸದ್ದಾಗದಂತೆ ಎದ್ದು ಹೊರಟು ಹೋದರು. ಸ್ವಾಮಿಯವರ ಅದೃಶ್ಯದಿಂದ ಅಲ್ಲಿದ್ದವರೆಲ್ಲರೂ

ಖತಿಗೊಂಡು ಸುಮ್ಮನಾಗಿ, ತೀರ್ಥಪ್ರಸಾದಗಳನ್ನು ಕೈಕೊಂಡು, ಸಮಾಜ ಶಾಸನದಪರವಾಗಿಯೂ, ಜಗದ್ಗುರು ಪೀಠದಿಂದ ಕೊಡಲ್ಪಟ್ಟ ನಿರೂಪದ ಪರವಾಗಿಯೂ ಬಗೆಬಗೆಯಾಗಿ ತಮ್ಮತಮ್ಮ ಬಗೆಗೊಪ್ಪುವಂತೆ ಟೀಕೆಗಳನ್ನು ಮಾಡುತ್ತ ನಿಜಗೃಹಗಳಿಗೆ ಅಭಿಮುಖರಾಗಿ ನಡೆದರು.

ಸುಹೃದಯರೀ!

ಇಂದಿನ ಸಮಾಜಶಾಸನವೆಂಬೀ ಪರಿಚ್ಛೇದವನ್ನು ವಿಲಿಖಿಸಿದುದ ಕ್ಕಾಗಿ, ನಿಮ್ಮಲ್ಲಿ ಅನೇಕರು ಅಗ್ರಹಯುಕ್ತರಾಗುವರಲ್ಲವೆ? ಆದರೆ, ನಾವು ಮಾಡತಕ್ಕದೇನು? ಇದ್ದ ಸಂಗತಿಯನ್ನು ಇದ್ದಂತೆ, ಕಂಡಂತೆ, ವಿವರಿಸಬೇ ಕೆಂದು ಭಗವನ್ನಿರೂಪವಾದುದರಿಂದ ಇದರಲ್ಲಿ ಸ್ವಲ್ಪವೂ ಹಿಂದೆಗೆಯದೆ ವಿಲಿ ಖಿಸಿ ಬಿಟ್ಟಿವು. ಅಗ್ರಹಪಡುವವರು ನೀವಾದರೆ, ದಯೆಯಿಟ್ಟು ಸ್ವಲ್ಪಮ ಟ್ಟಿಗೆ ನಿಮ್ಮ ತಿಳಿಗಣ್ಣಾಗಳನ್ನು ತೆರೆದು, ಸಮಾಜಗಳ ಮತ್ತು ಪೀಠಾಧಿಪತಿಗ ಳೆಂದು ಹೇಳಿಕೊಳ್ಳುತ್ತಿರುವವರ ಕಡೆಗೆ ನೋಡಿದರೆ, ಅಗಲಾದರೂ ಅಲ್ಲಿಯ ಅವಿಚಾರಗಳನ್ನು ತಿಳಿದು, ಶಾಂತರಾಗುವಿರೆಂದು ಧೈರ್ಯವಾಗಿ ಹೇಳುವೆವು.

॥ ಶ್ರೀಃ ॥

ನವಮ ಪರಿಚ್ಛೇದ.

(ಗೃಹಿಣೀ ಧರ್ಮ)

"ಲಕ್ಕಾ! ನಿನ್ನನ್ನು ಬಿಟ್ಟಿರುವುದು ಹೇಗೆ?"

"ಇದೇಕೆ? ಸುರಸೆ! ನಿನಗಿಷ್ಟೇಕೆ ಕಳವಳವು?"

"ಅಲ್ಲ; ನಂದನಕ್ಕ! ನನಗೆ ಮತ್ತೇನೂ ಕಳವಳವಿಲ್ಲ. ಪ್ರಾಣಕ್ಕಿಂತಲೂ ಹೆಚ್ಚಿನ ಪ್ರಿಯಭಗಿನಿಯಾಗಿರುವ ನೀನು ಹೊರಟುಹೊದರೆ, ನಾವು ಮತ್ತಾ ರಲ್ಲಿ ಸರಸವಾಡುವುದು? ಮತ್ತು 'ಅಕ್ಕ, ಅಮ್ಮ, ತಾಯಿ, ನಂದಿನಿ, ನಂದಾ'

ಎಂದು ಹಲವು ತೆರದಿಂದ ಯಾರನ್ನು ಕೂಗಿ ನಲಿಯುಬೇಕು? ನಮ್ಮನ್ನು ರೀತಿ—ನೀತಿಗಳಿಂದಲೂ, ಸರಸ ಪ್ರಸಂಗದಿಂದಲೂ ಪ್ರೋತ್ಸಾಹಿಸುವ ರಾರು?....."

"ಅದೇಕೆ, ಸುರಸೆ? ನಾನಿಲ್ಲದ ಮಾತ್ರಕ್ಕೆ ನಿಮಗೆ ಅದೊಂದೂ ಇಲ್ಲ ದೆಯೇ ಹೋಗುವುದೇನು! ನಿಮ್ಮ ನಿಮ್ಮ ಪತಿರಾಜರು, ಒಡಹುಟ್ಟಿದವರು, ಇತರ ಒಡನಾಡಿಯರು, ಇವರೆಲ್ಲರೂ ಬಳಿಯಲ್ಲಿಯೇ ಇರುತ್ತಾರಷ್ಟೆ?"

ಈಬಗೆಯ ಕಾತರೋಕ್ತಿ—ಪ್ರತ್ಯುಕ್ತಿಗಳು, ನಗೇಶರಾಯನ ಮನೆಯ ಮುಂಗಡೆಯ ತೋಟದಲ್ಲಿ, ಕಲ್ಲುಜಗಲಿಯ ಮೇಲೆ ಕುಳಿತಿದ್ದ ನಂದಿನಿಗೂ ಮತ್ತು ಗಿಳಿ—ಗಿಣಿ ವರ್ಷದ ಮತ್ತೊರ್ವ ತಾರುಣ್ಯವತಿಗೂ ನಡೆಯುತ್ತಿದ್ದುವು. ಈ ತರುಣಿಯೇ ಚಂದ್ರವದನೆಯ ಸುಕುಮಾರಿಯೂ, ಅಚಲ ಚಂದ್ರನ ತಂಗಿಯೂ, ಸ್ವರ್ಣಕುಮಾರಿಯ ನಚ್ಚಿನ ಗೆಳತಿಯೂ ಆದ ಸುರ ಸೆಯು. ನಂದಿನಿಯೂ ಸುರಸೆಯೂ ಇಬ್ಬರಲ್ಲದೆ ಮತ್ತಾರೂ ಅಲ್ಲಿರಲಿಲ್ಲ. ಇಬ್ಬರ ಮುಖದಲ್ಲಿಯೂ ಒಂದೊಂದು ಬಗೆಯ ಕೌತುಕವ್ಯೂ. ಕೌತುಕದ ಹಿಂದೆಯೇ ಮುಂದಿನ ವಿರಹವನ್ನು ಕುರಿತ ಕಾತರವೂ ತೋರಿಬರುತ್ತಿವೆ. ಇದರ ಕಾರಣವೇನೋ, ಇವರಿಬ್ಬರೂ ಇಲ್ಲಿ ಕುಳಿತು ಹೀಗೆ ಮಾತನಾಡು ವುದರ ಉದ್ದೇಶವೆಂತಹದೋ,ನಮಗೆಂತೂ ಈಗಲೇ ನಿರ್ಧರಿಸಿ ಹೇಳಲಳ ವಲ್ಲವಾಗಿದೆ. ಇರಲಿ; ತಾಳ್ಮೆಯೊಂದಿದ್ದರೆ, ಹೊಂಚಿ ನಿಂತು, ಇವರ ಸಂಭಾಷಣೆಯಿಂದಲಾದರೂ ತಿಳಿದುಕೊಳ್ಳಬಹುದಲ್ಲವೆ? (ಆಗಲಿ.)

ನಂದಿನಿ:—ಮತ್ತೊಮ್ಮೆ ಸುರಸೆಯ ಮುಖವನ್ನು ನೋಡಿ—"ಸುರಸೆ! ಏಕೆ ಮಾತಿಲ್ಲ? ಹೇಳು, ಕೇಳುವ! ಒಂದುವೇಳೆ ನಾನಿಲ್ಲವೆಂದೇ ಭಾವಿಸುವ ಪಕ್ಷದಲ್ಲಿಯೂ, ನಿನಗೆ ಸರಸ ಪ್ರಸಂಗಕ್ಕಾಗಲೀ, ಕಾಲೋಚಿತಸೂಚನೆಗಳಿ ಗಾಗಲೀ, ಜನರಿಲ್ಲವೆಂದಿರುವೆಯೋ, ಏನು?"

ಸುರಸೆ:—ಜನರೂ ಇರುವರು; ಪ್ರಸಂಗವೂ ನಡೆಯುವುದು. ಆದರೆ,...

ನಂದಿನಿ:—ಆದರೆ.....ಏನು? ಅಷ್ಟಕ್ಕೇ ತಡೆಯೇಕೆ? ಮಾತನ್ನು ನುಂಗಿ ನುಂಗಿ ಹೇಳುತ್ತಿರುವ ಕಾರಣವೇನು? ಹೇಳಬಾರದೆ, ತಂಗಿ?

ಸುರಸೆ:—ನಂದಿನಿ! ನಾನು ಏನನ್ನೂ ವಿವರಿಸಿ ಹೇಳಲಾರೆನು. ಏಕೆಂ ದರೆ,— ನಿನ್ನಲ್ಲಿ ನಾನು ಈವರೆಗೆ ಒಂದು ಅಲ್ಪಾಂಶವನ್ನೂ ಬಿಡದೆ, ಎಂತಹ

ರಹಸ್ಯವಿಷಯವನ್ನಾಗಲೀ ತಿಳಿಸುತಿದ್ದೆನು. ಎಷ್ಟೋದಿನ, ನಮ್ಮ ಸತಿ-ಪತಿಯರ ಸಂವಾದವನ್ನು ಕೂಡ ಯಥಾವತ್ತಾಗಿ ತಿಳಿಸಿರುವೆನು. ಅದಕ್ಕೆ ತಕ್ಕಂತೆ ಮುಂದೆ ನಾನು ವರ್ತಿಸಬೇಕಾದ ಕ್ರಮವೆಂತಹದೆಂಬುದನ್ನು ನಿನ್ನಿಂದ ಕೇಳಿ ತಿಳಿದುಕೊಂಡೂ ಹೋಗಿರುವೆನು. ಹೆಚ್ಚೇಕೆ, ನಾನು ನಮ್ಮ ತಾಯಿಯ ಬಳಿಯಲ್ಲಿಯೂ ನಿನ್ನಲ್ಲಿಟ್ಟಿರುವ ಸಲಿಗೆಯನ್ನು ತೋರಿಸುತ್ತಿಲ್ಲ. ಅವರ ಹಿತೋಪದೇಶಗಳನ್ನು ಮಾತ್ರವೇ ಕೇಳುತ್ತಿರುವೆನಲ್ಲದೆ, ಅವರಲ್ಲಿ ಅತಿಯಾಗಿ ಪ್ರಸಂಗಿಸುವುದಕ್ಕೂ ನನ್ನ ಮನಸ್ಸು ಮುಂದೋಡುತ್ತಿಲ್ಲ. ಇನ್ನು ತಂದೆಯ ಬಳಿಯಲ್ಲಿ ಹೇಗಿರುವೆನೆಂದು ಬೇರೆ ಹೇಳಬೇಕೆ?

ನಂದಿನಿ:— ಅದೆಲ್ಲವೂ ಸಹಜವೇ! ಸಹಚಾರಿಣಿಯರೂ, ಸಮಾನ ವಯಸ್ಯೆಯರೂ, ಅಕೃತ್ರಿಮ ಸ್ನೇಹಾನುಬಂಧಿಗಳೂ ಆದ ಸಪ್ತೋಜನರಲ್ಲಿ, ತಮ್ಮ ಅಂತರಂಗವೆಳ್ಳಷ್ಟನ್ನೂ ಮುಚ್ಚಿಡದೆ ಹೇಳುವುದೂ, ಅದಕ್ಕಾಗಿ ಬೇಕಾದ ಹಿತಸೂಚನೆಗಳನ್ನೂ ಸಹಾಯಸಾಧನೆಗಳನ್ನೂ ಅವರಿಂದ ಹೊಂದುವುದೂ ಲೋಕದ ಸ್ವಭಾವವೇ ಆಗಿದೆ. ಇದು ನಿನಗೆ ಮಾತ್ರವಲ್ಲ. ಅದೆಲ್ಲಾ ಹಾಗಿರಲಿ. ನಾನು ನಿನಗೆ ಸಖಿಯಾದುದು ಈಗ ಎರಡು ವರ್ಷಗಳಿಂದೀಚೆಗೆ; ಅದಕ್ಕೂ ಮೊದಲಿಂದಲೇ ನಮ್ಮ ಸ್ವರ್ಣಿಯು ನಿನ್ನ ಸಖಿಯಾಗಿರುವಳಷ್ಟೆ! ಅವಳಿಲ್ಲಿಯೇ ಇರುವಾಗ ನಿನಗೇನು ಕೊರತೆ?

ಸುರಸೆ:—ನಂದಿನಿ! ಹೊತ್ತುಹೋಗದ ಕೊರತೆಯಲ್ಲ! ನಿಜವಾಗಿಯೂ ದೇಶದ ಮತ್ತು ದೇಶಭಗಿನಿಯರ ಹಿತಕ್ಕಾಗಿಯೇ ತಪಃಕ್ಲೇಶವನ್ನು ಸಹಿಸಿ, ಚಿರಬ್ರಹ್ಮಚಾರಿಣಿಯಾಗಿರುವ ನಿನ್ನಲ್ಲಿ, ಈಗ ಎರಡು ವರ್ಷಗಳಿಂದಲೂ, ಒಡನಾಡಿ, ಒಡನಿದ್ದು, ಬಗೆಬಗೆಯಾಗಿ ಕಾಡಿ ಬೇಡಿ, ಸಾಕುಮಾಡುತ್ತ, ನಿನ್ನ ಅಕ್ಷಯವಾದ, ಅಮೃತತುಲ್ಯವಾದ, ಸುಬೋಧವಾದ ದಿವ್ಯವಾಣಿಯನ್ನು ಕೇಳಿ-ಕೇಳಿ ನಲಿದಾಡುತ್ತಿದ್ದೆವು. ನಿನ್ನೊಡಗೂಡಿ ಆಡಿ-ಪಾಡಿ ಕಳೆದ ಈ ಎರಡು ವರ್ಷಗಳೂ ನಮಗೆ ಎರಡು ಗಳಿಗೆಯಂತೆಯೇ ತೋರಿ-ತೋರುತ್ತಿವೆ. ಆದರೆ, ಈ ಊರ ಪಾಪಿ-ಚಂಡಾಲಜನರ ಕಿರುಕುಳದಿಂದ ಈಗ ನಮ್ಮೆಲ್ಲರಿಗೂ ನಿನ್ನ ವಿರಹವ್ಯಥೆಯುಂಟಾಗುವಂತೆ ತಿಳಿದು, ಈಬಗೆಯ ಕಳವಳಕ್ಕೆ ಕಾರಣವಾಗಿದೆ. ನಾನು ಒಬ್ಬಳು ಹೇಳುವ ಮಾತಲ್ಲ. ನನ್ನ ನಾದಿನಿ ಪರಿಮಳೆ ಮೊದಲ್ಗೊಂಡು ನಮ್ಮ ಒಡನಾಡಿಯು

ರೆಲ್ಲರ ಬಾಯಿಂದಲೂ ಅದೇ ಮಾತೇ! ಕಡೆಗೆ ನನ್ನ ಸ್ವಾಮಿಯ ಬಾಯಿಂದ ಕೂಡ ಈಮಾತೇ ಹೊರಬೀಳುತ್ತಿದೆ.

ನಂದಿನಿ:—ಸುರಸೆ! ನನ್ನ ತಲೆಯ ಮೇಲೆ ಅಂತಹ ಮಹಿಮಾಪ್ರಕಾಶಕವಾದ ಕಿರೀಟವೇನೂ ಇರುವುದಿಲ್ಲ. ನಾನೂ ಎಲ್ಲರಂತೆಯೇ ಒಬ್ಬ ಮೂಢ ಹೆಂಗಸು ಮಾತ್ರವಾಗಿರುತ್ತೇನೆ. ಅಲ್ಲದೆ. ಕಾಡಿನಲ್ಲಿಹುಟ್ಟಿ, ಕಾಡಿನಲ್ಲಿಯೇ ಬೆಳೆದು, ಕಾಡಿನಲ್ಲಿಯೇ ಅಲೆದಲೆಯುತ್ತಿದ್ದ ನನಗೆ, ಕಷ್ಟ-ಕ್ಲೇಶಗಳು ಹೇಗೆ ತೊಳೆಯಬೇಕು? ಯಾವಕಾಲಕ್ಕೆ ಯಾವಬಗೆಯ ಅನುಭವವು ಮುಂದಾಗುವುದೋ, ಅದರಲ್ಲಿಯೇ ಪೂರ್ಣ ಸಮಾಧಾನದಿಂದ ಗಮನವಿಡುವೆನಲ್ಲದೆ, ಅದನ್ನು ದ್ವೇಷಿಸುವುದು ನನ್ನ ಶೀಲವಾಗಿಲ್ಲ. ಹಾಗೆ ದ್ವೇಷಿಸುವ ಪಕ್ಷದಲ್ಲಿ ನನಗೆ ಪ್ರತಿಯೊಂದು ವಿಚಾರವೂ,ಆತಂಕವನ್ನೇ ಹೆಚ್ಚಿಸುತ್ತ ಬರುವುದಲ್ಲದೆ. ಸುಖ-ಸಮಾಧಾನಗಳನ್ನು ಕೊಡಲಾರವು.

ಸುರಸೆ:—ನಿನ್ನ ತಲೆಯ ಮೇಲೆ ಕಿರೀಟವಿದೆಯೋ-ಇಲ್ಲವೋ, ನನಗೆ ತಿಳಿಯದು. ಹೇಗೂ ಕೀರೀಟಕ್ಕೆ ಪ್ರತಿಯಾಗಿ ಅದ್ಭುತವಾದ ಆಕರ್ಷಣಾಶಕ್ತಿಯೊಂದು ನಿನ್ನಲ್ಲಿ ಅದೃಶ್ಯರೂಪದಿಂದ ಸಾಕ್ಷಾತ್ಕರಿಸಿರುವುದೆಂದು ಮಾತ್ರ ಧೈರ್ಯವಾಗಿ ಹೇಳಬಲ್ಲೆನು. ಇಲ್ಲದಿದ್ದರೆ ನೀನು ಇಲ್ಲಿಗೆ ಬಂದು ಎರಡು ವರ್ಷದೊಳಗಾಗಿ ನಿನ್ನ ಪ್ರಭಾವವು ಇಷ್ಟುದೂರ ಪ್ರಸಾರವಾಗುತ್ತಿರಲಿಲ್ಲ. ನೀನು ಕಾಡುಹೆಂಗಸಿನಂತಿದ್ದರೇನು? ನವನಾಗರಿಕತೆಯ ಬೆಡಗನ್ನು ಸರಸವಾಗಿ ವರ್ಣಿಸುವೆಯಲ್ಲ! ಅದೊಂದೇ ನಿನ್ನ ಪ್ರಜ್ಞಾವಿಶೇಷಣದ ಹೆಗ್ಗುರುತಲ್ಲವೋ? ಅದೂ ಹಾಗಿರಲಿ; ಎಂತಹ ಕಠಿಣ ಪ್ರಸಂಗದಲ್ಲಿಯೂ ನೀನು ಎದೆಗೆಡದೆ, ಸ್ಥಿರತೆಯಿಂದಲೂ, ಆಮೋದದಿಂದಲೂ ಹೇಳುತ್ತಿರುವ ವ್ಯಂಗ್ಯೋಕ್ತಿ, ಶ್ಲೇಷೋಕ್ತಿ, ಅನ್ಯಾಪದೇಶಸ್ತುತಿ, ವ್ಯಾಜಸ್ತುತಿ ಮೊದಲಾದ ಬಹ್ವರ್ಥದ್ಯೋತಕ ಪದಗಳನ್ನು ಸರಸವಾಗಿ ಜೋಡಿಸಿ ಹೇಳುವ ಚತುರತೆಯನ್ನು ತೋರಿಸಿ, ಎಂತಹ ಪಂಡಿತರನ್ನಾಗಲೀ ಕ್ಷಣಮಾತ್ರದಲ್ಲಿ ಅಪ್ರತಿಭರಾಗುವಂತೆ ಮಾಡುತ್ತಿರುವೆಯೋ, ಅಂತಹ ಚಾತುರ್ಯವನ್ನು, ಮತ್ತಾರಲ್ಲಿಯಾದರೂ ತೋರಿಸಿಕೊಟ್ಟಿರೆ, ಆಗಲೀಗ ನೀನೂ ಸ್ತ್ರೀಸಾಮಾನ್ಯದಲ್ಲಿ ಒಬ್ಬಳಾಗಿರುತ್ತೀಯೆಂದೂ, ನೀನೂ ಒಬ್ಬ ಬರಬುತನದ ಕಾಡುಹೆಂಗಸೇ ಸರಿಯೆಂದೂ ಹೇಳಿಕೊಳ್ಳಬಹುದು. ಆ ವರೆಗೆ ಮಾತ್ರ, ನೀನು ಇಂತಹ ಅತ್ಮನಿಂದೆಯನ್ನು

ಮಾಡಿಕೊಳ್ಳುವುದು ನಮಗೆ ರುಚಸಲಿಕ್ಕಿಲ್ಲವೆಂದೇ ಹೇಳುವೆನು. ಇದು ಸುಳ್ಳಲ್ಲ.

ನಂದಿನಿ:—'ಓಹೋ! ಎಷ್ಟುದ್ದದ ಹೊಗಳಿಕೆ? ಸುರಸೆ! ಯಾರಿಗೆ ಈ ಸ್ತುತಿ? ಯಾರಲ್ಲಿ ಆಕರ್ಷಣಾಶಕ್ತಿ? ಯಾರಲ್ಲಿ ಸ್ಪಿರತೆ?.....ಎಲ್ಲವೂ ಭಗವತಿಗೆ, ಆ ತಾಯಿಯು ಅಪಾರವಾದ ವಾತ್ಸಲ್ಯಕ್ಕೆ, ಅವಳಾ ಅತ್ಯದ್ಭುತವಾದ—ಅಖಂಡವಾದ—ತೇಜಸ್ಸಿಗೆ ನೀವೇದಿತವಾಗಬೇಕಲ್ಲದೆ, ನನಗೇನೂ ಸಲ್ಲುವಂತಿಲ್ಲ. ಅದು ಹಾಗಿರಲಿ; ನಮ್ಮ ಅಚಲಚಂದ್ರನು ನನ್ನ ವಿಷಯವಾಗಿ ಹೇಳುವುದೇನು?'

ಸುರಸೆ:—ಹೇಳುವುದೇನು? ತಿಳಿದೇ ಇದೆ! ಭಗವತಿಯು ಅಂಶರೂಪವೇ ನಂದಿನಿ: ಅವಳ ಸಂದರ್ಶನ-ಸಂಭಾಷಣ-ಸಹವಾಸಗಳೇ ಸಾಕ್ಷಾತ್ ಜಗನ್ಮಾತೆಯ ಅನುಗ್ರಹಕ್ಕೆ ಸಾಧನಗಳು. ಅವಳ ಸಹಚರ್ಯೆಯೇ ನಮ್ಮ ಸೋದರಿಯರ ಜ್ಞಾನಸಂವಾದನೆಗೆ ಮುಖ್ಯಮಾರ್ಗವು. ಅವಳ ಉಪದೇಶವನ್ನು ಸಾವಧಾನದಿಂದ ಸಂಗ್ರಹಿಸಿ, ಅದರಂತೆ ನಡೆವುದೇ ಗೃಹಿಣಿಯರ ಅಭ್ಯುದಯಕ್ಕೆ ಮೂಲಮಂತ್ರ.....ಅಷ್ಟೇ ಅಲ್ಲ! ನಂದಿನಿಯು ನಮ್ಮೆಲ್ಲರಿಗೂ,——

ನಂದಿನಿ:—ಸುರಸೆಯ ಮುಖವನ್ನು ನೋಡಿ, ದರ್ಪತಸ್ವರದಿಂದ—'ಸುರಸೆ! ಸಾಕು, ನಿಲ್ಲಿಸು! ಈ ಹೊಗಳಿಕೆಯನ್ನು ವಿನಯಿಸೆಂದು ನಿನಗೆ ಹೇಳಲಿಲ್ಲ. ನಾನು ನಿಮ್ಮೆಲ್ಲರನ್ನೂ ಬಿಟ್ಟುಹೋಗುವ ವಿಚಾರದಲ್ಲಿ ಆತನೇನು ಹೇಳುವನೋ, ಅದನ್ನು ಹೇಳೆಂದೆನಲ್ಲದೆ, ಇದನ್ನು ಕೇಳಲಿಲ್ಲ.'

ಸುರಸೆ:—ಹಾಗೋ? ನನಗದು ಚೆನ್ನಾಗಿ ಹೊಳೆಯಲಿಲ್ಲವಾದುದರಿಂದ ಇದನ್ನು ಹೇಳಿದೆನು. ಇದರಲ್ಲಿ ತಪ್ಪೇನು? ನನ್ನನ್ನು ಮಂದಪ್ರಜ್ಞೆಯೆಂದು ನೀನು ತಿಳಿದೇ ಇರುವೆ!

ನಂದಿನಿ;—ಬಲ್ಲೆ: ಸುರಸೆ! ನೀನು ಮಾತಿನಮಲ್ಲೆಯೆಂಬುದನ್ನು ನಾನು ಮೊದಲಿಂದಲೂ ಚೆನ್ನಾಗಿ ಬಲ್ಲೆನು. ಅಚಲಚಂದ್ರನಿಗೆ ತಂಗಿಯಾಗಿರುವವಳನ್ನು ಮಾತಿನಲ್ಲಿ ಕೇಳಬೇಕೆ? ಅದಿರಲಿ; ಮತ್ತೆಮತ್ತೆಯೂ ಇದೇಕಣಿಯನ್ನೇ ತೆಗೆದು ತೆಗೆದು ಕಾಲಹರಣಮಾಡಬೇಡ! ಮೊದಲು, ನಾನು ಕೇಳಿದ ಮಾತಿಗೆ ಉತ್ತರವು ಬರಲಿ.

ಸುರಸೆ:—ಹೇಗಾದರೂ ಹೇಳು; ನನಗೆ ಕೊರತೆಯಿಲ್ಲ. ನನ್ನ ಅಣ್ಣನಾದರೆ,—'ನಂದಿನಿಯು ಎಲ್ಲಿದ್ದರೂ ನನಗೆ ಕೇವಲ ಸಮೀಪದಲ್ಲಿರುವಂತೆಯೇ ತಿಳಿಯುವುದು. ಅವಳು ಈ ಊರಲ್ಲಿರುವಾಗ ಅವಳ ಸಂದರ್ಶನ-ಸಂಭಾಷಣಗಳು ಎಷ್ಟು ಸುಲಭವಾಗಿ ದೊರೆಯುವವೋ, —ಅಷ್ಟೇ ಸುಲಭವಾಗಿ, ಅಥವಾ ಅದಕ್ಕೂ ಹೆಚ್ಚಿನ ಸುಲಭರೀತಿಯಿಂದ ಅವಳ ಸರಸ ಪ್ರಸಂಗವು ನನಗೆ ದೊರೆಯುತ್ತದೆ. ಅದಲ್ಲದೆ ಅವಳು ಇಲ್ಲಿರುವಾಗ ಹೋಗಿ ನೋಡಬೇಕೆಂದರೆ, ನನ್ನ ಸಂಗಡಿಗಳು ತಾವೂ ಬರಬೇಕೆನ್ನುತ್ತಿರುವುದರಿಂದ ಅವರನ್ನು ವಂಚಿಸಿ ಹೋಗಬೇಕಾಗುತ್ತದೆ. ಹಾಗೆ ಬಂದುಮೇಳೆ ಅವಳು ಅಲ್ಲಿಂದ ಮತ್ತೆ ಹೊರಟು ಹೋದರೆ ಅವಳ ತಂದೆಯ ಒಳಿಗೇ ಹೋಗುವಳು. ಹಾಗಾದರೆ ನನಗೆ ವಾರಕ್ಕೊಂದಾವರ್ತಿಯಾದರೂ ತಪ್ಪದೆ 'ಗುರು ಪಾದಸೇವೆ, ಮಾತೃಮಂದಿರದ ವಾಸದಿಂದಾಗುವ ಪವಿತ್ರತೆ, ನಂದಿನಿಯ ಸರಸಪ್ರಸಂಗ ಲಾಭದಿಂದಾಗುವ ಉತ್ಸಾಹ," ಎಂಬೀ ಲಾಭತ್ರಯುಗಳು ದೊರೆಯಂತಾಗುವುವು. ಹೀಗಿರುವಾಗ ನನಗೇಕೆ ಚಿಂತೆ?" ಎಂದು ಹೇಳತ್ತಿರುವನು. ಆತನಾದರೂ ಗಂಡಸು; ಬೇಕೆಂದು ತೋರಿದಾಗಲೇ, ಎಲ್ಲಿಗಾದರೂ ಹೋಗಿ ಬರಬಲ್ಲನು. ಹೆಂಗಸರಾದ ನಮಗೆ ಹಾಗಾಗುವುದೇನು? ಮನೆಯಿಂದ ಮತ್ತೊಬ್ಬರ ಮನೆಗೆ ಹೋಗಬೇಕೆಂದರೆ ಕೂಡ, ಎಷ್ಟೋ ಹೊತ್ತು ಸವರಿಸಬೇಕಾಗುತ್ತದೆ. ಹಾಗೆಂದಬಳಿಕ, ಊರುಬಿಟ್ಟು ಹೊರಡುವುದಕ್ಕೆ, ಅದರಲ್ಲಿಯೂ ಎಲ್ಲಿಯೋ ಬಂದು ಕಾಡುಸೀಮೆಯಲ್ಲಿರುವವರನ್ನು ನೋಡಲು ಹೊರಡಬೇಕೆಂದರೆ, ಹೇಗಾಗುವುದು? ಸಹಾಯಕ್ಕೆ ಬರುವವರಾರು? ಸುಮ್ಮತಿಯನ್ನು ಕೊಡುವವರಾರು? ಇದೇ ನಮಗೆ ಹಿಡಿದಿರುವ ಕಳವಳವು. ಇದಕ್ಕೋಸ್ಕರವೇ ನಾನು ಹಾಗೆ ಹೇಳಿದುದು.

ನಂದಿನಿ:—ತಲೆದೂಗಿ 'ಛಲೆ! ಸುರಸೆ! ಛಲೆ!! ನೀನೂ ನಿಪುಣೆ; ನಿನ್ನ ಅಣ್ಣನಂತೂ ನಿಪುಣರಿಗೆಲ್ಲಾ ಉಪದೇಶಿಯೇ ಸರಿ. ಹೇಳಿ-ಕೇಳುವುದೆಲ್ಲವನ್ನೂ ಚಾಟೂಕ್ತಿಯಿಂದ ಎಷ್ಟು ಚೆನ್ನಾಗಿ ಹೇಳುತ್ತಿರುವೆ? ಅಬ್ಬ! ನೀನೇನು, ಸಾಮಾನ್ಯದವಳೇನು? ಸುಧಾರಕಾಗ್ರಣಿಗಳಾದ ಶರಚ್ಚಂದ್ರನಾಥರವರ ಪುತ್ರಿ; ಕಾಲ-ದೇಶ-ವರ್ತಮಾನಗಳ ಸ್ಥಿತಿ-ಗತಿ-ವಿಚಾರಗಳನ್ನು ತಿಳಿದ ಪ್ರಜ್ಞಾವಂತನಾದ ಅಚಲಚಂದ್ರನ ನಚ್ಚಿನ ತಂಗಿ; ಮತ್ತೂ ಧರ್ಮಸೂಕ್ಷ್ಮ

ಮನ್ನೂ, ನಾಗರಿಕತೆಯ ತಿರುಳನ್ನೂ ತಿಳಿದಿರುವ ಕಲೆಕ್ಟರರ ಹಿರಿಯಸೊಸೆ; ಸಾಲದುದಕ್ಕೆ ನಿನ್ನ ಪತಿರಾಜನೆಂದರೆ, ನವನಾಗರಿಕತೆಯ ಮಂತ್ರಮೂರ್ತಿಯೇ ಆಗಿರುವನು. ಇಂತವರೆಲ್ಲರಿಂದಲೂ ಶಿಕ್ಷಿತೆಯಾಗಿರುವ ನಿನ್ನಲ್ಲಿ ನಿವು ಣಾತೆಯನ್ನು ಕೇಳಬೇಕೆ?

ಸುರಸೆ:—ಲಜ್ಜೆಯಿಂದ ತಲೆತಗ್ಗಿಸಿ,—'ನಂದಿನಿ! ನೀನು ಹಾಸ್ಯಮಾಡುವುದನ್ನು ನಿಡುವುದೂ ಇಲ್ಲ; ಅವರು ತಮ್ಮ ಪೋಜುಗಾರಿಕೆಯನ್ನು ಕಡಿಸಿ ಮಾಡುವಂತೆಯೂ ಕಾಣಲಿಲ್ಲ. ಇದಕ್ಕೆ ನಾನೇನು ಮಾಡಬೇಕು?'

ನಂದಿನಿ:—ಪರಿಹಾಸದಿಂದ,—'ನೀನು ಮಾಡುವುದಿನ್ನೇನು, ತಂಗಿ? ಮನೆಯಲ್ಲ ಅಳು—ಕಾಳುಗಳಿಗೆ ಕೊರತೆಯಿಲ್ಲ. ಕೆಲಸ ಮಾಡಬೇಕೆಂಬ ಕಳವಳವು ಹತ್ತಿರಕ್ಕೂ ಬರುವಂತಿಲ್ಲ. ಕುಳಿತ ಕಡೆಗೆ ಬೇಕೆಂದರೂ ಕಪಳವು ಸಿದ್ಧವಾಗುವುದು. ಮತ್ತು ನೀರು ಮಡಿ ಮುಂತಾದವುಗಳಿಗೆಂದರೆ, ಮನೆಯಲ್ಲಿ ಹೆಜ್ಜೆಹೆಜ್ಜೆಗೂ ಪಲ್ಲಿಗಳಿವೆ. ಇಷ್ಟೆಲ್ಲಾ ಅನುಕೂಲತೆಗಳಿದ್ದೂ ನೀನು ಇಷ್ಟೇಕೆ ಕಷ್ಟಪಡಬೇಕು? ಬೊಜ್ಜುಬೆಳೆವಂತೆ ಕುಳಿತೆದ್ದೆಯಲ್ಲೆಯೇ ಕುಳಿತು, ಲಲ್ಲೆ ಚೆಟ್ಟಾಟಿಗಳಲ್ಲಿ ಕಲೆತು, ಅವರಿವರ ಮನೆಯಾಡಳಿತಗಳಲ್ಲಿ ನೂರಾರು ಕೊರತೆಗಳನ್ನು ಕಲ್ಪಿಸಿ ಹೇಳಿ ನಲಿಯುತ್ತ, ಆಶ್ರಿತವರ್ಗದವರನ್ನು ಬಯ್ಯುತ್ತ, ತಮ್ಮ ಕಾಲ ಮತ್ತು ಧನವನ್ನು ವಿಷಯಪ್ರಸಂಗದಲ್ಲಿಯೂ, ವೇಷ ಭೂಷಣಾದಿ ವಿಡಂಬನ ಕಾರ್ಯದಲ್ಲಿಯೂ ವಿನಿಯೋಗ ಮಾಡುತ್ತಿರುವ ಹಣಗಾರರ ಮನೆಯ ಹೆಂಗಸರನ್ನು ನೋಡಿ, ಅವರಂತೆಯೇ ನೀನೂ ಒಬ್ಬಳಾಗಿರಲು ಪ್ರಯತ್ನಮಾಡು. ಬೆಳಿಗ್ಗಾಯ್ತೆಂದರೆ ಹಾಸಿಗೆಯಿಂದೇಳುವುದೇ ತಡೆ. ಹೊಟ್ಟೆಯಪಾಡನ್ನು, ಎಂದರೆ ಆಹಾರ ಮತ್ತು ಪಾನೀಯಗಳನ್ನು ಬೇಗಬೇಗ ಮುಗಿಸಿಕೊಂಡು, ನಿನ್ನ ಪತಿಯೊಡನೆ ಪ್ರಸಂಗಕ್ಕೆ ಪೊದಲು ಮಾಡು; ಆಬಳಿಕ ಶೃಂಗಾರ ಮಾಡಿಕೊ. ಅದಾಯಿತೆಂದರೆ, ಪರಿಮಳವನ್ನು ಲೇಪಿಸಿಕೊಂಡು, ವೀಣೆ—ತಂಬೂರಿ—ಪಿಟೀಲು—ಹಾರ್ಮೋನಿಯಮ್—ಪಿಯಾನ ಮೊದಲಾದ ವಾದ್ಯವಿಶೇಷಗಳನ್ನು ಮುಂದಿಟ್ಟು, ಒಂದೊಂದರಲ್ಲಿ ಒಂದೊಂದು ಚರಣವನ್ನಾದರೂ ನುಡಿಯಿಸು; ಆಬಳಿಕ ಕಸೂತಿ-ಹೆಣಿಗೆ-ಬಿತ್ತದ ಕೆಲಸಗಳನ್ನೂ (ಅದರಲ್ಲಿ ಅಷ್ಟು ನಿರ್ಬಂಧವಿಲ್ಲ; ಬೇಕಾಗಿದ್ದರೆ) ಮಾಡು. ಇಷ್ಟೆಲ್ಲವನ್ನೂ ಮಾಡುತ್ತಿದ್ದರೂ, ನಡುನಡುವೆ ಹೊಟ್ಟೆಗೆ

ತುಂಬುವುದನ್ನೂ ಮರೆತಿರಬಾರದು. ಇದೆಲ್ಲವೂ ಮುಗಿಯುವ ವೇಳೆಗೆ, ಅಗಲೇ ರಾತ್ರಿಯೂ ಆಗುತ್ತದೆ. ಅಬಳಿಕಂತೂ ನೀವು ಮಾಡುವುದಿನ್ನೇ ನಿದೆ?'

ಸುರಸೆ:—ನಂದಿನಿ! ನಿನಗೆ ಚಿಲ್ಲಾಟವಾಗಿದೆ. ನನಗೆಂದರೆ ಪ್ರಾಣ ಹೋಗುತ್ತಿದೆ. ಅವರ ಬಳಿಯಲ್ಲಿರುವಾಗ ಅವರು ಹೇಳುವಂತೆ ಕೇಳದಿದ್ದರೆ, ನನ್ನ ಅವಸ್ಥೆಯು ಹೇಗಾಗುವುದೋ ಎಂಬ ಭೀತಿ; ಹಾಗೂ ಧೈರ್ಯ ಹೊಂದಿ ಅವರಿಗೆ ನೀತಿಯನ್ನು ಹೇಳಬೇಕೆಂದು ಮನದಲ್ಲಿ ನಿಶ್ಚಯಿಸಿಕೊಂಡಿದ್ದರೂ, ಇದಿರಿಗೆ ಕಂಡಾಗ ನಾಲಿಗೆ ಹಿಂದಕ್ಕೆಳೆಯುತ್ತಿರುವುದಲ್ಲದೆ, ತಾಯ್ತಂದೆಗಳ ಮಾತನ್ನೇ ಕೇಳದವರಿಗೆ ನನ್ನ ಮಾತು ಗಣನೆಯಾಗುವುದೇನಂಬ ಶಂಕೆಯೂ ಹುಟ್ಟಿ, ಮನದಲ್ಲಿ ಮಾಡಿಟ್ಟ ಮಂಡಿಗೆಯನ್ನು ಹಾಗೆಯೇ ಮುಗಿಸಿಬಿಡಬೇಕಾಗುತ್ತದೆ. ಅವರ ಬಳಿಯಲ್ಲಿಲ್ಲದೆ ಉಳಿದೆಡೆಯಲ್ಲಿರುವಾಗ ನಾನು ಹಾಗೇನಾದರೂ ಸೋಮಾರಿಯಾಗಿಯಾಗಲೀ, ಸೊಗಸುಗಾರ್ತಿಯಾಗಿಯಾಗಲೀ ನಲಿಯುತ್ತಿರುವೆನೆಂದು ತಿಳಿದೆಯೇನು? ನಂದಿನಿ! ಇನ್ನೂ ನಿನಗೆ ಅಬಗೆಯ ಶಂಕೆ ಬಿಡದಿದ್ದರೆ ಇನ್ನಾದರೂ ಬಿಟ್ಟುಬಿಡಬೇಕೆಂದು ಕೇಳುತ್ತೇನೆ. ನನಗೆ ಅದಾವುದೂ ಬೇಕಾಗಿಲ್ಲ. ನಾನೇನು ಮಾಡಲಿ? ನಮ್ಮ ಅಣ್ಣನಂತೆಯೇ ನನ್ನ ಸ್ವಾಮಿಯೂ ದೇಶಭಕ್ತರಲ್ಲಿ ಒಬ್ಬರಾಗಿರಬೇಕೆಂಬ ಆಶೆ ಬಲವಾಗಿದೆ. ಆದರೆ,... ಅದಕ್ಕೆ ಅದೃಷ್ಟವೇ ಕಾರಣವಲ್ಲವೇ? ಸುಮ್ಮನೆ ಅತ್ತರಾದೀತೆ?

ನಂದಿನಿ:—ಸುರಸೆ! ನೀನು ನನ್ನ ಸ್ವಭಾವವನ್ನು ಚೆನ್ನಾಗಿಯೂ ತಿಳಿದಿರುತ್ತೀಯಾದುದರಿಂದ ಈಗಿನ ನನ್ನ ಶ್ಲೇಷೋಕ್ತಿಗೆ ಅಸಮಾಧಾನಗೊಳ್ಳುವುದಿಲ್ಲವೆಂದೇ ನನ್ನ ನಂಬಿಕೆಯಾಗಿದೆ. ಏಕೆಂದರೆ,—ನಾನು ಸಮಯ ಸಿಕ್ಕಿದಾಗ, ಸ್ತ್ರೀಸಮಾಜವನ್ನು ಸುತ್ತಿಕಾಡುತ್ತಿರುವ ಅವಿಚಾರಗಳನ್ನು ಹೇಳದೆ ಬಿಡುವವಳಲ್ಲ. ಅದನ್ನು ಹೇಗಾದರೂ ಹೇಳಿಯೇ ಬಿಡಬೇಕಲ್ಲದೆ ಸುಮ್ಮನಿರುವುದು ನನ್ನ ಶೀಲವಾಗಿಲ್ಲ. ಇದಕ್ಕೆ ನೀನು ಬೇರೆಬೇರೆ ಅರ್ಥವನ್ನು ಕಲ್ಪಿಸಿಕೊಂಡು ಬಿತಿಗೊಳ್ಳುವುದು ಸರಿಯಲ್ಲ. ನಾನು ನಿನಗಾಗಿ ಇದನ್ನು ಹೇಳಿದುದಿಲ್ಲ. ಈಕಾಲದ ಹಣದ ಸೊಕ್ಕೇರಿ, ಸುತ್ತುಮುತ್ತಲ ದುರ್ವಿಷಯಗಳ ಮುತ್ತಿಗೆಯಿಂದ ತಮಗಾಗುತ್ತಿರುವ ಅಪಾಯವನ್ನೂ

ಲಕ್ಷ್ಯಕ್ಕೆ ತಾರದೆ, ಅದರಂತೆ, ಮನಬಂದಂತೆ ಮೆರೆಯುತ್ತಿರುವ ಸ್ತ್ರೀಪುರುಷರನ್ನು ಕುರಿತು ಹೇಳಿದ ಮಾತು; ಅಷ್ಟೆ! ಹೋಗಲಿ, ಬಿಡು; ಸುರಸೆ! ನಿನ್ನ ಮನಸ್ಸಿನಲ್ಲಿ ಈಗ ಉಂಟಾಗಿರುವ ಸಂತಾಪವನ್ನು ದಯೆಯಿಟ್ಟು ಬಿಟ್ಟುಬಿಡು.

ಸುರಸೆ:—ನಿಟ್ಟುಸಿರಿಟ್ಟು,—'ನಂದಿನಿ! ನಿನ್ನ ಮಾತಿಗೆ ನಾನು ಬೇರೆ ಬೇರೆಯಾಗಿ ತಿಳಿದುಕೊಳ್ಳುವೆನೆಂದೆಣಿಸಬೇಡ. ಈಗ ನಾನು ನನ್ನ ಸ್ವಾಮಿಯ ವಿಚಾರದಲ್ಲಿ ಹೇಗಿರಬೇಕು? ಮನೆಯವರ ವಿಚಾರವಾಗಿ ಹೇಗಿರಬೇಕು? ಅದನ್ನು ಮೊದಲು ತಿಳಿಯಹೇಳು.'

ನಂದಿನಿ:—ಹೇಗಿರಬೇಕೆನ್ನುವೆಯಾ, ಸುರಸೆ? ಸೋಮಾರಿತನವನ್ನು ಬಿಟ್ಟು, ಪ್ರತಿಯೊಂದು ಸಣ್ಣಕೆಲಸವನ್ನೂ ವಿಚಾರಣೆಗೆ ತೆಗೆದುಕೊಂಡು, ನಯ ನೀತಿ ಮಾರ್ಗದಿಂದಲೇ ಅದನ್ನು ತೃಪ್ತಿಕರವಾಗಿರುವಂತೆ ಮಾಡಿಸುವುದರಿಂದ, ನಿಮ್ಮ ಮನೆಯವರ ಅದರಕ್ಕೂ ಮತ್ತು ಹೊರಗಿನವರ ಹೊಗಳಿಕೆಗೂ ಕಾರಣಳಾಗಬೇಕು. ಅದರಲ್ಲಿ ನಿನಗೆ ಆಲಸ್ಯ—ಉದಾಸೀನ—ಅಭಿಮಾನಪರತೆಗಳೆಂಬುದು ಸ್ವಲ್ಪವೂ ಇರಬಾರದು. ಪತಿಯು ವಿಚಾರವಾಗಿ ನಡೆಯಬೇಕಾದುದು ಹೇಗೆಂದರೆ—ನಾನು ಹೇಳುವುದು ಹೇಗೆ?-ತಂಗಿ!

ಸುರಸೆ:—'ಹೇಗೆ ಹೇಳುವುದೆಂದರೆ, ಈವರೆಗೂ ಹೇಳಿದುವನ್ನು ಹೇಗೆ ಹೇಳಿದೆಯೊ, ಇದನ್ನೂ ಹಾಗೆಯೇ ಹೇಳು. ಅದನ್ನು ಹೇಳಲಾರದವಳಿಗೆ ಇದನ್ನು ಹೇಳಲಾದುದು ಹೇಗೆ?"

ನಂದಿನಿ:—ಹೇಗಾದರೂ ಆಗಲಿ, ನಾನು ಹೇಳುವದನ್ನೇನೋ ಹೇಳದೆ ಬಿಡುವುದಿಲ್ಲ. ಇನ್ನಿದರಮೇಲೆ ನೀನು ನಿನ್ನ ಬುದ್ಧಿಯನ್ನೂ ಖರ್ಚುಮಾಡಿ, ಸಾಧಕ—ಬಾಧಕಗಳನ್ನು ಗೊತ್ತುಮಾಡಿಟ್ಟುಕೊಳ್ಳುವುದು ಯುಕ್ತವಾಗಿದೆ.

ಸುರಸೆ:—ಸರಿ; ಬಿಡು! ನೀನು ಈ ಕಣಿಯಲ್ಲಿಯೇ ಹೊತ್ತುಕಳೆಯುತ್ತಿರುವೆ. ವಿಷಯಲಂಪಟರಾದ ಗಂಡಂದಿರನ್ನು ಹೆಂಡಿರು ಹೇಗೆ ದಾರಿಗೆ ತರಬೇಕೋ, ಅದನ್ನು ಹೇಳುವೆಯೋ—ಇಲ್ಲವೊ?

ನಂದಿನಿ:—ಗಂಭೀರವಾಗಿ—'ಸುರಸೆ! ಸ್ವಲ್ಪನಿಧಾನಿಸಿ, ಕಿವಿಕೊಟ್ಟು ಕೇಳು. ಮನಸ್ಸಿಟ್ಟು ವಿಚಾರಮಾಡು. ವಿಷಯಲಂಪಟನಾದ ಗಂಡನನ್ನು ಸ್ವರಚಿತ್ತನನ್ನಾಗಿ ಮಾಡಬೇಕಾದ ಹೆಂಡತಿಯಲ್ಲಿ ಹೆಚ್ಚಾದ ಚಾಣತನವಿರಬೇಕು. ಏಕೆನ್ನುವೆಯೋ—

ಸಾಮಾನ್ಯವಾಗಿ ವಿಚಾರ ಮಾಡಿದರೆ ಗೊತ್ತಾಗುವುದೇನು? ಒಬ್ಬ ಪಾಮರನನ್ನು ಪಂಡಿತನನ್ನಾಗಿ ಮಾಡಬೇಕಾದರೆ, ಸಾಮಾನ್ಯರಿಗೆ ಸಾಧ್ಯವಲ್ಲ. ಪ್ರತಿಭಾಸಂಪನ್ನನಾದ ಪಂಡಿತನೇ ಬರಬೇಕು. ಹಾಗೂ ಪಂಡಿತನು ಒಂದ ಮಾತ್ರಕ್ಕೆ ಪಾಮರನ ಮನಸ್ಸು ಪಾಂಡಿತ್ಯಪ್ರಭೆಯನ್ನು ಹೊಂದಲಾರದು. ಅದಾಗಬೇಕಾದರೆ, ಪಂಡಿತನು ಅಧಿಕ ಪ್ರಯತ್ನಪಡಬೇಕು. ಮೊದಲು ಪಾಮರನ ಜೊತೆಯಲ್ಲಿ ತಾನೂ ಪಾಮರನಂತೆ ನಟಿಸಬೇಕು. ಪಾಮರ ಭಾಷಣವಿಂದಲೇ ಅವನ ಮನಸ್ಸಿಗೆ ಪ್ರಿಯವಾದ ಮಾತುಗಳನ್ನು ಹೇಳಬೇಕು. ತಾನು ಮಾಡುವ ಕೆಲಸವು, ಪಾಮರನಿಗೆ ರುಚಿಸುವಂತೆಯೇ, ಕಾಲಕ್ಕೆ ತಕ್ಕಂತೆ ತುಣಕು–ಮಿಣಕುಗಳಿಂದ ಕೂಡಿದುದಾಗಿಯೂ ಇರಬೇಕು. ಹೀಗೆ ಮಾಡದಿದ್ದರೆ, ಅವನು ಬಳಿಗೆ ಸೇರುವುದೂ ಇಲ್ಲ; ನುಡಿಯುವುದೂ ಇಲ್ಲ. ಮನಸ್ಸನ್ನು ತಿರುಗಿಸುವುದೆಂತೂ ಇಲ್ಲವೇ ಇಲ್ಲ,

ಮೇಲೆ ಹೇಳಿದಂತೆ ಮಾಡುವ ಮೊದಲನೆಯ ಪ್ರಯತ್ನದಲ್ಲಿ ಪಂಡಿತನು ಕೇವಲ ನಟನೆಯಲ್ಲಿ ಮಾತ್ರವೇ ಪಾಮರನಂತಿರಬೇಕಲ್ಲದೆ, ಅಂತರಂಗದಲ್ಲಿಯೂ ಪಾಮರನಂತಾಗಿರಬಾರದು. ಯಾವ ಕಾಲದಲ್ಲಿ, ಯಾವ ಕಾರ್ಯಕಲಾಪಗಳಲ್ಲಿಯಾಗಲೀ, ತನ್ನ ಮನಸ್ಸು ವಿಕಾರವಾಗದಂತೆ ಜಾಗರೂಕತೆಯಿಂದಿದ್ದು, ವಿಚಾರಪೂರ್ವಕವಾಗಿ ಎಲ್ಲವನ್ನೂ ನಿರ್ವಹಿಸುತ್ತ ಬರಬೇಕು. ಹೀಗೆ ಮಾಡುವುದರಿಂದ ಸ್ವಲ್ಪಾವಧಿಯಲ್ಲಿಯೇ ಪಾಮರನ ಮನಸ್ಸು ಪಂಡಿತನ ಕಡೆಗೆ ತಿರುಗಿ, ಈತನ ಉಪದೇಶಕ್ಕೆ ಒಳಪಡುವಂತಾಗುವುದು. ಆಗಲೂ ತಾನು ಕಾಲವನ್ನು ನೋಡಿ, ಪಂಡಿತೋಕ್ತಿಗಳನ್ನು, ತಕ್ಕ ನಿದರ್ಶನಗಳೊಡನೆ ಹೇಳಿ ತಿಳಿಸುತ್ತಲೂ, ನಡುನಡುವೆ ಪಾಮರನ ಮನಸ್ಸು ತನ್ನ ಕಡೆಯಿಂದ ಬೇರೆಕಡೆಗೆ ಹೋಗದಂತಿರಲು, ಅತನ ಮನೋವೃತ್ತಿಗೆ, ಮೊದಲು ಪ್ರಿಯವಾಗಿದ್ದ ವಿಚಾರದಲ್ಲಿ ಅಲ್ಪಸ್ವಲ್ಪವಾಗಿ ಪ್ರಸಾಪಿಸಿ, ಮತ್ತೆ ಉಪದೇಶಿಸುವುದಕ್ಕೆ ತೊಡಗುತ್ತಲೂ ಬಂದರೆ, ಕಡೆಗೆ ಪಾಮರನೂ ಪಂಡಿತನೇ ಆಗುವನು. ಹಾಗಿಲ್ಲದೆ, ಪಾಮರ ಬೋಧೆಗೆ ತಾನೇ ಕಿವಿಕೊಟ್ಟು, ಮನಸ್ಸನ್ನು ಸಡಿಲಮಾಡಿಟ್ಟರೆ, ಪಂಡಿತನ ಗತಿಯು, ಪಾಮರನಿಗಿಂತಲೂ ಕೀಳೆನ್ನಿಸುವುದರಲ್ಲಿ ಸಂಶಯವಿಲ್ಲ.

ಸುರಸೆ:—ವಿಸ್ಮಯ ಕೌತುಕಗಳಿಂದ—" ಅದೇನನ್ನು ಹೇಳಿದೆಯೋ

ನನಗೆ ಅರ್ಥವೇ ಆಗಲಿಲ್ಲ. ನಿನ್ನ ಈಗಿನ ಬಗೆಚಿಯನ್ನು ಬಿಡಿಸಿ, ಅಭಿಪ್ರಾಯವನ್ನು ತಿಳಿದುಕೊಳ್ಳುವಷ್ಟು ಸೂಕ್ಷ್ಮಬುದ್ಧಿಯೂ ನನಗಿಲ್ಲ. ನೀನೇ ಬಿಡಿಸಿ ಹೇಳುವುದಾದರೆ ಕೇಳುತ್ತೇನೆ. ಸುಮ್ಮನೆ ಮಾಟಗಾರ್ತಿಯಂತೆ ಯಾವಾವುದೋ ಹೂಟದ ಆಟಗಳನ್ನು ಇಲ್ಲಿ ತೆಗೆದು ತೋರಿಸಬೇಡ."

ನಂದಿನಿ:—ತಲೆದೂಗಿ-ಅಬ್ಬ ! ಇಷ್ಟು ಕೋಪವು ನಿನ್ನಲ್ಲಿರುವುದೆಂದು ತಿಳಿದಿರಲಿಲ್ಲ! ಇರಲಿ, ಸಂತೋಷ. ಸುರಸೆ! ನೋಡು; ಎಚ್ಚರಿಕೆಯಲ್ಲಿ ವಿಚಾರಮಾಡಿ ನೋಡು. ವಿಷಯಲಂಪಟನನ್ನು ಬುದ್ಧಿವಂತನನ್ನಾಗಿ ಮಾಡುವುದು ಆತನ ಅರ್ಧಾಂಗಿಯ ಕರ್ತವ್ಯವೇ ಸರಿ. ಆವಳು ತನ್ನ ಕರ್ತವ್ಯವನ್ನು ಸರಿಯಾಗಿ ಗಮನಿಸುವುದಾಗಿದ್ದರೆ, "ಪತಿಯು ವಿಷಯಾತುರನಾಗಿ ಕೆಟ್ಟು ಹೋಗುವನು. ಇವನು ತನ್ನ ಮುಕ್ತಿಮಾರ್ಗಕ್ಕೆ ಕಂಟಕನಾಗಿಯೇ ಇರುವುದರಿಂದ ಇವನಲ್ಲಿ ಹೊಡೆದಾಡುವುದನ್ನು ಬಿಟ್ಟು, ಹೇಗಾದರೂ ಬಂಧನಿರ್ಮುಕ್ತೆಯಾಗುವುದು ನನಗೆ ಲೇಸು" ಎಂಬೀ ತೆರದ ಅನರ್ಥಕರವಾದ ವೈರಾಗ್ಯವನ್ನು ಹಿಡಿಯಬಾರದು. ಪತಿಯಲ್ಲಿ ತಾನು ವಿರಕ್ತೆಯೆಂಬುದನ್ನು ಸ್ವಲ್ಪಮಟ್ಟಿಗೂ ಸೂಚಿಸಬಾರದು. ಆತನಲ್ಲಿ ತಾನು ಕೇವಲ ಅನುರಕ್ತೆಯಾಗಿರುವುದೂ, ಅದನ್ನೇ ಕಾರ್ಯ-ಕರಣ-ಕಲಾಪಗಳಲ್ಲಿಯೂ ತೋರುವುದೂ ಅವಶ್ಯವಾದುದೆಂದು ತಿಳಿದಿರಬೇಕು. ಅಲ್ಲದೆ, ಪತಿಯು ಯಾವಕಾಲದಲ್ಲಿ, ಹೇಗೆ, ನಡೆಯಬೇಕೆಂದು ಹೇಳುವನೋ, ತಕ್ಕ ಮಟ್ಟಿಗೆ ಜಾಗ್ರತೆಯಾಗಿಯೇ ಅದನ್ನು ಸಿದ್ಧಪಡಿಸಿ, ಆತನ ಮನಸ್ಸು ಅದರಿಂದ ತನ್ನಲ್ಲಿ ಪ್ರಸನ್ನವಾಗುವಂತೆ ಮಾಡಿಕೊಳ್ಳುವುದೂ, ಹಾಗೆ ಪ್ರಸನ್ನವಾಯಿತೆಂದು ತಿಳಿದ ಕೂಡಲೇ, ಅದೇ ವಿಷಯವನ್ನೇ ಸಪ್ರಮಾಣವಾಗಿ ಮುಂದಿಟ್ಟು, ಅದರ ಫಲಾನುಭವ ವಿಚಾರವು ಆತನ ಮನಸ್ಸಿಗೆ ಹಿಡಿದು, ಮುಂದೆ ಹೇಗೆ ನಡೆದರೆ ತನಗೆ ವಿಹಿತವೆಂಬ ಆಲೋಚನೆಯು ಅವನಿಗುಂಟಾಗುವಂತೆ ನಯ ವಿನಯ ಮಾರ್ಗದಲ್ಲಿ ನಿವೇದಿಸುವುದೇ, ಪತಿಯು ಹಿತವನ್ನೇ ಕೋರುವ ಸತಿಗೆ ಸಹಜವಾದುದು. ಹಾಗಿಲ್ಲದೆ, ಅವನು ಅವ ವಿಷಯವನ್ನು ಕುರಿತು ಹೇಳಿದರೂ, ಅದಕ್ಕೆ ಯಾವದಾದರೂ ಒಂದು ಅಲ್ಲದ ಸಲ್ಲದ ನೆವಗಳನ್ನು ಕಲ್ಪಿಸಿ ಆತಂಕಪಡಿಸುವುದು ಸಹಜಗುಣವಲ್ಲ. ಹಾಗೆ ಮಾಡುವುದರಿಂದ ವಿಷಯಲಂಪಟನಾದ ಆತನ ಪ್ರಕೃತಿಯು, ವಿಚಾರಶೂನ್ಯತೆಯಿಂದ

ಅವಿವೇಕಮಾರ್ಗದಲ್ಲಿಯೇ ತಿರುಗುವಂತಾದೀತು. ಹಾಗೆ ದಾರಿಯನ್ನು ತಪ್ಪಿಹೋದ ಬಳಿಕ ಆತನು ಮತ್ತೆ ತನ್ನ ನಿಜವಾದ ದಾರಿಗೆ ತಿರುಗಿ ಬರುವ ನೆಂಬುದು ಅಸಂಗತ. ಇದನ್ನು ಚೆನ್ನಾಗಿ ತಿಳಿದು, ಯಾವ ನಾರಿಯೂ, ತನ್ನ ಭರ್ತಾರನಲ್ಲಿ ಉಪೇಕ್ಷೆಯನ್ನು ತೋರ.....

ನಂದಿನಿಯು ಕಡೆಯ ಮಾತು ಪೂರೈಸುವಷ್ಟರಲ್ಲಿಯೇ ಹಿಂದಿನಿಂದ ಬಂದ ಮತ್ತೊಬ್ಬ ತರುಣಿಯು ನಂದಿನಿಯ ಕಣ್ಣಾಳನ್ನು ಮುಚ್ಚಿ,— "ಅಹುದು, ನಂದಿನಿ! ಅಹುದಹುದು!! ನೀನು ಎಲ್ಲವನ್ನೂ ತಿಳಿದವಳಂತೆ ಹೇಳಿಕೊಳ್ಳುವುದೂ, ನಾವು ಅದನ್ನೇ ಮಹಾಪ್ರಸಾದವೆಂದು ನಂಬುವುದೂ ಸಹಜವಾದುದೇ ಸರಿಯೆಂದು ಹೇಳಿದೆಯಲ್ಲವೆ? ಅಹುದು."

ನಂದಿನಿ:—ಬಲವಂತದಿಂದ ಕಣ್ಣಾಳನ್ನು ಬಿಡಿಸಿಕೊಂಡು, ನಿಂತಿದ್ದವಳ ಕೈಗಳನ್ನು ಹಿಡಿದೆಳೆದು ಬಳಿಯಲ್ಲಿ ಕುಳ್ಳಿರಿಸಿ, "ಇದೇನು, ಪರಿಮಳೆ! ನೀನು ಬಂದುದಾವಾಗ?"

ಪರಿಮಳೆ:—ನಾನು ಯಾವಾಗ ಬಂದರೆ ನಿಮಗೇನು? ನಿಮ್ಮ ಮಾತಿಗೆ ನೊದಲಾದಾಗಲೇ ನಾನು ಬಂದುದು.

ನಂದಿನಿ:— ಅದೇಕೆ, ಪರಿಮಳೆಯಾಗಿದ್ದೂ, ನೀನು ಬಂದುದಕ್ಕೆ ಸೂಚನೆಯನ್ನು ಕೊಡಲಿಲ್ಲ?

ಪರಿಮಳೆ:— ಕಿರುನಗೆಯಿಂದ— "ಪ್ರಮೋದವನ್ನುಂಟುಮಾಡುವ ಆನಂದ ರಸಗಳೆರಡೂ, ಬೇರೆಬೇರೆಯಾದ ರೂಪಾಂತರವನ್ನು ಹೊಂದಿ ಕುಳಿತಿದ್ದುದನ್ನು ನೋಡಿಯೂ, ಪರಿಮಳವು ಹೇಗೆ ತನ್ನ ಆಗಮನವನ್ನು ಸೂಚಿಸಲೆಳಸುವುದು?"

ನಂದಿನಿ:—ಕೊಂಕುನುಡಿಯ ಬಿಂಕವಿದೇನು? ಪರಿಮಳೆ! ಈವರೆಗೂ ಏನು ಮಾಡುತ್ತಿದ್ದೆ?

ಪರಿಮಳೆ:—ಮಾಡುವುದೇನು? ಮರೆಯಾಗಿದ್ದು ನಿಮ್ಮ ಮಾತುಗಳನ್ನು ಕೇಳುತ್ತಿದ್ದುದೇ.....

ನಂದಿನಿ:—ಹೊಂಚಿನಿಂತೇ ಕೇಳಬೇಕಾಗಿತ್ತೇನು? ಇದಿರಿಗೆ ಬಂದಿದ್ದರಾಗುತ್ತಿರಲಿಲ್ಲವೋ?

ಪರಿಮಳೆ:—ಹೇಗೆ? ನಾನು ಇದಿರಿಗೆ ಬಂದಿದ್ದರೆ ನಿಮ್ಮ ರಸನಾಂ—

ಗಣದಲ್ಲಿ ಸರಸವಾಣಿಯು ಇಷ್ಟರ ಸ್ವೈರಾಲಾಪಕ್ಕೆ ಅತಂಕವುಂಟಾಗದೆ ಇರುತ್ತಿದ್ದಿತೊ? ಪಾಪ, ನಿಮ್ಮ ಸರಸ ಸಲ್ಲಾಪಕ್ಕೆ ನಾನೇಕೆ ವಿಘ್ನಕಾರಿಯಾಗಬೇಕೆಂದು ಅಲ್ಲಿಯೇ ನಿಂತೆನು.

ನಂದಿನಿ:--ಸುರಸೆ! ಕೇಳಿದಿಯೇನು? ನಿನ್ನ ನಾದಿನಿಯ ಚಾಟೂಕ್ತಿಯನ್ನು ಚೆನ್ನಾಗಿ ಕೇಳಲಿಲ್ಲವೇ?

ಸುರಸೆ:--ತಲೆಯೆತ್ತಿ,—"ಏನು ಹೇಳಿದೆ? ನಂದಿನಿ!"

ನಂದಿನಿ:—ಈವರೆಗೆ ಏನು ಮಾಡುತ್ತಿದ್ದೆ! ಹೀಗೇಕೆ ಮೌನವಾಗಿ ಕುಳಿತಿದ್ದೆ!

ಪರಿಮಳೆ:—ಬೇಡವೇನು? ನಾಲ್ಕಾರು ವರ್ಷಗಳಿಂದಲೂ ವಿಷಯ ಸಾಮ್ರಾಜ್ಯದಲ್ಲಿ ನಲಿದಾಡುತ್ತಿದ್ದ ತಮ್ಮ ಮುಂದೆ, ಆಜನ್ಮ ಬ್ರಹ್ಮಚಾರಿಣಿಯಾಗಿರುವವಳೊಬ್ಬಳು, ವಿಷಯಗಳ ವಿಚಾರವಾಗಿಯೂ ಪ್ರಕೃತಿಧರ್ಮ ವಿಚಾರವಾಗಿಯೂ ಬಹು ಧಾರಾಳಬುದ್ಧಿಯಿಂದ ತಕ್ಕ ಉದಾಹರಣೆಯೊಡನೆ ಭಾಷಣ ಮಾಡಿದರೆ, ಮತ್ತೆ ಹೇಗಾಗಬೇಕು? ಮೌನವನ್ನು ಹಿಡಿದಿದ್ದೊಂದು ಅತಿಶಯವೋ? ಮರುಳರಂತೆ ಕುಣಿದಾಡಿದರೂ ಅಕ್ಷೇಪವಿಲ್ಲ. ಅಲ್ಲವೆ? ಅತ್ತಿಗೆ!

ಸುರಸೆ:—ಪರಿಮಳಾ! ನೀನು ಹೇಗಾದರೂ ಹಾಸ್ಯಮಾಡು. ನನಗೆ ನಂದಿನಿಯ ದೀರ್ಘಭಾಷಣದಿಂದ ಆಶ್ಚರ್ಯವುಂಟಾಗಿದ್ದುದು ನಿಜ. ಇವಳಲ್ಲಿ ಇಷ್ಟರ ಪಾಂಡಿತ್ಯವಿದೆಯೆಂದು ನಾನು ಈವರೆಗೂ ತಿಳಿದಿರಲಿಲ್ಲ. ಆದರೆ, ಈಗಲೂ ಇವಳು ಇದೆಲ್ಲವನ್ನೂ ಹೇಗೆ ತಿಳಿದಳೆಂಬುದೇ ನನಗೆ ಬಗೆಹರಿದಿಲ್ಲ.

ಪರಿಮಳೆ:—ಹೇಗೆ ತಿಳಿದೆಯೆಂದು ಅವಳನ್ನೇ ಕೇಳು?

ಸುರಸೆ:—ನಾನು ಕೇಳಲಾರೆನು.

ನಂದಿನಿ:—ಸುರಸೆ! ಪರಿಮಳೆ! ಸಾಕು! ಹೆಂಗಸರು ಕುಳಿತೆಡೆಯಲ್ಲಿ ಈ ರಗಳೆಯು ತಪ್ಪಿದುದೇ ಅಲ್ಲವೆಂದು ಬಲ್ಲವರಾಡುವುದು ಸುಳ್ಳಲ್ಲ. ಇನ್ನು ಹೆಚ್ಚು ಮಾತು ಬೇಡ.

ಪರಿಮಳೆ:-ಇದೊ, ಬಿಟ್ಟೆ; ಆದರೆ ಒಂದೇ ಪ್ರಶ್ನೆಗೆ ಉತ್ತರವನ್ನು ಹೇಳು. ಅತ್ತೆ ಮಾವಂದಿರ ಕೈಕೆಳಗಿರುವ ಕ್ರಮವನ್ನೂ, ಗಂಡನನ್ನು ನೀತಿಮಾರ್ಗ

ದಲ್ಲಿ ನಡೆಯಿಸುತ್ತಿರಬೇಕಾದ ರಹಸ್ಯಮಾರ್ಗವನ್ನೂ ಬಹು ರಸವತ್ತಾಗಿ ಹೇಳಿದೆಯಲ್ಲವೆ? ಅದನ್ನು ಯಾವ ಆಧಾರದ ಮೇಲಿಂದ ಹೇಳಿದೆ?

ನಂದಿನಿ:—ದರ್ಪದಿಂದ ನಕ್ಕು,— "ಇದಕ್ಕೇ ನಿನ್ನನ್ನು ವಿಚಾರ ಹೀನರೆಂದು ಹೇಳಬೇಕು. ಏಕೆಂದರೆ– ಅನುಭವವೆಂದರೆ, ಕೇವಲ ಸ್ಥೂಲ ದೇಹಕ್ಕೆ ಸಂಬಂಧಿಸಿದವುಗಳನ್ನೇ ಅನುಭವವೆಂದೂ, ಉಳಿದವುಗಳು ಅನುಭವವಿಚಾರಗಳಲ್ಲವೆಂದೂ, ನಿನ್ನ ಭಾವನೆಯಲ್ಲವೆ? ಹಾಗಿದ್ದರೆ, ಅದು ಸಾಧುವಲ್ಲ. ಭಾವನೆಗೊಳಪಟ್ಟ, ಮತ್ತು ದೃಶ್ಯಾದೃಶ್ಯರೂಪಗಳಿಂದ ವಸ್ತು ವಿಚಾರಕ್ಕೊಳಪಟ್ಟ ವಿಷಯಗಳೆಲ್ಲವೂ ಅನುಭವಸಿದ್ಧವಾದವುಗಳೆಂದೇ ತಿಳಿಯಬೇಕು. ಹಾಗಿಲ್ಲವೆಂದು ಹೇಳುವುದಾದರೆ. ಈವರೆಗೆ ಹುಟ್ಟಿರುವ ಶಾಸ್ತ್ರಗಳೂ, ರಹಸ್ಯ ಮಂತ್ರಗಳೂ, ಇತರ ಕೃತಿಗಳೂ, ಸಮಸ್ತವೂ ಅನುಭವಹೀನವಾದವುಗಳೆಂದೂ, ಅವುಗಳೆಲ್ಲವನ್ನೂ ಮೂಲೆಗೊತ್ತರಿಸಿ ಬಿಡಬೇಕೆಂದೂ ಸೂಚಿಸುತ್ತಿದೆ. ಈವರೆಗೆ ನಾನು ಹೇಳಿರುವುದಾಗಲೀ, ಮುಂದೆ ಹೇಳುವುದಾಗಲೀ, ಪ್ರತಿಯೊಂದೂ ನನ್ನ ಭಾವನಾರೂಪದಲ್ಲಿ ಅದು ಇತರ ವಾತ್ರಗಳಿಂದ ಪ್ರತ್ಯಕ್ಷ ಪ್ರಮಾಣವಾಗುವಂತೆ ನನ್ನ ಪರೀಕ್ಷೆಗೊಳಪಟ್ಟ ವಿಚಾರಗಳಾಗಿವೆಯಲ್ಲದೆ, ಬರಿಯ ಊಹೆಯೊಂದರಿಂದಲೇ ಹೇಳುವುದಾಗಲಿ, ಇಲ್ಲವೇ ಈ ಸ್ಥೂಲದೇಹಕ್ಕೆ ಸಂಬಂಧಿಸಿರುವುದೆಂದಾಗಲೀ ನೀವು ಭಾವಿಸುವುದು ಸರಿಯಾಗಿಲ್ಲ. ಈಗಲಾದರೂ ಒಪ್ಪಿತೋ?

ಸುರಸೆ:—ಥಿಗ್ಗನೆದ್ದು,— " ನಂದಿನಿ! ನಾನಿನ್ನು ಹೊರಡುವೆನು. ಆಗಲೇ ಕತ್ತಲೆಯಾಯಿತು."

ಪರಿಮಳೆ:—ಅದೇನು, ನಿನಗಿಷ್ಟರ ಅತುರ! ನಾನೂ ಬರಬೇಡವೊ?

ಸುರಸೆ:—ನಿನ್ನನ್ನು ಬರಬೇಡವೆಂದೆನೇನು? ನನಗೆ ಹೊತ್ತಾಯಿತು. ಮನೆಗೆ ಗಂಡಸರು ಬರುವ ವೇಳೆಗಾದರೂ ನಾನು ಮನೆಯಲ್ಲಿರದಿದ್ದರೆ,—

ಪರಿಮಳೆ:—ಓಹೋ! ಗಂಡನಲ್ಲಿ ಎಷ್ಟು ಭಯವಮ್ಮ?

ಸುರಸೆ:—ನೀನೂ ಅತ್ತೆಯ ಮನೆಗೆ ಹೋಗಿ ಸೇರಿದ ಬಳಿಕಲ್ಲವೇ ಇದಕ್ಕುತ್ತರವು? ಈಗ ನಾನು ಕೊಡುವಉತ್ತರವು ನಿನಗೆ ಸರಿದೋರುವುದೇನು? ಎಂದಿಗೂ ಇಲ್ಲ.

ಪರಿಮಳೆ:—ಬಲ್ಲೆನಮ್ಮ-ಬಲ್ಲೆನು. ಗಂಡನಲ್ಲಿ ನಿನಗಿರುವ ಭಯವೆಂತ

ಹದೆಂಬುದನ್ನು ನಾನು ಬಲ್ಲೆನು. ಆದರೂ ಇಲ್ಲಿಗೆ ಬಂದಿದ್ದುದನ್ನು ತಿಳಿದೇ ಇರುವವನಲ್ಲಿ ಇಷ್ಟರ ಭಯಕ್ಕೆ ಕಾರಣವೇನು?

ನಂದಿನಿ:— ಪರಿಮಳ! ಸುರಸೆಯು ಹೇಳಿದುದು ಸರಿಯಾಗಿದೆ. ಹಾಗಿರುವುದೇ ಹೆಂಗಸರಿಗೆ ಒಳ್ಳೆಯದು. ಅವರು ಯಾವಾಗಲೂ ವಿನಯ ಭಯ-ಭಕ್ತಿ-ಶ್ರದ್ಧೆ-ಸತ್ಯ-ನಿಯಮಗಳಿಂದ ತಮ್ಮ ಕರ್ತವ್ಯದಲ್ಲಿ ಜಾಗರೂಕರಾಗಿ ವರ್ತಿಸುತ್ತಿರಬೇಕು. ಪತಿಯು ಹೇಡಿಯೆಂದು ತಿಳಿದು, ತಾನು ಪರುಷವೃತ್ತಿಯನ್ನು ಹಿಡಿಯುವುದೂ, ಪತಿಯು ಕ್ರೂರಸ್ವಭಾವಿಯೆಂದು ತನ್ನ ಆಚರಣೆಯಲ್ಲಿ ಕೃತ್ರಿಮನಟನೆಯನ್ನು ತೋರುವುದೂ, ಅತನು ದುರಾಚಾರಿಯೆಂದು ಶಂಕಿಸಿ, ನಿರಾಕರಿಸುವುದೂ, ಇಲ್ಲವೇ, ದೀನ-ರಿಕ್ತಹಸ್ತನೆಂದು ಹಂಗಿಸಿ, ಭಂಗಿಸುವುದೂ ಮಾನವತಿಯರಿಗೆ ಧರ್ಮವಲ್ಲ. ಅತನು ಹೇಗಿದ್ದರೂ ತನ್ನ ಧರ್ಮ-ಧ್ಯೇಯ-ಕರ್ತವ್ಯಗಳಿಗೆಲ್ಲಕ್ಕೂ ಅತನೇ ತನಗೆ ಸಾಕಾರ ದೈವಸ್ವರೂಪನೆಂದು ನಂಬಿ, ತನ್ನ ಶೀಲವುಷ್ಪವನ್ನು ಭದ್ರವಾಗಿ ಕಾವಾಡಿಕೊಳ್ಳುವುದು ಮುಖ್ಯವೃತ್ತಿಯು. ಇದನ್ನು ನಿಮಗೆ ನಾನೇನೂ ಹೇಳಿಕೊಡಬೇಕಾಗಿಲ್ಲ. ಇನ್ನು ನೀವು ನಿಮ್ಮ ಮನೆಗೆ ತೆರಳಬಹುದು. ಇಲ್ಲಿ ಹರಟಿಗೆ ಕುಳಿತು, ಅಲ್ಲಿ ನಿಮ್ಮ ಹಿರಿಯರಿಗಾಗಲೀ ಅರಸರಿಗಾಗಲೀ ಮರುಕವುಂಟಾಗುವಂತೆ ಮಾಡುವುದು ಸರಿಯಲ್ಲ. ಹೀಗೆ ಹೇಳಿದೆನೆಂದು ಕೋಪಿಸಬೇಡಿರಿ. ಕ್ಷಮೆಯಿರಲಿ!

ಪರಿಮಳ:— ನಕ್ಕು— 'ಅಹುದು; ಕಣ್ಣು ಚುಚ್ಚಿ ಬಿನ್ನುತಟ್ಟುವ ಜಾಗ್ಕೆ ನಿನಗೇ ಸರಿ. ಇರಲಿ; ನೀನೇನು, ನಮ್ಮೆಲ್ಲರನ್ನೂ ಬಿಟ್ಟು ಹೊರಟೀ ಹೋಗುವವಳೋ—ಹೇಗೆ?'

ನಂದಿನಿ:— ಅಂತಹ ಭೀತಿಗೆ ಕಾರಣವಿಲ್ಲ. ಬಂದುವೇಳೆ ಹೋಗಬೇಕಾದರೂ, ನಿಮಗೆ ಹೇಳದೆ ಹೋಗುವುದಾಗಲೀ, ಈ ಊರಿನವರ ಕಾಟಕ್ಕೆ ಹೆದರಿ ಹೋಗುವುದಾಗಲೀ ಇಲ್ಲ. ಧೈರ್ಯವಾಗಿರಿ; ನಡೆಯಿರಿ. ಇನ್ನು ವಿಳಂಬಿಸಬಾರದು. ಆದರೆ, ಇಂದಿನ ಗೃಹಿಣೀಧರ್ಮವಿಚಾರವು ಮಾತ್ರ ನೆನಪಿನಲ್ಲಿರಬೇಕೆಂಬುದು ನನ್ನ ಕೋರಿಕೆ.

ಪರಿಮಳೆ:— ಸುರಸೆ:—'ಆಗಬಹುದು; ನೀನೂ ಇದನ್ನು ಕಾರ್ಯರೂಪದಲ್ಲಿ ತೋರಿಸುವಂತಾಗಬೇಕೆಂಬುದೇ ನಮ್ಮ ಅಭಿನಂದನಪೂರ್ವಕವಾದ ಪ್ರಾರ್ಥನೆ." ಎಂದು ಹೇಳುತ್ತ ಹೊರಟುಹೋದರು.

(ನಂದಿನಿಯೂ ಮನೆಯೊಳಕ್ಕೆ ತೆರಳಿದಳು. ನಮ್ಮ ಸೋದರಿಯರೆಲ್ಲರೂ ಈ ಪರಿಚ್ಛೇದದ ಮರ್ಮವನ್ನು ತಿಳಿದು ವರ್ತಿಸುವರೆಂಬ ಭರವಸೆಯಲ್ಲಿ ಈ ಲೇಖನಿಯೂ ಈ ಪರಿಚ್ಛೇದಕ್ಕೆ ವಿರಾಮವನ್ನು ಕೊಟ್ಟಿರುವುದು.) (ಹಾಗಾಗಲಿ.)

॥ ಶ್ರೀಃ ॥

ದಶಮ ಪರಿಚ್ಛೇದ.

(ಅತ್ಯಾಚಾರಕ್ಕೆ ತಕ್ಕ ಪ್ರತೀಕಾರ)

ವಿಚಾರತತ್ಪರರೇ!

ಸಮಾಜಶಾಸನದಲ್ಲಿ ಈಚೀಚೆಗೆ ಸೇರಿಕೊಂಡಿರುವ ಅತ್ಯಾಚಾರದ ಭೀಕರಸ್ವರೂಪವು ವಿಚಾರಪರರಾದ ನಿಮ್ಮೆಲ್ಲರ ತಿಳಿವಿಗೂ ಬಂದೇ ಇರಬೇಕಲ್ಲವೆ? ಹಾಗೂ ಆ ಅತ್ಯಾಚಾರವು, ಬಡವರನ್ನು ವಿಶೇಷವಾಗಿ ಕಾಡಿ, ಅಂತವರು ಶಾಸನಕ್ಕೆ ಹೆದರಿ, ತಮ್ಮ ಶಾಶ್ವತ ಸುಖ-ಸಮಾಧಾನಗಳನ್ನಾದರೂ ಬಿಟ್ಟು, ಸಮಾಜಶಾಸನದ ಅತ್ಯಾಚಾರಕ್ಕೆ ತುತ್ತಾಗುವಂತೆ ಮಾಡಿಕೊಳ್ಳುತ್ತಿರುವುದು ಕೂಡ, ನಿಮಗೆ ಎಷ್ಟೋ ಕಡೆಯಲ್ಲಿ ನಿದರ್ಶನಕ್ಕೆ ಬಂದೇ ಇರುವುದಲ್ಲವೆ? ಆದರೆ, ವಿಚಾರಪರರಾದವರು ಇಂತಹ ಅತ್ಯಾಚಾರಕ್ಕೆ ವಶರಾಗದೆ, ದಕ್ಷತೆಯಿಂದಲೇ ತಮ್ಮ ಸುಖ-ಭೋಗ-ಸಂಪದಗಳನ್ನು ಅಭ್ಯುದಯ ಸ್ಥಿತಿಗೆ ತರಲು ದೀರ್ಘೋದ್ಯೋಗಿಗಳಾಗಿರುವುದೂ, ಅಂತವರ ಸತತೋದ್ಯಮದ ಫಲಸ್ವರೂಪವಾಗಿ ಅವರ ಮತ್ತು ಅವರ ಅನುಗಾಮಿಗಳ ಮೇಲೆ ತಿರುಗಿ ಬೀಳುವುದರಲ್ಲಿದ್ದ ಅತ್ಯಾಚಾರದ ಭೀಕರರೋಗವು ನಿವಾರಿಸಲ್ಪಟ್ಟು, ಸಮಾಜದ ಮುಖ್ಯ ತತ್ವವು ಶಾಶ್ವತಕೀರ್ತಿಸ್ವರೂಪದಿಂದ ಪ್ರಕಾಶಕ್ಕೆ ಬರುವುದೂ, ನಿಮ್ಮ ವಿಚಾರವಿಮರ್ಶೆಗೆ ಬಳಪಟ್ಟ ವಿಷಯವಾಗಿಯೇ ಇರ

ಬಹುದು!. ವಿಶೇಷ ವಿವರಣಾವೇಕೆ? ಪ್ರಕೃತದಲ್ಲಿ ನಮಗೆ ಬೇಕಾಗಿರುವುದು ನಗೇಶರಾಯನ ಮತ್ತು ಆತನ ಬಂಧು-ಮಿತ್ರಪರಿವಾರದವರ ವಿಚಾರ ವಷ್ಟೆ? ಅದನ್ನೇ ಇಲ್ಲಿ ಸ್ಪಷ್ಟಪಡಿಸಿಟ್ಟರೆ ಸಾಕಾಗಿರುವುದು.

ನಮ್ಮ ದೇಶಭಕ್ತ ನಗೇಶರಾಯನ ಕಡೆಗೆ, ಗುರುಪೀಠದಿಂದ ಬಹಿಷ್ಕಾರ ಪತ್ರವು ಬಂದು ಒಂದೆರಡು ವಾರಗಳಾದುವು. ಆದರೂ, ನಗೇಶನಾಗಲೀ, ಆತನ ಅನುಗಾಮಿಗಳಾಗಲೀ ಯಾರೂ, ಪ್ರಾಯಶ್ಚಿತ್ತದ ಅಥವಾ ಅಪರಾಧ ಕ್ಷಮಾಪ್ರಾರ್ಥನೆಯ ಮಾತನ್ನಾದರೂ ಎತ್ತಿರುವಂತೆ ಕಂಡುಬಂದು ದಿಲ್ಲ. ಇದರಿಂದ ಭಟ್ಟಾಚಾರ್ಯರಾದಿಯಾಗಿ ಪೀಠಾಶ್ರಿತರೆಲ್ಲರಿಗೂ ವಿಪರೀತ ಸಂಕಟ. ಏಕೆಂದರೆ, ನಗೇಶನಿಂದ ಆವರೆಗೆ ತಮಗೆ ದೊರೆಯುತ್ತಿದ್ದ ದಕ್ಷಿಣಾಪೂರ್ವಕವಾದ ಸುಖಭೋಜನವೂ, ಹಬ್ಬ—ಹುಣ್ಣಿಮೆ, ಮದುವೆ—ಮುಂಜಿ, ವ್ರತ—ನೇಮ-ಸಂತರ್ಪಣೆಗಳಿಗೆಂದು ಸಡೆಯುತ್ತಿದ್ದ ದ್ರವ್ಯಸಹಾಯವೂ, ಇನ್ನೂ ಅನೇಕ ವಿಧವಾದ ಲಾಭಗಳೂ ಈಗ ಬಂದಾಗಿ ಹೋದುವು. ತಮ್ಮಲ್ಲಿ ಯಾರಿಗೂ ಬಂದು ಕುರುಡು ಕವಡೆಯಾಗಲೀ ಆತನಿಂದ ಬರುವಂತೆ ಕಾಣಲಿಲ್ಲ. ಇನ್ನೇನು ಮಾಡಬೇಕು? ಇದಿರೆ ಬಂದು ಹೇಳಿ ಕೇಳುವಷ್ಟು ಧೈರ್ಯ-ಸ್ಥೈರ್ಯ-ಸಾಹಸಗಳು ಯಾರಿಗೂ ಇಲ್ಲ. ನಗೇಶನು ಕೈಯಲ್ಲಾಗದ ಹೇಡಿ ಗಂಡಸಾಗಿದ್ದರೆ, ಇಷ್ಟು ಹೊತ್ತಿಗೆ ಅವನಾಗಲೀ ಇವರ ಬಲೆಯಲ್ಲಿ ಬೀಳುತ್ತಿದ್ದನು. ಈಗ ಹಾಗಾಗಲಿಲ್ಲ; ಆಗುವ ನೆಂದು ಯೋಚಿಸುವಂತೆಯೂ ಇಲ್ಲ. ಏಕೆಂದರೆ, ವಾಪ! ಶಿವಪುರದ ಮಹಾಜನರು, ಗುರುಪೀಠದ ಸಮಕ್ಷದಲ್ಲಿ ಕಂಕಣ ಕಟ್ಟಿಕೊಂಡಂತೆ ನಡೆಯಬೇಕಲ್ಲವೆ? ಅವರು ನಗೇಶನಿಗೂ ಅವನ ಅನುಗಾಮಿಗಳಿಗೂ ಸಹಾಯ ಮಾಡುವ ಮಾತು ಹಾಗಿರಲಿ; ಅವರ ಸೌಕ್ಯನ್ನು ಮುರಿದು. ಹೇಗಾದರೂ ತಮ್ಮ ಉದ್ದೇಶವನ್ನು ಈಡೇರಿಸಿಕೊಳ್ಳಬೇಕೆಂದು ತೊಟ್ಟಿರುವ ಹಠವನ್ನಾದರೂ ಸಾಧಿಸಿಕೊಂಡರೆ ಸಾಕು. ಅದು ಹೇಗಾಗಬೇಕು?—

ಹೇಸಿಕೆ, ತಂಬುಲ. ಮಸಿಯ ಮಡಕೆ, ವಿಕೃತಾಕಾರದ ಮಾಟದ ಜೊಂಬೆಗಳು, ಇನ್ನೆಲ್ಲವನ್ನೂ ದಿನವೂ ಬೆಳಗಾಗುವುದರೊಳಗಾಗಿ ಮನೆಯ ಮುಂದೆ ತಂದು ತುಂಬಿಸುವುದೂ, ರಾತ್ರಿಯಲ್ಲಿ ಮನೆಯಮೇಲೆ ಕಲ್ಲುಗಳನ್ನೆಸುವುದೂ, ಇನ್ನೂ ಎಷ್ಟೆಷ್ಟೋ ಕೆಟ್ಟಕೆಲಸಗಳನ್ನು ಮಾಡಿಸಿದುದಾಯಿತು.

ಸಮಾವುಡೂ ಗಣನೆಗೆ ಒರುವಂತಹುವಾಗಲಿಲ್ಲ. ಅಲ್ಲದೆ, ಅದನ್ನು ಮಾಡಿದ ಪರಿಗೂ ಮಾಡಿಸಿದವರಿಗೂ ಮನ್ನಣೆಯಾಗಿ ಕೈಕೋಳಗಳೂ, ಅಪರಾಧ ಕಾಣಿಕೆಯ ಸುಲಿಗೆಗಳೂ ತಪ್ಪಲಿಲ್ಲ. ಇದು ಸಾಲದೆಂದು, ಒಂದೆರಡುಬಾರಿ ನಗೇಶರಾಯನ ಮನೆಗೆ ಕನ್ನವೂ ಬಿದ್ದಿತು. ಆದರೇನು? ಕನ್ನ ಹಾಕಿದವರಿಗೆ ಆ ಕಡೆಯಿಂದಲೇ ತಂಬಾಕಿಯ ಮದ್ದಿನೇಟು ಮಾತ್ರ ದೊರಕಿತಲ್ಲದೆ, ಸುತ್ತೇನೂ ದೊರೆಯಲಿಲ್ಲ. ಪ್ರಚಂಡನಾದ ನಗೇಶರಾಯನನ್ನು ದಾರಿಗೆ ತರುವ ಉಪಾಯವು ಮತ್ತಾವುದೂ ಇವರಿಗೆ ಉಳಿಯಲಿಲ್ಲ. ಕಡೆಗೆ, ನಗೇಶರಾಯನಿಗೆ ವಕ್ಕರಿಸಿದ್ದು ಶನಿಯು. ಅತನ ಉದ್ಧೃತತನಕ್ಕೆ ಹೆದರಿ, ಅತನಿಗೆ ಮುಖ್ಯ ಸಹಾಯಕರಾಗಿರುವ ಕಲೆಕ್ಟರ್ ಜ್ಞಾನಸಾರ ಚಕ್ರವರ್ತಿಯ ಕಡೆಗೂ, ಶರಚ್ಚಂದ್ರನಾಥನ ಕಡೆಗೂ ತಿರುಗಿ, ತನ್ನ ಪ್ರತಾಪವನ್ನು ಸ್ವಲ್ಪ ಸ್ವಲ್ಪವಾಗಿ ಪ್ರಕಟಪಡಿಸಲು ಸೊದಲುಮಾಡಿತು.

ಕಲೆಕ್ಟರ್ ಜ್ಞಾನಸಾರ ಚಕ್ರವರ್ತಿಯೇನು, ಸಾಮಾನ್ಯಪುರುಷನೇ? ಪುಂಡರ ತಂಡಗಳನ್ನು ಕಂಡಕಂಡಲ್ಲಿಯೇ ಬಂಡುಮಾಡುವ ಉದ್ದಂಡ ಪುರುಷನೇ ನಮ್ಮ ಚಕ್ರವರ್ತಿ ಮಹಾಶಯನು!!! ಈ ಗಂಡುಗಲಿಯು ಅಂಜುಕುಳಿಗಳ ಈ ತಂದೆತನಕ್ಕೆ ಹೆದರುವನೇನು? ಎಂದಿಗೂ ಇಲ್ಲ. ಆಗಲಿ, ಶಿವಪುರದ ಮಹಾಜನರೆಲ್ಲರೂ ಬಂದಾಗಿ ಬರಲಿ; ಬೇಕಾದ ಮಾಟವನ್ನು ಹೂಡಲಿ; ಭಯವಿಲ್ಲ. ಪ್ರಾಣಹಾನಿಯಿಲ್ಲದೆಯೇ ಅವರನ್ನು ಪಂಜರಾಬದ್ಧರನ್ನಾಗಿ ಮಾಡದೆ ಬಿಡುವವನು ನಾನಲ್ಲ. ಮಾಟಕ್ಕೆ ತಕ್ಕ ಮದ್ದು ನನ್ನಲ್ಲಿಲ್ಲದೇ ಹೋಗಿಲ್ಲ. ಇದೇ ಈಗಲೇ ಹೊರಬೀಳುತ್ತದೆ." ಎಂದು ಹೇಳಿ, ತನ್ನನ್ನು ನೋಡಬಂದವರೆಲ್ಲರಿಗೂ ತಕ್ಕ ಮನ್ನಣೆಯನ್ನೇ ಮಾಡಿ ಕಳುಹಿದನು.

ಅದು ಹೇಗೂ ಇರಲಿ; ಶಿವಪುರದಲ್ಲಿ ಒಮ್ಮೊಂದೊಮ್ಮೆಯೇ ಇಬ್ಬರು ಕಲೆಕ್ಟರ್ ಚಕ್ರವರ್ತಿಗಳ ಜನ್ಮೋತ್ಸವವು. ಇಂದು ಅವರ ವಿಶಾಲಭವನದಲ್ಲಿ ಸಕಲ ಸಂಭ್ರಮದಿಂದಲೂ ನಡೆವುದು. ಭೋಜನ, ತಾಂಬೂಲ, ದಕ್ಷಿಣೆ, ಉಡುಗೊರೆಗಳನ್ನು ಬಯಸುವರಿಗೆ ಇದೇ ಸುಗ್ಗಿಯವೇಳೆ; ಬೇಕಾದವರು ಬಂದು, ಬೇಕಾದುದನ್ನು ಬೇಡಿಕೊಂಡು ಹೋಗಬಹುದು. ರಾತ್ರಿ ಹನ್ನೆರಡು ಗಂಟೆಯವರೆಗೆ ಯಾರು ಬಂದರೂ ಉಚಿತ ಸನ್ಮಾನಗಳಾಗುವವು; ಆಬಳಿಕ

ಬಂದರೆ ದೊರೆಯದು." ಎಂದೀಬಗೆಯ ಡಂಗುರೆಯ ಸುದ್ದಿಯೊಂದು ಎಲ್ಲ ಕೆಯಲ್ಲಿಯೂ ಹರಡಿಕೊಂಡಿತು. ಆಬಳಿಕ ಕೇಳಬೇಕೆ,—ಜನರ ಉತ್ಸಾಹ ವೆಷ್ಟರದೆಂಬುದನ್ನು ?—

.. ಭೋಜನಕೆಂದರೆ, ದ್ವಿಜರಾವ್ಯೂ-ದಶಯೋಜನವಾದರೂ ಸಾರು ವೆವ್ಯೂ." ಎಂಬ ನಾಣ್ಣುಡಿಯೇ ಉಂಟಷ್ಟೆ. ಹಾಗೂ ಭೂರಿಭೋಜನ ವೆಂದರೆ ಹೇಳುವುದೇನು?— ಹವ್ಯ-ಕವ್ಯಗಳೆಂದರೆ ಸಾಕು; ನಮ್ಮವರೆಲ್ಲರ ಕಿವಿಗಳೂ ಆನೆಯ ಕಿವಿಗಳಂತೆ ಅಗಲವಾಗುವುವು. ಕಣ್ಣು ನೋಟಗ ಳಂತೂ, ಪಕ್ಷಿರಾಜನ ದೂರದೃಷ್ಟಿಯನ್ನೂ ಕೂಡ ಹಿಂದೇಳಿಸಿಬಿಟ್ಟು ತಾವೇ ಮುಂದಾಗುವುವು. ಮತ್ತೆ ಮನಸ್ಸೆಂದರೆ -ಸಾಕ್ಷಾತ್ ಮಾರುತನನ್ನೂ ಜಯಿಸಬಲ್ಲುದೆಂದು ಹೇಳಲು ತಡೆಯಿಲ್ಲ. ಇಂತಹ ಅದ್ಭುತ ಶಕ್ತಿಯುಳ್ಳ ವರಾದುದರಿಂದಲೇ ನಮ್ಮಲ್ಲಿ ಭಟ್ಟಾಚಾರ್ಯರಂತಿರುವ ಬಹುಮಂದಿ ನಿಪುಣ ಬ್ರಾಹ್ಮಣರು, ಒಂದೇ ದಿನದಲ್ಲಿ ನಾಲ್ಕಾರು ಪಿತೃಕಮ್ಮಗಳನ್ನು ಮಾಡಿಸಬಲ್ಲ ವೌಲೋಹಿತ್ಯವನ್ನೂ, ಅದೂ ಸಾಗಿ ಮುಂದೆ ಒಂದರೆ, ಬ್ರಾಹ್ಮಣ್ಯವನ್ನು ನಿಸಿ ಕೊಳ್ಳಬೇಕೆಂಬ ಒಂದೇ ನೆವದಿಂದ,ಒಂದೇ ಹಗಲಲ್ಲಿ, ಎರಡು ಮನೆಯಲ್ಲಿಯೂ ಸಮಂಡೀಕರಣದ ನಿಮಂತ್ರಣಕ್ಕೂ ಬದ್ಧರಾಗಿ ಬಂದು ನಿಂತಿರುವುದನ್ನೂ, ಮುಂದೆ ಇನ್ನೂ ಹೆಚ್ಚಿನ ಅದ್ಭುತಸಾಹಸಗಳನ್ನು ತೋರಲು ಉದ್ದೇಶಪಟ್ಟಿ ರುವುದನ್ನೂ ನವನಾಗರಿಕರ ಸಹಚರ್ಯೆಯಲ್ಲಿರುವವರಲ್ಲಿ ಬಹುವಾಗಿ ನೋಡಬಹುದಾಗಿದೆ. ಹೀಗೆ ಒದೆದಿದೆಯೆಂದು, ಪಾಪ! ಆ ನಮ್ಮ ಧರ್ಮ ಬಾಂಧವರು ಮುಳಿವವರಾದರೆ, ಅದಕ್ಕೆ ನಾವಾಗಲೀ, ನಮ್ಮ ಲೇಖನಿಯಾ ಗಲೀ ಉತ್ತರವಾದಿತ್ವವನ್ನು ವಹಿಸಬೇಕಾದುದಿಲ್ಲ. ಅಂತವರ ಕರ್ಮವೇ, ಅವರ ಮನೋಗತಿಯೇ, ಅವರ ಆಗ್ರಹಕ್ಕೆ ಪಕ್ಕಾಗಬೇಕೆಂಬುದನ್ನು ಅವರು ಖಚಿತವಾಗಿ ತಿಳಿದು, ತಮ್ಮ ನಾಲಿಗೆಯನ್ನು ಉದ್ದುದ್ದವಾಗಿ ನೀಡದೆ ತಡೆ ಯಬೇಕೆಂದು ಮಾತ್ರ ಸೂಚಿಸಿ ಮುಂದೆ ಸಾಗುವೆವು.

ಡಂಗುರೆಯಲ್ಲಿ ಸಾರಿದಂತೆ ಇಂದು, ನಮ್ಮ ಶಿವಪುರದ ಕಲೆಕ್ಟರ್ ಜ್ಞಾನಸಾರಚಕ್ರವರ್ತಿಗೆ ಜನ್ಮೋತ್ಸವವು. ಚಕ್ರವರ್ತಿ ಮಹಾಶಯನಿಂದ ಲೂ, ಮತ್ತು ಶರಚ್ಚಂದ್ರ-ನಗೇಶರಾಯರ ಕಡೆಯಿಂದಲೂ ನಾವು ಆಮಂತ್ರಿ ತರಾಗಿಯೇ ಇರುತ್ತೇವೆ. ಹೇಗಿದ್ದರೂ ನಾವು ಅಲ್ಲಿಗೆ ಹೋಗಲೇಬೇಕು.

ಮುಂದಾಗಿಯೇ ಹೋಗಿ ಎಲ್ಲರೊಡನೆ ನಾವೂ ಸೇರಿ, ನಮ್ಮ ಕೈಲಾದ ಉಪಕರಣಗಳನ್ನು ಸಿದ್ಧಪಡಿಸುವುದು ಸಹಜವಲ್ಲವೆ? ನಿಜ! ಮೇಲೆಮೇಲೆ ಅಳುಗಳನ್ನು ಬರಮಾಡಿಕೊಂಡು ಅಬ್ಬರದ ಮನ್ನಣೆಯಿಂದ ಜಗ್ಗುಹಾಕುತ್ತ ಹೋಗುವವರ ಮಾತು ನಮಗಿಲ್ಲ. ಆದುದರಿಂದ ನಮ್ಮ ಸುಹೃದಯ ವಾಚಕರೇ, ನಡೆಯಿರಿ; ನಮ್ಮೊಡನೆ ನೀವೆಲ್ಲರೂ ಉತ್ಸವಕಾರ್ಯದಲ್ಲಿ ಸಹಾಯಕರಾಗಬೇಕಾಗಿದೆ. ಅದೇನು ಹೇಳುವಿರಿ?—

" ನೀವಂತೂ ಆಮಂತ್ರಿತರಾಗಿರುವಿರಿ. ಹೋಗುವುದು ಸಹಜ. ನಾವೇಕೆ ಬರಬೇಕು? ' ಕರೆಯದವರ ಮನೆಗೆ ಇರಲಾರದೆ ಹೋದರು' ಎಂಬ ನಾಣ್ಣುಡಿಯಂತೆ ನಮಗಲ್ಲಿ ಕೆಲಸವೇನು?"

ಛೀ, ಛೀ !! ಹಾಗೆನ್ನಬಾರದು, ಸುಹೃದಯರೇ! ನಮ್ಮ ಚಕ್ರವರ್ತಿಯವರಾಗಲಿ, ಅವರ ಮನೆಯವರಲ್ಲಿಯಾರೇ ಆಗಲೀ, ಅಂತಹ ದುರಭಿಮಾನವುಳ್ಳವರಾಗಿಲ್ಲ. ಅಲ್ಲದೆ ಅವರಿಗೆ ನಮ್ಮಲ್ಲಿ ಅಕೃತ್ರಿಮವಾದ ವಿಶ್ವಾಸವೂ, ಅವರಲ್ಲಿ ನಮಗೆ ಸಂಪೂರ್ಣವಾದ ಗೌರವವೂ ಇರುವುದು. ಹೀಗೆ ನಿರ್ದುಷ್ಟ-ಪವಿತ್ರಸ್ನೇಹದಿಂದ ಧರ್ಮಪಾಶಬದ್ಧರಾಗಿರುವ ನಮ್ಮಲ್ಲಿ ನೀವು ಭೇದವನ್ನು ಹೇಗೆ ಕಲ್ಪಿಸುವಿರಿ? ಅವರೇ ಬಂದು ಕರೆಯಬೇಕೆಂಬುದು ಮೂರ್ಖತನವು. ಅವರಿಗೆ ಪ್ರತಿನಿಧಿಗಳಾಗಿ ನಾವೇ ನಿಮಗೆ ಇದೇ ಅಕ್ಷತೆ ಕೊಟ್ಟು ಕರೆದಿರುವೆವಷ್ಟೆ. ಇನ್ನೂ ಸಂಶಯವೇನು?

" ಹೇಗಾದರೂ ಆಗಲಿ, ನಡೆಯಿರಿ. ನಿಮ್ಮ ಹಿಂದೆ ಬರುವುದು ನಮ್ಮ ಕೆಲಸ. ಅಲ್ಲಿ ದೊರೆಯಬಹುದಾದ ಮನ್ನಣೆಗಾಗಲೀ, ಅವಹೇಳನೆಗಾಗಲೀ ನೀವೇ ತಲೆಯೊಡ್ಡಬೇಕು."

ಓಹೋ! ಧಾರಾಳವಾಗಿ ತಲೆಯೊಡ್ಡುವೆವು. ಅಷ್ಟು ಧೈರ್ಯವಿಲ್ಲದಿದ್ದರೆ, ನಿಮ್ಮನ್ನು ಕರೆವುದಾಗಲೀ, ಇಷ್ಟುದೂರದ ವ್ಯಾಖ್ಯಾನವನ್ನು ಹಿಡಿವುದಾಗಲೀ ನಮಗೆ ಸಾಧ್ಯವಾಗುತ್ತಿದ್ದಿತೆ? ಇನ್ನು ನಡೆಯಿರಿ. ನೋಡಿದಿರೊ?—ಕಲೆಕ್ಟರ್ ಚಕ್ರವರ್ತಿಯವರ ವಿಶಾಲಭವನವಿದೇ!

ಅಬ್ಬ! ಏನಿದು? ಮನೆಯ ಮುಂಗಡೆ-ಹಿಂಗಡೆ-ಇಕ್ಕೆಲಗಳಲ್ಲಿಯೂ ಸುತ್ತಲೂ ಇದೇನು—ಪಟಗೃಹ (ಬಿಡಾರ- Tent) ಗಳನ್ನು ನಿರ್ಮಿಸಿರುವರು? ಅಲ್ಲಿಗಲ್ಲಿಗೆ ತಳಿರು ತೋರಣಗಳ ಚಪ್ಪರಗಳೇಕೆ? ಎಷ್ಟೊಂದು

ಸಡಗರ! ಎಷ್ಟು ಸಂತೋಷ!! ಇರಲಿ. ಇಲ್ಲಿ ಇದೇ ಹೊರಬಾಗಿಲ ಬಳಿಯಲ್ಲಿರುವ ಮಂಟಪದಲ್ಲಿ ಕುಳಿತಿದ್ದು ನಿನೋದವನ್ನು ನೋಡುವ.

ಹೋ, ತಾಳಿರಿ! ಅದೇನದು? ಮಂಟಪದ್ವಾರದಲ್ಲಿ ತೂಗಿರುವ ಹಲಗೆಯಮೇಲೆ ಏನು ಬರೆದಿದೆ, ನೋಡಿರಿ?

"ಆಗಂತುಕರಿಗೆ ವಂದನೆ. ಬಂದವರಲ್ಲ. ಪತಿತರು, ದೀನರು, ಅನಾಥರು, ಅಂಗಹೀನರು, ಗುರುಪೀಠಾಶ್ರಯದಿಂದ ಬಹಿಷ್ಕೃತರಾಗಿರುವ ಪರಿಮಿತಾಚಾರಿಗಳು, ಇವರಲ್ಲಿ ಯಾರಿದ್ದರೂ ಅಪ್ಪಣೆಯನ್ನು ಕೇಳದೆಯೇ ಬರಬಹುದು. ಉಳಿದವರು ಅಪ್ಪಣೆಯಿಲ್ಲದೆ ಒಳಗೆ ಬರಲಾಗದು."

"ಇದೆಂತಹ ವಿಲಕ್ಷಣವಾದ ಸತ್ಕಾರ! ಈಗ ನಾವು ಮೇಲೆ ಹೇಳಲ್ಪಟ್ಟವರಲ್ಲಿ ಯಾವ ಗುಂಪಿಗೆ ಸೇರಬೇಕು?"

ಸುಹೃದರೇ! ಇದು ನಮಗೆ ಅಥವಾ ನಿಮಗೆ ಬರೆದುದಾಗಿಲ್ಲ. ಇದರ ವಿಚಾರವು ನಿಮಗೆ ಮುಂದೆ ತಿಳಿವುದು. ಅಲ್ಲಿಯವರೆಗೆ ತಾಳ್ಮೆಯನ್ನು ತೆಗದುಕೊಳ್ಳಿರಿ. ಹಾಗೂ ನಿಮಗೆ ಸಮಾಧಾನವಿಲ್ಲವೆಂದರೆ ನೋಡಿರಿ; ನಾವೇನೋ ನೀಚಾಶ್ರಯದಿಂದ ಬಹಿಷ್ಕೃತರಾಗಿರುವ ಪರಿಮಿತಾಚಾರಿಗಳಾಗಿದ್ದೇವೆ. ನಮಗೆ ಯಾರ ಅಪ್ಪಣೆಯೂ ಬೇಕಾಗಿಯೇ ಇರುವುದಿಲ್ಲ. ನಮ್ಮೊಡನೆ ಬರಲು ನಿಮಗಷ್ಟೇಕೆ ಹೆದರಿಕೆ? ಬನ್ನಿರಿ. ಇತ್ತ ನೋಡಿರಿ. ಇಲ್ಲಿಯೇ ನಮ್ಮ ದೇಶಭಕ್ತಾಗ್ರಣಿಗಳಾದ ನಗೇಶರಾಯ, ತರಙ್ಗೇಂದ್ರನಾಥ, ಕಲೆಕ್ಟರ್ ಚಕ್ರವರ್ತಿಮಹಾಶಯ—ಈ ಮೂವರೂ ಆಸನಾಸೀನರಾಗಿ ಕುಳಿತಿರುವರು. ಉಳಿದವರು ಅಲ್ಲಲ್ಲಿ ತಮ್ಮ ತಮ್ಮ ಕೆಲಸಗಳಲ್ಲಿ ನಿರತರಾಗಿರುವರು. ಇಲ್ಲಿ ಇವರು ಮೂವರೇ ಇರುವರು.

"ಇಲ್ಲಿ ಇವರು ಕುಳಿತು ಮಾಡುತ್ತಿರುವುದೇನು?" ಉಂಡುತಿಂದು ಬಂದವರ ಹೆಸರನ್ನೂ ಮನೆತನದ ವಿಚಾರವನ್ನೂ ಕೇಳಿ ತಿಳಿದು, ತಮ್ಮ ಹಸ್ತಪುಸ್ತಕದಲ್ಲಿ ಗುರುತು ಮಾಡಿಕೊಳ್ಳುವುದು; ಬಂದವರ ಯೋಗ್ಯತೆಗೆ ತಕ್ಕಂತೆ ದಕ್ಷಿಣೆ-ವಸ್ತ್ರಗಳ ಬಹುಮಾನಗಳನ್ನೂ ಕೊಟ್ಟು ಸನಿಮಾತಿನಿಂದ ಬೀಳ್ಕೊಡುವುದು.

ಆದರೆ—'ನಮಗೆ ಇಲ್ಲಿ ಬೇಕಾದುದೇನು?' ಎಂದು ಕೇಳುವಿರೋ—ಹೇಗೆ? ಊಟದಲ್ಲಿಯೇ ನಿಮ್ಮ ಇಷ್ಟವೊ?—ಕಣ್ಣಾನ ದಣಿವಂತಿರುವ ನೋಟ

ವನ್ನು ನೋಡಲಿಷ್ಟವೊ? ನೋಟವೇ ಇಷ್ಟವಾದರೆ ಎಲ್ಲವೂ ಇಲ್ಲಿಯೇ ಕಾಣುವುದು. ಇದೆ ನೋಡಿರಿ; ನಿಮಗಾಗಿ ಉನ್ನತಾಸನ! ಇಲ್ಲಿ ನೀವು ಕುಳಿತು, ಸಾವಧಾನದಿಂದ ಸಮಾಲೋಚಿಸಿರಿ. ವಾಚಕರಾದ ನಿಮ್ಮ ಆತ್ಮಸಮಾಧಾನವೇ ನಮ್ಮ ಶ್ರಮಕ್ಕೆ ತಕ್ಕ ಬಹುಮಾನ. ಅದೇ ನಮಗ ನಿರ್ದಿಷ್ಟವಾದ ಫಲ. ಆದುದರಿಂದ ಇಲ್ಲಿಯೇ ಸ್ವಿಚ್ಛಾವದಲ್ಲಿ ಕುಳ್ಳಿರಿ. ನಾವು ಮಾತ್ರ ಇಲ್ಲಿ ನೆಲೆಗೊಂಡರೆ ಸಾಗದು! ಎಲ್ಲೆಡೆಯಲ್ಲೆಯೂ ತಿರಿಗಿ, ಎಲ್ಲರನ್ನೂ ನೋಡಿ ನುಡಿಯಿಸಿ, ಎಲ್ಲ ವಸ್ತುಗಳ ವಿಚಾರವನ್ನೂ ಸಂಗ್ರಹಿಸಿ ಬಂದು, ನಿಮಗೆ ನಿವೇದಿಸಬೇಕಾದುದು ನಮ್ಮ ಕರ್ತವ್ಯ. ಆವರೆಗೆ ನೀವು ಮಾತ್ರ ಬೇಸರಿಸದೆ ನಿಮ್ಮ ಮುಂದೆ ಇಲ್ಲಿರುವ ತ್ರಿಮೂರ್ತಿಗಳ ಸಂಭಾಷಣೆಯಲ್ಲಿ ಸಂಪೂರ್ಣ ಗಮನವಿಟ್ಟು, ವಿದ್ಯಮಾನವನ್ನು ಚೆನ್ನಾಗಿ ತಿಳಿದುಕೊಂಡಿರಬೇಕು.

(ಕುಳಿತಿದ್ದವರಲ್ಲಿ ಸಂಭಾಷಣೆಗೆ ಮೊದಲಾಯಿತು)

ಕಲೆಕ್ಟರ್:—ಅಯ್ಯಾ ನಗೇಶರಾಯ! ನಮ್ಮ ಹೂಟವು ಹೇಗಿದೆ—ನೋಡಿದೆಯಾ?

ನಗೇಶ:—ಚೆನ್ನಾಗಿದೆ. ವಾಪ! ಈಗ ಅವರಿಗೆಲ್ಲ ಎಷ್ಟು ಸಂಕಟವಾಗಿರಬಹುದೋ, ತಿಳಿಯದು!

ಶರಚ್ಚಂದ್ರ:—ಸಂಕಟವಲ್ಲದೆ ಮತ್ತೇನು? ಐದುಸಾವಿರ ರೂಪಾಯಿಗಳ ಮಾತೇನು, ಸಾಮಾನ್ಯವಾದುದೋ? ಅವರ ಅಪ್ಪನ ಕಾಲದಿಂದ ಐದು ಸಹಸ್ರ ಕಾಸುಗಳನ್ನಾದರೂ ಅವರು ಗಳಿಸಿಟ್ಟಿರುವರೋ? ಒಟ್ಟಿಗೆ ಒಂದೇ ದಿನದಲ್ಲಿ ಐದುಸಾವಿರ ರೂಪಾಯಿಗಳು ತಮಗೆ ದೊರೆಯಬಹುದೆಂದು ಹಿಗ್ಗುತ್ತಿದ್ದರು; ಅಲ್ಲದೆ, ಸಾಲಂಕೃತ ಕನ್ಯಾದಾನವಾದರೆ, ತಮ್ಮ ಕುಲ ಕೋಟಿಯೂ ಪವಿತ್ರವಾಗಿ, ತಮ್ಮ ಮುಂದಿನ ಮಹೋನ್ನತಪದವಿಗೂ ಮಾರ್ಗವಾಗಬಹುದೆಂಬ ದುರಾಶೆಯೂ ಸುತ್ತಿದ್ದಿತು. ಇದರಿಂದ ಅವರು ಏನೋ ಒಂದು ತಂತ್ರವನ್ನೂ ಒಡ್ಡಿದರು. ಆದರೆ, ಅವರು ಒಡ್ಡಿದ ಬಲೆಯಲ್ಲಿ ಅವರೇ ಸಿಕ್ಕಬೇಕಾಗಿಬಂದುದೂ, ಅಂತದರಿಂದ ತಮ್ಮ ಸರ್ವನಾಶವನ್ನು ತಾವೇ ಮಾಡಿಕೊಂಡಂತೆ ಆಗಿರುವುದೂ ಸಂಕಟವಲ್ಲದೆ ಮತ್ತೇನು? ನಿನಗೆ ಅಷ್ಟರ ದಯೆಯಿಲ್ಲದೆ ಅನ್ಯಾಯವಾಗಿ ಅವರೆಲ್ಲರನ್ನೂ ಇಷ್ಟುದೂರ

ಬಳಲಿಸಿದೆ. ಆಗಲೇ ಅವರಿಗೆ ವಿಧೇಯನಾಗಿ, ಅವರು ನಿರೂಪಿಸಿದಂತೆ ಕಾಣಿಕೆಯನ್ನೊಪ್ಪಿಸಿ, ಕನ್ಯೆಯನ್ನಿತ್ತು, ಪುನೀತನೆನ್ನಿಸಕೊಂಡು ಬಂದಿದ್ದರೆ,-

ನಗೇಶ:-ಕೆರುನಗೆಯಿಂದ-ಏಮಾಡಬಹುದಾಗಿತ್ತು: ಅಪರೆ. ನಾನೇನು ಮಾಡಲಿ? ನನ್ನ ಯುತ್ನದಲ್ಲೇನಿದೆ? ಮಗಳನ್ನು ಕೊಡುವೆನೆಂದರೆ, ಅವ ಳೇನೂ ಅರಿಯದ ಹುಡುಗಿಯಲ್ಲ; ನಂದಿನಿಯು ಕೈಕೆಳಗೆ ಶಿಕ್ಷಿತೆಯಾದವಳು. ಅಲ್ಲದೆ, ನನ್ನ ಪತ್ನಿಯೇನೂ ಮೂರ್ಖಸಮಾಜಕ್ಕೆ ಸೇರಿದವಳಾಗಿಲ್ಲ. ಇದರ ಮೇಲೆ, ನನಗೆ ನಾಲ್ಕಾರು ಹೆಣ್ಣುಮಕ್ಕಳಾದರೂ ಆಗಿದ್ದರೆ, ಹೇಗಾದರೂ ಭಾರ ತಪ್ಪಿದರೆ ಸಾಕೆಂದು, ಅಪಾತ್ರವೊ--ಸತ್ಪಾತ್ರವೊ, ಕುಲಹೀನನೊ--ವರಹೀನನೊ, ಯಾವನೇ ಆಗಲಿ, ಒಬ್ಬನ ಕೈಯಲ್ಲಿರಿಸಿ ಹೋಗೆನ್ನ ಬಹುದಾಗಿತ್ತು; ಈಗ ಹಾಗೂ ಇಲ್ಲ. ಕುಲಕ್ಕೆಲ್ಲಾ ಒಬ್ಬಳೇ ಮಗಳು. ಮಗನ ಮಾತು ಹಾಗಿರಲಿ; ಪುತ್ರನು ಸತ್ಯವ್ರತನಾಗಿದ್ದರೆ, ತನ್ನ ತಾಯ್ತಂದೆಗಳ ಕುಲವನ್ನು ಮಾತ್ರವೇ ಉದ್ಧರಿಸುವನು. ಪುತ್ರಿಯು ಗುಣವತಿಯಾಗಿದ್ದರೆ, ಪಿತೃಕುಲವನ್ನೂ ಮತ್ತು ತನ್ನ ಪತಿಯ ಕುಲವನ್ನೂ ಉದ್ಧರಿಸುವವಳಾಗುವಳು. ಇವಳು ಕೆಟ್ಟವಳಾದರೆ, ಮೇಲೆ ಹೇಳಿದವರೆಲ್ಲರಿಗೂ ತನ್ನ ಪಾತಕದ ಹೊರೆಯಲ್ಲಿ ಅಷ್ಟಿಷ್ಟಾಗಿ ಹಂಚುವಳು. ಹೀಗೆಂದು ತಿಳಿದು, ಅವಳ ಸುಕೃತಪರಿಪಾಕಕ್ಕೆ ಸಹಕಾರಿಗಳಾಗದೆ, ದುಷ್ಕೃತ್ಯಕ್ಕೆ ಪ್ರೇರಕರಾಗಬೇಕೆಂದರೆ, ನನ್ನಿಂದಾದೀತೇ? ಇನ್ನು ಕಾಣಿಕೆಯೊಪ್ಪಿಸುವ ಮಾತೆಂದರೆ, ನನಗೆ ಹಣದಮೇಲಿನ ಅಧಿಕಾರವೆಲ್ಲಿಯದು? ಮಗನಿರುವನು; ಹಾಗೂ ನನ್ನ ದುಂದುವೆಚ್ಚಕ್ಕಾಗಿ ನ್ಯಾಯಖಾತೆಯಿರುವುದು. ಇವೆರಡು ಕಡೆಯಿಂದಲೂ ಅನುಮತಿಹೊಂದಿ, ಅಲ್ಪಸ್ವಲ್ಪ ದ್ರವ್ಯವನ್ನು ಹೊಂದಬಹುದಾದರೂ, ಅದಕ್ಕೂ ವಿರ್ಚಿನ ಭಾಗಗಳು ಬೇರೆ ಬೇರೆ ಇರುವುವು. ಇನ್ನು ನನಗೆ ಕಾಣಿಕೆಯ ಮಾತಿಗೆ ಅವಕಾಶವೆಲ್ಲಿ! ಹೀಗಿರುವನಾನು ಪುನೀತನಾಗುವುದು ಹೇಗೆ? ನನ್ನನ್ನು ಪುನೀತನೆನ್ನಿಸಬೇಕಾದರೆ, ಭಗವಂತನೊಬ್ಬನೇ ದಯೆಮಾಡಬೇಕಲ್ಲದೆ, ಇನ್ನಾರಿಂದಲೂ ಹೇಗೂ ಸಾಧ್ಯವಾಗದೆಂದು ನನ್ನ ನಂಬಿಕೆಯಾಗಿದೆ.'

ಶರಚ್ಚಂದ್ರ:---ಕೆರುನಗೆಯಿಂದ-- "ಏನಯ್ಯ? ಶುದ್ಧನಾಸ್ತಿಕವಾದಿಯಾಗಿ ಹೋಗಿರುವೆ?"

ನಗೇಶ:—'ನಾಸ್ತಿಕವಾದಿಯೊಡನೆ ಸೇರಿದುದರಿಂದ ನಿಮ್ಮನ್ನೂ ಅಪವಾದವು ಬಿಡಲಿಲ್ಲವಷ್ಟೆ?'

ಶರಚ್ಚಂದ್ರ:—ಅಪವಾದವೋ—ಅಮೋದವೋ—ಏನಾದರೂ ಆಗಲಿ. ನೀನೇನೋ ಪ್ರಚಂಡನೆನ್ನಿಸಿದೆ. ಅದಿರಲಿ. ಈಗ ನಮ್ಮ ಕಲೆಕ್ಟರರು ಹೂಡಿರುವ ಹೂಟದಲ್ಲಿ ಮತ್ತಾವಾವ ವಿಶೇಷವು ಕಾಣಬಹುದೋ, ನೋಡಬೇಕು!

ನಗೇಶ:—ಕಾಣುವುದೇನು? ಹಲ್ಲಿರಿದು ಬೇಡಿ-ಬೇಡಿ ಬೇಸತ್ತು ಹೋಗುವುದನ್ನೇ ಕಾಣುವುದು. ಅದಿರಲಿ; ಎಲ್ಲಿ, ನಿನ್ನ ಮಗನು ಇಲ್ಲಿಗೆ ಬಂದಂತೆ ಕಾಣುತ್ತಿಲ್ಲ! ಅದೇಕೆ?

ಶರಚ್ಚಂದ್ರ:—'ನಾನು, ಅಲ್ಲೆ ನಡೆಯಿಸಬೇಕಾದುದೆಲ್ಲವನ್ನೂ ಗೊತ್ತು ಮಾಡಿಟ್ಟು ಬಂದಿರುತ್ತೇನೆ. ಇನ್ನು ನನಗೆ ಅಲ್ಲಿರಲು ಅವಕಾಶವಿಲ್ಲ. ಮತ್ತೆ ಸಾಯಂಕಾಲವಾದಬಳಿಕ, ಅದರೆ, ಬಂದೇನು." ಎಂದು ಹೇಳಿ ಹೊರಟು ಹೋದನು.

ನಗೇಶ:— ಅದೆಲ್ಲಿಗೆ ಹೋದನು?

ಕಲೆಕ್ಟರ್:—ಏನಯ್ಯಾ, ನಗೇಶರಾಯ! ಇಷ್ಟೇ ಸರಿಯೋ? ಅಚಲಚಂದ್ರನ ಹೂಟಗಳು ಇನ್ನೂ ಇಷ್ಟೆಷ್ಟೋ ಇವೆ. ಅವುಗಳಲ್ಲಿ ಇದೇ ಮೊದಲನೆಯದು. ಎರಡನೆಯದೆಂದರೆ, ನಾಳಿನ ಸಾಯಂಕಾಲಕ್ಕೆ ಇಲ್ಲಿಯ ಕಾಲೇಜಿನಲ್ಲಿ ನಡೆಯುಬೇಕಾಗಿರುವ ಸಂಘಶಕ್ತಿಯನ್ನು ಕುರಿತ ಉಪನ್ಯಾಸ!

ನಗೇಶ:—ಕಿರುನಗೆಯಿಂದ—'ಸರಿ, ಸರಿ; ಈಗ ಗೊತ್ತಾಯಿತು! ನಮ್ಮ ನಾದಾನಂದನೂ, ತಮ್ಮ ಮಗ ಭಕ್ತಿಸಾರಚಕ್ರವರ್ತಿಯೂ, ಮತ್ತು ತಮ್ಮ ಅಳಿಯ ಸೇವಾನಂದನೂ ಅಚಲಚಂದ್ರನೊಡನೆ ನಿನ್ನಿನಿಂದಲೂ ಬಹು ಸಡಗರದಲ್ಲಿರುವರು. ಇದರ ಕಾರಣವೇನೆಂಬುದು ನನಗೆ ಈವರೆಗೂ ತಿಳಿದಿರಲಿಲ್ಲ. ಸರಿ; ಮೂರನೆಯ ಹೂಟವಿನ್ನಾವುದೋ?—

ಕಲೆಕ್ಟರ್:—ಅದು ನಿನ್ನ ಮೂಲಕವಾಗಿಯೇ ನಡೆಯುತ್ತದೆ. ಈಗಲೇ ನಾವು ಬಾಯ್ಬೆರೆವುದರಿಂದ ಸ್ವಾರಸ್ಯಕ್ಕೆ ಕೊರತೆಯುಂಟಾಗಬಹುದು. ಇನ್ನು ನಾಲ್ಕಾರು ದಿವಸಗಳಾದರೆ ನೀನಾಗಿಯೇ ತಿಳಿದುಕೊಳ್ಳುವೆ.

ನಗೇಶ:—ಇದೇನು? ರಾತ್ರಿ ಹತ್ತುಗಂಟೆಯಾಗುತ್ತ ಬರುತ್ತಿದೆ; ಇನ್ನೂ ಸಮಾರಾಧನೆಯ ಗದ್ದಲವು ಕಡಿಮೆಯಾದಂತಿಲ್ಲವಲ್ಲ?

ಕಲೆಕ್ಟರ್:—ಏನಯ್ಯಾ, ಹೀಗೆ ಹೇಳುವೆ? ನಾವು ಕೊಟ್ಟಿರುವ ಅವಧಿಯು ರಾತ್ರಿ ೧೨ ಘಂಟೆಯ ವರೆಗೆ ಮಾತ್ರ. ಅದಕ್ಕಾಗಿ ತಂದಿಟ್ಟಿರುವ ರೊಕ್ಕವು, ಊಟದ ವೆಚ್ಚವಲ್ಲದೆ ನಾಲ್ಕು ಸಾವಿರ ರೂಪಾಯಿಗಳಷ್ಟೆ! ಇಷ್ಟು ಅಲ್ಪಾವಧಿಯಲ್ಲಿ, ಅತ್ಯಲ್ಪದ್ರವ್ಯದ ವಿನಿಯೋಗದಲ್ಲಿಯೇ ನಿನಗಿಷ್ಟು ಬೇಸರವುಂಟಾಯಿತೇನು?

ಶರಚ್ಚಂದ್ರ:—ಬೇಸರವಲ್ಲದೆ ಮತ್ತೇನು? ಈವರೆಗೆ ಬಂದ ಅಸಂಖ್ಯಾತ ಜನರಲ್ಲಿ, ಪೀಠಾಶ್ರಿತರೊಳಗೆ ಪ್ರಮುಖರಾದವರು ಒಬ್ಬರಾದರೂ ಬಂದಂತೆ ಕಾಣುತ್ತಿಲ್ಲ!

ಕಲೆಕ್ಟರ್: —ಪರಿಹಾಸದಿಂದ ನಕ್ಕು,—"ಪ್ರಮುಖರು ಈಗಲೇ ಹೇಗೆ ಬರಬಹುದು. ಸುತ್ತಮುತ್ತಲೂ ನೋಡಬೇಕು. ಹೊತ್ತು-ವೇಳೆಗಳನ್ನು ತಿಳಿದು, ಸರಿಯಾದ ರೀತಿಯಿಂದ ಬರಬೇಕು. ಸುಮ್ಮನೆ ಬಂದರಾದೀತೆ? ಅವರ ಅನುಯಾಯಿಗಳೇನೋ, ಸಹಜರೂಪದಿಂದಲೂ, ರೂಪಾಂತರದಿಂದಲೂ ಬಂದು, ಉಂಡು-ತಿಂದು, ತೇಗಿ, ಕೈತುಂಬಿಸಿಕೊಂಡೂ ಹೋದರು. ಅವರು ಹೇಳಿರುವ ಹೆಸರುಗಳು ಇದೊ, ಇಲ್ಲಿರುವ ಕರಡು ಕಾಗದದಲ್ಲಿರುವುವು. ಹಣದ ಎಣಿಕೆ, ವಸ್ತ್ರದ ಎಣಿಕೆಗಳಲ್ಲಿ ಮಾತ್ರವೇ ನಿರತರಾಗಿದ್ದ ನೀವು ಇದನ್ನು ಚೆನ್ನಾಗಿ ನೋಡಲಿಲ್ಲ."

ನಗೇಶ:—ಇರಬಹುದು.

ಇವರ ಸಂಭಾಷಣೆಯು ನಡುವೆ, ಹೊರಬಾಗಿಲಲ್ಲಿ—"ಅದೇಕೆ ತಡೆಗಟ್ಟುವಿರಯ್ಯ?" ಎಂಬ ಘರ್ಜನೆಯು ಕೇಳಿಸಿತು. ಕುಳಿತಿದ್ದ ಕಲೆಕ್ಟರನ ಕಿವಿ ನೆಟ್ಟಗಾಗಿ, ಉತ್ಸಾಹದಿಂದ—"ಸಿಕ್ಕಿತು; ಸಿಕ್ಕಿತು! ಸುಕಾರಿ ಸಿಕ್ಕಿಕೊಂಡಿತು." ಎಂದು ಕೂಗಿ ಹೇಳಿದನು. ಅಷ್ಟರಲ್ಲಿ ಬಾಗಿಲಲ್ಲಿದ್ದ ಗೊಲ್ಲನು ಓಡಿಬಂದು, ಕೈಮುಗಿದು—"ಮಹಾಸ್ವಾಮಿ! ಬಾಗಿಲಲ್ಲಿ ಅದಾರೋ, ನಾಲ್ಕಾರೇ ಮಂದಿ ಪ್ರಬಲಪುರುಷರು ಬಂದು ನಿಂತಿರುವರು. 'ಹೊತ್ತು ಮೀರಿಹೋಗಿದೆ. ನೀವೂ ಪ್ರಮುಖರಂತೆ ತೋರುತ್ತಿರುವಿರಿ. ನಿಮ್ಮನ್ನು ಒಳಗೆ ಬಿಡಲಾರೆವು' ಎಂದು ಕೂಗಿ ಹೇಳಿದರೂ ಕೇಳದೆ ಹಾರಾಡುತ್ತಿರುವರು." ಎಂದು ಹೇಳಿದನು.

ಕಲೆಕ್ಟರ್:— ಕರುಣೆಯಿಂದ— 'ಹೋಗಿ ಕೇಳು—ಅವರಾರು? ಏಕೆ ಬಂಡಿರುವರು? ಎಲ್ಲಿಯವರು?

ಗೊಲ್ಲನು ಹೊರಗೆ ಹೋಗಿ ಮತ್ತೆ ಬಂದು—'ಅವರು ಇದೇ ಊರವರಂತೆ. ಸ್ವಾಮಿಯನ್ನು ನೋಡಿ, ಹೇಳಿ—ಕೇಳಬೇಕಾದುದಿದೆಯಂತೆ.'

ಕಲೆಕ್ಟರ್:— ತಲೆದೂಗಿ— 'ಮತ್ತೆ ಹೋಗಿ ಹೇಳು— 'ಅನಾಥ-ಅಂಗಹೀನ-ರಿಕ್ತಹಸ್ತರುಗಳಿಗೆ ಅವಕಾಶವುಂಟು; ಅಲ್ಲದೆ, ಸಮಾಜದಿಂದ ಬಹಿಷ್ಕೃತರಾಗಿರುವವರಿಗೆ ಬರಲು ಅವಕಾಶವುಂಟು; ಮತ್ತಾರಿಗೂ ಇಲ್ಲಿ ಇಷ್ಟು ಹೊತ್ತಿನಮೇಲೆ ಬರಲು ಅವಕಾಶವಿಲ್ಲ. ಆದುದರಿಂದ ತಾವು ಯಾರಕಡೆಯವರು—ಏಕೆ ಬಂದಿರುವಿರಿ—ತಮ್ಮ ಹೆಸರೇನು? ಸರಿಯಾಗಿ ಹೇಳಿ, ಆಬಳಿಕ ಬರಬಹುದು.'—"

ಚಾರನು ಮತ್ತೆ ಓಡಿಹೋಗಿ, ಬಂದೆರಡು ಗಳಿಗೆಯಮೇಲೆ ಮರಳಿ ಬಂದು 'ಅವರು ಭಟ್ಟಾಚಾರ್ಯ, ಸಂತರೇ, ಮೊದಲಾದವರಂತೆ. ಗುರು ಪೀಠದಿಂದ ಅತ್ಯಗತ್ಯವಾದ ನಿರೂಪವನ್ನು ತಂದಿರುವರಂತೆ. ಒಳಗೆ ಬರಲು ಅವಕಾಶವನ್ನು ಕೊಡಬೇಕಂತೆ."

ಇಷ್ಟರಲ್ಲಿಯೇ ಹೊರಗಿನಿಂದ ಬಂದ ಭಕ್ತಸಾರ ಚಕ್ರವರ್ತಿಯು ಬಾಗಿಲಲ್ಲಿ ತಡೆಯಲ್ಪಟ್ಟಿದ್ದ ಭಟ್ಟಾಚಾರ್ಯರೇ ಮೊದಲಾದವರನ್ನು ಕಂಡು-'ಓಹೋ! ಅಪೂರ್ವಲಾಭ! ಒಳಗೆ ಬರಬೇಕು. ಇಲ್ಲೇಕೆ ನಿಂತಿರುವುದು?' ಎಂದು ಹೇಳಿ, ಸಡಗರದಿಂದ ಕರೆತಂದು, ತಂದೆಯಾದ ಜ್ಞಾನಸಾರ ಚಕ್ರವರ್ತಿಯನ್ನು ಕುರಿತು—'ಅಪ್ಪ! ಮಹಾಶಯರ ಆಗಮನದಿಂದ ನಮ್ಮವರೆಲ್ಲರೂ ಪವಿತ್ರರಾದರಲ್ಲವೆ?"

ಕಲೆಕ್ಟರ್:—ತಲೆಯತ್ತಿ 'ಓಹೋ! ಇದೇನಿದು? ಇದೇನಿದು!! ನೆನೆದಂತೆಯೇ ಬಂದಿರುವಿರಿ?"

ಭಟ್ಟಾಚಾರ್ಯ:— 'ಕಲೆಕ್ಟರರಿಗೆ ಕಲ್ಯಾಣವಾಗಲಿ! ಗುರುಪೀಠದಿಂದ ನಿರೂಪ—"

ಕಲೆಕ್ಟರ್:—'ಹೋ! ತಾಳಿರಿ. ಸ್ವಲ್ಪ ನಿಧಾನಿಸಿರಿ. ತಾವು ಇತ್ತ ಬರಬಾರದು.'

ಭಟ್ಟಾಚಾರ್ಯ:—ಅದೇಕೆ? ನಾವೇನು, ಅಸ್ಪರ ಕರ್ಮಭ್ರಷ್ಟರೇನು?

ಕಲೆಕ್ಟರ್:— ಕೋಪಗೊಳ್ಳಬಾರದು; ಮಹಾಶಯರೆ! ಕೋಪಿಸ ಬಾರದು. ತಮ್ಮನ್ನು ಪಾಷಂಡಿಗಳೆಂದಾಗಲೀ ಕರ್ಮಭ್ರಷ್ಟರೆಂದಾಗಲೀ ನಾನು ಹೇಳಲಿಲ್ಲ. ಇಲ್ಲಿ ನನ್ನೊಡನೆ ನಾಸ್ತಿಕ ವಾದಿಗಳೂ, ಆಚಾರ ಭ್ರಷ್ಟರೂ ಆದ ಸಮಾಜ ಬಹಿಷ್ಕೃತರು ಕುಳಿತಿರುವರು. ತಾವೂ ಇಲ್ಲಿಗೆ ಬಂದುದಾದರೆ, ಸಮಾಜವು ತಮ್ಮನ್ನೂ ಪ್ರಾಯಶ್ಚಿತ್ತಕ್ಕೆ ಎಳೆಯಬಹುದೇ ನೆಂಬ ಶಂಕೆಯಿಂದ ಹಾಗೆ ಹೇಳಿದೆನು.

ಭಟ್ಟಾಚಾರ್ಯ:— ಅದೇನು ಹೇಳುವಿರಯ್ಯ? ನಮ್ಮನ್ನು ಪ್ರಾಯಶ್ಚಿತ್ತಕ್ಕೆ ಗುರಿಮಾಡುವ ಶಕ್ತರೂ ಇದ್ದಾರೊ?

ಕಲೆಕ್ಟರ್:—ಇಲ್ಲದೆ ಉಂಟಿೂ? ನ್ಯಾಯವೆಂಬುದು ಎಲ್ಲರಿಗೂ ಇರ ಬೇಕು. ನ್ಯಾಯಕ್ಕೆ ತಪ್ಪಿದವರು ಯಾರೇ ಆಗಿದ್ದರೂ ಪ್ರಾಯಶ್ಚಿತ್ತವಾಗ ಬೇಕೆಂಬುದು ನಿಮ್ಮ ಶಾಸ್ತ್ರದಲ್ಲಿಯೇ ಇದೆಯಷ್ಟೆ?

ಭಟ್ಟಾ:— ಅದೇನದು? ನಮ್ಮ ಶಾಸ್ತ್ರ! ನಮ್ಮದು ಬೇರೆ ಶಾಸ್ತ್ರ? ನಿಮ್ಮದು ಬೇರೆ ಶಾಸ್ತ್ರವೊ?

ಕಲೆಕ್ಟರ್:— ಓಹೋ, ಸಂದೇಹವಿಲ್ಲದೆ! ನಿಮ್ಮ ಶಾಸ್ತ್ರವೆಂಬುದು ಕೇವಲ ಸಮಾಜಶಾಸನವೆಂಬದರ ಮೇಲೆಯೇ ನಿಂತಿರುವುದು. ನಮ್ಮ ಶಾಸ್ತ್ರವಿಚಾರವು ಹಾಗಿಲ್ಲ. ಅದು, ನ್ಯಾಯಾನ್ಯಾಯಗಳನ್ನು ಬಹು ಸೂಕ್ಷ್ಮ ದೃಷ್ಟಿಯಿಂದ ಪರಿಶೀಲಿಸಿ, ಕರ್ಮಕ್ಕೆ ತಕ್ಕ ಪ್ರಾಯಶ್ಚಿತ್ತಗಳನ್ನು ವಿಧಿಸುವು ದಾಗಿದೆ.

ಭಟ್ಟಾ:—ಅದುದರಿಂದಲೇ ಅಲ್ಲವೆ, ಕರ್ಮಹೀನರನ್ನೂ, ಅತ್ಯಾಚಾರಿಗ ಳನ್ನೂ, ಅವಿಧೇಯರನ್ನೂ ಪುರಸ್ಕರಿಸುತ್ತಿರುವುದು?

ಕಲೆಕ್ಟರ್:— ಎಂದಿಗೂ ನಮ್ಮಲ್ಲಿ ಆ ಅನ್ಯಾಯಾಚರಣೆಗೆ ಅವಕಾಶ ವಿಲ್ಲ. ನಮ್ಮಲ್ಲಿ ಕರ್ತವ್ಯವಿಮುಖರಾಗಲೀ, ಕಪಟಾಚರಣೆಯಿಂದ ಸಮಾ ಜದ ಉದ್ದೇಶವನ್ನೇ ಹಾಳು ಮಾಡುವ ಅತ್ಯಾಚಾರಿಗಳಾಗಲೀ, ನ್ಯಾಯ ನೀತಿಗಳಲ್ಲಿ ಗುರು-ಹಿರಿಯರನ್ನು ಕಾಲಿಂದ ತುಳಿದು ಕೆಡಹುವಂತಹ ಅವಿ ಧೇಯರಾಗಲೀ ಯಾರೂ ಇರುವುದಿಲ್ಲ. ತಿಳಿದಿರೇನು, ಭಟ್ಟಾಚಾರ್ಯರೇ! ಇಲ್ಲಿ ವಿಚಾರವಿಹೀನರ ಮಾತನ್ನೇ ವೇದವಾಕ್ಯದ ಪ್ರಮಾಣವೆಂದು ತಿಳಿದು,

ಉಚಿತಾನುಚಿತವನ್ನು ನೋಡದೆ ಕೆಲಸ ಮಾಡುವ ಮೂರ್ಖರು ಬಬ್ಬರಾ
ದರೂ ನಮ್ಮಲ್ಲಿರುವುದಿಲ್ಲವೆಂದು ತಿಳಿಯಿರಿ.

ಭಟ್ಟಾ:—ಹೇಗಾದರೂ ಹೊಗಳಿಕೊಳ್ಳಬಹುದಯ್ಯ! ನೀವು ಸಂಪ
ನ್ನರು. ಹೇಗೆ ಹೇಳಿದರೂ ಸೊಗಸೀತು. ಜಗದ್ಗುರುಪೀಠಕ್ಕೆ ಅವಿಧೇ
ಯನಾಗಿ, ಮತಾಚಾರಕ್ಕೆ ವಿರುದ್ಧಾಚಾರಿಯಾಗಿ, ದೈವದ್ರೋಹಿಯಾಗಿರುವ
ನನ್ನನ್ನು, ಗುರುಸನ್ನಿಧಾನದಿಂದ ಬಂದ ನಿರೂಪವನ್ನೂ, ಬಹಿಷ್ಕಾರ ಪತ್ರಿಕೆ
ಯನ್ನೂ ಕಾಲಕೆಳಗಟ್ಟು ನನಗಾರು ಸರಿಯೆಂದಿರುವವನನ್ನು, ಇಷ್ಟು ಪುರಸ್ಕ
ರಿಸುತ್ತಿರುವ ನಿಮ್ಮಲ್ಲಯೇ, ನ್ಯಾಯವೂ ಧರ್ಮವೂ ಮೂರ್ತೀಭವಿಸಿರಬೇಕ
ಲ್ಲವೇ?

ಶರಚ್ಚಂದ್ರ:— ಭಟ್ಟಾಚಾರ್ಯರೇ! ಸ್ವಲ್ಪ ತಲೆಹೆತ್ತಿ ನೋಡಿ,
ಮಾತನಾಡಿರಿ. ನೀವು ಯಾರಲ್ಲ ವಾದಿಸುತ್ತಿರುವಿರಿ? ನೀವು ಒಂದಿರುವ
ಕೆಲಸವೇನು? ದೇಹಸ್ಮರಣೆಯಿಲ್ಲದೆ ಹೀಗೇಕೆ ಕೂಗುತ್ತಿರುವಿರಿ? ಇದೇನು,
ಆಟದ ಜಾವಡಿಯೆಂದೂ, ನೀವು ಮಾಡುತ್ತಿರುವುದು ಜೂಜಿನ ಪೈಲು-
ಗೆಲುವುಗಳ ಹೋರಾಟಗಳೆಂದೂ ತಿಳಿದಿರೋ? ಅಥವಾ ಮನೆತನದ ತಲೆ
ತೆರಿಗೆಗಳ, ಸುಲಿಗೆ-ಸಂತೆಗಳ ಗಡಿಯೆಂದೇನಾದರೂ ತಿಳಿದಿರೋ? ಇದು
ಅಂತಹದೊಂದೂ ಅಲ್ಲ. ಇದೇ ನ್ಯಾಯಪೀಠ. ನಿಮ್ಮ ಮುಂದಿರುವವರೇ
ಸಾಕ್ಷಾದ್ಧರ್ಮಸ್ವರೂಪರಾದ ನ್ಯಾಯಮೂರ್ತಿ! ನಾವು ನ್ಯಾಯಪೀಠದ
ಆಶ್ರಿತರು. ಇನ್ನಾದರೂ ತಿಳಿದು, ನೋಡಿ, ಯೋಗ್ಯತೆಗೆ ತಕ್ಕ ಮಾತುಗ
ಳನ್ನಾಡಿರಿ. ಇಲ್ಲದಿದ್ದರೆ ನಿಮಗೆ ಮಾನವುಳಿಯುವುದಿಲ್ಲವೆಂದೂ ತಿಳಿಯಿರಿ.

ಗಣೇಶಪಂತ:—ಭಟ್ಟಾಚಾರ್ಯ! ಇದೇನು ಅವಿವೇಕ? ಪ್ರಬಲರಲ್ಲಿ
ಪ್ರತ್ಯಕ್ಷ ವಿರೋಧವು ಕೂಡದೆಂಬದಾಗಿ ಗುರುಗಳು ಈಗಲೇ ಹೇಳಿ ಕಳು
ಹಿಲ್ಲವೆ? ಆಗಲೇ ಅದು ಮರೆತು ಹೋಯಿತೇ?

ಕಲೆಕ್ಟರ್:—ನ್ಯಾಯ! ಪ್ರತ್ಯಕ್ಷವಿರೋಧವು ತಕ್ಕುದಲ್ಲ. ಪರೋಕ್ಷದಲ್ಲಿ
ಮಾಡುವ ವಿರುದ್ಧಾಚಾರಕ್ಕೆ ಪ್ರಾಯಶ್ಚಿತ್ತವೇ ಇರುವುದಿಲ್ಲ. ಅಲ್ಲವೇ,
ಸ್ವಾಮಿ?

ಗಣೇಶ:— ಕ್ಷಮೆಯಿರಲಿ! ಚಕ್ರವರ್ತಿಮಹಾಶಯರೇ! ತಮ್ಮಲ್ಲಿ
ನಾವು ಎಂದಿಗೂ ಅವಿಶ್ವಾಸಿಗಳಾಗುವವರಲ್ಲ. ನಮ್ಮ ಪರಮಗುರುಗಳಾ

ತಮ್ಮಲ್ಲಿ ಕೇವಲ ಪುತ್ರವಾತ್ಸಲ್ಯವನ್ನೇ ಇಟ್ಟು, ತಮ್ಮ ಶ್ರೇಯೋಭಿವೃದ್ಧಿಯನ್ನು ಕುರಿತು ಅನುಗ್ರಹಿಸಿರುವರು. ಅವರ ಆಜ್ಞಾನುಸಾರವಾಗಿಯೇ ನಾವು ಇಲ್ಲಿಗೆ ಬಂದಿರುವೆವು.

ಕಲೆಕ್ಟರ್:—ಓಹೋ! ಹಾಗಾದರೆ ತುಂಬಾ ಕೃತಜ್ಞನಾಗಿರುತ್ತೇನೆ. ಮತ್ತೇನು, ನಿಮ್ಮ ನಿರೂಪ?

ಗನೇಶ:—ನಮ್ಮ ನಿರೂಪವಲ್ಲ. ನ್ಯಾಯಮಿಯವರೇ ಹೀಗೆಂದು ನಿರೂಪಿಸಿರುತ್ತಾರೆ:—" ಕಲೆಕ್ಟರಬಾಬು! ನೀವು ನಮ್ಮ ಗುರುಪೀಠಕ್ಕೆ ಪರಮಾಪ್ತ ಶಿಷ್ಯರಾಗಿರುತ್ತೀರಿ. ನಮ್ಮ ಗುರುಪೀಠಕ್ಕೂ ನಿಮಗೂ ಬಹುಕಾಲದಿಂದ ಗುರು ಶಿಷ್ಯ ಸಂಬಂಧವು ಬೆಳೆದು ಬಂದಿರುವುದನ್ನು ನೀವೂ ಚೆನ್ನಾಗಿ ತಿಳಿದೇ ಇರುತ್ತೀರಿ. ಅಲ್ಲದೆ, ಈ ಪಟ್ಟಣಕ್ಕೆ ನ್ಯಾಯಾಧಿಕಾರಿಗಳಾಗಿಯೂ ಬಂದಿರುತ್ತೀರಿ. ಇಷ್ಟಾಗಿ ನೀವು ಗುರುಪೀಠಕ್ಕೆ ವಿರುದ್ಧಾಚಾರಿಗಳಾಗಿರುವವರನ್ನು, —ಮತ್ತು ಮತಾದಾಯ-ದೇವತಾ ಕೈಂಕರ್ಯಗಳಿಗೆಲ್ಲಕ್ಕೂ ಕಂಟಕವನ್ನೊಡ್ಡಿರುವ ನಾಸ್ತಿಕವಾದಿಗಳನ್ನು,—ಶಿಷ್ಟಾಚಾರವನ್ನನುಸರಿಸಿ, ಗುರುಪೀಠದಿಂದ ಕಳುಹಲ್ಪಟ್ಟ ಬಹಿಷ್ಕಾರ ಪತ್ರವನ್ನು ನಿರಾಕರಿಸಿ ಅವಿಧೇಯತೆಯಿಂದ ಸಮಾಜಕ್ಕೆ ಕಲಂಕವ್ರಾಯರಾಗಿರುವವರನ್ನು,— ಇವರೆಲ್ಲರನ್ನೂ ನೀವು ಪ್ರಯತ್ನಪೂರಸ್ಸರವಾಗಿ ಕರೆತರಿಸಿ, ಅವರನ್ನು ಸರಿಯಾದ ದಂಡಕ್ಕೆ ಗುರಿಪಡಿಸಿ, ಸಮಾಜಕ್ಕೂ ಗುರುಪೀಠಕ್ಕೂ ಅನುಕ್ರಮಾಗತವಾಗಿ ಬಂದಿರುವ ಮರ್ಯಾದೆಯನ್ನು ಮತ್ತೆ ಸ್ಥಿರಪಡಿಸಬೇಕಾದುದು ನಿಮ್ಮ ಮೇಲೆ ಬಿದ್ದ ಭಾರವಾಗಿದೆ. ನ್ಯಾಯವಿದರಾದ ನೀವೇ ಸಮಾಜದಿಂದ ಬಹಿಷ್ಕೃತರಾದವರೊಡನೆ ಸಹಭೋಜನಾದಿ ಸಂಸರ್ಗ ಸಹವಾಸಗಳನ್ನು ಬೆಳೆಸುವುದು ಉಚಿತವಲ್ಲವೆಂದೂ, ನಿಜನಿಷ್ಠೆಯಿಂದ ಗುರುಪೀಠದಲ್ಲಿ ಭಕ್ತಿಯನ್ನು ನೆಲೆಗೊಳಿಸಿ, ಕೃತಕೃತ್ಯರಾಗಬೇಕೆಂದೂ ಈಮೂಲಕ ನಿಮಗೆ ತಿಳಿಸಿರುತ್ತೇವೆ."

ಕಲೆಕ್ಟರ್:—ಕಿರುನಗೆಯಿಂದ—ಪಂತರೇ! ಗುರುಪೀಠಕ್ಕೆ ನಮ್ಮ ಅನೇಕವಂದನೆಗಳನ್ನು ಸಮರ್ಪಿಸಿರಿ. ಅವರ ನಿರೂಪವನ್ನು ಶಿರಸಾವಹಿಸಿದ್ದೇನೆಂದೂ ಹೇಳಿರಿ. ಅಷ್ಟೇ ಅಲ್ಲ. ಗುರುಪೀಠದಲ್ಲಿ ಅಪರಾಧಿಗಳಾಗಿರುವವರಿಂದ ಸನ್ನಿಧಾನದಿಂದ ನಿರೂಪಿಸಲ್ಪಟ್ಟಷ್ಟು ದ್ರವ್ಯವನ್ನೂ ತೆಗದುಕೊಂಡು, ಇವರಿಂದ ಈದಿನ ಪ್ರಾಯಶ್ಚಿತ್ತಗಳನ್ನು ಮಾಡಿಸಿರುವೆನು. ಇವರಿಂದ

ಒಂದ ಐದುನಾಸಿರ ರೂಪಾಯಿಗಳಿಂದ ಈ ದಿನ ಅನೇಕಾನೇಕರಾದ ವಿಕ ಲಾಂಗರಿಗೂ ಅನಾಥರಿಗೂ ಅಶನ ವಸನಗಳನ್ನು ಕೊಡಿಸಿ, ತೃಪ್ತಿಪಡಿಸಿರುವು ದಲ್ಲದೆ, ಇನ್ನು ಬರಬೇಕಾಗಿರುವ ದ್ರವ್ಯವನ್ನೂ, ಇನ್ನೂ ಶಾಶ್ವತವೂ, ಉತ್ತರೋತ್ತರಾಭಿವೃದ್ಧಿಹೇತುವೂ ಆದ ಮಹತ್ಕಾರ್ಯಕ್ಕೆ ವಿನಿಯೋಗಿಸಲು ನಿಶ್ಚಯಿಸಿದೆ. ಈ ವಿಚಾರದಲ್ಲಿ ಸ್ವಾಮಿಯವರಾಗಲೀ ತಾವುಗಳಾಗಲೀ ಯೋಚಿಸುವಂತಿಲ್ಲ.'

ಭಟ್ಟಾ:—ಆಹಾ! ತಣ್ಣಗಾಯಿತಯ್ಯಾ! ಹೊಟ್ಟೆಯುರಿಗೆ ನಿಮ್ಮ ಮಾತು ಒಳ್ಳೆ ಸಮಾಧಾನವನ್ನೇ ಉಂಟುಮಾಡಿತು. ನಮಗೇನು? ನೀನುಂ ಟು, ಸ್ವಾಮಿಗಳುಂಟು. ಹೋಗಲಿ; ಸಮಾಜದಿಂದ ಬಹಿಷ್ಕೃತರಾದವ ರೊಡನೆ ಸಂಸರ್ಗವನ್ನು ಮಾಡುವ ವಿಚಾರದಲ್ಲಿಯೋ? ಅದಕ್ಕೇನು ಹೇಳು ವಿರಿ?

ಕಲೆಕ್ಟರ್:—ಮಹಾಶಯರೇ! ಕ್ಷಮಿಸಬೇಕು. ಇವರನ್ನು ಸಮಾ ಜದಿಂದ ಹೊರಗೆ ತಳ್ಳಿದ ಕಾರಣವು ಸರಿಯಾಗಿ ಕಾಣಲಿಲ್ಲ. ಬಹಿಷ್ಕೃತ ರಾಗುವ ಮಹಾಪರಾಧವು ಇವರಿಂದೇನಾದರೂ ನಡೆಯಿಸಲ್ಪಟ್ಟಿರುವುದಾ ದರೆ ದಂಡಿಸಲು ನಾನು ಬದ್ಧನಾಗಿದ್ದೇನೆ. ಸಕಾರಣವಾಗಿ ಬರುವ ವ್ಯಾಜ್ಯ ಗಳಿಗೆ ನ್ಯಾಯರೀತಿಯಿಂದ ತೀರ್ಮಾನವನ್ನು ಹೇಳುವುದು ನಮ್ಮ ಕೆಲಸ ವಾಗಿದೆ.

ಭಟ್ಟಾ:—ಇವರಲ್ಲಿ ಅಪರಾಧವಿಲ್ಲದೆಯೇ ಸನ್ನಿಧಾನದಿಂದ ನಿರೂಪವು ಬಂತೋ?

ಕಲೆಕ್ಟರ್:—ಅಪರಾಧವೆಂತಹದು? ಅನಾಥವರ್ಗವನ್ನು ಪೋಷಿಸು ತ್ತಿರುವುದೋ? ಅಪಾತ್ರನಿಗೆ ಕನ್ಯಾದಾನ ಮಾಡದೆ ಸತ್ಪಾತ್ರಾನ್ವೇಷಣೆಯ ಲ್ಲಿರುವುದು ದೋಷವೋ? ಇಲ್ಲದಿದ್ದರೆ, ತಮ್ಮ ಕರ್ತಾರ್ಜಿತ ಸ್ವತ್ತನ್ನು ದೇಶಹಿತಕಾರ್ಯದಲ್ಲಿ ವಿನಿಯೋಗಿಸುತ್ತಿರುವುದೇ ದೋಷವೋ? ಯಾವುದು ದೋಷವು? ಇವರಿಂದ ಯಾವ ಕರ್ಮಕ್ಕೆ ಹಾನಿಯು ತಟ್ಟಿದೆ? ಯಾವ ಸತೀ ಮಣಿಯ ಪಾತಿವ್ರತ್ಯಕ್ಕೆ ಭಂಗವುಂಟಾಗಿದೆ? ಮತ್ತಾರ ಸ್ವತ್ತು ಅಪಹರಿಸಲ್ಪ ಟ್ಟಿದೆ? ಎಷ್ಟು ಮಂದಿ ಅವಿಚಾರಿಗಳ—ಅಕ್ರಮಿಗಳ ಅಲಂಘ್ಯಫಲವಾದ ಭ್ರೂಣಹತ್ಯಾದಿ ಪಾತಕಗಳಿಗೆ ಸಹಕಾರವುಂಟಾಗಿದೆ? ಹೇಳಿರಿ, ಅಂತಹ

ಅಸದ್ವರ್ತನೆಗಳೇನಾದರೂ ನಡೆದಿದ್ದರೆ, ಇವರಿಗೆ ಶಿಕ್ಷೆಯಾಗಲೇ ಬೇಕು. ಇಲ್ಲವಾದರೆ ನಮ್ಮಲ್ಲಿ ಹೇಳಲಾಗದು. ಇನ್ನು ತೆರಳಬಹುದು; ಇದೊ ನಮ್ಮೆಲ್ಲರ ವಂದನೆಗಳು.

ಇಷ್ಟಕ್ಕೆ ಸರಿಯಾಗಿ ಹೊರಗೆ ಅಡಗಿ ನಿಂತು ಕೇಳುತ್ತಿದ್ದ ಅತುಲ ಚಂದ್ರನು ನಗುನಗುತ್ತ ಓಡಿಬಂದು— "ಓಹೋ! ಭಟ್ಟಾಚಾರ್ಯರೂ ಪಂತರೂ ಇಲ್ಲೇ ಇರುವರು. ಸರಿ, ಸರಿ! ಯಾರು ಹೊರಗೆ? ಹೋಗಿ ಹೇಳಿರಿ, ಸ್ವಾಮಿಗಳಿಗೆ ಬೇಗ ತಿಳಿಸಿರಿ. ಬಹಿಷ್ಕೃತರಾಗಿರುವ ನಮ್ಮೊಡನೆ ಇವರೂ ವ್ಯವಹಾರ ಮಾಡಿರುವರು. ನಮಗಾಗುವುದಕ್ಕೆ ಮೊದಲೇ ಇವರಿಗೆ ಪ್ರಾಯಶ್ಚಿತ್ತವಾಗಬೇಕಾಗಿರುವುದು." ಅಹುದೋ, ಅಲ್ಲವೋ— ಭಟ್ಟಾಚಾರ್ಯರೇ! ನೋಡಿಕೊಳ್ಳಿರಿ. 'ಪರರಕೇಡು—ತನ್ನಕೇಡು' ತಿಳಿದುಕೊಳ್ಳಿರಿ. ಕರ್ಮಹೀನರ ವಸತಿಗೆ ಬಂದಿರುವುದರಿಂದ ಮೊದಲು ನಿಮ್ಮ ಕೈಕಾಲುಗಳಿಗೆ ಇಲ್ಲಿಯೇ ಪ್ರಾಯಶ್ಚಿತ್ತಮಾಡಿಕೊಳ್ಳಿರಿ." ಎಂದು ಹೇಳುತ್ತ ಬಳಿಗೆ ಬಂದನು.

ಇವನನ್ನು ನೋಡಿ, ಪಾಪ, ನಮ್ಮ ಪಂತರಿಗೂ ಭಟ್ಟಾಚಾರ್ಯರಿಗೂ ನಡುಕಹತ್ತಿತ್ತು. ಅಲ್ಲಿದ್ದರೆ ಮತ್ತೇನಾಗುವುದೋ ಎಂಬ ಭೀತಿಯಿಂದ ತಲೆ ತಪ್ಪಿಸಿಕೊಂಡು ಹೊರಟೇ ಹೋದರು.

'ಅತ್ಯಾಚಾರಕ್ಕೆ ಇದೇ ಪ್ರತಿಕಾರ'ವೆಂದು ಹೇಳುತ್ತ ಎಲ್ಲರೂ ಅಲ್ಲಿಂದೆದ್ದು ನಡೆದರು.

॥ ಶ್ರೀಃ ॥

ಏಕಾದಶ ಪರಿಚ್ಛೇದ



(ಸಂಘಶಕ್ತಿ)

ಇಂದು, ಶಿವಪುರದ ವಿಶ್ವಕಲಾಶಾಲೆಯಲ್ಲಿ, ಸುಪ್ರಸಿದ್ಧನಾದ ನಮ್ಮ ದೇಶಭಕ್ತಾಗ್ರಣಿ. ಅಚಲಚಂದ್ರನಾಥನ ಸ್ವಾರಸ್ಯವಾದ ಭಾಷಣವು;--ಎಂದರೆ-ಸಂಘಶಕ್ತಿಯನ್ನು ಕುರಿತು ವಿಚಾರಮಾಡುವ ಉಪನ್ಯಾಸವು. ಅಚಲ ಚಂದ್ರನ ಭಾಷಣವೆಂದರೆ. ಆಬಾಲವೃದ್ಧರಿಗೂ ಗೌರವವುದ್ಧಿ; ಅದರಮೇಲೆ, ಸಂಘಶಕ್ತಿಸ್ವರೂಪವನ್ನು ಪ್ರದರ್ಶನಪಡಿಸುವ ಉಪನ್ಯಾಸವೆಂದರೆ, ಹೇಳ ತಕ್ಕುದೇನು? ಕಲಾಶಾಲೆಯಲ್ಲಿ ಈವರೆಗೂ ಕಂಡು ಕೇಳದಿದ್ದಷ್ಟು ಸಂಭ್ರ ಮವು ತೋರುತ್ತಿದೆ. ಸಭಾಂಗಣದ ಶೃಂಗಾರವನ್ನೂ ಬಾಹ್ಯಾಂಗಣದ ಸುಸ್ವರೂಪವನ್ನೂ ನೋಡಿದರೆ, ಎಂತಹ ಕಾಡುಜನರ ಮನಸ್ಸಿಗಾದರೂ ನಾಗರಿಕತೆಯ ಗಂಧವು ಸೋಂಕುತಿದ್ದಿತೆಂದ ಬಳಿಕ, ಅಲ್ಲಿಯ ಸುವ್ಯವಸ್ಥೆ ಯನ್ನು ಕುರಿತು ವಿವರಿಸಬೇಕೇ? ಕಲಾಶಾಲೆಯ ಮಧ್ಯಭಾಗದ ಸಭಾಂಗಣ ದಲ್ಲಿ ಸಾಲು ಕುರ್ಚಿ-ಬೆಂಚುಗಳ ಮೇಲೆ, ಕಲೆಕ್ಟರರಿಂದ ಮೊದಲು ಅಧಿಕಾರಿ ಗಳು; ಉದ್ಯೋಗನಿರತರು, ಉಪನ್ಯಾಸಬೋಧಕರು, ಶಿಕ್ಷಕರು, ವಿದ್ಯಾರ್ಥಿ ಗಳು, ಒಟ್ಟಿನಲ್ಲಿ ಅಚಲಚಂದ್ರನಲ್ಲಿ ಅಂತರ್ಯವಾದ ವಿಶ್ವಾಸಗೌರವವ ನ್ನಿರಿಸಿರುವ ಶಿವಪುರದ ಮತ್ತು ಸುತ್ತಮುತ್ತಲಿನ ಸಭ್ಯಸಮಾಜದವರೆಲ್ಲರೂ ಯೋಗ್ಯತಾನುಸಾರವಾದ ಕುರ್ಚಿಬೆಂಚುಗಳಲ್ಲಿ ಕುಳಿತು, ಭಾಷಣದ ರಸಾ ಸ್ವಾದನಮಾಡಲು ಆತುರರಾಗಿ ನೋಡುತ್ತಿರುವರು. ಮತ್ತೂ ಅಚಲ ಚಂದ್ರನಲ್ಲಿ ದ್ವೇಷಬುದ್ಧಿಯುಳ್ಳ ಭಟ್ಟಾಚಾರ್ಯರಾದಿಯಾದ ಬಾಹ್ಯಾಡಂಬರ ಪರರೂ ಅಚಲನ ಭಾಷಣದಲ್ಲಿ ಬರಬಹುದಾದ ವಿಚಾರಗಳನ್ನು ಖಂಡಿಸಿ, ಆತನ ಉದ್ದೇಶ-ಪ್ರಯತ್ನಗಳನ್ನು ಸಾಗಗೊಡಿಸದಂತೆ ಮಾಡಬೇಕೆಂಬ ವಿರೋಧಾಭಿವ್ರಾಯದಿಂದ ಜನಗಳ ಗುಂಪಿನಲ್ಲಿ ಮರೆಯಾಗಿ ಕುಳಿತು, ಮಿಟಿಮಿಟನೆ ನೋಡುತ್ತಿದ್ದರು. ಹೆಚ್ಚೇಕೆ, ಅಚಲನು ಎಷ್ಟು ಹೊತ್ತಿಗೆ

ನಿಯತಸ್ಥಾನದಲ್ಲಿ ನಿಲ್ಲುವನು, ಎಷ್ಟು ಹೊತ್ತಿಗೆ ಉಪನ್ಯಾಸವು ಆರಂಭಿಸಲ್ಪಡುವುದು, ಅವಾವ ವಿಚಾರಗಳು ಹೊರಬೀಳುವುವು.—ಇವೇ ಮೊದಲಾದ ಆಶಾತರಂಗಗಳಿಂದ ಅಚಲನು ಕುಳಿತಿದ್ದೆಡೆಯನ್ನೇ ನೋಡುತ್ತಿದ್ದರು.

ಉಪನ್ಯಾಸಕ್ಕೆ ಆರಂಭವಾಗಬೇಕಾದರೆ, ಇನ್ನೂ ಅರ್ಧಗಂಟೆಯ ವಿರಾಮವಿದೆ. ಅದಕ್ಕೆ ಮೊದಲು ನಡೆಯಬೇಕಾಗಿದ್ದ ಸೂಚನೆ, ಅಧ್ಯಕ್ಷರ ಭಾಷಣಗಳೇ ಮೊದಲಾದ ಕಾರ್ಯಗಳು ಕ್ರಮವಾಗಿ ನಡೆಯಿಸಲ್ಪಟ್ಟವೆ. ಇನ್ನು ಉಪನ್ಯಾಸಕ್ಕೆ ಆರಂಭವಾಗುವುದೊಂದೇ ಅಡ್ಡಿ; ಆದರೆ ನಿಶ್ಚಿತ ಮುಹೂರ್ತವು ಬಂದಲ್ಲದೆ ನಿಶ್ಚಲಚಿತ್ತನಾದ ಅಚಲಚಂದ್ರನು ಭಾಷಣಕ್ಕೆ ಆರಂಭಿಸುವಂತಿಲ್ಲ.

ಇದೊ, ಮುಹೂರ್ತವೂ ಬಂದಿತು. ಸಭಿಕರೂ ಉತ್ಸುಕರಾಗಿ ಪ್ರಾರ್ಥಿಸಿದರು. ಅಧ್ಯಕ್ಷರೂ ಸೂಚಿಸಿದರು. ಈವರೆಗೂ, ಸಂಗಡಿಗರಾಗಿ ಸೇವಾನಂದ, ನಾದಾನಂದ, ಭಕ್ತಿಸಾರ ಚಕ್ರವರ್ತಿ ಇವರೊಡನೆ ಸರಸ ಪ್ರಸಂಗದಲ್ಲಿದ್ದ ಅಚಲಚಂದ್ರನು ಎದ್ದುಬಂದು, ನಿಯತಸ್ಥಾನದಲ್ಲಿ ನಿಂತು, ಅನಂದೋದ್ರೇಕದಿಂದ ಸಭಿಕರನ್ನು ವಂದಿಸಿ, ತನ್ನ ಕೋಮಲ ಹಸ್ತದ್ವಯವನ್ನು ನೀಡಿ, ಪ್ರೇಮವ್ಯಂಜಕಸ್ವರದಿಂದ ಹೇಳತೊಡಗಿದನು:—

"ನನ್ನ ಪರಮ ಪೂಜ್ಯರಾದ ದೇಶಬಾಂಧವರೇ! ಪ್ರಿಯಬಾಂಧವರಾದ ದೇಶಸೇವಕರೇ!! ಉದಯಾದ್ರಿ ಶಿಖಿಶವನ್ನೇರುತ್ತಿರುವ ವಿದ್ಯಾರ್ಥಿಗಳೇ! ಅವ್ಯಾಜವಾತ್ಸಲ್ಯದಿಂದ ಇಲ್ಲಿ ಸಾಕ್ಷಾತ್ಕರಿಸಿರುವ ನಿಮಗೆಲ್ಲರಿಗೂ ಇದೇ ನನ್ನ ಕೃತಜ್ಞತಾಪೂರ್ವಕವಾದ ಅನೇಕ ವಂದನೆಗಳು. ದಯೆಯಿಟ್ಟು ಸ್ವೀಕರಿಸಿ, ಕಾಲೋಚಿತ ಸೂಚನೆಗಳಿಂದ ಪ್ರೋತ್ಸಾಹಿಸಿ, ಪುನ್ನಿಸಬೇಕೆಂಬುದೇ ನನ್ನ ಪ್ರಥಮ ಸಂಪ್ರಾರ್ಥನೆಯು."

ವಿಶ್ವಸನೀಯರಾದ ಧರ್ಮಬಾಂಧವರೇ!

ಈವರೆಗೆ ಸಂಘಗಳೆಷ್ಟೋ ಕೂಡಿರುವವು; ಉಪನ್ಯಾಸಗಳೆಷ್ಟೋ ನಡೆದಿರುವುವು; ಹಾಗೂ ಉಪನ್ಯಾಸವನ್ನು ಕೊಡುವ ಕಾರ್ಯಭಾಗದಲ್ಲಿ ನಿಮ್ಮಲ್ಲಿ ಬಹುಜನರು ದಕ್ಷರಾಗಿಯೂ ಇರಬಹುದೆಂದು ತೋರುವುದು. ಆದರೂ, ಇಂದು, ಇಲ್ಲಿ ಕೂಡಿರುವಷ್ಟು ವಿಸ್ತಾರವಾದ ಸಭೆಯು, ಹಿಂದೆ ಯಾವಾಗಲೂ ಸೇರಿರಲಾರದೆಂದು ತೋರುವುದಲ್ಲವೇ? ಈ ಕಲಾಶಾಲೆ

ಯಲ್ಲಿ ಅಭೂತಪೂರ್ವವಾಗಿ ಸೇರಿರಬಹುದಾದ ಇಂದಿನ ಘನವಾದ ಸಭೆಯನ್ನು ಕುರಿತು ನನಗಾಗಿರುವ ಆನಂದವು ಹೇಳಲಳವಲ್ಲವಾಗಿದೆ! ಇದರಿಂದ, ಇಂದಿನ ಈ ಸಭೆಯಿಂದ, ನಮ್ಮ ಮುಂದಿನ ಸಂಘಶಕ್ತ್ಯಾದಿ ಮಹತ್ತ್ವವು, ಕಾರ್ಯಕಾರಿಯಾಗಿ ಪರಿಣಮಿಸಿ, ನಮ್ಮ ಮುಂದಿನ ದೇಶಸೇವಾ ವ್ರತವು ಸಾಫಲ್ಯಹೊಂದುವಂತಾಗಲೆಂದು, ಆ ನಮ್ಮ ಪವಿತ್ರ ಪ್ರೇಮಮಯಿಯಾದ ಮಾತೆಯೇ ಅನುಗ್ರಹಿಸಿರುವಳೆಂಬುದು ನನ್ನ ಸಂಪೂರ್ಣ ಭರವಸೆಯಾಗಿದೆ. ಏಕೆಂದರೆ,—

ಸಂಘಶಕ್ತಿಯೆಂಬುದರ ಮಹಾತ್ಮೆಯು ಅಷ್ಟಿಷ್ಟಲ್ಲ. ಅಖಂಡ—ಅಪೋಘ—ಅತ್ಯದ್ಭುತವಾದ ಪ್ರಭಾವವುಳ್ಳದು. ಈ ಸಂಘಶಕ್ತಿಯಿಂದ ಆಗದೆ ಇರುವ ಕಾರ್ಯವು, ಸಾಮಾನ್ಯವಾಗಿ ಯಾವುದೂ ಇಲ್ಲವೆಂದೇ ಹೇಳಬಹುದು. ಹಾಗೂ 'ಸಂಘೆಶಕ್ತಿಃ ಕಲೌಯುಗೇ' ಎಂದು ಹೇಳಿರುವಂತೆ, ಈ ಕಲಿಕಾಲದಲ್ಲಿ ಯಾವದೇ ಒಂದು ಕಾರ್ಯನಿರ್ವಾಹಕಕ್ಕೂ ಸಂಘಶಕ್ತಿಯೇ ಕಾರಣವಾಗಿದೆಯೆಂದು ಹೇಳಬೇಕಾಗಿದೆ. ಪ್ರಕೃತಸ್ಥಿತಿಯಲ್ಲಿ ಈ ಶಕ್ತಿಯು ನಮ್ಮವರಿಂದ ಏಷ್ಟರಮಟ್ಟಿಗೆ ಯಾವ ಯಾವ ಕಾರ್ಯಕಲಾಪಗಳಲ್ಲಿ ವಿನಿಯೋಗವಾಗಿರಬಹುದೆಂದು ಯೋಚಿಸುವುದಾದರೆ, ನಿಜಾರಾಂತ್ಯದಲ್ಲಿ ಅದರ ಅಜ್ಞಾತ ದೆಸೆಗಾಗಿ ಕೇವಲ ಪರಿತಾಪವೇ ಉಂಟಾಗುತ್ತಿದೆ. ಇದರ ಸೂಕ್ಷ್ಮರೂಪಧಾರಣೆಗೆ ನಮ್ಮವರ ದುರಭಿಮಾನದ ಜಡರೋಗವೇ ಕಾರಣವಲ್ಲದೆ ಬೇರಿಲ್ಲ. ಈ ದುರಭಿಮಾನದಿಂದ ನಮಗುಂಟಾಗಿರುವ ನಷ್ಟವು ಉಂಟಾಗುತ್ತಿರುವ ಅನರ್ಥಪರಂಪರೆಯನ್ನು ನೆನೆದ ಮಾತ್ರಕ್ಕೆ ಉಂಟಾಗುವ ಶೋಕ-ಸಂತಾಪಗಳನ್ನು ಇಲ್ಲಿ ಹೇಗೂ ಹೇಳಿ ಮುಗಿಯಿಸುವಂತಿಲ್ಲ. ಮಾಡುತಕ್ಕದ್ದೇನು? ಐಕಮತ್ಯವು ನಮ್ಮವರನ್ನು ಬಿಟ್ಟು ಬಹುದೂರ ಹೊರಟು ಹೋಗಿದೆ. ಐಕಮತ್ಯದೊಡನೆಯೇ, ಸ್ವದೇಶಾಭಿಮಾನ - ಸ್ವಾತಂತ್ರ್ಯ—ಕರ್ತವ್ಯನಿಷ್ಠೆಗಳೇ ಮೊದಲಾದ ಪ್ರಾಮುಖ್ಯ ಗುಣಗಳೂ ನಮ್ಮವರ ಕೈಬಿಟ್ಟು ಹೋದುವು. ಅವು ಬಿಟ್ಟು ಹೋಗಿರುವಂತೆಯೇ, ನಮ್ಮಲ್ಲಿ ದುರಭಿಮಾನ ಮತ್ತು ಪರಸ್ಪರ ದ್ವೇಷಾಸೂಯೆಗಳು ಹಬ್ಬಿ, ನಮ್ಮವರಲ್ಲಿದ್ದ ಸದಸದ್ವಿವೇಚನೆಯನ್ನು ಎಲ್ಲಿಗೋ ಕೊಂಡುಹೋಗಿ ಬಿಟ್ಟುಬಂದು, ನಮ್ಮವರು ಉದಾಸೀನ ಅಥವಾ ಪರಾಧೀನ ದೆಸೆಯಿಂದ

ಅಪ್ರಯೋಜಕರಾಗುವಂತೆ ಮಾಡಿರುವುದು. ಇದರಿಂದ ನಮ್ಮವರಲ್ಲಿ ಹುಟುವ ಅತ್ಯಾಚಾರಗಳುಂಟಾಗಿ, ನಮ್ಮವರಲ್ಲಿದ್ದ ಆರ್ಯತ್ವವೇ ಮಾಯವಾಗುವ ಸ್ಥಿತಿಯೂ, ಸನಾತನಧರ್ಮವೇ, ಅಪವಾದಗ್ರಸ್ತವಾಗುವ ದುರ್ದಶೆಯೂ ಪ್ರಾಪ್ತವಾಗಿದೆ. ಹೀಗೆ ನಮ್ಮ ದುರ್ವ್ಯಸನರೋಗದ ದೆಸೆಯಿಂದಾದ ದೌರ್ಬಲ್ಯವು, ನಮ್ಮ ದೇಶಮಾತೆಯ ಮೊದಲಿನ ಪಾಶಸ್ತ್ಯವನ್ನು ಕೂಡ ಮಲಿನಸ್ಥಿತಿಗೆ ತರುವಂತೆ ಮಾಡಿರುವುದೆಂಬುದು ದೇಶಭಕ್ತರಲ್ಲಿ ಯಾರಿಗೆ ದುಃಖವನ್ನುಂಟುಮಾಡುವುದಿಲ್ಲ?—

ಹೇಗೆಂದರೆ, ನಮ್ಮಲ್ಲಿಯ ಕೆಲವು ನವನಾಗರಿಕ ಸುಧಾರಕ ಮಹಾಶಯರು ಒಂದೆಡೆಯಲ್ಲಿ 'ವಿವಾಹ ಪರಿಷ್ಕರಣಸಂಘ'ಗಳನ್ನು ಏರ್ಪಡಿಸಿಕೊಂಡು, ಅಂತದರ ಪ್ರತಾಪಕ್ಕೆ ಸದ್ಗೃಹಸ್ಥರಾದ ಹಲವು ಮಂದಿ ವೃದ್ಧಪುರುಷರನ್ನು ಬಲಿಕೊಟ್ಟು, ತಾವು ಮಾತ್ರ ಹಿಂದೆಯೇ ಇದ್ದು ತಲೆತಪ್ಪಿಸಿಕೊಳ್ಳುತ್ತಿರುವರು. ಮತ್ತೊಂದೆಡೆಯಲ್ಲಿ— ಮೌಢ್ಯಾಚಾರದ ಡಾಂಭಿಕವೃತ್ತಿಯವೈದಿಕಗೊಡ್ಡರು, ವಿವೇಚನಾರಹಿತರಾಗಿ, ತಮ್ಮ ಜನ್ಮಧಾರಣೆಯ ಮುಖ್ಯೋದ್ದೇಶವೇನೆಂಬುದನ್ನೇ ಮರೆತು, ಕೇವಲ ಉದರಂಭರಣದಲ್ಲಿಯೂ ಧನಸಂಗ್ರಹದಲ್ಲಿಯೂ ತತ್ಪರರಾಗಿ ಹೋಗುತ್ತಿದ್ದಾರೆ. ಈ ಮಹಾಜನರು ಧನದಾಹರೋಗವು, ಧರ್ಮ, ನ್ಯಾಯ, ನೀತಿ, ದಯೆ, ವಾಕ್ಪಾರುಷ್ಯಾಗಳಾವುದೊಂದನ್ನೂ ನೋಡದೆ, ಎಲ್ಲಕ್ಕೂ ಜಲಾಂಜಲಿಯೊಪ್ಪಿಸಿ, ಗುರು-ಹಿರಿಯರು, ತಾಯಿ-ತಂದೆಗಳು, ಅಣ್ಣ-ತಮ್ಮಂದಿರು, ಅಕ್ಕ-ತಂಗಿಯರು, ದೀನಾನಾಥರು, ಎಂಬೀ ವಿಚಾರವನ್ನೂ ಮಾಡದೆ, ಎಲ್ಲರಲ್ಲಿಯೂ ತಮ್ಮ ಕುಹಕವನ್ನೇ ಪ್ರಯೋಗಿಸುವಂತೆ ಮಾಡಿದೆ. ಇಂತವರ ಕುತ್ಸಿತವ್ಯಾಪಾರದಿಂದ ಐಕಮತ್ಯವಾಗಲೀ, ಐಕಮತ್ಯವನ್ನೇ ಆಶ್ರಯಿಸಿರುವ ಸಂಘಶಕ್ತಿಯಾಗಲೀ ಹೇಗೆ ಊರ್ಜಿತಸ್ಥಿತಿಗೆ ಬರಬೇಕು?—

ನಿದರ್ಶನಕ್ಕೆಂದರೆ, ಈ ಶಿವಪುರದ ಮೇಲ್ಕಂಡ ಮಹಾಜನಗಳ ಮನೋಲ್ಲಾಸಕ್ಕಾಗಿ, ಇಲ್ಲಿಯ ಜೀವಾನಂದ ಪರಮಹಂಸ ಜಗದ್ಗುರು ಪೀಠದವರಿಂದ, ನಮ್ಮ ದೇಶಭಕ್ತ ಶ್ರೀಯುತ ನಗೇಶರಾಯರ ಮತ್ತು ಅವರ ಅನುಗಾಮಿಗಳಾಗಿರುವ ನಮ್ಮಗಳ ವಿಷಯವಾಗಿ ಕಳುಹಲ್ಪಟ್ಟು ಬಂದಿರುವ ಬಹಿಷ್ಕಾರಪತ್ರದ ವಿಚಾರವನ್ನೂ, ಉಚಿತಾನುಚಿತ ಪ್ರಜ್ಞೆಯಿಲ್ಲದೆ, ತಮ್ಮ ಧರ್ಮ

ಕರ್ಮಗಳಿಗೆ ವಿರೋಧವಾಗಿ ಮಾಡಿರುವ ಗುರುಪೀಠದವರ ಶಾಸನವನ್ನು ಕುರಿತು ಉಂಟಾಗಿರುವ ಸಮಾಜದ ಅಶಾಂತಿಯನ್ನೂ, ನೀವೆಲ್ಲರೂ ಚೆನ್ನಾಗಿ ತಿಳಿದಿರುವಿರಿ. ಇದರಲ್ಲಿ, ಯಾವ ಪಕ್ಷದಲ್ಲಿ, ಸಮಾಜದ ಶಾಂತಿಭಂಗಕ್ಕೆ ಕಾರಣವಾದ ಅತ್ಯಾಚಾರವೂ ದ್ರೋಹವೂ ತುಂಬಿರಬಹುದೆಂಬುದನ್ನೂ, ಇದಕ್ಕೆ ನಾವು ಮಾಡಬೇಕಾದ ಪ್ರತೀಕಾರವೇನೆಂಬುದನ್ನೂ ನೀವು ಸಕಾರಣವಾಗಿ ಹೇಳಬಲ್ಲವರಾಗಿಯೇ ಇರುವಿರಿ. ("ಬಲ್ಲೆವು—ಬಲ್ಲೆವು"ಎಂದು ಸಭಿಕರು ಕೂಗುವರು.) ಆದರೆ, ಓ, ನನ್ನ ಪ್ರಿಯಬಾಂಧವರೇ! ಕೇಳಿರಿ:—

ಸಮಾಜದ ಉದ್ದೇಶವೇನು?—ಪ್ರಜೆಗಳನ್ನು ಅಧರ್ಮ–ಅನೀತಿಪ್ರವರ್ತಕರಾಗದಂತೆ ನ್ಯಾಯಮಾರ್ಗದಲ್ಲಿ ನಡೆಯಿಸುವುದು! ಅಧರ್ಮ-ಅನೀತಿ ಎಂಬುದರ ಅಭಿಪ್ರಾಯವೇನು?—ಈ ದೇಹಕ್ಕೂ, ದೇಹವನ್ನೇ ಆಶ್ರಯಿಸಿರುವ ಆತ್ಮನಿಗೂ, ಅಹಿತ-ಎಂದರೆ, ಅನಿಷ್ಟವನ್ನುಂಟು ಮಾಡುವ ಕಾರ್ಯಗಳಲ್ಲವೇ? ಅದೇ ಅಲ್ಲವೆ, ಅಕ್ರಮ–ಎಂದರೆ ಭಗವನ್ನಿರೂಪಕ್ಕೆ ಪ್ರತಿಯಾಗಿ ಎಂದರೆ, ಮಾನವಜನ್ಮಧಾರಣೆಯ ಮುಖ್ಯೋದ್ದೇಶವೇ ಮರೆಯಾಗುವಂತಹ ದುರಾಚಾರವೆನ್ನಿಸುವುದು?

ಹೀಗೆ ಕರ್ಮಹೀನರಾಗಿ ನಡೆಯುವ ದುರಾಚಾರಿಗಳನ್ನು ಸರಿಯಾದ ಪ್ರಾಯಶ್ಚಿತ್ತಕ್ಕೆ ಗುರಿಮಾಡಿ, ಸನ್ನೀತಿಗೆ ತಿರುಗುವಂತೆ ಪ್ರಯತ್ನಿಸಬೇಕಾದುದೇ ಸಮಾಜ ಶಾಸನಕರ್ತರ ಅಥವಾ ಮತಬೋಧಕರ ಅವಶ್ಯ ಕರ್ತವ್ಯವೆಂದಲ್ಲವೇ, ಗುರುಪೀಠದವರು ಪೀಠಿಕೆಯನ್ನು ಬರೆದಿರುವುದು. ಆಗಲಿ, ವಿಚಾರಮಾಡುವ,—

"ಸಮಾಜದ ಕಲ್ಯಾಣಕ್ಕೆಂದು.....ವಿಧಿಸಿರುವುದು." ಎಂದು ನಿರೂಪಿಸಿರುವ ಮಹಾಜನರಿಗೆ ಸಮಾಜದ ಕಲ್ಯಾಣವು, ಯಾವುದನ್ನು ಆಶ್ರಯಿಸಿರುವುದೆಂಬುದು, ಅದೇಕೆ ತಿಳಿಯಲಿಲ್ಲ? ಅವರ ಜ್ಞಾನದೃಷ್ಟಿ, ಎಲ್ಲಿ ಮರೆಯಾಗಿದ್ದಿತು? ಅವರು ಮಾಡಿರುವ ಶಾಸನವು, ಈಗ ಸಮಾಜದ ಅಶಾಂತಿಯನ್ನು ಎಷ್ಟುಮಟ್ಟಿಗೆ ತಡೆದು ನಿಲ್ಲಿಸಬಹುದಾಗಿದೆ? ಇದರಿಂದ ಅಶಾಂತತೆಯೆಂಬ ಕಾಡ್ಗಿಚ್ಚು ನಾಲ್ಕಾರು ಕಡೆಯಲ್ಲಿಯೂ ಹಬ್ಬಿ, ಪ್ರಪಂಚವನ್ನೇ ನಡುಗುವಂತೆ ಮಾಡಿರುವುದಲ್ಲವೇನು? (ನಿಜ–ನಿಜ!! ಹಾಗಾಗಿರುವುದೇ ನಿಜ.)

ಇದಕ್ಕೆ ನಾವು ಈಗೇನು ಮಾಡಬೇಕು? ವಿಚಾರಗಳನ್ನು ಚರ್ಚಿಸಿ, ನ್ಯಾಯವನ್ನು ನಿರ್ಧರಿಸಿ, ಸಮಾಜದ ಶಾಂತಿಯನ್ನು ಮತ್ತೆ ಸಂಸ್ಥಾಪನೆ ಮಾಡಬೇಕು. (ಮತ್ತೊಂದುಬಾರಿ--ಮತ್ತೊಂದುಬಾರಿ.) ಹಾಗಿದ್ದರೆ, ಚೆನ್ನಾಗಿ ಕೇಳಿರಿ, ಪ್ರಿಯಬಾಂಧವರೇ! ಇಂದಿನ ಈ ನಮ್ಮ ಸಭೆಯು ಉದ್ದೇಶವು, ಸಮಾಜದ ನ್ಯಾಯಸಂಸ್ಥಾಪನೆಗೆಂದೇ ಆಗಿದೆ. ಇಂತಹ ಸುಯೋಗವನ್ನು ನಾವು ಹೇಗೂ ವ್ಯರ್ಥಮಾಡಿಕೊಳ್ಳಬಾರದು. (ಕೇಳಿರಿ, ಕೇಳಿರಿ.) ಮೊದಲು, ಈಗ ಈ ಶಿವಪುರದ ಅಶಾಂತಿಯನ್ನು ಕುರಿತು; ಬಂದೆರಡು, ನಾಲ್ಕಾರು ಮಾತುಗಳನ್ನಾಡಿ ಆ ಬಳಿಕ ಮುಂದಿನ ನಮ್ಮ ಕರ್ತವ್ಯವನ್ನು ನಿರ್ಧರಿಸುವ. (ಒಪ್ಪಿತ, ಒಪ್ಪಿತ.)

"ನಗೇಶರಾಯನು.....ನ್ಯಾಯಶಾಸ್ತ್ರಕ್ಕೆ ವಿರೋಧವಾಗಿ ನಡೆಸುವುದಲ್ಲದೆ, ಅನೇಕ ಅತ್ಯಾಚಾರಕ್ಕೂ ಕಾರಣನಾಗಿ ತಿರುಗಿದ್ದಾನೆ. ಮದುವೆಯಕಾಲವು ಮೀರಿದ್ದರೂ ಮಗಳನ್ನು ಹಾಗೆಯೇ ಬೆಳೆಸುತ್ತಿರುವನಲ್ಲದೆ,.....ಅವಳಾವಳೋ ಅಜ್ಞಾತಗೋತ್ರದ ಭಿಕ್ಷುಕನ ಮಗಳು. ಅವಿವಾಹಿತೆಯಾದ ಷೋಡಶಿಯೊಬ್ಬಳನ್ನು ಬೇರೆ ಮನೆಯಲ್ಲಿ ಕರೆತಂದಿಟ್ಟು, ಅವಳ ಮೂಲಕ ಗುರುಹಿರಿಯರನ್ನೂ, ದೈವಬ್ರಾಹ್ಮಣರನ್ನೂ ವಿಶೇಷವಾಗಿ ನಿಂದಿಸುತ್ತಿರುವನು. ಇಷ್ಟೇ ಅಲ್ಲ! ಇನ್ನೂ ಎಷ್ಟೆಷ್ಟೋ ಅತಿಕ್ರಮಗಳಿಂದ ನಮ್ಮ ಜನಾಂಗಕ್ಕೂ ಪಟ್ಟಣಕ್ಕೂ ಮುಖ್ಯ ಶತ್ರುವಾದ ರಕ್ಕಸನಂತೆ..... ತಿರುಗುತ್ತಿರುವನು. ಅವನ ಹಣಕ್ಕೆ ಬೆರೆದ ಇತರ ನಾಸ್ತಿಕರೂ, ಈಗಿನ ನಾಗರಿಕರೆಂದು ಹೆಸರ್ಗೊಂಡ ಅಧಿಕಾರಿಗಳೂ ಅವನಂತೆಯೇ ನಡೆಯುತ್ತಿರುವರು.....ಈಗಾಗಲೇ ಎಷ್ಟೋ ಸೇವಾಕಾರ್ಯಗಳು ನಿಲ್ಲಿಸಲ್ಪಟ್ಟಿವೆ. ಮಠಕ್ಕೆ ಬರುತಿದ್ದ ವರಮಾನದಲ್ಲಿ ಅರೆಪಾಲು ಕಡಿಮೆಯಾಗಿದೆ. ಸೇವೆ..... ಗೆಂದು ಬರುತ್ತಿದ್ದ ಆದಾಯದಲ್ಲಿ ಮೂರುಪಾಲು ತಡೆಯಲ್ಪಟ್ಟು, ಅಚ್ಚಿನಪ್ಪ ಜಲಾಶಯ ನಿರ್ಮಾಣ, ಅನಾಥಾಲಯಸ್ಥಾಪನೆ ಮೊದಲಾದುವಕ್ಕೆಂದು ವಿನಿಯೋಗವಾಗುತ್ತಿವೆ.....ನಗೇಶರಾಯನ ಪುಂಡಾಟದಿಂದ ಮಠಕ್ಕೂ ಸಮಾಜಕ್ಕೂ ಸಾವಿರಗಟ್ಟಲೆ ರೂಪಾಯಿಗಳ ವರೆಗೂ ನಷ್ಟವಾಗಿರುವುದಲ್ಲದೆ, ಇನ್ನೂ ಸರ್ವನಾಶವಾಗುವಂತೆ ಮಾಡುವ ಸೂಚನೆಯೂ ಇದೆಯೆಂದರೆ ಸಾಕು."—

ಹೀಗೆಂದು ಬಹು ಗಂಭೀರವಾಗಿ ಗುರುವಾದಪೀಠದಲ್ಲಿ ವಿಜ್ಞಾಪಿಸಿಕೊಂಡಿರುವ ಆ ಭಟ್ಟಾಚಾರ್ಯರೂ, ಆ ಪಂತರೂ, ಈಗೆಲ್ಲಿರುವರೋ ತಿಳಿಯಲಿಲ್ಲ! ಅವರೂ ಇಲ್ಲಿಯೇ ಇದ್ದರೆ, ಪಾಪ? ಚೆನ್ನಾಗಿ ಕೇಳಿ, ತಿಳಿದುಕೊಳ್ಳಲಿ, ತಮ್ಮ ಸತ್ಯಪರಾಕ್ರಮವೆಂತಹದೆಂಬುದನ್ನು!

ಮಹನೀಯರೇ!

ನಗೇಶರಾಯನ ಮೇಲೆ ಎಂತಹ ಆರೋಪವುಂಟಾಗಿದೆ—ನೋಡಿದಿರೋ? ಇದಕ್ಕೆ ನಗೇಶರಾಯನು ಎಷ್ಟುಮಟ್ಟಿಗೆ ಉತ್ತರವಾದಿಯಾಗಿ ನಿಲ್ಲಬೇಕು? ಆದರೆ, ಮಾನನಿಧಿಯಾದ ಆತನಾಗಲೀ, ಆತನ ಅನುಗಾಮಿಗಳಾಗಲೀ ಇಂತಹ ಅಪಮಾನಕರಗಳಾದ ಅಲ್ಪವಿಷಯಗಳಲ್ಲಿ ಪ್ರಸ್ತಾಪಿಸುವರಾಗಿಲ್ಲ. ಮಗಳ ವಯಸ್ಸು ಮೀರುತ್ತಿದೆಯೆಂದು ಹೇಳುತ್ತ, ಅನನುರೂಪನಿಗೆ ಅಥವಾ ಅಯೋಗ್ಯ ವರನಿಗೆ ಬಲಾತ್ಕಾರವಾಗಿ ಮಗಳನ್ನೊಪ್ಪಿಸಿ, ತನ್ನ ಮತ್ತು ಮಗಳ ಸರ್ವನಾಶಮಾಡಿಕೊಳ್ಳುವಷ್ಟರ ಧೂರ್ತಪುರುಷನು ಆತನಲ್ಲ. ಶ್ರೀಮಂತನ ಕನ್ಯೆಯನ್ನು ಕೊಳ್ಳುವುದರಿಂದ ವರದಕ್ಷಿಣೆಯು ಹೇರಳವಾಗಿ ದೊರೆತು, ತಾವು ಬದುಕುವೆನೆಂದು ಬಗೆದ ಭಟ್ಟಾಚಾರ್ಯರಾದಿಗಳಿಗೆ ಅಡ್ಡಬೀಳುವಷ್ಟರ ಹೆಡ್ಡತನವು ಆ ಕಲಿಪುರುಷನಲ್ಲಿಲ್ಲ. ಇಂತಹ ನೂರಾರು ಮಂದಿ ಭಟ್ಟಾಚಾರ್ಯರ, ಸಾವಿರಾರುಮಂದಿ ಪಂತರ ಬಾಯ್ಗಳನ್ನು ಕಟ್ಟಿ, ಅವರನ್ನು ಆಕ್ರಮಿಸಿಕೊಂಡಿರುವ ಆ ಹಾಳು ಧನಪಿಪಾಸರೋಗದ ಹುಟ್ಟಡಗುವಂತೆ ಮಾಡಬಲ್ಲ ಸಾಹಸವು,ನಮ್ಮ ಪರಮಪೂಜ್ಯನಾದ ನಗೇಶರಾಯನಲ್ಲಿರುವುದು. ಅಷ್ಟೇ ಅಲ್ಲ. ಅಜ್ಞಾತಗೋತ್ರದವಳನ್ನು ಪರಿತ್ಯಜಿಸಬೇಕೆಂದು ಹೇಳುವ ಮಹಾಜನರ ಉಪದೇಶಕ್ಕೆ, ನಮ್ಮ ಶ್ರೀಮಂತನು ಕಿವಿಯನ್ನಾದರೂ ಕೊಡಬಹುದೋ? ಎಂದಿಗೂ ಇಲ್ಲ. ಏಕೆಂದರೆ,—ಕೇಸಲಯಾವ ಧನಲೋಭಕ್ಕಾಗಿ ಸ್ವಹಸ್ತದಿಂದ ವಿಷಪ್ರಯೋಗಮಾಡಿ ರಕ್ತಸಂಬಂಧಿಯಾದ ತನ್ನ ಅಣ್ಣನ ಮಗಳನ್ನ ಇಹಲೋಕದಿಂದ ಹೊರಡಿಸಿದ ಭಟ್ಟಾಚಾರ್ಯರಂತಹ ಪುಣ್ಯಪುರುಷನು ನಗೇಶರಾಯನಲ್ಲ! ಪತ್ನೀ ವಿಯೋಗನಾದ ಬಳಿಕ, ಏಕಮಾತ್ರಪುತ್ರಿಯನ್ನು ಜೊತೆಗೊಂಡು ಕಾಲಯಾಪನ ಮಾಡುತ್ತಿದ್ದ ಆ ನಮ್ಮ ಪರಮಪೂಜ್ಯವಾದನೂ ನಮ್ಮ ಪಿತೃದೇವನ ಜ್ಯೇಷ್ಠಭ್ರಾತೃವೂ ಆದ ಆ ಯೋಗಿವರ್ಯನನ್ನು ತನ್ನ ದ್ವೇಷಸಾಧನೆ

ಗಾಗಿ, ದೇಶಭ್ರಷ್ಟನಾಗುವಂತೆ ಮಾಡಿದ, ಈ ನಗರದ ಜೀವಾನಂದ ಏತದವರಂತೆ ಅಭಿಮಾನಿಯೂ ಅತನಲ್ಲ. ಮತ್ತು, ಯಾವ ಗಣೇಶಪಂತರು, ತನ್ನ ಭಾತೃಭಾರ್ಯೆಯನ್ನು ಭರ್ತೃವಿಯೋಗಾನಂತರ, ತಮ್ಮ ಮತ್ತು ಜೀವಾನಂದರವರ ಸೇವಾಕಾಯ್ಯದಲ್ಲಿ ಮಾತ್ರವೇ ನಿಯಮಿಸಿ, ಉಳಿದ ಸ್ವಾತಂತ್ರ್ಯವನ್ನು ಸೂರೆಗೊಳ್ಳಬೇಕೆಂದು ಮಾಡಿದ್ದ ತಮ್ಮ ಉದ್ದೇಶಕ್ಕೆ, ಆ ತಪಸ್ವಿನಿಯು ಒಳಗಾಗದೆ, ಅಗ್ರಜನ ಉಪದೇಶದಂತೆ ಆತ್ಮಧ್ಯಾನದಲ್ಲಿ ಮಾತ್ರವೇ ನಿರತಳಾದಳೆಂಬ ಒಂದೇ ಒಂದು ದೊಡ್ಡ ತಪ್ಪಿಗಾಗಿ, ಅವಳನ್ನು ಅಪವಾದಕ್ಕೆಡೆ ಮಾಡಿ, ಸಮಾಜದಿಂದ ಬಹಿಷ್ಕರಿಸಿ ಹೊರಡಿಸಿ ಬಿಟ್ಟರೋ, ಆ ಮಹನೀಯರಷ್ಟು ಭೂತದಯಾಪರತೆಯಾದರೂ ನಮ್ಮ ಶ್ರೀಮಂತರಿಗಿಲ್ಲ. ಹೀಗೆಂದು ಬಳಿಕ, ಆ ಅಕಾಲಮೃತ್ಯುವಶೆಯಾದವಳ ಸುಕುಮಾರಿಯನ್ನು—ಆತ್ಮಧ್ಯಾನನಿಷ್ಠಾಪರಳಾದ ಆ ತಪಸ್ವಿನಿಯು ನೈಸರ್ಗಿಕ ಪ್ರೇಮದಿಂದ ಪೋಷಿತೆಯಾದ ಆ ನಂದಿನಿಯನ್ನು—ದಿವ್ಯಜ್ಞಾನಪರಿಪೂರ್ಣನಾದ ಆ ಸತ್ಯಾನಂದ ಸ್ವಾಮಿಯ ಪೂರ್ಣಾನುಗ್ರಹಕ್ಕೆ ಪಾತ್ರಳಾಗಿ, ದೇಶಮಾತೃಸೇವೆಗಾಗಿ ಒಪ್ಪಿಸಲ್ಪಟ್ಟಿರುವ ನಮ್ಮ ನಂದಿನಿಯನ್ನು, ಬಿಟ್ಟು ಬಿಡಬೇಕೆಂದರೆ, ಭಟ್ಟಾಚಾರ್ಯರಂತಹರಿಗಲ್ಲದೆ ಮತ್ತಾರಿಗೆ ಸಾಧ್ಯವು? (ನಾಚಿಕೆಕೇಡಿನ ಸಂಗತಿ. ನಾಚಿಗ್ಗೇಡಿಗಳ ಮಾತು! ಮುಂದೆ ಸಾಗಲಿ.)

ಪರಮಪ್ರಿಯರೇ!

ನಮ್ಮ ದೇಶಭಕ್ತ ನಗೇಶರಾಯನ ನಾಸ್ತಿಕವಾದಿತ್ವದಿಂದ ಈ ಪಟ್ಟಣಕ್ಕಾಗಿರುವ ದುರವಸ್ಥೆಯೇನೆಂದು ತಿಳಿದಿರುವಿರಿ? ಪೀಠಾಧಿಕಾರಿಗಳ ಉಪಾಸ್ಯದೇವತೆಗೆ ಸಮರ್ಪಿಸಲ್ಪಡಬೇಕಾಗಿದ್ದ ಕಾಣಿಕೆಗಳು ತಪ್ಪಿಯಲ್ಪಟ್ಟ ಅದರಿಂದ ಇಲ್ಲಿಯ ಸಂಸ್ಕೃತ ಸಾಹಿತ್ಯಮಂದಿರವು ಸ್ಥಾಪಿಸಲ್ಪಟ್ಟಿತು. ಸಂತರ್ಪಣೆ-ಸಂತಸೇವೆಗಳಿಗೆಂದು ಸಲ್ಲುತ್ತಿದ್ದ ಆದಾಯವು, ಇಲ್ಲಿಯ ಅಮೃತಸರಸ್ಸಿನ ನಿರ್ಮಾಣಕ್ಕೆ ಕಾರಣವಾಗಿ, ಭಟ್ಟಾಚಾರ್ಯರಾದಿಯಾದವರ ಭಾರ್ಯಾಪುತ್ರರಿಗೆ ಉಡುವು–ತೊಡವುಗಳಿಗಭಾವವಾಯಿತು. ಸಮಾಜದ ಶಾಸನೋಲ್ಲಂಘನೆಗೆ ಪ್ರಾಯಶ್ಚಿತ್ತವೆಂದು ತೆಗೆದುಕೊಳ್ಳುತ್ತಿದ್ದ ಸುಂಕದಿಂದ, ಸಣ್ಣ ಅನಾಥಾಲಯವೊಂದು ನಿರ್ಮಿತವಾಗಲು ಅವಕಾಶವಾಯಿತು. ಇಷ್ಟಾದುದೂ ಅಲ್ಲದೆ. ನಮ್ಮ ಧರ್ಮಸೋದರಿಯರಾದ ಬಹುಮಂದಿ ಅಭಾ

ಗಿನಿಯರು ತಮ್ಮ ಜೀವಿತವನ್ನು ಕೇವಲ, ನೀಚರ ದಾಸ್ಯಭಾವದಲ್ಲಿ ಮತ್ತು ಶೋಕಕಾತರತೆಯಲ್ಲಿ ಕಳೆಯುತ್ತಿದ್ದ ದುಸ್ಥಾಲವನ್ನು ಹಿಂದಟ್ಟಿ ಆತ್ಮವಿಚಾರದಿಂದ ಸ್ವಾವಲಂಬಿನಿಯರಾಗಿ, ದೇಶಮಾತೃಸೇವಕರಾಗಿ ಧರ್ಮಸಂಸ್ಥಾಪನೆಯಲ್ಲಿ ತಮ್ಮ ಭ್ರಾತೃವರ್ಗವನ್ನು ಪ್ರೋತ್ಸಾಹಿಸುವಂತಾಗುತ್ತಿರುವರು. (ಶುಭವಾರ್ತೆ, ಶುಭವಾರ್ತೆ.) ಹೀಗಾದುದರಿಂದ ಭಟ್ಟಾಚಾರ್ಯರಾದಿಯಾದವರಿಗೂ, ಪೀಠಾಧಿಕಾರಿಗಳಿಗೂ ಎಷ್ಟೊಂದು ನಷ್ಟವಾಗಿರಬೇಕೋ, ನೀವೇ ಊಹಿಸಿರಿ? ಇವೆಲ್ಲಕ್ಕೂ ನಮ್ಮೊಡಗೂಡಿದ ನಗೇಶರಾಯನೇ ಮೂಲವಾದ ಬಳಿಕ, ಅತನು ಈ ಪಟ್ಟಣಕ್ಕೆ ಶತ್ರುವೇ ಅಹುದೋ ಅಲ್ಲವೋ?–(ಕೆಟ್ಟರು, ಕೆಟ್ಟರು; ಮೂರ್ಖರು ಕೆಟ್ಟು ಹಾಳಾದರು. ಸಾರ್ಯನು ಪ್ರಪಂಚಕ್ಕೇ ಮಿತ್ರನು!)

ಅಹಹಾ! ಓ ನನ್ನ ದೇಶಬಾಂಧವರೇ! ಮತ್ತೊಂದು ಮಾತು:–

ಸರ್ವಸಂಗಪರಿತ್ಯಾಗಮಾಡಿದ ಜೀವಾನಂದಪರಮಹಂಸರ ಪ್ರತಿಜ್ಞೆಯಾದರೂ ಎಷ್ಟಿರಬೇಕು? ಮತಾಚಾರವನ್ನತಿಕ್ರಮಿಸಿದ ಮತ್ತು ಬ್ರಹ್ಮತೇಜೋವಧೆಯೇ ಮೊದಲಾದ ಅನುಚಿತ ಕೃತ್ಯಗಳನ್ನು ಮಾಡಿದುದಕ್ಕಾಗಿ, ನಾವು ಐದುಸಾವಿರ ರೂಪಾಯಿಗಳನ್ನು ಗುರುಪೀಠಕ್ಕೆ ಕಾಣಿಕೆಯಾಗಿ ಒಪ್ಪಿಸಿ, ಅಪಚಾರಕ್ಷಮಾಪಣೆಯನ್ನು, ಹಾಗೂ ಸಭಾಮಧ್ಯದಲ್ಲಿ, ಕೋರಬೇಕಂತೆ! ಅಲ್ಲವೆ? ಆದೀತು. ಆದರೆ ನೋಡಿರಿ! ಮತಾಚಾರ ಮತ್ತು ಬ್ರಹ್ಮತೇಜೋವಧೆಗಳೇ ಮೊದಲಾದ ಪಾತಕಗಳು ಯಾರಿಂದ, ಹೇಗೆ ನಡೆಯಿಸಲ್ಪಟ್ಟಿರುವುವೆಂಬುದನ್ನು ಹಿಂದೆಯೇ ಹೇಳಿದ್ದೇನೆ. ಇದಕ್ಕೆ ಮಾಡಬೇಕಾದ ಪ್ರಾಯಶ್ಚಿತ್ತಗಳನ್ನು ನಿನ್ನಿನ ದಿನದಲ್ಲಿ ನ್ಯಾಯಮೂರ್ತಿ ಕಲೆಕ್ಟರರವರ ದಿವ್ಯಭವನದಲ್ಲಿ ನಡೆಯಿಸಿದ ಅತ್ಯಾಚಾರದ ಪ್ರತೀಕಾರಕ್ರಿಯೆಯಲ್ಲಿ ನಿಮ್ಮೆಲ್ಲರ ಸಮಕ್ಷಮದಲ್ಲಿಯೂ ನಡೆಯಿಸಿರುತ್ತೇನೆ. ಇದರಿಂದ, ಪಾಪ! ಗುರುಪೀಠದವರ ಶಾಸನದ ಪ್ರಮಾಣವಾಗಲೀ, ಗುರುಪೀಠಾಶ್ರಿತರಾದ ಶಿಷ್ಯಮಂಡಲಿಯವರ ಭಕ್ತಿಪಾರವಶ್ಯತೆಯಾಗಲೀ ಎಷ್ಟರದಾಗಿದೆಯೆಂಬುದನ್ನು ನೀವೂ ನೋಡಿ ತಿಳಿಯುವಂತೆ ಮಾಡುತ್ತೇನೆ. (ಮೇಲುಮಾತು; ಮೇಲುಮಾತು.)

ಇನ್ನು ಈ ಪಟ್ಟಣದ ಮಹಾಜನರ ವಿಚಾರವಿಮರ್ಶೆಗಳು ಇಲ್ಲಿಯವರೆಗೆ ಸಾಕಾಗಿರಲಿ. ಮುಂದೆ ನಮ್ಮ ಕರ್ತವ್ಯವನ್ನೂ, ಸುಧಾರಿಸಲ್ಪಡಬೇಕಾದ ವಿಚಾರಗಳನ್ನೂ ಸ್ವಲ್ಪ ವಿಚಾರ ಮಾಡುವ.

ಸುಹೃದರೇ!

ನಮ್ಮ ವಿಚಾರಶಕ್ತಿಲೋಪದಿಂದ ನಾನಾವಿಧದ ಅಂತಸ್ತಾಪಗಳಿಗೆ ಗುರಿಯಾಗಿರುವ ನಮ್ಮ ದೇಶಮಾತೆಯನ್ನು ಉನ್ನತಿಗೆ ತರುವಂತೆ ಮಾಡಬೇಕಾದುದೇ ನಮ್ಮ ಮುಖ್ಯ ಕರ್ತವ್ಯವು. ಇದು ನಮ್ಮವರ ಐಕಮತ್ಯ ಬಲ ಅಥವಾ ಸಂಘಶಕ್ತಿಯು ಏಕರೂಪದಲ್ಲಿಯೇ ಸಿದ್ಧಿಹೊಂದಬೇಕಲ್ಲದೆ ಮತ್ತೇತರಿಂದೆಯೂ ಆಗದು. ಈವರೆಗೂ ಇದ್ದಂತೆ ನಾವು ಮುಂದೆಯೂ ಬೇರೆಬೇರೆಯಾಗಿದ್ದು, ಒಬ್ಬೊಬ್ಬರೊಂದೊಂದು ಬಗೆಯ ವಿಷಯಕ್ಕೋಗಗಳಿಗೆ ತುತ್ತಾಗುವಂತಾಗುವುದು ಸರಿಯಲ್ಲ. ನಮ್ಮಲ್ಲಿ ಮೊದಲು, ಸ್ವಾತಂತ್ರ್ಯನಿಷ್ಠೆ ಅಥವಾ ಸ್ವಾವಲಂಬನವು ಬಲವಾಗಿರಬೇಕು. ಸ್ವಾವಲಂಬನವು ನಮ್ಮಲ್ಲಿ ದೃಢವಾಗಿರಬೇಕಾದರೆ, ನಮ್ಮನಮ್ಮಲ್ಲೆ ವಸ್ತುವಿಚಾರ ವಿಮರ್ಶಾರೂಪವಾದ ಪ್ರಜ್ಞೆಯು ಅಥವಾ ಜ್ಞಾನದ ಅಂತಸ್ಸತ್ವವು ಸಹಕಾರವಾಗಿರಬೇಕು. ಇಲ್ಲವಾದರೆ ನಾವು ಹೇಗೆ ತಾ ಕೃತಕಾರ್ಯರಾಗಲಾರೆವು.

ಅಂತಸ್ಸತ್ವವೆಂಬುದು, ನಮ್ಮ ಸ್ತ್ರೀವರ್ಗವನ್ನೇ ಮುಖ್ಯವಾಗಿ ಆಶ್ರಯಿಸಿರುವುದರಿಂದ, ಮೊದಲು ನಾವು, ಆ ನಮ್ಮ ಸ್ತ್ರೀವರ್ಗವನ್ನು ಸುಧಾರಿಸುವುದರಲ್ಲಿ ಜಾಗರೂಕತೆಯನ್ನು ವಹಿಸಬೇಕು.

ನಮ್ಮ ಹೆಂಗಸರು ಸ್ಕೂಲಿಗೆ ಹೋಗಿ, ನಾಲ್ಕಾರು ಅನ್ಯಭಾಷಾ ಪುಸ್ತಕಗಳನ್ನು ಮುಗಿಸಿ, ವಿದೇಶೀಯರ ನಡೆನುಡಿಗಳನ್ನು ಅನುಕರಣಮಾಡಿ ಬಂದ ಮಾತ್ರಕ್ಕೆ, ನಮ್ಮ ಸ್ತ್ರೀಯರು ವಿದ್ಯಾವತಿಯರಾಗಲಿಲ್ಲ. ಪಾಶ್ಚಿಮಾತ್ಯರ ನಡೆನುಡಿಗಳನ್ನು ಅನುಕರಣ ಮಾಡಲು, ಅನಾದಿಯಾಗಿ ಬಂದಿರುವ ನಮ್ಮ ಆರ್ಯಧರ್ಮವನ್ನು ಕಡಿದುಹಾಕುವುದು ಭಾರತೀಯರಾದ ನಮಗೂ ದಾಕ್ಷಿಣಾತ್ಯರಾದ ನಮಗೆ ಸರ್ವಥಾ ಸರಿಯಲ್ಲ. ಎಂದರೆ, ಪಾಶ್ಚಿಮಾತ್ಯರ ವಿಚಾರವನ್ನೇ ಬಿಡಬೇಕೆಂಬುದು ನನ್ನ ಮತವಲ್ಲ. ಅವರಲ್ಲಿರುವ ಪ್ರಾಮುಖ್ಯಗಳಾದ ಗುಣಗಳನ್ನು-ಎಂದರೆ, ಉದ್ಯೋಗಶೀಲತೆ, ಸಂಘಶಕ್ತಿ, ದೇಶದ ಸಂಪದಭಿವೃದ್ಧಿಯಮೇಲೆ ಅವರು ತೋರುತ್ತಿರುವ ಅಭಿಮಾನ,

ಇವುಗಳೆಲ್ಲವೂ ನಮಗೆ ಪರಮಾದರ್ಶವಿಚಾರಗಳಾಗಿರುವುವು. ಅವುಗಳನ್ನು ಮಾದರಿಯಾಗಿಟ್ಟು, ನಮ್ಮ ಕರ್ತವ್ಯವನ್ನು ನಾವು ಸುಸೂತ್ರವಾಗಿ ನೆರವೇರಿಸಿಕೊಳ್ಳಬೇಕಲ್ಲದೆ, ಬರಿಯ ಬಾಯಿಮಾತಿಂದ ಹಾರಾಡಿದರೆ ಕೃತಕಾರ್ಯರಾಗಲಾರೆವು. (ನಿಜ, ನಿಜ!)

ಓ, ನಮ್ಮ ದೇಶಬಾಂಧವರೇ!

ಕೇಳಿರಿ, ನಮ್ಮ ನಂದಿನಿಯ ವಿಚಾರವಾಗಿ ಭಟ್ಟಾಚಾರ್ಯರಾದಿಯಾಗಿ ಈ ಪಟ್ಟಣದ ಮಹಾಜನಗಳು ವಿಕಲ್ಪಾರ್ಥಗಳನ್ನು ಕಲ್ಪಿಸಿದ್ದಾರಷ್ಟೆ! ನಮ್ಮ ಅಕ್ಕತಂಗಿಯರು, ಇತರ ಒಡನಾರಿಯರು, ಸಹಚಾರಿಣಿ ಅಥವಾ ನಮ್ಮ ಗೃಹಿಣಿಯರು, ಪ್ರತಿಯೊಬ್ಬರೂ, ನಮ್ಮ ನಂದಿನಿಯಂತೆಯೇ ಆಗಬೇಕು. ನಂದಿನಿಯಲ್ಲಿರುವ ಮನೋಯೋಗಶಕ್ತಿಯನ್ನೇ, ಅವಳ ವಿದ್ಯುತ್‌ಸಂಬಂಧವಾದ ಪ್ರಜ್ಞಾವಿಶೇಷಣವನ್ನೇ ನಮ್ಮ ಸ್ತ್ರೀಯರೆಲ್ಲರೂ ಅನುಕರಣಮಾಡುವಂತೆ ನಾವು ಅವರಿಗೆ ಸುಶಿಕ್ಷಣವನ್ನು ಕೊಡಬೇಕು. ನಮ್ಮ ಸ್ತ್ರೀವರ್ಗವನ್ನು ಈಗಿರುವಂತೆ ನಮ್ಮ ಅಕಾರಣ ಶಂಕೆಗಳಿಗೆ ಕಾರಣರನ್ನಾಗಿ ಮಾಡಿ, ಕೇವಲ ನಿರ್ಬಂಧದಲ್ಲಿಟ್ಟು ಸರಕಿಸುವುದೂ, ಇಲ್ಲವೆ, ನವನಾಗರಿಕತೆಯೆಂಬ ಸನ್ನಿವಾತಕ್ಕೆ ಪಕ್ಕಾಗಿ, ವಿವಿಧ ವೇಷಭಾಷೆಗಳಿಂದ ಅವರನ್ನು ನಲಿದಾಡಿಸುತ್ತ, ತಾವು ಅವರ ಸೇವಾವೃತ್ತಿಯಲ್ಲಿರುವುದೂ, ಇವೆರಡೂ ಆರ್ಯರಾದ ನಮಗೆ ಸರಿಯಲ್ಲ. ನಮ್ಮ ಮಹಿಳೆಯರನ್ನು-ಆರ್ಯಧರ್ಮಪ್ರತಿಷ್ಠಾಪನಾ-ಮಹತ್ಕಾರ್ಯದಲ್ಲಿ ಮುಖ್ಯ ಪಾತ್ರರಾಗಿರುವ ಆದಿಶಕ್ತಿಯರನ್ನು---ನಾವು ನಮ್ಮ ನಿರ್ದುಷ್ಟಪ್ರೇಮಸಂಭಾವನೆಯಿಂದಲೇ ಗೌರವಿಸಿ, ನಮ್ಮ ಸಹೃದಯಭಾವನೆಗೆ ಅವರು ನಮ್ಮಲ್ಲಿ ಪ್ರಸನ್ನರಾಗಿ, ನಮ್ಮ ದೇಶಸೇವಾಕಾರ್ಯದಲ್ಲಿ ಸಹಕಾರಿಣಿಯರಾಗಿ ನಿಲ್ಲುವಂತೆ ಮಾಡುವ ನಾತ್ವಿಕ ವಿದ್ಯೆಯನ್ನು, ಅವರಿಗೆ ನಾವು ಸರ್ವಪ್ರಯತ್ನದಿಂದಲೂ ಕಲಿಸಬೇಕು. ಹೆಚ್ಚೇಕೆ, ಇನ್ನುಮುಂದೆ ನಮ್ಮ ಕರ್ತವ್ಯಕ್ಕೆ ತಕ್ಕುದಾದ ಶಿಕ್ಷಣಗಳನ್ನೂ ಅವರು ನಮ್ಮಿಂದಲೇ ಪಡೆಯಬೇಕಲ್ಲದೆ, ಅನ್ಯರನ್ನು ಆಶ್ರಯಿಸುವುದಕ್ಕೆ ಅವಕಾಶಕೊಡಬಾರದು. (ಒಪ್ಪಿದೆವು; ತಪ್ಪದೆ ನಡೆವೆವು.)

ತಿಳಿದಿರೇ, ಸುಹೃದರೇ!

ಮತ್ತೊಂದು ವಿಚಾರ,—ಎಂದರೆ, ನಮ್ಮವರ ವಿವಾಹವಿಚಾರ. ಅದೇ

ನೆನ್ನುವಿರೋ? ವರದಕ್ಷಿಣೆಯೆಂಬ ವರವಿಕ್ರಯದ, ಇಲ್ಲವೇ ಕನ್ಯಾವಿಕ್ರಯದ ಹೇಯಪದ್ಧತಿಗಳನ್ನು ನಾವು ಈಗಲೇ ಸಮೂಲವಾಗಿ ನಾಶಮಾಡುವಂತೆ ಪ್ರಯತ್ನಿಸಬೇಕು. ಎಂದರೆ. ಕೇವಲ ಪ್ರಯತ್ನ ಮಾತ್ರದಿಂದಲೇ ಫಲಕಾರಿಯಲ್ಲ. ಇದಕ್ಕಾಗಿ ನಮ್ಮಲ್ಲಿ ಬಲವಾದ ಮನೋನಿಗ್ರಹಶಕ್ತಿಯೂ ದೃಢವಾಗಿರಬೇಕು. ಕುತ್ಸಿತವ್ಯಾವಾರವನ್ನು ಖಂಡಿಸಿ ನಿಜವಾದ ಮತವನ್ನು ಸ್ಥಾಪಿಸುವುದಕ್ಕೆ ಅವಶ್ಯಕವಾದ, ಸಕಾರಣಗಳಾದ, ನಿದರ್ಶನವೂರ್ಮಕವಾದ, ವಿಷಯವಿಚಾರಗಳು, ನಮಗೆ ಕೂಲಂಕಷವಾಗಿ ತಿಳಿದಿರಬೇಕು. ಹೀಗಾಗಬೇಕಾದರೆ, ನಾವು ಒಬ್ಬೊಬ್ಬರೂ ಒಬ್ಬೊಬ್ಬ ನಗೇಶರಾಯನನ್ನು ಗುರುವನ್ನಾಗಿ ವರಿಸಿ, ಅಭ್ಯಾಸ ಮಾಡಬೇಕು. ಹೀಗೆ ಮಾಡುವ ವರೆಗೂ ನಮ್ಮಲ್ಲಿ ಆ ಹೇಯಸಂಪ್ರದಾಯವು ಹೋಗುವುದಿಲ್ಲ. ಹಾಗೆ ಮಾಡದಿದ್ದರೆ, ಸ್ನೇಹಲತಾದೇವಿಯು ಶಾಪಾಗ್ನಿಯು ನಮ್ಮನ್ನು ಹೇಗೂ ಬಿಡುವಂತಿಲ್ಲ. ಪ್ರಿಯರೇ! ಆ ಸ್ನೇಹಲತಾದೇವಿಯ ಅಂತ್ಯ ಸಂದೇಶವನ್ನು ನೀವೆಲ್ಲರೂ ಮರೆತಿರೇನು? (ಇಲ್ಲ-ಇಲ್ಲ.)

ಇಲ್ಲದಿದ್ದರೆ, ನಮ್ಮ ಸಂಘಶಕ್ತಿಯನ್ನು ಸಾರ್ಥಿಕ್ಯಪಡಿಸಿಕೊಳ್ಳಲು ಸಂಕಲ್ಪಿಸಿರಿ. ನಮ್ಮ ಪ್ರಯತ್ನವು ಮೊದಲಿನಂತೆ ಆರಂಭಶೂರತ್ವದಲ್ಲಿಯೇ ವಿಫಲವಾಗುವಂತೆ ಮಾಡಬೇಡಿರಿ. ಎಂದೆಂದಿಗೂ ಶಾಶ್ವತ ಬ್ರಹ್ಮಕಲ್ಪವಾಗಿರುವಂತೆಮಾಡಲು ಸಹಸಾ ಪ್ರಯತ್ನಿಸಿರಿ! (ಸತ್ಯವಾಗಿಯೂ ಸಂಕಲ್ಪಿಸಿರುವೆವು.)

ಇಷ್ಟೇಅಲ್ಲ; ನನ್ನ ದೇಶಬಾಂಧವರೇ! ನೀವು ಇದನ್ನು ಮಾಡಿರಿ-ಬಿಡಿರಿ; ಹೇಗಾದರೂ, ನಮ್ಮ ಸೋದರೀವರ್ಗವನ್ನು ಆ ಪವಿತ್ರ ಪ್ರೇಮಮಯಿಯಾದ ಸ್ನೇಹಲತೆಯ ಮಾದರಿಯಲ್ಲಿಟ್ಟು, ದೇಶಹಿತಕಾರ್ಯದಲ್ಲಿ ದೇಹವನ್ನೊಪ್ಪಿಸುವಂತೆ ಮಾಡುವ ಕಾರ್ಯವನ್ನು ನನ್ನ ಸೋದರಿ, ನಂದಿನಿಯೇ ಕೈಕೊಂಡಿರುವುದರಿಂದ ಹೇಗೂ ನಮ್ಮವರ ವರವಿಕ್ರಯದ ಕುತ್ಸಿತರೋಗಕ್ಕೆ ಸರಿಯಾದ ಚಿಕಿತ್ಸೆಯನ್ನು ಮಾಡದೆ ಬಿಡಲಾರಳೆಂದು ನಂಬಿರಿ. ಆದುದರಿಂದ ಆ ಕಾರ್ಯದಲ್ಲಿ ನಾವೇ ಮುಂದಾಳುಗಳಾಗಿದ್ದು, ಸಾಫಲ್ಯಗೊಳಿಸಬೇಕಾದುದು ಸಹಜವಾದುದರಿಂದ, ಈ ವಿಚಾರದಲ್ಲಿ ಧನದಾಹಕ್ಕೆ ಪಕ್ಕಾಗುವವರನ್ನು ಮೂಲೆಗೊತ್ತಿರಿಸಿ, ನಮ್ಮ ಸ್ತ್ರೀವರ್ಗವನ್ನು ನಂದಿನೀಸಂದೇಶ

ದಂತೆ ನಡೆಯಲು ಪ್ರೇರಿಸುವುದೂ, ನಮ್ಮ ಪ್ರತಿ ಕಾರ್ಯಕಲಾಪಸ್ಫೂರ್ತಿ ದೇಶಭಕ್ತಾಗ್ರಣಿಗಳಾದ ನಗೇಶರಾಯರೇ ಮೊದಲಾದ ನಮ್ಮ ಹಿರಿಯರ ಅಭಿಮತಕ್ಕೊಳಪಡುವಂತೆ ನಡೆಸುವುದೂ, ಇಲ್ಲಿ ನಾವು ಮಾಡಬೇಕಾದ ಮುಖ್ಯ ಕಾರ್ಯವಾಗಿರುವುದು. ಇನ್ನು ಉಳಿದ ವಿಚಾರಗಳನ್ನು ಮತ್ತೊಮ್ಮೆ ಚರ್ಚಿಸಲಾದೀತು. ಮುಖ್ಯವಾಗಿ, ನಾವು, ನಮ್ಮ ದೇಶಕಲ್ಯಾಣಕ್ಕಾಗಿ ನಮ್ಮ ಸರ್ವಸ್ವವನ್ನೂ ಧಾರೆಯೆರೆಯಬೇಕೆಂಬುದೇ ನನ್ನ ಇಂದಿನ ದೈನ್ಯಸಂಪ್ರಾರ್ಥನೆಯಾಗಿದೆ.

ಎಲ್ಲಿ,—ನನ್ನ ಪ್ರಿಯಬಾಂಧವರೇ! ಏಳಿರಿ, ಎದ್ದುನಿಂತು ಕೂಗಿ ಹೇಳಿರಿ,—ಉಚ್ಚೈಸ್ವರದಿಂದ ಕೂಗಿ ಹೇಳಿರಿ. ಹೂಂ? ಏಲ್ಲಿ! "ದೇಶಮಾತೆಗೆ ಜಯವು. ದೇಶಸೇವಕರಿಗೆ ವಿಜಯವು, ಸಮಾಜಕ್ಕೆ ಅಭ್ಯುದಯವು; ಸಂಘಶಕ್ತಿಗೆ ದಿಗ್ವಿಜಯವು; ಇದೇ ನಮ್ಮ ನಿರಂತರದ ಪ್ರಾರ್ಥನೆಯು! ದೇಶಮಾತೆಯೇ ನಮ್ಮ ಇಷ್ಟದೇವತೆಯು!! ಇದು ನಿಜವು."

ಮತ್ತೊಮ್ಮೆ ಕೂಗಿ ಹೇಳಿರಿ. "ಸಂಘಶಕ್ತಿಗೆ ಜಯವಾಗಲಿ! ಮಾತೃಸೇವೆಯಲ್ಲಿ ಜನ್ಮ ಸಾಫಲ್ಯಹೊಂದುವಂತೆ ಈ ಸಂಘಶಕ್ತಿಯು ನಮ್ಮನ್ನು ಸಹಕರಿಸುತ್ತಿರಲಿ! ಇಂದಿನ ಸಂಘಶಕ್ತಿಸ್ಥಾಪನೆಯೇ, ಈ ಪಟ್ಟಣದ ಮಹಾಜನರ ಬಹಿಷ್ಕಾರ ಪತ್ರಕ್ಕೆ ಪ್ರತೀಕಾರವಾಗಿ. ಅವರನ್ನೇ ನಮ್ಮ ಈ ಸಂಘದಿಂದ ಪ್ರತ್ಯೇಕಿಸುವಂತೆ ಮಾಡಲಿ" ಹೇಳಿರಿ, ಹೇಳಿರಿ. "ನಮ್ಮ ಈ ಸಂಘಶಕ್ತಿಯು ನಿರಂತರರಾಯವಾಗಿ ಉನ್ನತಿಗೆ ಬರಲಿ."

(ಸಭಿಕರೆಲ್ಲರೂ ಎದ್ದುನಿಂದು ಕರತಾಡನಪೂರ್ವಕವಾಗಿ ಅಡಲಚಂದ್ರನೊಡನೆ ಮತ್ತೆಮತ್ತೆಯೂ ಮೇಲಿನ ವಾಕ್ಯಗಳನ್ನು ಉದ್ಘೋಷಿಸುತ್ತ ಕುಣಿದಾಡಿದರು. ಆ ವರೆಗೂ ಸಭಾಕಾರ್ಯವು ನಿರ್ವಿಘ್ನವಾಗಿ ನಡೆದುದನ್ನು ನೋಡುತ್ತಿದ್ದ ಭಟ್ಟಾಚಾರ್ಯರಾದಿಯಾದವರು ಕುಳಿತಿದ್ದಲ್ಲಿಂದ ಮೆಲ್ಲನೆ ಜಾರಿ ತಲೆತಪ್ಪಿಸಿಕೊಂಡು ಹೋಟುಹೋದರು. ಮುಂದೆ ನಡೆಯಬೇಕಾದ ಸಭಾಕಾರ್ಯಗಳ ಸಂಭ್ರಮವನ್ನು ವಿವರಿಸಬೇಕೇ? ಒಟ್ಟಿನಲ್ಲಿ, ವಿಚಾರಗಳು ನಿರ್ಧಾರಿತಗೊಳ್ಳಾಗಿ, ಸಕಲರೂ ಸಂಭ್ರಮದಿಂದ ಮುಂದಿನ ಕಾರ್ಯದಲ್ಲಿ ಗಮನಿಸಿದರೆಂದರೆ ಸಾಕು.)

॥ ಶ್ರೀಃ ॥

ದ್ವಾದಶ ಪರಿಚ್ಛೇದ.

(ಸಂವ್ಯಾರ್ಥನೆ! ಸಮಾಲೋಚನೆ! ವಿಶೇಷಸೂಚನೆ!)

"ದೇಹಾಯಾಸವಾಗಿದ್ದರೆ ಸ್ವಲ್ಪಹೊತ್ತಾದರೂ ವಿಶ್ರಾಂತಿಹೊಂದ ಬೇಡವೇ? "

" ವಿಶ್ರಾಂತಿಯೆಂದರೆ ನಿನ್ನ ಅಭಿಪ್ರಾಯವೇನು? ಮಲಗುವುದೊಂದೆಯೋ? ಹಾಗಿದ್ದರೆ, ಅದು ನನಗೆ ರುಚಿಸದು."

" ನಾನು ಮಲಗಬೇಕೆಂದು ಬಲವಂತವನ್ನೇನೂ ಮಾಡಲಿಲ್ಲ. ದಾರಿನಡೆದು ದಣಿದು ಬಂದಿರುವವರು, ಬಂದು ಮುಹೂರ್ತಮಾತ್ರವಾದರೂ ವಿಶ್ರಮಿಸಿಕೊಳ್ಳುವುದು ಆರೋಗ್ಯವೆಂದು ಹೇಳಿದೆನು; ಅಷ್ಟೆ."

"ಹಾಗೋ? ಸರಿ. ನಾನೂ ವಿಶ್ರಮಿಸಿಕೊಳ್ಳಲಿಕ್ಕೇ ಬಂದಿರುತ್ತೇನೆ. ದೇಹಾಯಾಸವನ್ನು ಪರಿಹಾರಮಾಡುವುದಕ್ಕೂ, ನೂತನ ಶಕ್ತ್ಯುತ್ಸಾಹಗಳನ್ನು ಕೊಡುವುದಕ್ಕೂ ಸಹಧರ್ಮಿಣಿ, ಅಥವಾ, ಅರ್ಧಾಂಗಿಯ ಸರಸ ಪ್ರಸಂಗವೇ ಸಾಕಾದ ವಿಶ್ರಾಂತಿಯಷ್ಟೆ?"

ಈ ಬಗೆಯ ಉಕ್ತಿ-ಪ್ರತ್ಯುಕ್ತಿಗಳು ವಿಶ್ರಾಂತಿಸ್ಥಾನದಲ್ಲಿ ಚಾಪೆಯ ಮೇಲೆ ಕುಳಿತಿದ್ದ ನಗೇಶರಾಯನಿಗೂ, ಅತನ ಬಳಿಯಲ್ಲಿಯೇ ಕುಳಿತು ವೀಳ್ಯವನ್ನೊಪ್ಪಿಸುತ್ತಿದ್ದ ಚಿತ್ರಕಲೆಗೂ ನಡೆಯುತ್ತಿದ್ದುವು. ನಗೇಶರಾಯನು ಕೈಯಲ್ಲಿ ಯಾವುದೋ ವರ್ತಮಾನಪತ್ರಿಕೆಯನ್ನು ಹಿಡಿದು, ಒಂದುಬಾರಿ ಪತ್ರವನ್ನೋದುತ್ತ, ಮತ್ತೊಂದುಬಾರಿ ಪತ್ನಿಯ ಮುಖವನ್ನು ನೋಡುತ್ತ ಕುಳಿತಿದ್ದನು. ಚಿತ್ರಕಲೆಯು ಪತಿಯ ಮುಂದೆ ಕುಳಿತು, ಕೋಮಲ ಸ್ವರದಿಂದ, ಮೃದುಮಧುರವಾಣಿಯಿಂದ ಪತಿಯ ಕುಶಲವಾರ್ತೆಯನ್ನು ಕೇಳಿ, ತಕ್ಕಂತೆ ಸದುತ್ತರಗಳನ್ನು ಕೊಡುತ್ತಿದ್ದಳು. (ಈ ನಮ್ಮ ಆದರ್ಶರಮಣಿಯ ಪತಿಭಕ್ತಿಯೂ, ಇವಳ ಗೃಹಿಣೀಕರ್ತವ್ಯಪರಾಕಾಷ್ಠೆಯೂ, ನಮ್ಮ ಆರ್ಯಮಹಿಳೆಯರೆಲ್ಲರಿಂದಲೂ ಅತ್ಯಾವಶ್ಯಕವಾಗಿ ಸಂಗ್ರಹಿಸಲ್ಪಡ

ಬೇಕೆಂಬ ಉದ್ದೇಶದಿಂದ ಇವರ ಸಂಭಾಷಣೆಯನ್ನು ಯಥಾವತ್ತಾಗಿ ಇಲ್ಲಿ ಕೊಟ್ಟಿರುವೆವು.)

ನಗೇಶರಾಯನು ತನ್ನ ಮಾತಿಗೆ ಉತ್ತರವಿಲ್ಲದುದನ್ನು ನೋಡಿ, ಮತ್ತೆ ಕುತೂಹಲದಿಂದ—"ಏಕೆ, ಮಾತಿಲ್ಲ? ಹೇಳಬಾರದೇ?"

ಚಿತ್ರಕಲೆ:—"ನಾನು ಹೇಳುವುದೇನು? ಪ್ರಭುವು, ತನ್ನ ಪರಿಚಾರಕರನ್ನು ವಿಶೇಷವಾಗಿ ಪ್ರಶಂಸಿಸಿದರೆ, ಅವರೆ ಬಾಯಿಂದ ಹೇಗೆ ತಾನೇ ಉತ್ತರವು ಹೊರಡಬೇಕು?"

ನಗೇಶ:— ಪರಿಚಾರಕರಾರು? ಪತ್ನಿಯೂ ಪರಿಚಾರಿಣಿಯೊ? ಆ ಮೂಢಭಾವನೆಯು, ಮೂರ್ಖಸಮಾಜಕ್ಕೆ ಮಾತ್ರವೇ ಸೇರಿರಲಿ. ನನಗೆ ನೀನು ಆದಿಶಕ್ತಿಸ್ವರೂಪಿಣಿಯಾದ, ನೂತನಶಕ್ತಿಪ್ರದಾಯಿನಿಯಾದ ನನ್ನ ಇಷ್ಟದೇವತೆಯೇ ಸರಿ. ಯಾವ ಸತೀಮಣಿಯು, ತನ್ನ ಪತಿಗೆ ಸಹಚಾರಿಣಿಯಾಗದ್ದು ಅಕೃತ್ರಿಮಪ್ರೇಮದಿಂದ ಆತನ ಶ್ರೇಯೋಭಿವೃದ್ಧಿಯನ್ನೇ ಮುಖ್ಯಗುರಿಯಾಗಿಟ್ಟುಕೊಂಡು, ಕಾಲೋಚಿತ ನೀತಿಬೋಧೆಯಿಂದ ಆತನನ್ನು ವಿವೇಕಸಾಮ್ರಾಜ್ಯದಲ್ಲಿ ಚಿರಸುಖಿಯನ್ನಾಗಿ ಮಾಡುವ ಮಂತ್ರಿಯಂತಿರುವಳೋ, ಆ ಪುಣ್ಯವತಿಯನ್ನು ಪರಿಚಾರಿಣೀ, ದಾಸಿ—ಮೊದಲಾದ ಹೀನಭಾವನೆಯಿಂದ ಅಗೌರವಪಡಿಸುವವನು ಹುಚ್ಚನಲ್ಲದೆ ಬೇರಲ್ಲ. ಯಾವ ಗೃಹದಲ್ಲಿ, ಗೃಹಸ್ವಾಮಿನಿಗೆ, ಆರ್ಯಧರ್ಮಾಧಾರಪಾತ್ರೆಗೆ ಸನ್ಮಾನವುಂಟೊ, ಆ ಗೃಹವೇ ಸ್ವರ್ಗವು. ಎಲ್ಲಿ, ಸ್ತ್ರೀಯರು ಗೌರವಿಸಲ್ಪಡುವರೋ—ಅಲ್ಲಿಯೇ ಲಕ್ಷ್ಮಿಯ ಸಾಕ್ಷಾತ್ಕಾರವು. ಯಾರು, ಸ್ತ್ರೀಯರನ್ನು ಅಕೃತ್ರಿಮ ಪ್ರೇಮದಿಂದ ಪರಿಭಾವಿಸುವರೋ, ಅವರೇ, ಉತ್ತರೋತ್ತರಾಭಿವೃದ್ಧಿಯನ್ನು ಹೊಂದತಕ್ಕ ಧನ್ಯಾತ್ಮರು. ಹಾಗಿಲ್ಲದೆ, ಕೈಹಿಡಿದ ಹೆಂಡಿರನ್ನು ತೊತ್ತುಗಳಂತೆಯೂ, ಹೆತ್ತತಾಯಿಯಿಯರನ್ನು ಶತ್ರುಸ್ವರೂಪರಂತೆಯೂ, ಇತರ ಅಬಲಾವರ್ಗವನ್ನು ದನಕರುಗಳಂತೆಯೂ ಭಾವಿಸಿ, ದಂಡಿಸುವ ವಿವೇಕಶೂನ್ಯರಿಗೆ, ಭಗವದನುಗ್ರಹವೂ, ಲಕ್ಷ್ಮೀಕಟಾಕ್ಷವೂ, ಶ್ರೇಯೋಭಿವೃದ್ಧಿಯೂ ಸ್ವಪ್ನದಲ್ಲಾದರೂ ದುರ್ಲಭವೆಂದು ತಿಳಿ. ಅಂಥವರ ಮಾತು ನನಗೆ ಬೇಕಾಗಿಲ್ಲ.

ಚಿತ್ರಕಲೆ:—ನೀವು ಹೇಗಾದರೂ ಹೇಳಿಕೊಳ್ಳಬಹುದು. ಆದರೆ,

ತಿಳಿದವರೆನ್ನಿಸಿಕೊಂಡವರು, ನಿಮ್ಮನ್ನು ಸ್ತ್ರೈಣರೆಂದು ಹೇಳಿದರೆ, ಏನೆಂದು ಉತ್ತರವನ್ನು ಕೊಡುವಿರಿ?

ನಗೇಶ:—ತಲೆಯೆತ್ತಿ—'ಏನೆಂದು ಉತ್ತರವನ್ನು ಕೊಡುವೆನೆ? ಅಂತಹ ಆಕ್ಷೇಪಕರಿಗೆ ನನ್ನ ಸಮಾಧಾನವಿಷ್ಟೇ'—'ನಿಜ; ನಾನು ಸತ್ಯವಾಗಿಯೂ ಸ್ತ್ರೈಣನೇ ಸರಿ. ಏಕೆಂದರೆ, ಆದಿಶಕ್ತಿಯ ಅಂಶಾವತಾರವಾಗಿರುವ ಯಾವ ಸ್ತ್ರೀವರ್ಗವನ್ನು ಗೌರವಿಸಿಯೇ ನಾವು ಮುಂದಕ್ಕೆ ಬರಬೇಕಾಗಿರುವುದೋ, ಅಂತವರನ್ನು ಹಳಿದಾಡುವ ಮತ್ತು ನಿರ್ಬಂಧದಲ್ಲಿಟ್ಟು ಗೋಳಿಡುವ, ಇಲ್ಲವೆ ಅಪವಾದಾರೋಪಗಳಿಗೆ ಬಲಿಕೊಡುವ ದುರಭಿಮಾನವು ನನಗಿಲ್ಲ. ನಾನು ನನ್ನ ಸತಿಯಲ್ಲಿ ಕೇವಲ ಗೌರವವನ್ನೇ ಬೆಳೆಯಿಸಿರುವೆನು. ಅವಳ ಅಂತರಂಗ ಸಹಾಯದಿಂದಲೇ ನನ್ನ ಪ್ರತಿಯೊಂದು ಕಾರ್ಯವೂ ಸಾರ್ಥಿಕ್ಯವೆನ್ನಿಸುವುದು. ಅದಿಲ್ಲದಿದ್ದರೆ ಇದೂ ಆಗುತ್ತಿರಲಿಲ್ಲ."

ಚಿತ್ರ:—ಲಜ್ಜೆಯಿಂದ—'ಸಾಕು, ಸಾಕು. ಇಂದೇನೋ ವಿಪರೀತ ಬೋಧೆಯಾದಂತೆ ತೋರುತ್ತಿದೆ? ಕೈಯಲ್ಲಿರುವ ಪತ್ರಿಕೆಯಾವುದು? "

ನಗೇಶ:—ಕಿರುನಗೆಯಿಂದ—'ನಿನಗೆ ನನ್ನ ಮಾತು ಸಹನಾತೀತವಾಯಿತಲ್ಲವೆ? ಹೋಗಲಿ, ಈ ಪತ್ರಿಕೆಯು 'ಸುರ್ಯೋದಯ' ವೆಂಬ ದೈನಿಕ ವಾರ್ತಾಪತ್ರಿಕೆ. ಇದರಲ್ಲಿ ಕೊಟ್ಟಿರುವ ಅತ್ಯುತ್ತಮ ಲೇಖನದ ಬೋಧೆಯೇ ನನಗೆ, ಇಂದು ಇಷ್ಟು ಉತ್ಸಾಹವನ್ನುಂಟುಮಾಡಿದೆ.'

ಚಿತ್ರ:—ಅದಾವ ಲೇಖನ? ಯಾವ ವಿಷಯದಲ್ಲಿ?

ನಗೇಶ:—ಇದು, ನಮ್ಮ ಕಲೆಕ್ಟರರ ಬೀಗನೂ, ಪರಿಮಳೆಯ ಮಾವನೂ ಆದ ವಿದ್ಯಾನಂದಬಾಬುವೂ ಅತನ ಮುಖ್ಯ ಶಿಷ್ಯನಾದ ಅಚಲ ಚಂದ್ರನೂ ಸೇರಿ ಬರೆದುದಾಗಿರಬೇಕು. ವಿಷಯವು ಬಹು ವಿಸ್ತಾರವಾಗಿದೆ. ಅಷ್ಟನ್ನೂ ವಿವರಿಸುವುದಕ್ಕಾಗದು. ಒಟ್ಟಿನಲ್ಲಿ ಸತೀವರ್ಗದವರ ಸಹಾನುಭೂತಿಯೇ ಸರ್ವಾರ್ಥಸಿದ್ಧಿಗೂ ಹೇತುವೆಂಬುದೂ ಈ ಶಿವಪುರದ ಮೂರ್ಖ ಭಾವದ ಮಹಾಜನರು ಸತೀವರ್ಗದಲ್ಲಿ ಹೇಗೆ ವರ್ತಿಸುತ್ತಿರುವರೆಂಬುದೂ ಈ ಊರಿನ ಭಟ್ಟಾಚಾರ್ಯರು-ಪಂತರು ಮೊದಲಾದ ಪೀಠಾಶ್ರಿತರಾದವರ ನಡೆವಳಿಗಳೂ ಬಹು ಸಮಂಜಸವಾಗಿ ವಿವರಿಸಲ್ಪಟ್ಟಿವೆ. ಅಲ್ಲದೆ, ಅದರ ಮುಂದೆ ಅಚಲಚಂದ್ರನ ಉಪನ್ಯಾಸದ ವಿಷಯವೂ ಅಂದಿನ ಅತನ ಭಾಷಣ

ದಲ್ಲಿ ಹೊರಸುಟ್ಟ ಮೇಲ್ಕಂಡವರ ಮಹಾಪರಾಧಗಳೂ, ಅದಕ್ಕಾಗಿ ಅವರು ಮರುದಿನವೇ ತೀರ್ಥಯಾತ್ರಾವ್ಯಾಜದಿಂದ ಪರಿವಾರಸಮೇತರಾಗಿ ಹೊರಟು ಹೋಗಿರುವರೆಂಬುದೂ, ಒಕ್ಕು ಸ್ವಾರಸ್ಯವಾಗಿ ವರ್ಣಿಸಲ್ಪಟ್ಟಿದೆ.

ಚಿತ್ರ:—ನಕ್ಕು—ನಮಗೆ, ಬಹಿಷ್ಕಾರಪತ್ರಿಕೆಯನ್ನು ಕೊಟ್ಟು, ತಾವೇ ದೇಶಭ್ರಷ್ಟರಾಗಿ ಓಡಿಹೋದರೇ? ಹೋಗಲಿ; ಅನುಭವಿಸಲಿ. ಹಿಂದಿನ ಕರ್ಮಫಲವನ್ನು!'

ನಗೇಶ:—ನೀನೇನು, ಈದಿನ ನನ್ನ ಪ್ರಯಾಣದ ವಿಷಯವನ್ನು ವಿಚಾರಿಸುವುದನ್ನೇ ಮರೆತುಬಿಟ್ಟೆ?

ಚಿತ್ರ:—ಈ ಬಾರಿಯ ಪ್ರಯಾಣಕಾಲದಲ್ಲಿ ನೀವು ನನಗೆ ತಿಳಿಸಿದ್ದ ಪಕ್ಷದಲ್ಲಿ, ನಾನು, ಹೋಗುದ್ದ ಕಾರ್ಯವನ್ನಾಗಲೀ ಸ್ಥಳವನ್ನಾಗಲೀ ವಿಚಾರಿಸಬಹುದಾಗಿದ್ದಿತು. ಅದಾವುದೂ ಇಲ್ಲದ ಬಳಿಕ, ಅದೆಂತಹ ಗೌರವದ ಕೆಲಸವೋ ಏನು ರಹಸ್ಯವೋ ನಾನು ಹೇಗೆ ವಿಚಾರಿಸಲೆಂದು ಸುಮ್ಮನಿದ್ದೆನು. ಇದೇ ತಪ್ಪೇನು?

ನಗೇಶ:—ತಪ್ಪಲ್ಲ. ನಿನಗೆ ಆಹ್ಲಾದದಾಯಕವಾದ ವಿಚಾರವೇ ತಿಳಿಯುವೆ ತಪ್ಪುತ್ತಿದ್ದಿತು. ಅದಕ್ಕಾಗಿ ನಾನೇ ನಿನಗೆ ಹೇಳ್ಕರಿಸಿರುತ್ತೇನೆ.

ಚಿತ್ರ:—ಹಾಗಾದರೆ, ಈಗಲಾದರೂ ಹೇಳಬಹುದಷ್ಟೆ? ಹೋಗಿದ್ದುದು ಎಲ್ಲಿಗೆ?

ನಗೇಶ:—ಅನಂದಸನಕ್ಕೆ; ಮಾತೃಮಂದಿರದ ಸಂದರ್ಶನಕ್ಕಾಗಿ ಹೋಗಿದ್ದೆವು.

ಚಿತ್ರ:—ಮತ್ತಾರಾರು ಬಂದಿದ್ದರು?

ನಗೇಶ: ಕಲೆಕ್ಟರರು, ಶರಶ್ಚಂದ್ರನಾಥ ಮತ್ತು ನಾನು—ಮೂವರೇ.

ಚಿತ್ರ:—ನೆನೆದಂತೆಲ್ಲೇ ಹೋಗಿದ್ದ ನಿಮಿತ್ತವೇನು?

ನಗೇಶ:—ತಕ್ಷಣವೇ ಅಲ್ಲಿಗೆ ಹೊರಟು ಬರಬೇಕೆಂದು, ಸತ್ಯಾನಂದ ಸ್ವಾಮೀಜಿಯವರ ನಿರೂಪವು ಬಂದಿದ್ದಿತು. ಅದುದರಿಂದ ಹೋಗಿದ್ದೆವು.

ಚಿತ್ರ:—ಸ್ವಾಮೀಜಿಯವರು ಬಂದರೆ?

ನಗೇಶ:—ಅವರು ಎಲ್ಲಿಗಾದರೂ ಹೋಗಿದ್ದರಲ್ಲವೇ, ಬರುವುದಕ್ಕೆ?

ಚಿತ್ರ:—ದೇಶಸಂಚಾರಕ್ಕೆ ಹೋಗಿರಲಿಲ್ಲವೆ?

ನಗೇಶ:—ದೀರ್ಘ ಸಂಚಾರಕ್ಕೆ ಹೋಗಿರಲಿಲ್ಲ. ಅವರ ಸ್ವವಾಸವು ನಾಲ್ಕಾರು ತಿಂಗಳಲ್ಲಿಯೇ ಮುಗಿದು ಅವರಾಗಲೇ ಬಂದು ಮಾತೃಮಂದಿರವನ್ನು ಸೇರಿದ್ದರು.

ಚಿತ್ರ:—ಹಾಗಾದರೆ, ಈವರೆಗೂ ತಿಳಿಸದೆಯೇ ಇದ್ದುದೇಕೆ?

ನಗೇಶ:—ನನಗೆ ತಿಳಿದಿದ್ದರಲ್ಲವೆ? ಶರಚ್ಚಂದ್ರಸಿಗೂ ಆತನ ಪುತ್ರಸಿಗೂ ಮಾತ್ರವೇ ತಿಳಿದಿದ್ದಿತು. ಅವರು ಸ್ವಾಮಿಯಿಂದ ತರಿಯಲ್ಪಟ್ಟ ಹೇಳಿದ್ದರು.

ಚಿತ್ರ:—ಇಂದು ಕರೆಯಿಸಿದ್ದುದೇಕೆ?

ನಗೇಶ:—ತಮ್ಮಲ್ಲಿಗೆ ಮತ್ತೆ ನಂದಿನಿಯನ್ನು ಕರೆಯಿಸಿಕೊಳ್ಳಬೇಕೆಂದು.

ಚಿತ್ರ:—ಪೆದರಿನೋಡುತ್ತ—ಏನು? ನಂದಿನಿಯು ಹೊರಟು ಹೋಗುವಳೆ?

ನಗೇಶ:—ಬೇಡವೇ? ತಂದೆಯೇ ಕರೆದೊಯ್ಯಲು ಒಂದರೆ ಕಳುಹಬೇಡವೇ?

ಚಿತ್ರ:—ನಾನು ಏನನ್ನೂ ಹೇಳಲಾರೆನು. ಈ ಭಾಗ್ಯಕ್ಕೆ ನಂದಿನಿಯನ್ನು ಇಲ್ಲಿಗೇಕೆ ಬಿಡಬೇಕಾಗಿದ್ದಿತು?

ನಗೇಶ:—ಏಕೆಂದರೆ, ವಯಸ್ಸಾದವಳನ್ನು ತ ನಿರ್ಜನಪ್ರದೇಶದಲ್ಲಿ ರಿಸಿಕೊಂಡಿರುವುದು ಸರಿಯಲ್ಲವೆಂದೂ, ಇತರ ದೇಹಾಸುಖಾದಿಗಳ ಬಿಯಲ್ಲಿ ಬಿಟ್ಟಿರೆ, ತಮ್ಮ ವಿರಕ್ತಹೃದಯವು ಮತ್ತೆ ಸ್ವಜನಾರಕ್ತಕ್ಕೆ ಎಳೆಯಲ್ಪಡಲು ದಾರಿಯಾಗಬಹುದೆಂದೂ ಯೋಚಿಸಿ. ಕೇವಲ ಬ್ರಾಹ್ಮಸದೃಷ್ಟಿಯು ಧರ್ಮಬಾಂಧವ್ಯವನ್ನು ಮಾತ್ರವೇ ಗೌರವಿಸಿ, ನಮ್ಮಲ್ಲಿ ಅವಳನ್ನು ಒಪ್ಪಿಸಿದ್ದರು.

ಚಿತ್ರ:—ಈಗ ಕರೆಯಿಸಿಕೊಳ್ಳುವುದು ಮಾತ್ರ ಸರಿಯೋ? ಈಗ ವಯಸ್ಸಾಗಲ್ಲವೊ? ಇಲ್ಲದಿದ್ದರೆ, ಅವಳಿಗೇನಾದರೂ ಮುಪ್ಪಡಿಸಿ ಹೋಗಿದೆಯೋ?

ನಗೇಶ:—ಮುಪ್ಪೇನೂ ಅಡಸಿಲ್ಲ. ನವೋಢೆಯಾದ ನಂದಿನಿಗೆ ಇಂದಿಗೆ ಸರಿಯಾಗಿ ಇನ್ನೊಂದು ವಾರದಲ್ಲಿ ಹದಿನಾರನಯ ವರ್ಷವು ಬೆಳೆಯುತ್ತದೆ. ಇನ್ನೂ ಈ ಬಗೆಯಾಗಿ ಅನ್ಯತ್ರ ಬಿಟ್ಟಿರುವುದು ಸರಿಯಲ್ಲ

ನೆಂದೂ, ಉಚಿತ ರೀತಿಯಲ್ಲಿ ಮುಂದಿನ ಕರ್ತವ್ಯವನ್ನು ನೆರವೇರಿಸಬೇಕೆಂದೂ ಯೋಚಿಸಿ ನಮ್ಮನ್ನು ಕರೆಯಿಸಿದ್ದರು.

ಚಿತ್ರ:— ಕುತೂಹಲದಿಂದ-"ಮತ್ತೇನಾದರೂ ವಿಶೇಷವುಂಟೇನು? ನೀವು ಮೂರುಮಂದಿಯೂ ಹೋಗಿದ್ದಿರೇಕೆ?"

ನಗೇಶ:— ವಿಶೇಷವಿಲ್ಲೇನು? ಅಚಲಚಂದ್ರನ ಕಾರ್ಯಕಲಾಪಗಳ ಪ್ರಭಾವವೇ ಎಲ್ಲೆಡೆಯಲ್ಲಿಯೂ ಬೆಳಗುತ್ತಿವೆ. ಇಲ್ಲಿ ನಡೆದ ವಿದ್ಯಮಾನಗಳಲ್ಲ ಒಂದು ಸಾಸಿವೆಕಾಳಷ್ಟಾದರೂ ಬಿಟ್ಟುಹೋಗದೆ, ಎಲ್ಲವೂ, ಅವರಿಗೆ ನಿವೇದಿಸಲ್ಪಟ್ಟಿವೆ. ಅವರ ಮೇಲೆಯೇ, ಅವರು ನಮ್ಮನ್ನು ಒರೆಹೇಳಿಕಳಿಸಿದ್ದುದಾಗಿ ತಿಳಿದುಬಂದಿದೆ.

ಚಿತ್ರ:— ಆದರೂ ಅಚಲನೆಂದರೆ ಸಾಮಾನ್ಯನಲ್ಲ. ಅಬ್ಬಾ! ಎಷ್ಟು ಸಾಹಸಪರ!

ನಗೇಶ:— ಆತನ ಸಾಹಸವು ಸಾಮಾನ್ಯವಾದುದಲ್ಲ. ಆತನಿಗೆ-ಆತನು ಕೋರಿದಷ್ಟರ ಸ್ವಾತಂತ್ರ್ಯವು ಮಾತ್ರ ದೊರೆತಿದ್ದರೆ, ಇಲ್ಲಿಯ ಗುರು ಸ್ವಾಧಿಪತಿಸ್ಥಾನದಲ್ಲಿರುವ ಕಪಟಸನ್ಯಾಸಿಯನ್ನೂ, ಆತನ ಅನುಗಾಮಿಗಳನ್ನೂ ಅಗಲೇ ಶಿವಪುರದ ಎಲ್ಲೆಯಿಂದಾಚೆಗೆ ಹೊಡೆದೋಡಿಸಿಬಿಡುತ್ತಿದ್ದನು; ಅಷ್ಟಕ್ಕೆ ಅವಕಾಶವನ್ನು ಕೊಡದೆ. ನಮ್ಮ ಸ್ವಾಮೀಜೀಯವರು ತಡೆದು, ವಿವೇಕವನ್ನು ಬೋಧಿಸಿದುದರಿಂದ ಇಷ್ಟುಮಟ್ಟಿನ ತಾಳ್ಮೆಯನ್ನು ಹೊಂದಿರುವನು. ಆದರೂ ಭಟ್ಟಾಚಾರ್ಯರೂ, ಪಂತರೂ, ಆತನ ಕೋಪವನ್ನು ತಿಳಿದು, ಹೊರಟೇ ಹೋದರು. ಮತ್ತೇನು ಹೇಳುವುದು?

ಚಿತ್ರ:—ಸತ್ಯಾನಂದ ಸ್ವಾಮೀಜೀಯವರೂ ಅಚಲಚಂದ್ರನ ಪ್ರಾರ್ಥನೆಗೆ ಕಟ್ಟುಬಿದ್ದಿರುವರೇನು?

ನಗೇಶ:— ಹಾಗೆ ಕಟ್ಟುಬೀಳದೆ ಇರುವ ಪಕ್ಷದಲ್ಲಿ ಈಗ ನಮ್ಮನ್ನು ಕರೆಸುತ್ತಿರಲಿಲ್ಲ. ಅಚಲಚಂದ್ರನ ಯುಕ್ತಿಯುಕ್ತವಾದ ಪ್ರಾರ್ಥನೆಗಳು ಅವರಿಗೆ ಸರ್ವದಾ ಪ್ರಿಯವನ್ನೇ ಉಂಟುಮಾಡುತ್ತಿವೆಯಂತೆ.

ಚಿತ್ರ:—ಹಾಗಾದರೆ, ಅವರು ನಿಮಗೆ ಹೇಳಿದುದೇನು?

ನಗೇಶ:—ನಂದಿನಿಯನ್ನು ಇಲ್ಲಿಗೆ ಕರೆತಂದು ಬಿಡಬೇಕೆಂದೂ, ಅದಕ್ಕಾಗಿ ತಾವು ದಿನವನ್ನು ಗೊತ್ತುಮಾಡಿ ಕಳಿಸುವಾಗ, ಸಕಲ ಸಾಹಿತ್ಯ

ಸಮೇತವಾಗಿ, ಸಪರಿವಾರವಾಗಿ, ನಾವೆಲ್ಲರೂ ಅಲ್ಲಿಗೆ ಹೋಗಿ ಸೇರಬೇಕೆಂದೂ, ಆ ದಿನದಲ್ಲಿ ನಂದಿನಿಯನ್ನು ದೇವಿಯಮುಂದೆ ಅಭ್ಯುದಯ ಪೀಠದಲ್ಲಿ ಕುಳ್ಳಿರಿಸಿ, ತಾವು ಮಾಡಬೇಕಾಗಿರುವ ಕಾರ್ಯಭಾರವನ್ನು ಸಾಂಗವಾಗಿ ಮಾಡಿ, ಕೃತಾರ್ಥರಾಗುವೆವೆಂದೂ, ಹೇಳಿರುವರು. ನಾದಾನಂದನ ವಿಚಾರವಾಗಿ, ನೀವೆಲ್ಲರೂ ಪೂರ್ಣವಿಶ್ವಾಸ ಗೌರವವನ್ನು ತೋರಿಸುತ್ತಿರಬೇಕೆಂದೂ, ಸೂಚಿಸಿರುವರು. ಇದಲ್ಲದೆ—'ನೀವು ಊರಿಗೆ ಹೋದ ಬಳಿಕ, ನಿಮ್ಮ ಮೇಲೆ, ಮತ್ತೊಂದು ಕಾರ್ಯಭಾರವು ಬೀಳಬಹುದು. ಅದನ್ನು ಅಚಲನ ಅಭಿಪ್ರಾಯಾನುಸಾರವಾಗಿ ನೆರವೇರಿಸಿದರೆ ಉತ್ತಮವು.' ಎಂದೀ ಬಗೆಯಾಗಿಯೂ ಹೇಳಿಕಳಿಸಿರುವರು.

ಚಿತ್ರ:— ವಿಸ್ಮಯ ಕೌತುಕಗಳಿಂದ ನೋಡುತ್ತ,— 'ಅದೇನಾಗಿರಬಹುದು?'

ನಗೇಶ:—ಯಾರು ಬಲ್ಲರು? ಅಳಿಯನು ಕುರುಡನಾಗಿದ್ದರೆ, ಬೆಳಗಾದೊಡನೆ ತಿಳಿವುದಲ್ಲವೆ?

ಚಿತ್ರ:— ಯಾವ ಕಾರ್ಯಗಾರವೋ, ಏನು ಸಮಾಚಾರವೋ ಹೇಗೂ, ಅತನು ಈಗ ಮೂರು ದಿನಗಳಿಂದಲೂ ಇಲ್ಲಿಗೆ ಬಂದಿಲ್ಲ.

ನಗೇಶ:— ತಲೆದೂಗಿ— 'ಆಗಲಿ, ಆಗಲಿ. ತಡೆದು ನೋಡಿಕೊಳ್ಳುವೆ.' ಎಂದು ಹೇಳಿ ಬಾಗಿಲಕಡೆಗೆ ತಿರುಗಿ—'ಸ್ವರ್ಣಾ! ಸ್ವರ್ಣಾ, ಕುಮಾರಿ!' ಎಂದು ಎರಡುಬಾರಿ ಕೂಗಿದನು.

ಸ್ವರ್ಣಾ: —ಓಡಿಬಂದು—'ಏನಪ್ಪ? ಏಕೆ ಕೂಗಿದೆ?'

ನಗೇಶ:—ನಾದಾನಂದನು ಮನೆಯಲ್ಲಿಲ್ಲವೇ?

ಸ್ವರ್ಣಾ:— ಇಲ್ಲ. ಇಂದು ಯಾವುದೋ ಸಂಘದವರ ವಾರ್ಷಿಕ ಸಭೆಯುಂತೆ. ಅದಕ್ಕೆ ಹೋಗುತ್ತೇನೆಂದು ಹೇಳಿ ಹೊರಟುಹೋದನು.

ನಗೇಶ:—ಹೋಗಲಿ; ನಂದಿನಿಯು ಎಲ್ಲಿರುವಳು? ಏನು ಮಾಡುತ್ತಿರುವಳು?

ಸ್ವರ್ಣಾ:— ತೆರುಮನೆಯಲ್ಲಿ ಕುಳಿತು, ಅಚಲಚಂದ್ರನಾಥನೊಡನೆ ಮಾತನಾಡುತ್ತಿರುವಳು.

ನಗೇಶ:— ಏನು? ಅಚಲಚಂದ್ರನು ಬಂದಿರುತ್ತಾನೆಯೇ? ಎಷ್ಟು ಹೊತ್ತಾಯಿತು?

ಸ್ವರ್ಣ:— ಈಗ ಸ್ವಲ್ಪ ಹೊತ್ತೇ ಆಗಿದೆ.

ನಗೇಶ:— ಹಾಗಿದ್ದರೆ, ಹೋಗ.; ಈಗಲೇ ಇಬ್ಬರನ್ನೂ ಕರೆದು ಕೊಂಡು ಬಾ.

ಸ್ವರ್ಣಕುಮಾರಿಯು ತಲೆದೂಗುತ್ತ ಹೊರಟುಹೋದಳು.

ಚಿತ್ರ:— ಚಕಿತೆಯಾಗಿ— "ಇವನೆಂತಹ ಚಾಲಕನಾಗಿರಬೇಕು ? ಏನೇನು ತಂತ್ರಗಳನ್ನು ಒಡ್ಡುತ್ತಿರುವನು? ಯಾವುದನ್ನೂ ಮೊದಲು ಹೀಗೆಂದು ಹೇಳುವಂತೆಯೇ ಇಲ್ಲವಲ್ಲ!"

ನಗೇಶ:— ತಲೆದೂಗುತ್ತ—"ಅದರಿಂದಲೇ ಅಲ್ಲವೇ ಅಂತಹ ನಿಪುಣನನ್ನು ಹೇಗೂ ಹೆರಪರ ಕಡೆಯವನನ್ನಾಗಿ ಮಾಡಬಾರದೆಂದು ಅತನ ವಿದ್ಯಾಗುರುವನ್ನೂ, ಪ್ರಾಥಕಲಾಮೋಧಕನಾದ ವಿದ್ಯಾನಂದನನ್ನೂ ನನ್ನ ಕಡೆಯವರನ್ನಾಗಿ ಮಾಡಿಕೊಂಡಿರುವುದು. ಶರಚ್ಚಂದ್ರನಂತೂ ಸರಿಯೇ ಸರಿ.'

ಇವರು ಹೀಗೆ ಮಾತನಾಡುತ್ತಿದ್ದಂತೆಯೇ ಸ್ವರ್ಣಕುಮಾರಿಯು ನಂದಿನಿಯ ಕೈ ಹಿಡಿದು, ಅಚಲಚಂದ್ರನನ್ನು ಮುಂದಿಟ್ಟುಕೊಂಡು ಬಂದಳು. ಚಿತ್ರಕಲೆಯು ಸರಿದು ಕುಳಿತಳು. ನಗೇಶನು ಸಡಗರದಿಂದ ಕೈನೀಡಿ— 'ದೇಶಭಕ್ತಾಗ್ರಣಿ, ಸತ್ಪುತ್ರರತ್ನ, ಬಂದೆಯೇನಯ್ಯಾ? ಸುಖಾಗಮನವೇ? ಬಾ; ಕುಳಿತುಕೊ.'

ಅಚಲ:— ತಲೆದೂಗುತ್ತಬಂದು ನಗೇಶನ ಮುಂದೆ, ಚಿತ್ರಕಲೆಯು ಕುಳಿತಿದ್ದೆಡೆಯಲ್ಲಿ ಕುಳಿತು,—"ಇದೇನು? ಈ ಉದ್ದುದ್ದದ ಜಗ್ಗಳಿಕೆಯನ್ನು ಹೇಳಬೇಕೆಂದು ಕೇಳಿಕೊಂಡವರಾರು? ತಮ್ಮ ಆಶೀರ್ವಾದವು ಚೆನ್ನಾಗಿದ್ದರೆ, ಎಲ್ಲವೂ ಸುಖಮಯವೇ ಆಗುವುದಷ್ಟೆ!"

ನಗೇಶ:—"ಏನಯ್ಯ! ಮೂರು ದಿನಗಳಿಂದ ಬಾರದಿದ್ದವನು, ಇಂದು ಒಬ್ಬರಿಗೂ ತಿಳಿಸದಂತೆ ಗುಟ್ಟಾಗಿ ಬಂದು, ತಂಗಿಯಲ್ಲಿ ಯಾವ ರಹಸ್ಯವನ್ನು ಹೇಳುತ್ತಿದ್ದೆ?"

ಅಚಲ:— ತಂಗಿಯಲ್ಲಿ, ಅಣ್ಣನು ರಹಸ್ಯವನ್ನು ಹೇಳುವುದೂ, ತಂಗಿಯು ತಿಳಿಯದಿದ್ದುದನ್ನು ಅಣ್ಣನಲ್ಲಿ ಕೇಳಿತಿಳಿದುಕೊಳ್ಳುವುದೂ ಸಹಜವಷ್ಟೆ. ಮತ್ತೇನು ವಿಶೇಷ?

ನಗೇಶ:—ಕಿರುನಗೆಯಿಂದ—"ವಿಶೇಷವನ್ನು ನಿನ್ನಿಂದಲೇ ತಿಳಿಯಬೇಕು?" ನಂದಿನಿಯು ಕಪೆಗೆ ತಿರುಗಿ— "ಏನಮ್ಮ ನಂದಿನಿ! ಏಕೆ, ಇಬ್ಬರೂ ನಿಂತೇ ಇರುತ್ತೀರಿ? ಕುಳಿತುಕೊಳ್ಳಿರೆಂದು ಹೇಳಲೇಬೇಕೋ? ಸರಿ; ಕುಳಿತುಕೊಳ್ಳಿರಿ. ಇದೇನು ಕೈಯಲ್ಲಿರುವುದು?

ನಂದಿನಿಯು ಸ್ವರ್ಣೆಯೊಡನೆ ಕುಳಿತು, ಕೈಯಲ್ಲಿದ್ದ ಪತ್ರವನ್ನು ನಗೇಶನ ಮುಂದಿಟ್ಟು—"ಇದು ಪಿತೃಸಮ್ಮುಖದಿಂದ ಬಂದ ನಿರೂಪವು."

ನಗೇಶನು ಪತ್ರವನ್ನು ತೆಗೆದು ಸ್ವರ್ಣೆಯ ಕೈಯಲ್ಲಿತ್ತು—"ಮಗುವೆ! ಎಲ್ಲ, ಇದನ್ನು ನಾವೆಲ್ಲರೂ ಕೇಳುವಂತೆ ಓದಿ ಹೇಳು?"

ಸ್ವರ್ಣೆಯು ಪತ್ರವನ್ನು ಕೈಗೊಂಡು ನಾಚಿಕೆಯಿಂದ ತಲೆತಗ್ಗಿಸಿ ನಿಂತುಕೊಂಡಳು.

ಚಿತ್ರ:—ಕಿರುನಗೆಯಿಂದ—"ಏಕೆ, ಸ್ವರ್ಣೆ! ಹೀಗೇಕೆ ನಾಚುತ್ತೀಯೆ? ಇಲ್ಲಿರುವವರಲ್ಲಿ ನಿನಗೆ ಯಾರೂ ಹೊಸಬರಲ್ಲವಷ್ಟೆ? ಓದು, ಹಾಗೇನಾದರೂ ಹಿಂತೆಗೆದೆಯಾದರೆ, ನೋಡಿಕೋ, ಇದಿರಲ್ಲಿ ಅಚಲಚಂದ್ರನೂ ನಂದಿನಿಯೂ ಕುಳಿತೇ ಇರುವರು. ಅವರು ಬೇರೆ ನಿನ್ನನ್ನು ಸುಮ್ಮನೆ ಬಿಡಲಿಕ್ಕಿಲ್ಲ! ಅಷ್ಟರವರೆಗೆ ಅವಕಾಶವನ್ನೇಕೆ ಕೊಡಬೇಕು? ನೀನು ಓದು-ಬರೆಹವನ್ನು ಕಲಿತುದೇಕೆ? ಸಮಯಕ್ಕೆ ತಕ್ಕಂತೆ ಉಪಯೋಗಿಸಬೇಕೆಂಬ ಉದ್ದೇಶದಿಂದಲ್ಲವೇನು?—"

ಸ್ವರ್ಣೆ:—ಬೆದರಿಸೋಗುತ್ತ—"ಅಮ್ಮ! ಇಷ್ಟೇಕೆ ಸಿಟ್ಟುಮಾಡುತ್ತೀಯೆ. ಓದೆಂದರೆ ಸಾಕು. ನಾನು ಓದಲು ತಡೆಮಾಡಿದುದರ ಉದ್ದೇಶ ವಿದೇನೂ ಅಲ್ಲ."

ನಗೇಶ:—ಉದ್ದೇಶವೂ ಬೇರೆಯೋ? ಅದಾವುದು? ಅಚಲನು ಹೇಳಬೇಕೆಂದೋ?

ಅಚಲ:—ನಗುತ್ತ—"ಸರಿ-ಸರಿ! ಅಷ್ಟು ಕುಚೇಷ್ಟೆಯನ್ನು ಇನ್ನೂ ತಡೆಯುವಂತಿಲ್ಲ. ಅವಳ ಉದ್ದೇಶವದೇನೂ ಅಲ್ಲ. ಅದರಲ್ಲಿ ನಂದಿನಿಯ ಹೆಸರಿರುವುದರಿಂದ, ಅವಳ ಅಭಿಪ್ರಾಯವನ್ನು ತಿಳಿಯಬೇಕೆಂದೂ, ಮತ್ತು ಅದರಲ್ಲಿ ಮತ್ತೊಂದು ಪತ್ರವಿರುವುದರಿಂದ ಮೊದಲು ಯಾವುದನ್ನು ಓದ

ಬೇಕೆಂಬುದು ತಿಳಿಯುದೆಯೂ, ವಾಸ! ಹಿಂದುಮುಂದು ನೋಡುತ್ತಿದ್ದಳು. ಅಷ್ಟೆ!'

ನಗೇಶ:—ಹಾಗೋ! ಸರಿ ಸರಿ! ಎಷ್ಟಾದರೂ ಅವಳ ಅಭಿಪ್ರಾಯವು ನಿನಗೂ ನಿನ್ನ ಇಂಗಿತವು ಅವಳಿಗೂ ತಿಳಿಯುಬೇಕಾದುದು ಅವಶ್ಯಕವೇ ಸರಿ. ಇರಲಿ. [ನಗೇಶನ ಮಾತು ಮುಗಿಯಲಿಕ್ಕೆ ಮೊದಲೇ ನಾದಾನಂದನು, ಮತ್ತಿಬ್ಬರು ಸವಾನ ವಯಸ್ಕರೊಡನೆ ಅಲ್ಲಿಗೆ ಬಂದು ಸೇರಿದನು. ಇವರು ಒಂದುದನ್ನು ನೋಡಿ, ಅಚಲಚಂದ್ರನು ಬೆಮ್ಮೆ ಪೆಲ್ಲನೆ ನಕ್ಕು, ತಲೆದೂಗುತ್ತ)-ಸುಸಮಯವಾಗಿದೆಯಯ್ಯ-ಭಕ್ತಿಸಾರ! ಎಂದು ಸುಮ್ಮನಾದನು.

ನಗೇಶ:-ಚಕಿತನಾಗಿ-ಇಷ್ಟಕಾಲದಲ್ಲಿ ತ್ರಿಮೂರ್ತಿಗಳ ಸಾಕ್ಷಾತ್ಕಾರ? ಬಹುಸಂತೋಷ; ಕುಳಿತುಕೊಳ್ಳಿರಯ್ಯ! ಇಂದೇ ಸುದಿನ. ಇಂದೇ ನಮ್ಮ ಮನೆಯ ಮುಂದಿನ ಕಲ್ಯಾಣೋತ್ಸವದ ಶುಭಸೂಚನೆ.'

ಭಕ್ತಿಸಾರ:—ಕೆರುನಗೆಯಿಂದ-ಹಾಗೂ ಆಗಲಿ. ಹಿರಿಯರ ಆಶೀರ್ವಾದವು ಶಿರೋಧಾರ್ಯವಲ್ಲವೇ?' [ಎಂದು ಮತ್ತಿಬ್ಬರೊಡನೆ ಕುಳಿತುಕೊಳ್ಳುವನು.)

ನಗೇಶ:—ಇದೇನು ಅಪೂರ್ವಲಾಭ!

ಭಕ್ತಿಸಾರ:-ತ್ರಿಮೂರ್ತಿಗಳನ್ನೂ ಪುತ್ರರನ್ನಾಗಿ ಮಾಡಿಕೊಂಡ ಬಳಿಕ, ಅಂತಹ ಪೂಜ್ಯಪಾದರಾದ ಸಾಕ್ಷಾತ್ ಅನುಸೂಯಾ-ಅತ್ರಿಮಹಾತ್ಮರನ್ನು ಸೇವಿಸಬೇಕಾದುದು ತ್ರಿಮೂರ್ತಿಗಳ ಕರ್ತವ್ಯವೇ ಅಹುದಷ್ಟೆ?

ಅಚಲ:- ಕೈಚಪ್ಪಳಿಕ್ಕಿಹೊಡೆದು-ಅದೀಗ ಸದುತ್ತರವು. ಬೆಚ್ಚಿದೆ. ಬಹುರಸವತ್ತಾಗಿದೆ.

ಸೇವಾನಂದ:— ನಿಮ್ಮನ್ನು ಮೆಚ್ಚಿಸುವುದೇ ನಮ್ಮ ಮುಖ್ಯ ಗುರಿ. ನಿಮ್ಮ ಸುಪ್ರಸನ್ನತೆಯೇ ಈಗಿನ ನಮ್ಮ ಪ್ರಯತ್ನಕ್ಕೆ ಇಚ್ಛಿತಫಲವು.

ಚಿತ್ರಕಲೆ:—ಸಂತೋಷದಿಂದ-ವಾಚಾಳಿಕತೆಯುಳ್ಳಿ ಒಬ್ಬರನ್ನು ಮತ್ತಿಬ್ಬರು ಮೀರಿಸುತ್ತಿರುವಿರಿ.'

ನಾದಾನಂದ:—ಬೆಮ್ಮೆ ನಂದಿನಿಯನ್ನು ನೋಡಿ, ತಂದೆಯ ಕಡೆಗೆ ತಿರುಗಿ,- -ಅಪ್ಪ! ಇವರು ತಮ್ಮಲ್ಲಿ ವಿಜ್ಞಾಪನಪತ್ರವನ್ನು ಒಪ್ಪಿಸಬೇಕೆಂದು ಬಂದಿರುತ್ತಾರೆ.'

ನಗೇಶ:—ಕೌತುಕದಿಂದ—'ಅದಾವುದು? ಏತಕ್ಕಾಗಿ? ಕಳುಹಿದವರಾರು?'

ಭಕ್ತಿನಾರ:—ನಮ್ಮ ದೇಶಸೇವಾಸಂಘದವರ ಕಡೆಯಿಂದ ಬಂದಿದೆ. 'ಏತಕ್ಕಾಗಿ, ಯಾರು ಕಳುಹಿದವರು' ಎಂಬುವನ್ನು ಪತ್ರದಿಂದಲೇ ತಿಳಿಯಬೇಕು.

ನಗೇಶ:—'ಆಗಬಹುದು.' ಎಂದು ಪತ್ರವನ್ನು ಕೈಕೊಂಡು, ಸ್ವರ್ಣೆಯ ಕೈಯಲ್ಲಿರಿಸಿ—"ಸ್ವರ್ಣೆ! ಎಲ್ಲಿ? ಮೊದಲು ಇದನ್ನು ಗಟ್ಟಿಯಾಗಿಯೂ ಸ್ಪಷ್ಟವಾಗಿಯೂ ಓದಿಹೇಳು. ಆ ಬಳಿಕ ಉಳಿದ ಪತ್ರಗಳಾಗಲಿ."

ಸ್ವರ್ಣೆಯು ಅಡಲಚಂದ್ರನ ಮತ್ತು ಚಿತ್ರಕಲೆ-ನಂದಿನಿಯರ ಮುಖಗಳನ್ನು ನೋಡಿ ತಲೆಬಾಗಿ, ಪತ್ರವನ್ನು ಕೈಕೊಂಡು ವಾಚಿಸಲು ಮೊದಲು ಪ್ರಾರಂಭಿಸಿದಳು. ಕುಳಿತಿದ್ದವರೆಲ್ಲರೂ ಕುತೂಹಲಾಸಿಷ್ಟರಾಗಿ, ಸ್ವರ್ಣೆಯನ್ನೇ ನೋಡುತ್ತಿದ್ದರು. ವಾಚಕರ ತಿಳಿವಿಗಾಗಿ ಪತ್ರದ ಛಾಯೆಯನ್ನೇ ಕೆಳಗೆ ತೋರ್ಪಡಿಸಿದೆವು. —

॥ ಪತ್ರ ॥

"ಲೋಕಾದರ್ಶ ಪುಣ್ಯಪುರುಷರಾದ ಪೂಜ್ಯಾದರಲ್ಲಿ—

ಕಳೆದ ವಾರದಲ್ಲಿ ನಮ್ಮ ಕಲಾಶಾಲೆಯಲ್ಲಿ ಶಾಲಾಧಿಕಾರಿಗಳ ಅಧ್ಯಕ್ಷತೆಯ ಮೇಲೆ, ನಮ್ಮ ದೇಶಸೇವಕಾಗ್ರಣಿ ಅಡಲಚಂದ್ರನು ನಡೆಯಿಸಿದ ಭಾಷಣದಿಂದ ಈ ನಮ್ಮ ಸಂಘದಲ್ಲಿ ನೂತನಶಕ್ತಿಯು ಉತ್ಪನ್ನವಾಗಿರುವುದೂ, ಈ ಸಂಘಶಕ್ತಿಯನ್ನು ಸಾಫಲ್ಯಗೊಳಿಸುವಂತೆ ಮಾಡಬೇಕೆಂಬ ಏರ್ಪಾಡುಗಳು ಅಲ್ಲಲ್ಲಿಗೆ ಆರಂಭಿಸಲ್ಪಡುತ್ತಿರುವುದೂ ಸನ್ನಿಧಾನಕ್ಕೆ ವಿದಿತವಿಷಯವೇ ಆಗಿರುವುದಷ್ಟೆ.

ಈ ನಮ್ಮ ಸಂಘದ ನಿಜವಾದ ಉದ್ದೇಶವು ಪ್ರಸಾರಕ್ಕೆ ಬರಬೇಕಾದರೆ, ನಮ್ಮಲ್ಲಿ ಈತೀಚೆಗೆ ಆಚರಣೆಗೆ ಬಂದಿರುವ ಹಲವು ದುಷ್ಪದ್ಧತಿಗಳನ್ನು ಸಕಾರಣವಾಗಿ ವಿಮರ್ಶಿಸಿ, ಖಂಡಿಸಿ, ಅಂತವುಗಳನ್ನು ದೂರಮಾಡುವುದೂ, ನಮ್ಮ ಅನಾದಿಸಿದ್ಧವಾದ ಆರ್ಯಧರ್ಮವನ್ನು — ಭೂತ-ಭವಿಷತ್ಕಾಲಕ್ಕೂ ಸಾಧನಭೂತವಾದ ಆ ಪವಿತ್ರತಮವಾದ ಆರ್ಯ ನೀತಿಯನ್ನು—ಸರ್ವ ಸಾಹಸದಿಂದಲೂ ಆಚರಣೆಗೆ ತರಬೇಕಾದುದೂ ಅತ್ಯಾವಶ್ಯಕವಾಗಿರುವುದು.

ಆದರೆ, ಆ ನೀತಿಸಾರಕ್ಕೆ ಸ್ಥಿರಾಧಾರವಾತ್ರೆಯುರಾದ ನಮ್ಮ ಸ್ತ್ರೀವರ್ಗವನ್ನು ಸುಸ್ಥಿತಿಗೆ ತಂದಲ್ಲದೆ ಮತ್ತೆ ಯಾವ ಬಗೆಯಿಂದಲೂ ಆಗುವುದಿಲ್ಲ.

ಮೇಲೆ ಹೇಳಿರುವ ಕಾರಣಗಳಿಂದ, ದೇಶಮಾತೆಯ ಬ್ರೇಮೋದ್ಧಾರ ಕಾರ್ಯದಲ್ಲಿ ಬದ್ಧಾದರರಾಗಿ ನಿಲ್ಲಲು ಸಂಕಲ್ಪಿಸುವ ನಾವು, ನಮ್ಮ ಆಚಲ ಚಂದ್ರನಾಥನ ಹಿತಸೂಚನೆಯಂತೆ, ನಮ್ಮ ಸ್ತ್ರೀವರ್ಗವೆಲ್ಲವನ್ನೂ ಜ್ಞಾನವಿ ಶಿಷ್ಟರನ್ನಾಗಿ ಮಾಡಲು, ಪರಮಪೂಜ್ಯಭಗಿನಿಯಾದ ಮಾತೃನಂದಿನಿಯ ಶಿಷ್ಯವರ್ಗದಲ್ಲಿ ನೇಮಿಸಿ ಆ ಪವಿತ್ರಮೂರ್ತಿಯ ದಿವ್ಯಸೂಕ್ತಿಗಳಿಂದ ನಮ್ಮ ಸ್ತ್ರೀವರ್ಗವೂ, ಆ ದೇವಿಯು ಮಾರ್ಗಾನುಯಾಯಿನಿಯುರಾಗಿ, ದೇಶಮಾತೆಯ ಅಂತಸ್ತಾಪ ನಿವಾರಣೆಯಲ್ಲಿ ದಕ್ಷರೆನ್ನಿಸುವಂತಾಗಬೇಕೆಂಬುದೇ, ನಮ್ಮೆಲ್ಲರ ಉತ್ಕಟೇಚ್ಛೆಯಾಗಿದೆ.

ಅದುದರಿಂದ, ಈ ನಮ್ಮ ಕರ್ನಾಟಕದ ಸ್ತ್ರೀಪ್ರಪಂಚಕ್ಕೆಲ್ಲಾ ಜ್ಞಾನ ಪ್ರಸಾರವನ್ನುಂಟುಮಾಡುವುದರಲ್ಲಿ ಸಮರ್ಥಳಾದ ನಂದಿನೀದೇವಿಯು, ತನ್ನ ನಿಸರ್ಗ ಪ್ರೇಮದಿಂದ ಇತರ ಸೋದರೀವರ್ಗಕ್ಕೆ ತನ್ನ ದಿವ್ಯಸಂದರ್ಶನ ಲಾಭವನ್ನಿತ್ತು, ಅವರ ಮನಸ್ಸು ಪರಿಪಕ್ವವಾಗುವಂತಹ ಹಿತಬೋಧೆಯನ್ನುಂಟುಮಾಡುವ ಕಾರ್ಯಭಾರವನ್ನು ವಹಿಸುವಂತೆ ಕಲ್ಪಿಸಬೇಕೆಂದು ನಾವೆಲ್ಲರೂ ನಮ್ಮ ಪರಮಪೂಜ್ಯರಾದ ನಿಮ್ಮಲ್ಲಿ ಸಂಪ್ರಾರ್ಥಿಸುತ್ತಿರುವೆವು. ನಮ್ಮೀ ಪ್ರಾರ್ಥನೆಯನ್ನು ನಿರಾಕರಿಸದೆ ಮಾನ್ಯಮಾಡಿ, ತಮ್ಮ ಪೋಷಣೆಯಲ್ಲಿರುವ ನಂದಿನಿಯಲ್ಲಿ ನಮ್ಮೀ ಪ್ರಾರ್ಥನೆಯನ್ನರ್ಪಿಸಿ, ಅನುಬೋಧಿಸುವಂತೆ ಮಾಡುವ ಭಾರವು ತಮ್ಮನ್ನೇ ಸೇರಿದುದಾಗಿದೆ. ಮತ್ತೇನು ಹೇಳುವ? ಪ್ರಕೃತದಲ್ಲಿ ಇಷ್ಟೆ; ನಾವೆಲ್ಲರೂ ಸಿದ್ಧಾನಂದ ಪ್ರಭುಪಿಸಮತ್ತು ಅಚಲಚಂದ್ರನಾಥನ ಮಾರ್ಗಾನುಯಾಯಿಗಳಾಗಿರುತ್ತೇವೆ. ನಮ್ಮ ಆತ್ಮವೂ ಶ್ರೀ ಸತ್ಯಾನಂದ ಪರಮಪುಣ್ಯತೀರ್ಥರ ದಿವ್ಯಬೋಧೆಯಿಂದರಿಂದಲೇ ಉನ್ನತಿಗೆ ಬರತಕ್ಕುದಾಗಿದೆ. ಇನ್ನು ನಮ್ಮ ಶಕ್ತಿಸ್ವರೂಪಿಣಿಯುರಾದ ಸ್ತ್ರೀವರ್ಗವು, ನಂದಿನಿಯ ಮಾದರಿಯನ್ನೇ ಹಿಡಿದು ನಡೆಯುಬೇಕಾಗಿದೆ. ಇದನ್ನು ಮಾಡಲು ನಮ್ಮ ಗುರುಹಿರಿಯರೆಲ್ಲರಿಂದಲೂ ಸಮ್ಮತಿಯನ್ನೂ ಹೊಂದಿರುತ್ತೇನೆ. ಕಾರ್ಯಸಿದ್ಧಿಗೆ ತಮ್ಮ ಅನುಗ್ರಹವು ಮಾತ್ರವೇ ನಿಂತಿದೆ. ಭಗವತಿಯೊಲ್ಮೆಯಿಂದ ತಾವು ಈ ನಮ್ಮ ಪ್ರಾರ್ಥನೆ

ಯುಸ್ಸು ನಡೆಯಿಸಿಕೊಡುವ ಪಕ್ಷದಲ್ಲಿ, ತಮ್ಮ ಸೂಚನೆಯಂತೆ ನಡೆಯಲು ನಾವು ಸಿದ್ಧರಾಗಿರುವೇ ಇರುವೆವು. ದಯೆಯಿಟ್ಟು ಇದನ್ನು ನಡೆಯಿಸಿಕೊಡ ಬೇಕೆಂದು ಕೋರುವ---

ತಮ್ಮ ನಿರಂತರದ ವಿಧೇಯರಾದ

ದೇಶಸೇವಕರು."

ಸ್ವರ್ಣಾ:—ಪತ್ರವನ್ನು ಅಲ್ಲಗೆ ಮುಗಿಸಿ—"ಅಪ್ಪ! ಕೆಳಗೆ ಕೊಟ್ಟಿರುವ ಹೆಸರುಗಳನ್ನೂ ಓದಬೇಕೆ?"

ನಗೇಶ:—'ಅದೇನೂ ಬೇಕಾಗಿಲ್ಲ.'—ಅಚೆಲನ ಕಡೆಗೆ ತಿರುಗಿ—'ಸನಯ್ಯಾ! ಐಂದ್ರಜಾಲದಲ್ಲಿ ನೀನು ತುಂಬ ನಿಪುಣನಂತೆ ಕಾಣುತ್ತೀಯೆ?'

ಅಚೆಲ:—'ಇನ್ನೂ ಅಷ್ಟರ ನೈಪುಣ್ಯವುಂಟಾಗಿಲ್ಲ. ತಮ್ಮ ಅನುಗ್ರಹವಿದ್ದರೆ ಅದೂ ಆಗಲಿ. ಅದರಿಂದ ನಷ್ಟವೇನೂ ಇಲ್ಲ. ಈ ಪ್ರಾರ್ಥನಾ ಪತ್ರಕ್ಕೆ ಉತ್ತರವೇನು?'

ನಗೇಶ:—ಏನೆಂದರೆ, ಸೂತ್ರಧಾರನು ಏಳಿದಂತೆ ನಡೆದಾಡುವುದೇ ಬೊಂಬೆಗಳ ಕೆಲಸವಷ್ಟೆ. ಇನ್ನು ನಿನ್ನ ಇಷ್ಟವೇ ನಮ್ಮ ಇಷ್ಟವೆಂಬುದನ್ನೂ ಬೇರೆಯಾಗಿ ಹೇಳಬೇಕೆ?

ಅಚೆಲ:—ಕೇವಲ ನನ್ನ ಇಷ್ಟವೊಂದನ್ನೇ ಅಷ್ಟು ಪ್ರಾಮುಖ್ಯ ಪೂರ್ವಕವಾಗಿ ಭಾವಿಸಬೇಕಾಗಿಲ್ಲ. ನಮ್ಮ ಗುರುದೇವರ ಶಾಸನವು ಹೇಗಾಗಿರುವುದೋ ಹಾಗೆ ನಡೆದರೆ ಸಾಕು.

ಭಕ್ತಿ—ಸೇವಾ:—"ಅಹುದು. ಅದೇ ನಮ್ಮ ಅಭಿಮತವೂ ಆಗಿದೆ."

ನಗೇಶ:—" ಹಾಗೂ ಆಗಬಹುದು."— ಸ್ವರ್ಣಾಕುಮಾರಿಯನ್ನು ಕುರಿತು—'ತಾಯಿ! ಎಲ್ಲಿ, ನಿನ್ನ ಕೈಯಲ್ಲಿ ಮೊದಲು ಕೊಟ್ಟಿದ್ದ ಪತ್ರಗಳನ್ನು ಓದಿಹೇಳು.'

(ಸ್ವರ್ಣೆಯು ಪತ್ರದಲ್ಲಿದ್ದ ಮತ್ತೊಂದು ಖಂಡಪತ್ರವನ್ನು ತೆಗೆದು ಹೀಗೆ ಓದಿದಳು)—

" ಮದೀಯಾಂಕಲಾಲಿತೆಯಾದೆ ನಂದಿನಿ!

ಭಗವತಿಯು ನಿನಗೆ ಅನುಗ್ರಹಿಸಲಿ. ತಾಯಿ! ನಾನು ನಿನ್ನನ್ನ

ಬಿಟ್ಟು ಬಂದುದು ಪೊದಲು, ಇಲ್ಲಿ ದಿನವೂ ಮಾತೃವಂದನೆಯನ್ನು ಮಾಡುವಾಗಲೆಲ್ಲ, ಮಾತೆಯ ಹತ್ತಿರದಲ್ಲಿಯೇ ನೀನು ಕುಳಿತಿರುವಂತೆ ಕನವರಿಸುತ್ತಿರುವೆನು. ಅಷ್ಟೇ ಅಲ್ಲ. ನನ್ನ ವಿರಾಮಕಾಲವನ್ನು—ನಿನಗೆ ಕೊಡುತ್ತಿದ್ದ ಹಿತಬೋಧೆಯಿಂದ ಬಹು ಸುಖವಾಗಿ ಕಳೆಯುತ್ತಿದ್ದ ಕಾಲಧನವನ್ನು—ಈಗ ಬಹು ದೀರ್ಘವಾಗಿಯೂ, ಒಂದೊಂದುಬಾರಿ ಕಷ್ಟವಾಗಿಯೂ ಕಳೆಯುತ್ತಿರುವೆನು. ಇಷ್ಟಾದರೂ ಈವರೆಗೂ ನಿನ್ನನ್ನು ಮಾತ್ರ ಮತ್ತೊಮ್ಮೆಯೂ ನೋಡಲಿಲ್ಲ. ಆದರೆ, ವತ್ಸೆ! ಯತ್ನವಿಲ್ಲದ ವಿಚಾರದಲ್ಲ ನಾನು ಮಾಡುವುದೇನು? ನಿನಗೆ ಬಾಲ್ಯವು ಮೀರಿತು. ನವೋಢೆಯಾದ ನೀನು, ಇಲ್ಲಿರುವುದರಿಂದ ನನ್ನ ಸಮಾಧಾನಕ್ಕಾಗಲೀ, ಮುಂದಿನ ನಿನ್ನ ಸುಖಸಂಗತಿಗಾಗಲೀ ಬಾಧಕಗಳುಂಟಾಗುವುದು ಸಹಜವೆಂಬೆಣಿಸಿ, ನಿನ್ನನ್ನು ಶ್ರೀಪುಂತರ ಬಳಿಯಲ್ಲಿ ಬಿಟ್ಟು ಬಂದೆವು. ನಿನ್ನ ಮನಸ್ಸು ವ್ಯಾಕುಲವಡದಿರಬೇಕೆಂದು ದೇಶಯಾತ್ರಾವ್ಯಾಜವನ್ನು ಹೂಡಿ, ನಾವು ಹೊರಟು ಬಂದೆವು. ಇದನ್ನು ನೀನೂ ತಿಳಿದೇ ಇರಬಹುದಾದರೂ ಈಗ ಸಕಾಲವಾಗಿರುವುದರಿಂದ ಹೇಳುತ್ತೇನೆ.

ನಂದಿನಿ! ನೀನೇ ನಮ್ಮ ದೇಶಮಾತೆಗೂ, ಮತ್ತು ನಮ್ಮೀ ಕುಲಕೋಟಿಗೂ ಸದ್ಗತಿಯನ್ನು ಕಾಣಿಸುವ ನಂದಿನಿಯು. ಆದುದರಿಂದ ನೀನು ಇಂದಿನ ವರೆಗೂ ಇದ್ದಂತೆ ಮುಂದೆಯೂ ಸುಮ್ಮನಿರುವುದು ಕೂಡದು. ನಿನ್ನ ಸೋದರಿಯರ ದುಸ್ಥಿತಿಯನ್ನು ಸಕಾರಣವಾಗಿ ಪರಿಹರಿಸುವ ಕಾರ್ಯವು ನಿನ್ನವಾಗಿದೆಯೆಂದೂ, ಇದನ್ನು ಹೇಗೂ ನಿರ್ವಹಿಸದೆ ಬಿಡುವುದು ಮಾತೃನಂದಿನಿಯಾದ ನಿನಗೆ ಸರಿಯುಲ್ಲವೆಂದೂ ಹೇಳುವೆನಲ್ಲದೆ, ಹೆಚ್ಚು ಬರೆಯಲಾರೆನು.

ಮತ್ತೊಂದು ಮಾತು; ನಿನ್ನ ತಾಯಿ, ಆ ನಿನ್ನ ಜನ್ಮದಾತೆಯು, ತನ್ನ ಅಂತ್ಯಕಾಲದಲ್ಲಿ ಹೇಳಿದ ಮಾತು ನಿನ್ನ ನೆನಪಿನಲ್ಲಿರಲಿ. ಅದನ್ನು ನೆನೆನೆನೆದು, ಆ ತಾಯಿಯು ಆತ್ಮವಿಶ್ವಾಸವನ್ನು ಭಂಗಪಡಿಸದೆ, ಸರ್ವಪ್ರಕಾರದಲ್ಲಿಯೂ ಸಾರ್ಥಿಕ್ಯಪಡಿಸುವುದರಲ್ಲಿ ಮಾತ್ರ ಯಾವಾಗಲೂ ಎಚ್ಚರಿಕೆಯುಳ್ಳವಳಾಗಿರು. ಭಗವತಿಯು ನಿನಗೆ ಸಹಾಯಕಳಾಗಿರಲಿ. ಇತಿ,—

ನಿನ್ನ ವಿಶ್ವಸನೀಯೆಯಾದ **ಯೋಗಿನಿ!**»

(ಮತ್ತೊಂದು ಪತ್ರ.)

''ಸುಕುಮಾರಿ'

ನಿನ್ನನ್ನು ಅಲ್ಲಿ ಬಿಟ್ಟುದು ಮೊದಲು, ಇಂದಿನವರೆಗೆ ನಡೆದ ಎಲ್ಲಾ ವಿಚಾರಗಳೂ ನನಗೆ, ನಿನ್ನ ಅಣ್ಣಾ ಅಚಲಚಂದ್ರನಿಂದ ತಿಳಿದುಬಂದಿದೆ. ಇದಕ್ಕಾಗಿ ಸಂತೋಷ. ನನಗೆ ಈಗ ನಾನು ಏನನ್ನು ಬರೆಯುಬೇಕೋ ತಿಳಿಯದು. ಕಾಲೋಚಿತ ಸೂಚನೆಗಳಿಂದ ಎಚ್ಚರಿಸಲು, ನಿನ್ನ ಅಣ್ಣಾನು ಯಾವಾಗಲೂ ಜಾಗರೂಕನಾಗಿರುವನು. ನಿನ್ನ ಶ್ರೇಯೋಭಿವೃದ್ಧಿಯಲ್ಲಿ ಯೂ ಮತ್ತು ನಿನ್ನ ನಿತ್ಯನೈಮಿತ್ತಿಕ-ಕ್ರಿಯಾಕಲಾಪದಲ್ಲಿಯೂ ನಿನಗೆ ಆಶ್ರಯವಿತ್ತಿರುವ, ಪುಣ್ಯಪುರುಷನಾದ ನಗೇಶರಾಯನೂ ಮತ್ತು ನಿನ್ನ ಪಿತೃವ್ಯನೂ ಸಪರಿವಾರರಾಗಿ ಸಿದ್ಧರಾಗಿರುವರು. ಇನ್ನು ಉಳಿದವರ ಮಾತು ಹಾಗಿರಲಿ.

ಆದರೆ, ವತ್ಸೆ! ನಿನ್ನನ್ನು ನಾನು ಯಾವ ಉದ್ದೇಶದಿಂದ ಅಲ್ಲಿ ಬಿಟ್ಟಿದ್ದೆನೋ, ಆ ಉದ್ದೇಶವು, ಎಂದರೆ, ನಮ್ಮ ದೇಶಸೇವಕರಲ್ಲಿ ಕರ್ತವ್ಯಜಾಗ್ರತೆಯು, ತೋರಿ ಬಂದಿದೆ. ಇನ್ನು ನೀನು ಈಗ ಅಲ್ಲಿದ್ದು ಮಾಡಬೇಕಾದ ಕೆಲಸವೆಂದರೆ ಇಷ್ಟೆ. ಈ ನಿನ್ನ ಅಜ್ಞಾತವಾಸದ ಎರಡು ವರ್ಷವನ್ನೂ ನೀನು ಯಾವ ನಿನ್ನ ದೇಶಭಗಿನಿಯರ ಸರಸ-ಸಲ್ಲಾಪದಿಂದ ಸುಖವಾಗಿ ಕಳೆದಿರುವೆಯೋ, ಅವರೆಲ್ಲರನ್ನೂ ಒಟ್ಟುಗೂಡಿಸಿ, ನಿನ್ನ ಜೀವಿತವನ್ನೂ, ಜನ್ಮೋದ್ದೇಶವನ್ನೂ, ಮುಂದಿನ ಕರ್ತವ್ಯವನ್ನೂ ಸ್ಪಷ್ಟಪಡಿಸುವಂತೆ ನಿದರ್ಶನಪೂರ್ವಕವಾದ ನಾಲ್ಕಾರು ಮಾತುಗಳನ್ನಾಡಿ, ನಿದ್ರಿತರಾಗಿರುವ ಅವರೆಲ್ಲರನ್ನೂ ತಟ್ಟಿ ಎಬ್ಬಿಸುವುದೂ, ಹಾಗೆ ಎಚ್ಚೆತ್ತು ಕಣ್ದೆರೆದು ನೋಡುವವರಿಗೆ ಧನ್ಯವಾದವನ್ನೊಪ್ಪಿಸಿ, ಅವರಿಂದ ಅಭಿಪ್ರಾಯವನ್ನು ಹೊಂದುವುದೂ ಈ ಎರಡೇ ಕೆಲಸಗಳು ಸದ್ಯದಲ್ಲಿ ನಿರ್ವಹಿಸಲ್ಪಟ್ಟಿವೆ. ಈ ಕೆಲಸವನ್ನು ಸರಿಯಾಗಿ ಮಾಡಬೇಕಾದ ನಿವರವು, ನಿನ್ನ ಅಣ್ಣಾನಿಂದಲೇ ನಿನಗೆ ತಿಳಿಯಬಹುದಾಗಿದೆ.

ಮುಖ್ಯವಿಚಾರವೇನೆಂದರೆ, ನೀನು ನಮ್ಮ ಪರಮ ವಿಶ್ವಸನೀಯನಾದ ನಗೇಶರಾಯನ ಮತ್ತು ಅಚಲಚಂದ್ರನಾಥನ ಆಣತಿಯಂತೆ ಯಾವ ಕೆಲಸವನ್ನಾದರೂ ನಿರಾತಂಕವಾಗಿ ನೆರವೇರಿಸಿ, ಧನ್ಯಳೆನ್ನಿಸಿಕೊಳ್ಳುವುದು

ಮುಖ್ಯವಾಗಿದೆ. ಇಷ್ಟು ಸಾಕು. ಭಗವತ್ಸಹಾಯವೇ ನಿನ್ನನ್ನು ತ್ರಿಕಾಲದಲ್ಲಿಯೂ ಬೆಂಬಿಡದೆ ಸಂರಕ್ಷಿಸುತ್ತಿರಬೇಕು. ಇತಿ,

ನಿನ್ನ ಹಿತಾಕಾಂಕ್ಷಿ."

ಸ್ವರ್ಣಯು ಪತ್ರವಾಚನವನ್ನು ಮುಗಿಸಿದ ಬಳಿಕ, ಲಜ್ಜೆಯಿಂದ ನಂದಿನಿಯು ಮರೆಯುಲ್ಲಿ ಕುಳಿತಳು. ನಂದಿನಿಯು ಒಮ್ಮೆ ಅಚಲನನ್ನು ನೋಡಿ, ಮತ್ತೆ ಮೊದಲಿನಂತೆ ಕುಳಿತಳು.

ಚಿತ್ರಕಲೆ:—ಇದೇನು ತಂತ್ರವಪ್ಪ—ಅಚಲಚಂದ್ರ! ಪ್ರತಿಕಾರ್ಯ ಕಲಾಪಕ್ಕೂ ನೀನೇ ಪ್ರೇರಕನಷ್ಟೆ?

ಅಚಲ:—ತಾರೊ! ನಾನು ಏನನ್ನೂ ಹೇಳಲಾರೆನು; ತಾವು ಹಿರಿಯರು; ಹೇಗೆ ಕಲ್ಪಿಸಿ ಹೇಳಿದರೂ ಸಮ್ಮತವೇಸರಿ.

ನಗೇಶ:— ಹೂಂ! ಈಗ ನಾವು ಮಾಡಬೇಕಾದುದೇನಮ್ಮ? ಮೊದಲು ಅದನ್ನು ಹೇಳು.

ಅಚಲ:—ಏನೆಂದರೆ, ನಂದಿನಿಯು ಸಮ್ಮತವನ್ನಲ್ಲವೇ ಕೋರುವುದು?"

ನಗೇಶ:—ಏನಮ್ಮ, ನಂದಿನಿ? ನಿನ್ನ ಅಭಿಪ್ರಾಯವೇನು? ಈಗ ದೇಶ ಸೇವಾಸಂಘದವರ ಪ್ರಾರ್ಥನೆಗೆ ಏನೆಂದು ಉತ್ತರವನ್ನು ಕೊಡಬೇಕು?

ನಂದಿನಿ:—ಸ್ಥಿರಭಾವದಿಂದ ತಲೆತಗ್ಗಿಸಿ—"ಹಿರಿಯರಲ್ಲಿ ನಾನು ಹೇಳುವುದೇನಿದೆ? ಹೇಳಿದಂತೆ ಕೇಳುವುದೊಂದಲ್ಲದೆ, ನನಗೆ ಮತ್ತಾವ ಸ್ವಾತಂತ್ರ್ಯವೂ ಇಲ್ಲವಷ್ಟೆ."

ನಗೇಶ:—ಹಾಗಾದರೆ ಸಂತೋಷ. ಇನ್ನು ನಿನ್ನ ಭಾಷಣಕ್ಕೆ ನಾಳಿದ್ದಿನ ದಿನವೇ ಗೊತ್ತು ಮಾಡಿ, ಮಹಿಳೆಯರೆಲ್ಲರನ್ನೂ ಸೇರಿಸುವ ಏರ್ಪಾಡು ಮಾಡಬಹುದಲ್ಲವೆ?

ನಂದಿನಿ:—ಅದರಲ್ಲಿ ನನ್ನ ಅಭ್ಯಂತರವೇನೂ ಇಲ್ಲ. ಆದರೆ, ಬರುವವರಲ್ಲಿ ಅಲಂಕಾರಾದಿಗಳಿಂದ ಬೀಗಿರುವವರುಮಾತ್ರ ಸೇರಿರಬಾರದು. ಅದಿಲ್ಲವಾದರೆ ಮಹಿಳೆಯರ ಗುಂಪಿನಲ್ಲಿ ಗದ್ದಲಕ್ಕೆ ಅವಕಾಶವೇ ಇರದಂತಾದೀತು.

ಅಚಲ:—ನನಗಿದು ಒಪ್ಪಿತು.

ನಗೇಶ:— ಅಯ್ಯ, ಸೇವಾನಂದ! ಭಕ್ತಿಸಾರ!! ಇನ್ನೇನನ್ನೂ

ನಾನು ಬಿಡಿಸಿ ಹೇಳಬೇಕಾಗಿಲ್ಲವಷ್ಟೆ? ಮಹಿಳೆಯರೆಲ್ಲರನ್ನೂ ಕರೆಯಿಸುವ ನಿಚಾರವು ನಿಮ್ಮನ್ನು ಸೇರಿದೆ. ಉಳಿದ ಕಾರ್ಯಭಾರವೆಲ್ಲವೂ ನಮ್ಮದಾಗಿದೆ. ಮತ್ತೇನು?

ಭಕ್ತೆ-ಸೇವಾ:—ಎದ್ದು ನಿಂತು—"ಅಷ್ಟೇ ನಮಗೆ ಬೇಕಾಗಿರುವುದು. ಇನ್ನು ನಾವು ಹೊರಡಬಹುದೇ?"

ನಗೇಶ:—ಒಳ್ಳೆಯದು.

ಸೇವಾನಂದ-ಭಕ್ತೆಸಾರರು ಎದ್ದು ನಿಂತು, ಅಚಲಚಂದ್ರನನ್ನು ಕುರಿತು-"ಇನ್ನೂ ವಿಲಂಬವೇಕೆ? ಮಾರ್ಗದರ್ಶಕರೇ! ಮತ್ತೇನಾದರೂ ಶೇಷವುಂಟೋ?"

ಅಚಲ:—ಎದ್ದು ನಿಂತು—"ಶೇಷವಿದ್ದರೂ ಈಗಲೇ ಆಗಬೇಕಾದುದಿಲ್ಲ. ನಾಳೆಯಾಗಲಿ; ನಡೆಯಿರಿ.

ನಾದಾ:—ಅಚಲಚಂದ್ರ! ನೀನೂ ಈಗಲೇ ಹೊರಡಬೇಕೇನು?

ಅಚಲ:— ಬೇಡವೇ? ಇಲ್ಲಿಗೆ ಬಂದಿದ್ದ ಕೆಲಸವು ಇಷ್ಟಕ್ಕೆ ಸರಿಯಾಯಿತು. ಇನ್ನೇನು? ವೃಥಾ ಕಾಲಹರಣದಿಂದ ಇಲ್ಲೇಕೆ ಸುಮ್ಮನೆ ಕುಳಿತಿರಬೇಕು?

ನಗೇಶ:—ನ್ಯಾಯ! ಇನ್ನು ಯಾವ ಕೆಲಸವಿದ್ದರೂ ನಾಳೆಯಾಗಲಿ. ಹೊರಡಿರಿ.

ಅಚಲಚಂದ್ರನು ತಲೆದೂಗುತ್ತ ಸೇವಾನಂದ-ಭಕ್ತೆಸಾರರ ಕೈ ಹಿಡಿದುಕೊಂಡು ಹೊರಟು ಹೋದನು. ನಂದಿನಿಯೂ ಸ್ವರ್ಣಯೊಡನೆ ತನ್ನ ಕಿರು ಮನೆಗೆ ನಡೆದಳು. ಉಳಿದವರೂ ಅಂದಿನ ಸಮಾಲೋಚನೆ-ಸಂಪ್ರಾರ್ಥನೆ-ವಿಶೇಷಸೂಚನೆಗಳನ್ನು ಅಲ್ಲಿಗೆ ನಿಲ್ಲಿಸಿ, ಮುಂದಿನ ಕಾರ್ಯನಿರ್ವಾಹದಲ್ಲಿ ನಿರತರಾದರು. ದೀರ್ಘಲೇಖನದಿಂದ ಬೇಸತ್ತ ವಾಚಕವರ್ಗಕ್ಕೂ ಇಲ್ಲಿಗೆ ಸ್ವಲ್ಪ ವಿರಾಮವನ್ನು ಕೊಟ್ಟರಬೇಕಷ್ಟೆ. (ಆಗಲಿ.)

॥ ಶ್ರೀಃ ॥

ತ್ರಯೋದಶ ಪರಿಚ್ಛೇದ.

(ಸ್ವಾಭಿಪ್ರಾಯ ನಿವೇದನ)

ನಗೇಶರಾಯನ ದಿವ್ಯಭವನವು ಇಂದು ಅಧಿಕ ಶೃಂಗಾರದಿಂದ ಮತ್ತಷ್ಟು ಮೋಹಕವಾಗಿ ಕಾಣುತ್ತಿದೆ. ಭವನದ ಮುಂದಿನ ಪ್ರದೇಶ ವೆಲ್ಲಕ್ಕೂ ಬಿಸಲು ತೋರದಂತೆ ಬಿಡಾರಗಳು ಹೊಡೆಯಲ್ಪಟ್ಟಿವೆ. ಪ್ರಾಕಾರದ ಬಾಗಿಲ ಬಳಿಯಲ್ಲಿ ಬಿಲ್ಲೆಯವರೂ, ಕೋಲುಕಾರರೂ ಕೈಕಟ್ಟಿ ನಿಂತಿರುವರು; ಬಿಡಾರದಲ್ಲಿ ಪುರುಷವರ್ಗವು, ಶಿವಪುರದ ಕಲಾಶಾಲೆಯ ವೃದ್ಧ ಕಲಾಧ್ಯರ್ಥಿಗಳಾದ ತರುಣವಿದ್ಯಾರ್ಥಿಗಳು, ತುಂಬಿ ತುಳುಕುತ್ತಿರುವರು. ಭವನದ ಮಧ್ಯಭಾಗದ ವಿಶಾಲವಾದ ತೊಟ್ಟಿಯಲ್ಲಿ ಹೆಂಗಸರು ಕಿಕ್ಕಿರಿದು ಕುಳಿತಿರುವರು. ಏಕಂದರೆ, ಕ್ರಮವಿಲ್ಲದೆ ಒಬ್ಬರಮೇಲೆ ಒಬ್ಬರು ಬೀಳುವಂತಿಲ್ಲ. ವೃದ್ಧಸುವಾಸಿನಿಯರ ಗುಂಪು ಒಂದು ಕಡೆಯಲ್ಲಿಯೂ, ವಿಧೋ ವೆಯರ ಗುಂಪು ಮತ್ತೊಂದು ಕಡೆಯಲ್ಲಿಯೂ, ಬಾಲಕಿಯರ ಮತ್ತು ನವತರುಣಿಯರ ಗುಂಪು ಬೇರೊಂದೆಡೆಯಲ್ಲಿಯೂ, ಪ್ರೌಢಗೃಹಿಣಿಯರಾದ ಅಂಗನಾ ನಿವಹವು ಮತ್ತೊಂದೆಡೆಯಲ್ಲಿಯೂ ಹೀಗೆ ಕ್ರಮ ಪ್ರಕಾರವಾಗಿ ಬೇರೆಬೇರೆಯಾಗಿ ಕುಳಿತಿದ್ದರು.

ಹೆಂಗಸರ ಗಲಭೆಗೆ ಅವರ ಮೈಮೇಲೆ ತಗಲಿಸಿಕೊಳ್ಳುವ ಒಡವೆಗಳೂ, ಅವರ ಕೈಕೂಸುಗಳೂ, ಮುಖ್ಯಕಾರಣಗಳಾಗಿವೆಯಷ್ಟೆ? ಇಂದಿನ ಈ ಸ್ತ್ರೀ ಸಮ್ಮೇಲನದಲ್ಲಿ ಬಂದಿರುವ ಮಹಿಳೆಯರಲ್ಲಿ ಯಾರನ್ನು ನೋಡಿದರೂ ವಿಲಾಸ-ವಿಭ್ರಮಾದಿಗಳ ಕುರುಹೇ ತೋರುತ್ತಿಲ್ಲ. ಬಂದಿರುವವರು ತಮ್ಮ ತಮ್ಮ ರೂಪ-ಗುಣಗಳಿಗೆ ತಕ್ಕ ಲಾಂಛನವಾಗಿ ಮಿತವಾದ ಅಲಂಕಾರಗಳಲ್ಲದೆ, ಹೆಚ್ಚಿಗೆ ಸಿಂಗರವನ್ನು ಯಾರೂ ಮಾಡಿಕೊಂಡಿರುವುದಿಲ್ಲ. ಎಲ್ಲರಿಗೂ ಅವರ ಪುರುಷ ವರ್ಗದ ಕಟ್ಟಾಜ್ಞೆಯು ಮೇಗಾವಳಿಯಾಗಿ ಕಾದಿರು

ವಂತೆ ತೋರುತ್ತಿರುವುದು. ಮತ್ತು ಒಳಗೆ ಭಾಷಣಕ್ಕೆ ಬರುವ ಮಹಿಳೆಯರು ತಮ್ಮ ಕೈಕೂಸುಗಳನ್ನು ಬಾಗಿಲಿನ ಬಿಡಾರದ ಮುಂದೆ ಕುಳಿತ, ಪರಿಚಾರಿಣಿಯರ ವಶಕ್ಕೊಪ್ಪಿಸಬೇಕೆಂದು ನಿಯಮಿಸುತ್ತಿದ್ದ, ಅಚಲಚಂದ್ರ— ನಾದಾನಂದರ ಮಾತಿನಂತೆ ಅವರಲ್ಲಿ ಬಿಟ್ಟು, ಭವನದೊಳಹೊಕ್ಕು, ಉಚಿತ ಸನ್ಮಾನದಿಂದ ಕುಳಿತುಕೊಳ್ಳುತ್ತಿದ್ದರು. ಸ್ತ್ರೀಸಮೂಹವು, ನೆಲದ ಮೇಲೆ ಹಾಸಿದ್ದ ರತ್ನಗಂಬಳಿಗಳಲ್ಲಿ ಕುಳಿತಿದ್ದರು. ಕಲೆಕ್ಟರರ ಪತ್ನಿ, ಶರಚ್ಚಂದ್ರನ ಭಾರ್ಯೆ, ವಿದ್ಯಾನಂದಪ್ರಭುವಿನ ಪತ್ನಿ, ಇವರೊಡನೆ ಚಿತ್ರಕಲೆಯು ಭವನದ ಮೇಗಡೆಯ ಹಜಾರದಲ್ಲಿ ಕುಳಿತು, ಬಂದ ಬಂದ ಸ್ತ್ರೀಯರನ್ನು ಸನ್ಮಾನಿಸುತ್ತಿದ್ದಳು. ನಂದಿನಿಯು, ಸ್ವರ್ಣಕುಮಾರಿ, ಸರಸಕುಮಾರಿ, ಪರಿಮಳಾದೇವಿಯರೇ ಮೊದಲಾದ ತನ್ನ ಸಖೀವರ್ಗದಲ್ಲಿ ಕಲೆತು ಮಾತನಾಡುತ್ತಿದ್ದಳು.

ಹೆಚ್ಚೇಕೆ, ನಗೇಶರಾಯನ ಮತ್ತು ಅಚಲಚಂದ್ರನ ಕಾರ್ಯದಕ್ಷತೆಯಿಂದ, ಇಷ್ಟು ಮಂದಿ ಸ್ತ್ರೀಯರು ನೆರೆದಿದ್ದರೂ ಗದ್ದಲವಿಲ್ಲದಿದ್ದಿತು. ಭವನದ ಹೊರಬಾಗಿಲ ಬಳಿಯಲ್ಲಿಯೇ ಕಲೆಕ್ಟರ್ ಜ್ಞಾನಸಾರ ಚಕ್ರವರ್ತಿ, ದೇಶಸೇವಕ ಶರಚ್ಚಂದ್ರನಾಥ ತಾಕೂರ, ರಾವಬಹದ್ದೂರ್ ವಿದ್ಯಾನಂದಪ್ರಭು, ಇವರೊಡನೆ ಎತ್ತರವಾದ ಪೀಠಗಳಲ್ಲಿ ನಗೇಶರಾಯನೇ ಮೂರ್ತಿಮತ್ತಾಗಿ ಕುಳಿತಿದ್ದುದರಿಂದ ಸ್ತ್ರೀಯರು ಮತ್ತೂ ಭೀತರಾಗಿ ಯಾವ ಮಾತನ್ನೂ ಎತ್ತದೆ, ಕೌತುಕ ವಿಸ್ಮಯಗಳಿಂದ ನೋಡುತ್ತ ಕುಳಿತಿದ್ದರು. ವಿವರಣವಿಷ್ಟಕ್ಕೆ ಸಾಕಲ್ಲವೆ?—

ನಿರ್ಣಯಿಸಲ್ಪಟ್ಟಿದ್ದ ವೇಳೆಯು ಬಂದಿತು. ಇನ್ನು ಹೊರಗಣಿಂದ ಯಾರೂ ಬರುವಂತಿಲ್ಲ. ವ್ಯಾಕಾರದ ಬಾಗಿಲು ಬಂದಾಯಿತು. ಬಿಡಾರದಲ್ಲಿ ಚೆಲ್ಲಾಟವಾಡುತ್ತ ಕುಳಿತಿದ್ದ ಪುರುಷವರ್ಗವು, ಮುಂದಿನ ನಂದಿನಿಯ ಉಪನ್ಯಾಸದಲ್ಲಿ ಕುತೂಹಲಾವಿಷ್ಟರಾಗಿ ಎದ್ದು ಹಮ್ಮೈಸಿ ಕೇಳುತ್ತ ನಿಂತರು. ಇದೆಲ್ಲವನ್ನೂ ನೋಡಿ, ನಗೇಶರಾಯನು, ಚಿತ್ರಕಲೆಗೆ ಸೂಚನೆಯನ್ನು ಕೊಟ್ಟನು. ಕುಳಿತಿದ್ದ ಚಿತ್ರಕಲೆಯು ಎದ್ದುನಿಂತು, ನೆರೆದಿದ್ದ ಮಹಿಳೆಯರನ್ನು ಅಭಿನಂದಿಸಿ, ಪ್ರೇಮವ್ಯಂಜಕ ಸ್ವರದಿಂದ ಹೇಳಿದಳು:—

"ಇಲ್ಲಿ ನೆರೆದಿರುವ ನನ್ನ ಪ್ರಿಯಭಗಿನೀಯರೇ!

ಇಂದಿನ ವರೆಗೂ ಈ ಮನೆಯಲ್ಲಿ ಕಾಣದಿರ್ದ ನೇತ್ರೋತ್ಸವವನ್ನು ಇಂದು, ನೀವೆಲ್ಲರೂ ಸದಯಾಂತಃಕರಣರಾಗಿ ಬಂದು ಉಂಟುಮಾಡಿರುವು ದಕ್ಕಾಗಿ ನಿಮಗೆ ನನ್ನೀ ನಿರಂತರದ ಕೃತಜ್ಞತಾಪೂರ್ವಕವಾದ ಧನ್ಯವಾದ ಗಳನ್ನು ಇದೊ ಸಮರ್ಪಿಸಿರುವೆನು. ನಂದಿನಿಯು ನಿಮಿತ್ತದಿಂದಲಾದರೂ ಈ ದಿನ ನೀವೆಲ್ಲರೂ ಇಲ್ಲಿ ಸಮ್ಮಿಲಿತರಾಗಿರುವುದರಿಂದ ಇಂದು ನಮ್ಮ ಮನೆಯವರೆಲ್ಲರಿಗೂ ಉಂಟಾಗಿರುವ ಉತ್ಸಾಹವು ಅಷ್ಟಿಷ್ಟೆಂದು ಹೇಳುವಂ ತಿಲ್ಲ. ಆದರೂ ಅದರ ಹಿಂದೆಯೇ ಈಗಾಗಿರುವ ಉತ್ಸಾಹವು. ಮುಂದೆ ಮತ್ತಾವ ವ್ಯಾಪಾಂತರದಿಂದೇ ಆಗಲೀ ಭಂಗಹೊಂದುವಂತಾಗದೆ ಉತ್ತ ರೋತ್ತರಾಭಿವೃದ್ಧಿಹೊಂದಿ, ಆದಿಗಡಿಗೂ ಹೀಗೆಯೇ ನಾವೆಲ್ಲರೂ ಒಟ್ಟಾಗಿ ಕಲೆತು, ನಮ್ಮ ಇತಿಕರ್ತವ್ಯತೆಯನ್ನು ಭದ್ರಪಡಿಸಿಕೊಳ್ಳುವಂತಾಗಲಾರದೇ ನೆಂದು ಸ್ವಲ್ಪ ಶಂಕೆಯೂ ಉಂಟಾಗುತ್ತದೆ. ಏಕೆಂದರೆ,—ನಮ್ಮವರ ಭಿನ್ನಾಭಿ ಪ್ರಾಯಗಳೂ, ಅನೈಕಮತ್ಯವೂ, ಅಂತದರಿಂದ ನಮ್ಮನ್ನು ಸುತ್ತಿಕಾಡುತ್ತಿ ರುವ ಹೆಮ್ಮೆ, ಅಸೂಯೆ ಮೊದಲಾದ ತಿಳಿಗೇಡಿತನವೂ ಪ್ರಾಮುಖ್ಯಕಾರಣ ಗಳಾಗಿವೆ. ಇಂತಹ ಸಂದಿಗ್ಧಸಮಯದಲ್ಲಿ ಇಂದು, ನಮ್ಮ ಧರ್ಮಜಾಂಘ ವರ ಭಗೀರಥ ಪ್ರಯತ್ನದಿಂದ ಇಲ್ಲಿ ನೆರೆದಿರುವ ಈ ಮಹಿಳಾಸಮ್ಮೇಲನವು, ಮುಂದೆಯಾದರೂ ಸ್ವಪ್ರಯತ್ನದಿಂದಲೇ ಕಲೆತು, ದೇಶೋನ್ನತಿಗೆ ಪ್ರಬಲ ಸಾಧನಗಳನ್ನು ಕಲ್ಪಿಸಿಕೊಡುವಂತಾಗಬೇಕೆಂಬ ಆತುರವನ್ನೂ (ಆಶೋತ್ತ ರವನ್ನೂ) ಉಂಟುಮಾಡಿರುವುದು ಆಶ್ಚರ್ಯವಲ್ಲವಷ್ಟೆ?—

ಮಹಿಳಾಮಣಿಯರೇ!

ಇನ್ನು ನನ್ನ ಭಾಷಣದ ಮುಖ್ಯಾಂಶವನ್ನು ಸೂಚಿಸಿ ವಿರಮಿಸುವೆನು. ಮಾತೃನಂದಿನಿಯ ಜನ್ಮಧಾರಣವು, ನಮ್ಮವರ ಅಭ್ಯುದಯಕ್ಕೆಂದೂ, ಅವಳ ಸ್ಮರಬ್ರಹ್ಮಚರ್ಯವ್ರತವೂ ನಮ್ಮ ದೇಶಮಾತೆಯ ಹೃತ್ತಾಪನಿವಾರಣೆ ಗೆಂದೂ, ಹಾಗೂ ಇವಳು, ಇಲ್ಲಿ, ನಮ್ಮ ಮನೆಯಲ್ಲಿ ಒಂದೆರಡು ವರ್ಷಗಳ ಅಜ್ಞಾತವಾಸದಲ್ಲಿದ್ದುದು, ಶಿಥಿಲಸ್ಥಿತಿಯಲ್ಲಿಳಿದಿರುವ ನಮ್ಮ ಆರ್ಯಧರ್ಮದ ಪುನರುತ್ಥಾಪನಕ್ಕೆಂದೂ ದೃಢವಾಗಿ ತಿಳಿದು, ಇಂದು ನಾವೆಲ್ಲರೂ ಒಂದೆಡೆ ಯಲ್ಲಿ ಕಲೆತು, ಮಾತನಾಡುವಂತಾಗಿರುವ ಈ ಸುಯೋಗವನ್ನು ವ್ಯರ್ಥವೆ

ನ್ನಿಸದೆ, ಇವಳ ಆತ್ಮವಿಶ್ವಾಸಪೂರ್ವಕವಾದ ಹಿತಬೋಧೆಗೆ ಕಿವಿಕೊಟ್ಟು, ಮುಂದೆ ನಮ್ಮವರ ಯಶಶ್ಚಂದ್ರಿಕೆಯನ್ನು ಪ್ರಕಾಶಪಡಿಸುವಂತೆ ನೀವೆಲ್ಲರೂ ಅನುಗ್ರಹಿಸಬೇಕೆಂಬುದೇ ನನ್ನ ದೈನ್ಯಪ್ರಾರ್ಥನೆಯಾಗಿದೆ,"

ಹೀಗೆ ಹೇಳಿದ ಬಳಿಕ ಚಿತ್ರಕಲೆಯು ಸುಮ್ಮನಾದಳು. ಆ ಬಳಿಕ ಅಲ್ಲಿ ಕುಳಿತಿದ್ದವರು, ಕಲೆಕ್ಟರರ ಪತ್ನಿಯನ್ನು ಮುಖ್ಯ ಪೀಠದಲ್ಲಿ ಮಂಡಿಸುವಂತೆ ಪ್ರಾರ್ಥಿಸಿದರು. ಅದರಂತೆಯೇ ಆಕೆ, ಅಗ್ರಾಸನವನ್ನು ಸ್ವೀಕರಿಸಿ, ಅಭಿನಂದನವನ್ನು ಸೂಚಿಸಿ, ಬಳಿಕ ನಂದಿನಿಯನ್ನು ಮುಂದಿನ ಭಾಷಣಕ್ಕೆ ಮೊದಲುಮಾಡೆಂದು ಹೇಳಿದಳು.

ನಂದಿನಿಯು ಎದ್ದುನಿಂತು, ಕುಳಿತಿದ್ದ ಮಹಿಳೆಯರೆಲ್ಲರನ್ನೂ ಒಮ್ಮೆ ಚೆನ್ನಾಗಿ ನೋಡಿ, ಗದ್ಗದಸ್ವರದಿಂದ ಹೇಳತೊಡಗಿದಳು.—

" ನನ್ನ ಪರಮಪೂಜ್ಯ ಭಗಿನಿಯರೇ '

ಹಿರಿಯರೂ ಬಲ್ಲವರೂ ಆದ ಗುರುಜನರ ಮುಂದೆ, ಅರಿಯದವರು ಬಾಯ್ದೆರೆವುದು ನಗೆಗೇಡೆಂದು ಕೆಲವರು ಹೇಳಿಕೊಳ್ಳುವರು. ಆದರೂ ಹಾಗೆ ಹಿರಿಯರ ಮುಂದೆ ಕಿರಿಯರು ಬಾಯ್ದೆರೆಯದೆಯೇ ಇರುವುದಾಗಲೀ, ಅವರ ಇದಿರೆ ಅಭಿಮಾನವಿಶೇಷದಿಂದ ಹಾರಾಡುವುದಾಗಲೀ, ಸರಿಯಲ್ಲವೆಂದೂ, ಗುರುಜನರಿಂದ ಅನುಜ್ಞಾತರಾಗಿ, ಕೈಕೊಂಡ ಕಾರ್ಯವನ್ನು ಎಚ್ಚರಿಕೆಯಿಂದ ನೆರೆವೇರಿಸುವುದೂ, ಮಕ್ಕಳು ಮೊದಮೊದಲು ಎಡವಿ—ತೊಡರಿ ಬಿದ್ದೇಳದೆಯೇ ನಡೆಯನ್ನು ಕಲಿತುಕೊಳ್ಳುವುದು ಹೇಗೆ ಅಸಂಭವವೋ, ಹಾಗೆಯೇ ಅರಿಯೆವೆಂದು ಕುಳಿತಿರದೆ, ಅರಿಯಬೇಕೆಂಬ ಹುರುಪಿನಿಂದ ಪ್ರಯತ್ನಪರರಾದವರು, ಮೊದಮೊದಲು ತಮಗಾಗುವ ಪ್ರತಿಬಂಧಕವನ್ನು ಕುರಿತು ಭೀತರಾಗದೆ, ಮುಂಬರಿದು ಹೋಗಬೇಕಾದುದೇ ಸಹಜ ಗುಣವೆಂಬುದೂ ಬಲ್ಲವರ ವ್ಯಾಖ್ಯಾನವಾಗಿರುವುದು. ಆದುದರಿಂದ ಗುರುಜನರಿಂದ ಆಜ್ಞಾಪಿಸಲ್ಪಟ್ಟು, ಇಲ್ಲಿ ನಿಂತಿರುವ ನಾನು, ಇಂದಿನ ಭಾಷಣದಲ್ಲಿ ಪ್ರೌಢತೆಯೇನಾದರೂ ಮರ್ಯಾದಾತಿಕ್ರಮದ ಮಾತುಗಳನ್ನಾಡಿದರೂ ಅದನ್ನು ತಾವೆಲ್ಲರೂ ಆಗಾಗಲೇ ನಿದರ್ಶನಕ್ಕೆ ತಂದುಕೊಟ್ಟು ಎಚ್ಚರಿಸಬೇಕೆಂದು ಸೊದಲೇ ನಿಮ್ಮನ್ನು ಕೇಳಿಕೊಳ್ಳುತ್ತಿರುವೆನು.

ಪ್ರಿಯಭಗಿನಿಯರೇ !

ನಾಗರಿಕತೆಯು ಹೆಚ್ಚಿತು. ನಾಗರಿಕತೆಯು ಹೆಚ್ಚಿದಂತೆಲ್ಲಾ ನಮ್ಮ ವರ ಆಚಾರ-ವಿಚಾರಗಳ ಬದಲಾವಣೆಗಳೂ ಹೆಚ್ಚುತ್ತ ಬಂದಿರುವುವು. ಆಚಾರ-ವಿಚಾರಗಳ ಪರಿವರ್ತನೆಗೆ ತಕ್ಕಂತೆ, ನಾಗರಿಕತೆಯು ರೂಢ್ಯರ್ಥ ದಂತೆ, ನಮ್ಮವರ ಎಂದರೆ, ಸ್ತ್ರೀಜನಾಂಗದವರ ವಿದ್ಯಾಭ್ಯಾಸವೂ ಹರಡುತ್ತ ಬಂದಿರುವುದು. ಎಲ್ಲೆಲ್ಲಿ ನೋಡಿದರೂ ಸ್ತ್ರೀವಿದ್ಯಾಭ್ಯಾಸಕ್ಕೆ ಪ್ರೋತ್ಸಾಹ ವನ್ನು ಕೊಡುತ್ತಿರುವವರೂ. ಸ್ತ್ರೀಸಮಾಜದಲ್ಲಿ ನಾಗರಿಕತೆಯು ಗಂಧವನ್ನು ಪರಿಷ್ಕಾರವಾಗಿ ಹುಟ್ಟುತ್ತಿರುವವರೂ ಕಾಣುತ್ತಿರುವರು. ಈಗಾಗಲೇ ನೂರಾರು ಸಂಘಗಳೂ, ನಾನಿರಾರು ವಿದ್ಯಾಶಾಲೆಗಳೂ, ಎಷ್ಟೆಷ್ಟೋ ಲೇಖನಗಳೂ, ಸ್ತ್ರೀವಿದ್ಯಾಭ್ಯಾಸ-ಸ್ತ್ರೀಶಿಕ್ಷಣಗಳ ವಿಚಾರವಾಗಿ ಹುಟ್ಟಿದ್ದು ವುವು. ಎಲ್ಲಿ, ಯಾವ ಪಟ್ಟಣದಲ್ಲಿ ನೋಡಿದರೂ, ಸಂಘ-ಸಭೆ-ಸಮ್ಮೇಲನ ಪರಿಷತ್ತು ಮೊದಲಾದ ಕೂಟಗಳ ಅಬ್ಬರವೇ ಕಾಣುತ್ತಿರುವುವು. ಅದರ ಲ್ಲಿಯೂ, ಸ್ತ್ರೀಶಾಖೆಯು ಬೇರೆ ಏರ್ಪಟ್ಟು, ದೇಶೋನ್ನತಿಗಾಗಿ ಒಹುವಾಗಿ ಹೊಡೆದಾಡುತ್ತಿರುವುದು ಮತ್ತೂ ವಿಶೇಷವಾಗಿದೆ. ಅದರೇನು ?— " ವೈದ್ಯರು ಹೆಚ್ಚಿರಷ್ಟೂ, ರೋಗಿಗಳೂ ಹೆಚ್ಚುವರು. ವೈದ್ಯಾಲಯವು ವಿಸ್ತಾರವಾದಷ್ಟೂ, ರೋಗಗಳೂ ಹಲವು ಬಗೆಯಾಗಿ ಕಾಡುವುವು. " ಎಂದಾಡುವ ಬಲ್ಲವರ ಬೆಲ್ಲದಂತಹ ನುಡಿಯು ಸುಳ್ಳಾಗುವುದಿಲ್ಲ. ವಿದ್ಯಾ ಶಾಲೆಗಳು ಹೆಚ್ಚಿದುವು. ವಿದ್ಯಾಬೋಧಕರೆಂಬವರೂ ಹೆಚ್ಚಿದರು. ಆದರೆ, ಅದರೊಡನೆಯೇ ನಮ್ಮವರಲ್ಲಿ ಅವಿಚಾರದ ಭಯಂಕರ ರೋಗವೊಂದು ಎಲ್ಲೆಲೆಯಲ್ಲಿಯೂ ಹರಡಿಕೊಳ್ಳುತ್ತಿರುವುದೇಕೆ? ಸ್ತ್ರೀವಿದ್ಯಾಭ್ಯಾಸವು ಹೆಚ್ಚಿ ದಷ್ಟೂ, ದೇಶಾಭ್ಯುದಯಕ್ಕೆ ದಾರಿಯಾಗುವುದೆಂದು ಹಾರಾಡುತ್ತಿರುವ ಆ ಪುರುಷವರ್ಗದವರ ಅಭಿಮಾನೋಕ್ತಿಗಳ ಫಲವೇನಾದುವು? ನಾಗರಿಕ ತೆಯು ಹೆಚ್ಚುತ್ತಿರುವ ಈಕಾಲದಲ್ಲಿಯೂ ಹೀಗೆ ಜನರು ನರಳುತ್ತಿರುವ ರೇಕೆ?' ಎಂದೀ ಬಗೆಯಾಗಿ ಆಕ್ಷೇಪಗಳುಂಟಾಗುವುದೂ ಸಹಜವೇ! ಆದರೆ, ವಿದ್ಯಾಶಾಲೆಯು ಹೆಚ್ಚಿದ್ದರೂ ಜನರು ಅಕ್ಷರಶತ್ರುಗಳಾಗಿರುವರೆಂ ಬುದು ನನ್ನ ಅಭಿಪ್ರಾಯವಲ್ಲ. ವಿದ್ಯಾಶಾಲೆಯು ಮತ್ತು ಬೋಧಕರ ಸಂಖ್ಯೆಯು ಹೆಚ್ಚ ಕೂಡದೆಂದೂ ನಾನು ಹೇಳಲಿಲ್ಲ. ಸ್ತ್ರೀವಿದ್ಯಾಭ್ಯಾಸ

ವನ್ನು ನಿಷೇಧಿಸಬೇಕೆಂಬುದೂ ನನ್ನ ಉದ್ದೇಶವಾಗಿಲ್ಲ. ಮತ್ತೆ ಅಕ್ಷರ ಜ್ಞಾನವಿಲ್ಲದಮಾತ್ರದಿಂದಲೇ ನಮ್ಮೀ ಜನಾಂಗವು ಅವಿದ್ಯಾವತಿಯರಾಗಿರು ವರೆಂಬುದನ್ನಾಗಲೀ, ಅಂತಹರಿಂದಲೇ, ದೇಶವು ಹೀನಸ್ಥಿತಿಗೆ ಒಂದಿರುವು ದೆಂಬುದನ್ನಾಗಲೀ ನಾನು ನಂಬುವುದಿಲ್ಲ. ಎಂದರೆ, ಈಗಾಗಿರುವ ದೇಶ ಕ್ಷೋಭೆಗೆ ನಮ್ಮ ಸ್ತ್ರೀಜನಾಂಗವೇ ಮೂಲವೆಂದು ಹೇಳುವುದೂ ನನಗೆ ಅಷ್ಟಾಗಿ ಸಮ್ಮತವಿರುವುದಿಲ್ಲ. ಇದಕ್ಕೆ ನಮ್ಮ ದೇಶಮಾತೆಯ ದುರದೃಷ್ಟವೇ ಹೇತುವೋ, ಇಲ್ಲವೆ, ನಮ್ಮೀ ಸ್ತ್ರೀಜನಾಂಗದ ದೌರ್ಜನ್ಯವೇ ಕಾರಣವೋ, ಅಲ್ಲದಿದ್ದರೆ, ನಮ್ಮ ಪುರುಷ ಬಂಧುಗಳ ವಿಚಾರಶಕ್ತ್ಯಲ್ಪತೆಯೇ ಮೂಲವೋ, ಹೇಗೂ ಇದರ ಫಲವು ಅವರ್ಣನೀಯವಾಗಿ ತಿರುಗಿದೆ.

ನನ್ನ ಪ್ರಿಯಭಗಿನಿಯರೇ!

ಮೇಲೆ ಹೇಳಿರುವ ವಿಚಾರದಿಂದ ನೀವು ಕೋಪಿಸುವುದಾದರೆ, ಇನ್ನು ಮುಂದಿರುವ ನಿಮರ್ಶೆಯನ್ನು ಕೇಳಿ ತಿಳಿವುದು ಹೇಗೆ? ಕೋಪವನ್ನು ಮಾತ್ರ ದೂರದಲ್ಲಿ ಕಟ್ಟಿಟ್ಟು, ಈ ಸ್ಥಳವು ನಮ್ಮ ಸಾರಾಸಾರ ವಿಚಾರಕ್ಕೆ ಮುಖ್ಯಸ್ಥಾನವೆಂದು ತಿಳಿದು, ಆದ್ಯಂತವಾಗಿ ಸಂಪೂರ್ಣಶ್ರದ್ಧೆಯಿಂದ ವಿಷ ಯವನ್ನು ಸಂಗ್ರಹಿಸಿ, ಮುಂದಿನ ನಮ್ಮ ಕರ್ತವ್ಯವನ್ನು ನಿರ್ಧರಿಸಿಕೊಳ್ಳು ವುದನ್ನು ಮಾತ್ರ ನಿರಾಕರಿಸಬಾರದೆಂದು ಕೋರುವೆನು. ಏಕೆಂದರೆ, ಈ ನಮ್ಮ ದೇಶಮಾತೆಯ ಅಂತಸ್ತಾಪವನ್ನು ಹೋಗಲಾಡಿಸುವ ಕೆಲಸವು ನಮ್ಮ ಮೇಲೆಯೇ ಬಿದ್ದ ಹೊರೆಯಾಗಿರುವುದರಿಂದ, ನಮ್ಮವರಲ್ಲಿ ಕಾರ್ಯಾ ಕಾರ್ಯವಿವೇಚನೆಯು ಬಹು ಚೆನ್ನಾಗಿರಬೇಕು. ಹೇಗೆಂದರೆ,—

ಯಾವುದೇಬಂದು ದೇಶದ ಉನ್ನತಿಗಾಗಲೀ ಅವನತಿಗಾಗಲೀ ಅಲ್ಲಿಯ ಸ್ತ್ರೀಜನಾಂಗದ ಐಕಮತ್ಯವೂ, ಅದನ್ನೆಲ್ಲ ಅನುಸರಿಸಿರುವ ಪ್ರೇಮ, ಧರ್ಮಶ್ರದ್ಧೆ, ಭೂತದಯೆ, ನಿರಂತರೋದ್ಯಮ ಶೀಲತೆಗಳೇ ಮುಖ್ಯವಾಗಿ ರುವುವೆಂಬುದನ್ನು ನಾವು ಭದ್ರವಾಗಿಡಬೇಕಾಗಿರುತ್ತದೆ.

ಐಕಮತ್ಯವೆಂಬುದು ಈಗಿನ ನಮ್ಮ ಸ್ತ್ರೀಯರಲ್ಲಿ ಎಷ್ಟುಮಟ್ಟಿಗೆ ಇರ ಬಹುದೆಂಬುದನ್ನು ವಿಚಾರಮಾಡಿದರೆ, ಅದು ಎಲ್ಲಿಯೂ ಹೇಗೂ ಸ್ಪಷ್ಟ ವಾಗಿ ಕಾಣುವುದೇ ಇಲ್ಲ. ಹಾಗಾದುದೇಕೆ? ಒಡವರನ್ನು ಹಣಗಾರರೂ ಬಲಹೀನರನ್ನು ಬಲ್ಲಿದರೂ, ಅಂಗಹೀನರನ್ನು ಸರ್ವಾಂಗಪರಿವೃಷ್ಟರೂ,

ದೀನಾನಾಥರನ್ನು ಧನಮದಾಂಧರೂ, ಹೀಗೆ ತಮಗೆ ಕಡಿಮೆಯಾಗಿರುವವರನ್ನು ತಮ್ಮ ಹೆಚ್ಚಿಗೆಯಿಂದ ಹೀಯಾಳಿಸಿ, ಹುಚ್ಚಾಡಿಸುತ್ತಿರುವರದೇಕೆ? ಇದೇ ಪದ್ಧತಿಯೇ ನಮಗೆ ಮೊದಲಿಂದಲೂ ನಡೆದುಬಂದಿರುವುದೇನು? ಅಥವಾ ನಮ್ಮ ಪೂರ್ವಜರು ಇಂತಹ ದುರಭಿಮಾನ–ಮಾತ್ಸರ್ಯ ಮತ್ತು ದ್ವೇಷಸಾಧನೆಗಳನ್ನೇ ಪರಮಪುರುಷಾರ್ಥ ವಿಚಾರಗಳೆಂದು ಭಾವಿಸುತ್ತಿದ್ದರೋ? ಇಲ್ಲ. ಇಂತಹ ದುರ್ವಿಚಾರವು ಆರ್ಯಕುಲಮಂಡನರಾದ ನಮ್ಮ ಪೂರ್ವಜರಲ್ಲಿ, ಎಂದೂ, ಹೇಗೂ ಕಂಡುಬರುತ್ತಿರಲಿಲ್ಲ. ಅವರ ಮನೋಧರ್ಮವು ಈ ಕಾಲದವರಂತೆ ಕ್ಷಣಿಕಭ್ರಾಂತಿಸುಖಕ್ಕೆ ಬೆರೆದು-ಜೀಗಿ, ಹಾಳಾಗುವಂತಿರಲಿಲ್ಲ. ಏಂದರೆ, ಅವರು ಮೂರ್ಖರಾಗಲೀ, ಅವಿದ್ಯಾವತಿಯರಾದ ಮೂಢ ವ್ಯಕ್ತಿಗಳಾಗಲೀ ಆಗಿರಲಿಲ್ಲ. ಹಾಗಿದ್ದರೂ ಆ ನಮ್ಮ ಪೂರ್ವಜರು, ದೀನಾನಾಥ ವರ್ಗವನ್ನು ಈಗಿನ ನಮ್ಮವರಂತೆ ನಿಷ್ಕರುಣೆಯಿಂದ ನಿಷ್ಕರ್ಕೀಡುಮಾಡಿ, ಅವರ ಕಷ್ಟ-ಕ್ಲೇಶಗಳನ್ನು ನೋಡಿ, ಇಷ್ಟಾದರೂ ಕನಿಕರವೆಂಬುದಿಲ್ಲದೆ ನಲಿದಾಡುವಂತಹ ಮೂರ್ಖರಾಗಿರಲಿಲ್ಲ. ಆ ನಮ್ಮ ಪರಮಪೂಜ್ಯರು, ಧರ್ಮಪ್ರಸಾರಕ್ಕೆ ನಾರೀಗಣವೇ ಆಧಾರಸ್ತಂಭವೆಂಬುದನ್ನು ಚೆನ್ನಾಗಿ ತಿಳಿದಿದ್ದುದರಿಂದ, ತಮ್ಮ ತಲೆಯ ಮೇಲೆ ಬಿದ್ದಿರುವ ದೊಡ್ಡ ಹೊರೆಯನ್ನು ಬಹು ಜಾಗರೂಕತೆಯಿಂದ ತೃಪ್ತಿಕರವಾಗಿ ನಿರ್ವಹಿಸುತ್ತಿದ್ದರು. ತಮ್ಮ ಪುರುಷವರ್ಗದವರಿಂದ ತಮ್ಮ ವಾಲಿಗೆ ಒಪ್ಪಿಸಲ್ಪಟ್ಟ ಧರ್ಮಕ್ರಿಯಾಕಲಾಪಗಳಲ್ಲಿ ಅವರು, ತಮ್ಮ ಪತಿರಾಜರು ನಿರಾತಂಕವಾಗಿ ನಿತ್ಯನೈಮಿತ್ತಿಕ ವೃತ್ತಿಯಲ್ಲಿ ನಿರತರಾಗಿರುವಂತೆ, ನಿರ್ವಂಚನೆಯಿಂದ ಅವರನ್ನು ಸೇವಿಸುತ್ತಲೂ, ತಮ್ಮ ಇತಿಕರ್ತವ್ಯವನ್ನು ಭದ್ರರೀತ್ಯಾ ನಡೆಯಿಸುತ್ತಲೂ ಇದ್ದರು. ಅವರ ·ಮನೋಯೋಗಶಕ್ತಿಯ ಪ್ರಭಾವದಿಂದಲೇ ಆ ಕಾಲದಲ್ಲಿ ಪುರುಷವರ್ಗವು ಸತೀವರ್ಗವನ್ನು ದೈವಿಕ ಪ್ರೇಮ ಗೌರವದಿಂದಲೂ, ಸಾಮರಸ್ಯ ಭಾವನೆಯಿಂದಲೂ ಸನ್ಮಾನಿಸುತ್ತಿದ್ದರು. ಅವರ ಮನೋದಾರ್ಢ್ಯಬಲದಿಂದಲೇ ಪುರುಷರು ಅವರಲ್ಲಿ ಕೇವಲ ಪೂಜ್ಯಭಾವನನ್ನಿಟ್ಟು, ತಮ್ಮ ಮನಸ್ಸನ್ನು ವಿಕಾರರೋಗಕ್ಕೆ ಬಲಿಕೊಡದೆ, ಕಾಯ–ಮನೋವಾಕ್ಕುಗಳಿಂದಲೂ ಪರಿಶುದ್ಧರಾಗಿಯೇ ಇರುತ್ತಿದ್ದರು. ಈ ಕಾಲದ ನಾಗರಿಕರೆಂಬವರಲ್ಲಿಯೂ ಹಾಗಿರುವುದೋ?

ಎಲ್ಲ? ಅವರ ಪಾದಧೂಳಿಯನ್ನಾದರೂ ನಾವು ಧಾರಣಮಾಡುವ ಶ್ವರ ಅರ್ಹತೆಯುಳ್ಳವರೆಂದೋ? ಇಲ್ಲ. ಅದಕ್ಕೆ ಕೂಡ ನಮಗೆ ಅರ್ಹತೆ ಯಿರುವುದಿಲ್ಲ.

ಏಕೆಂದರೆ, ಈಗ ನೋಡಿರಿ, ಸೋದರಿಯರೇ !

ಶವವುರದ ವಿಚಾರವೊಂದನ್ನೇ ಈಗ ನಿಮ್ಮ ನಿದರ್ಶನಕ್ಕೆ ತಂದು ಮುಂದಿಟ್ಟರೆ, ನೀವೇ ತತ್ವಾರ್ಥವನ್ನು ನಿರ್ಧರಿಸಕೊಳ್ಳಬಲ್ಲೆರಲ್ಲವೇ? ಅಗಲಿ. ಇಲ್ಲಿರುವ ನಮ್ಮ ಜನಾಂಗದಲ್ಲ, ಹಲವು ಪಂಗಡಗಳೂ—ಹಲವು ಬಗೆಯ ಭಿನ್ನ ಭಿನ್ನ ಪದ್ಧತಿಗಳೂ—ಏರ್ಪಟ್ಟಿರುವುದೂ, ಅಂತದರಿಂದ ಒಬ್ಬರಲ್ಲಿ ಮತೆರ್ಟ್ಟಿಬ್ಬರು ಸಹಜಭಾವನೆಯಿಂದ ಕಲತು, ಏಕಮತ್ಯವನ್ನು ವೃದ್ಧಿ ಪಡಿಸಲು ಅತಂಕವಾಗಿರುವುದೂ ನಿಮಗೆ ತಿಳಿದೇ ಇರುವುದು. ಹೇಗೆನ್ನುವಿರೊ:—ಒಂದುಕಡೆ ನೋಡಿದರೆ, ಪಾಶ್ಚಿಥಕಲಾಶಾಲೆಯಲ್ಲ ವ್ಯಾಸಂಗಿಸಿ, ವಿಜ್ಞಾನಾಗಮವರ್ಗ ಪರೀಕ್ಷೆಗಳಲ್ಲಿ ತೇರ್ಗಡೆ ಹೊಂದಿದ ವಿದ್ಯಾವತಿಯರೇ ತಾವೆಂದು ಹೆಸ್ಮೆಗೊಂಡು, ತಮ್ಮ ಗುರುಹಿರಿಯರನ್ನೂ ತಮ್ಮ ಪತಿ ಮತ್ತು ಪುತ್ರರನ್ನೂ ನಿರ್ಲಕ್ಷ್ಯದಿಂದ ಜರಿವಾಡುತ್ತಿರುವುದೂ, ಆ ತಮ್ಮ ವಿದ್ಯಾಲಾಭದ ಮದಾಂಧತೆಯಿಂದ ಉಚ್ಛೃಂಖಲವೃತ್ತಿಯಲ್ಲಿ ನಿರತರಾಗಿ, ತಮ್ಮ ಧರ್ಮ-ಧ್ಯೇಯ-ಕರ್ತವ್ಯವಿಚಾರವೇನೆಂಬುದನ್ನು ಒಮ್ಮೆಯಾದರೂ ಆಲೋಚಿಸದೆ ನಡೆಯುತ್ತಿರುವುದೂ, ಮತ್ತು ತಮ್ಮ ವಿದ್ಯಾಮದದಿಂದ ಇತರ ತಮ್ಮ ಸೋದರೀ ವರ್ಗದವರನ್ನೂ—ಎಂದರೆ, ತಮ್ಮಂತೆ ವಿದ್ಯಾವ್ಯಾಸಂಗ ಮಾಡದವರನ್ನೂ—ಅಕ್ಷರಶತ್ರುಗಳಾಗಿರುವ ಹಳ್ಳಿಗಾಡಿನವರನ್ನೂ—ಕನಿಕ್ಕೂ ಕನಿಕರವೂಗಿ ಭಾವಿಸಿ, ಅವರನ್ನು ಪ್ರತ್ಯಕ್ಷ ಪರೋಕ್ಷದಲ್ಲಿಯೂ ನಾನಾಬಗೆಯ ದುರ್ಭಾಷೆಯಿಂದ ಭಂಗಿಸಿ, ಅಂತವರು ತಮ್ಮಂತವರ ಉಪಚಾರಕ್ಕಾಗಿಯೇ ಭಗವಂತನಿಂದ ನಿಯಮಿತರಾಗಿರುವರೆಂದು ಹೇಳುತ್ತಿರುವುದೂ ನಾಗರಿಕತೆಗೆ ಮುಖ್ಯಾಂಗವೆಂದು ನಂಬಿ, ಮರುಳಾಟವಾಡುತ್ತಿರುವವರು ಕಾಣುತ್ತಿರುವರು. ಇತ್ತ, ಇನ್ನೊಂದು ಕಡೆಯಲ್ಲಿ ನೋಡಿದರೆ, ಬಾಹ್ಯ ಪ್ರಾಪಂಚಿಕ ತತ್ವಗಳನ್ನು ಇಷ್ಟಾದರೂ ತಿಳಿಯಲಾರದ ಅಕ್ಷರಶತ್ರುಗಳು ಇದೇ ತಮ್ಮ ಪೂರ್ವಾಚಾರವೆಂದೂ—ಇದೇ ತಮ್ಮ ಮತಧರ್ಮಬೋಧೆಯೆಂದೂ—ನಂಬಿ, ಮೂಢಭಕ್ತಿಯಿಂದ ಕೇವಲ ಶಾರೀರಕ ಕ್ಲೇಶಗಳನ್ನು ಹೆಚ್ಚಿಸುವ ವ್ರತ-ನಿಯಮ-

ಉಪವಾಸ-ಜಾಗರಾದಿಗಳನ್ನು ಹಿಡಿದು, ತಮ್ಮ ಪುರುಷವರ್ಗದವರ ಮನಸ್ಸಿಗೂ, ಮಕ್ಕಳ ಮುಂದಿನ ಪುರೋವೃದ್ಧಿಗೂ, ಯಾವುದೇ ಒಗೆಯ ಪ್ರೋತ್ಸಾಹವನ್ನೂ ಕೊಡಲು ಅಶಕ್ತರಾಗಿ, ನಾನಾಒಗೆಯ ರೋಗ—ನ್ಯಾಕುಲ ಚಿಂತೆಗಳಿಗೆ ಪಕ್ಕಾಗಿ, ಅಕಾಲದಲ್ಲಿ ತಮ್ಮನ್ನು ನಂಬಿದವರೆಲ್ಲರನ್ನೂ ಬಿಟ್ಟು, ವೈತ್ಯಮುಖದಲ್ಲಿ ಬಿದ್ದು ಹೋಗಿರುವವರೂ ಇಲ್ಲವೆ, ನಿಷ್ಪ್ರಯೋಜಕರೆನ್ನಿಸುವಂತೆ ದೀರ್ಘರೋಗಿಗಳಾಗಿ ನರಳುತ್ತಿರುವವರೂ ಕಾಣುತ್ತಿರುವರು. ಹೀಗಾಗಿರುವುದರಿಂದ ಐಕಮತ್ಯವು ನಮ್ಮ ಸ್ತ್ರೀ ಜನಾಂಗವನ್ನೇ ಬಿಟ್ಟು ಮಾಯವಾಗಿರುವುದು. ಅದುದರಿಂದ—"ನಮಗೆ ಯಾವ ಮಾರ್ಗವು ಶ್ರೇಯಸ್ಕರವಾಗಿರಬೇಕು? ನಾಗರಿಕರಾರು? ನಾಗರಿಕತೆಯು ಗಂಧವೆಂಬುದು ಎಲ್ಲಿ, ಹೇಗೆ, ತೋರುವುದು? ನಮ್ಮ ದೇಶವು ಉತ್ತಮಸ್ಥಿತಿಗೆ ಬರಲು ನಾವು ಮಾಡಬೇಕಾಗಿರುವುದೇನು?" ಎಂಬಿವನ್ನು ಪರ್ಯಾಲೋಚಿಸಿ, ಅದರಂತೆ ನಡೆವುದೇ ಈ ನಮ್ಮ ಸಮ್ಮೇಲನದ ಉದ್ದೇಶವು.

ಸೋದರಿಯರೇ!

ನಮ್ಮ ಭಾವೀಸಂಪತ್ತಿಗೆ ಆಕರವಾದ ಮಾರ್ಗವೆಂದರೆ,—ನಾಗರಿಕತೆಯೆಂದರೆ,—ಮತ್ತಾವುದೂ ಅಲ್ಲ. ನಮ್ಮ ಮಾನಸಿಕ ಮತ್ತು ಶಾರೀರಕ ಸ್ಥಿತಿಗಳು ಮೊದಲು, ಉತ್ತಮ ಕ್ರಮದಿಂದ ಸುಧಾರಿಸಲ್ಪಟ್ಟು, ಹಾಗೆ ಸುಧಾರಿಸಿದ ಮನಸ್ಸಿಂದ ನಮ್ಮಲ್ಲಿ ಸದಸದ್ವಿವೇಕವು ಬರುಬರುತ್ತ ಬಲವಾಗುವಂತಿದ್ದು, ಅದರ ಆಧಾರದಿಂದ ನಾವು ನಮ್ಮ ಆರ್ಯರಮಣಿಯರ ಉತ್ಕೃಷ್ಟಲಕ್ಷಣವನ್ನು ಅನುಕರಿಸಿ, ನಮ್ಮ ಸದ್ವರ್ತನೆ-ಸಮಾಲೋಚನೆ-ಕಾಲೋಚಿತ ಸೂಚನೆಗಳಿಂದ ನಮ್ಮನ್ನು ಹೆತ್ತವರಿಗೂ, ನಮಗೆ ಜ್ಞಾನಮಾರ್ಗವನ್ನು ಬೆಳಗುವಂತೆ ಮಾಡಿದ ಗುರುಜನರಿಗೂ, ನಮ್ಮ ಸಮಸ್ತ ಸುಖಸಂಗತಿಗೂ ಸಾಕಾರ ಬ್ರಹ್ಮಸ್ವರೂಪರಾಗಿರುವ ಪತಿರಾಜರಿಗೂ, ಆನಂದ—ಸಮಾಧಾನ—ಅರ್ಥಸಿದ್ಧಿಗಳನ್ನುಂಟುಮಾಡುವ ಮತ್ತು ಮುಂದಿನ ನಮ್ಮ ಬಾಲಕರನ್ನು, ದೇಶಸೇವಕರೂ ದೇಶಪಾಲಕರೂ ಆಗುವಂತಹ ಸುಶಿಕ್ಷಣವನ್ನು ಕೊಡಲು ದಕ್ಷರೆನ್ನಿಸುವ ಮಾರ್ಗವೇ ನಮಗೆ ಶ್ರೇಯಸ್ಕರವಾಗಿರುವ ಮಾರ್ಗವು. ಯಾವ ವೃತ್ತಿಯನ್ನು ಹಿಡಿದರೆ ನಮ್ಮ ಸ್ವರೂಪ-ಕರ್ತವ್ಯಗಳಿಗೆ ಹಾನಿತಟ್ಟುವುದೋ,

ಅಂತಹ ವೃತ್ತಿಯನ್ನು ತಾವೂ ಹಿಡಿಯದೆ, ತಮ್ಮ ಸಂಗಡಿಗರನ್ನೂ ಅದರಲ್ಲಿ ಹೋಗಗೊಡದೆ, ಏಕ್ಷತ್ತು-ಎಚ್ಚರಿಸುತ್ತಿರುವುದೇ ನಾಗರಿಕರ ಲಕ್ಷಣವಲ್ಲದೆ, ಕೇವಲ ಪರಾನುಕರಣ-ಪರಾಧೀನ ಮಂತ್ರದಿಂದ ಮುಗ್ಧರಾಗಿ ಅನ್ಯಸಂಸ್ಕಾರಾನುಸಂಧಾನ ಬುದ್ಧಿಯಿಂದ ಸ್ವಧರ್ಮವನ್ನು ಬಿಟ್ಟು ವಾಮರ ಮನಸ್ಕರಂಜನಸಗಾಗಿ ನಲಿದಾಡುವ ನಾಟಕ ಸಂಘದವರಂತೆ ವೇಷಬದಲಾವಣೆ, ಶೃಂಗಾರ, ಆಡಂಬರಗಳೇ ಮೊದಲಾದ ವಿಲಾಸಗಳಲ್ಲಿ ಆಸಕ್ತರಾಗಿ, ಹಗಲಿ ಎಲ್ಲವನ್ನೆದೆ ಸುತ್ತುತ್ತಿರುವವರನ್ನು ನಾಗರಿಕರೆಂದಾಗಲೀ, ನಾಗರಿಕತೆಯ ಗಂಧವನ್ನು ಬಲ್ಲವರೆಂದಾಗಲೀ ಹೇಳುವಂತಿಲ್ಲ. ಮತ್ತೇನು ಹೇಳಲಿ?

ಸೋದರಿಯರೇ!

ಇಷ್ಟನ್ನು ಮಾತ್ರ ಹೇಳಬಲ್ಲೆನು. ನಮ್ಮ ನಡೆನುಡಿಗಳಲ್ಲಿ ಸೇರಿರ ಬಹುವಾದ ಮೌಢ್ಯಾಚಾರಗಳನ್ನು ನಾವು ಮೊದಲು ದೂರದಲ್ಲಿ ಕಟ್ಟಿಡ ಬೇಕು. ನಮ್ಮವರು ಒಬ್ಬರನ್ನು ಮತೆತ್ತಿಬ್ಬರು ದ್ವೇಷಿಸಿ ತಮ್ಮ ಸುಖಕ್ಕೆ ತಾವೇ ತಮ್ಮ ಕೈಯಿಂದಲೇ ಕಂಟಕಗಳನ್ನು ತಂದೊಡ್ಡುತ್ತಿರುವ ದುರಭಿಮಾನವನ್ನು ಬಿಟ್ಟುಬಿಡಬೇಕು. ನಮ್ಮ ಪುರುಷಬಾಂಧವರ ಆಲಸ್ಯ-ಅವಿಚಾರ-ಸ್ವಾರ್ಥಪರತೆಗಳಿಂದಲೇ ವಾತಾವರಣವನ್ನು ಸೇರಿಹೋಗುತ್ತಿರುವ ನಮ್ಮ ಸ್ತ್ರೀಜಗತ್ತನ್ನು ನಾವು ನಮ್ಮ ಪೂರ್ವಜರ ಸದುಪದೇಶಬಲದಿಂದ ಪುನರುತ್ಥಾಪನಮಾಡಲು ಮತ್ತೈಕ್ಯದಿಂದ ದೃಢನಿಶ್ಚಿತರಾಗಿ ಪ್ರಯತ್ನವನ್ನು ಕೈಕೊಳ್ಳಬೇಕು. ನಮ್ಮ ಮಕ್ಕಳಿಗೆ ನಾವು ಮೊದಲು ಕೊಡಬೇಕಾದ ಬಾಲ್ಯಶಿಕ್ಷಣದಲ್ಲಿ ಅದಿಯಿಂದಲೂ ಅವರ ಪ್ರತಿಯೊಂದು ರಕ್ತನಾಳದಲ್ಲಿಯೂ, ಮಾತಾಪಿತೃಭಕ್ತಿಯೂ, ಸ್ವದೇಶಾಭಿಮಾನವೂ, ಧರ್ಮಶ್ರದ್ಧೆಯೂ, ದೇಶಭಾಷಾನುರಾಗವೂ ಚೆನ್ನಾಗಿ ಧ್ವನಿಸುವಂತೆ ಅವರನ್ನು ಸಮಯೋಚಿತವಾದ ರೀತಿ-ನೀತಿಗಳಿಂದ ಸುಶಿಕ್ಷಿತರನ್ನಾಗಿ ಮಾಡಬೇಕು. ಸುಶಿಕ್ಷೆಯಲ್ಲಿ ನಾವು ಸ್ವಲ್ಪವಾತ್ರ ಉದಾಸೀನರಾಗಿದ್ದರೂ, ಅವರು ಮುಂದೆ ಮುಂದಿಗಳಾಗುವುದಕ್ಕೆ ಕಷ್ಟವಾಗುವುದು. ಇದು ಚೆನ್ನಾಗಿ ತಿಳಿದಿರಲಿ. ಮತ್ತು ನಮ್ಮ ಸ್ತ್ರೀಶಿಕ್ಷಣವು ಯಾವ ಬಗೆಯಾಗಿ ಸುಧಾರಿಸಲ್ಪಡಬೇಕೆಂದರೆ, ಬಾಲ್ಯಶಿಕ್ಷಣಕ್ಕಾಗಿ, ಸೊಕ್ಕಿನ ಮಕ್ಕಳಲ್ಲಿ ನಮ್ಮ ಹುಡುಗಿಯರನ್ನು ಒಪ್ಪಿಸುವುದನ್ನು ತಪ್ಪಿಸಬೇಕು. ಅಂತಹರಿಂದಾಗಲೀ, ಕೇವಲ ವಿಡಂಬನದಲ್ಲಿ ನಿಪುಣೆಯ

ರಾಗಿರುವ ಈಕಾಲದ ಪ್ರೌಢಕಲಾಭಿಜ್ಞೆಯರಾದ ಸ್ತ್ರೀಜನರಿಂದಲಾಗಲೀ, ಶಿಕ್ಷಿತರಾಗುವ ಬಾಲಿಕಾನಿವಹವು, ಮುಂದೆ ತಮ್ಮ ಸತೀಕರ್ತವ್ಯವನ್ನೂ, ಗೃಹಿಣೀಧರ್ಮವನ್ನೂ ತೃಪ್ತಿಕರವಾಗಿ ಕಾಪಾಡಿಕೊಳ್ಳಲ್ಲವರಾಗುವರೆಂ ಬುದು ಸಂಬಲವಾಗದಮಾತು. ಅಂತಹ ಬಾಲಿಕಾನಿವಹಕ್ಕೆ ಕೊಡಬೇಕಾದ ಶಿಕ್ಷಣವಿದಲ್ಲಿ, ಮೊದಲು ತಾಯಿತಂದೆಗಳೂ ಗುರುಜನರೂ ತಮ್ಮ ನಿರ್ದುಷ್ಟ ಶೀಲಸೃತ್ತಗಳನ್ನೇ ಮಾದರಿಯಾಗಿಟ್ಟು, ಅಂತದರಿಂದ ಬಾಲೆಯರ ಮನಸ್ಸು ತಮ್ಮಲ್ಲಿ ಸಹಜವಾದ ಪ್ರೇಮಲಭಾವವನ್ನು ಹೊಂದುವಂತೆ ನಯನೀತಿಯನ್ನು ಹೇಳುವುದೂ, ಅವರಲ್ಲಿ ಸಾರಾಸಾರ ವಿಚಾರಜ್ಞಾನವಂಕುರಿಸುವಂತೆ ಮಾಡಲು ನಮ್ಮ ಪೂರ್ವಜರ ಅದ್ಭುತಚರಿತೆಗಳನ್ನೇ ಮುಂದಿಟ್ಟು, ಸುವಿರಕ್ತ ಮಾರ್ಗದಲ್ಲೆಯೇ ಅವರ ಬುದ್ಧಿಯನ್ನು ವಿನಿಯೋಗಿಸುವಂತೆ ಮಾಡಬೇಕಾದುದೂ ಮುಖ್ಯವು. ಹೀಗೆ ಸುಧಾರಿಸಲ್ಪಟ್ಟ ಬಾಲಿಕಾನಿವಹವೇ ನಮ್ಮ ಆರ್ಯ ಕುಲಮಂಡನರಾದ ನಾರಿ ಗಣದಲ್ಲಿ ತಾವೂ ಪರಿಶೋಭಿಸುವಂತಹ ಪೂಜ್ಯ ಗೃಹಿಣಿಯರಾಗುವರಲ್ಲದೆ ಆದಿಯಿಂದಲೂ ನಮ್ಮ ಲಲ್ಲೆ--ಚಲ್ಲಾಟ--ಸೊಗಸು--ಸಿಂಗರ--ವೈಯ್ಯಾರಗಳಿಂದ ಬೆಳೆದು, ಬಲಿತ ಕುರಿಗಳಂತೆ ಕೊಬ್ಬಿದ ಹುಡುಗಿಯರು, ನಮ್ಮ ಸ್ತ್ರೀಪಗಣದ ಕೀರ್ತಿಪ್ರಕಾಶಕ್ಕಾಗಲೀ, ಸತೀಧರ್ಮ ಸಂರಕ್ಷಣೆಗಾಗಲೀ, ಶ್ರಮಸಾಧ್ಯವಾದ ಬಲವತ್ಕಾರ್ಯಗಳಿಗಾಗಲೀ ಸಹಕಾರಿಗಳಾಗುವರೆಂದು ತಿಳಿಯಬೇಡಿರಿ. ಏಕೆಂದರೆ, ಅವರು ಮುಂದೆ ತಮ್ಮ ಪತಿರಾಜರ ಆಯಕ್ಕೆ ತಕ್ಕಂತೆ, ನ್ಯಾಯನೀತಿಯಿಂದ ಗೃಹಕಾರ್ಯನಿರ್ವಾಹವನ್ನು ಮಾಡಲು ಉಚಿತಾನುಚಿತ ಪ್ರಜ್ಞೆಯೂ, ಆಯ ವ್ಯಯಗಳ ಲೆಕ್ಕಗಳೂ, ಆರೋಗ್ಯನಿಧಾನಗಳೂ, ತಕ್ಕಷ್ಟು ನಮ್ಮವರಿಗೆ ತಿಳಿದಿರಬೇಕು. ಹಾಗಿಲ್ಲದೆ ಹೋದರೆ, ತಮ್ಮ ದುಂದುವೆಚ್ಚದಿಂದ ಪತಿಯನ್ನು ಮೂರೇ ದಿನಗಳಲ್ಲಿ ಸಾಲಗಾರನ ಮಗನನ್ನಾಗಿ ಮಾಡಿ ಕೆಡಿಸುವರು. ಗೃಹಚ್ಛಿದ್ರಗಳಿಗೆ ಕಾರಣರಾಗಿ ಆತ್ಮಸಮಾಧಾನದ ಮಾತನ್ನಾದರೂ ಎತ್ತದಂತೆ ಮಾಡುವರು. ದುರಾಹಾರ, ದುರ್ವಿಷಯಚಿಂತನೆಗಳಿಂದ ದೇಹಾರೋಗ್ಯವನ್ನೇ ಹಾಳುಮಾಡುವರು. ಹೀಗಾಗುವುದರಿಂದ ನವ್ಯ ಬಾಲಿಕೆಯರನ್ನು ದುರಾಶೆಗೆ ಮಾತ್ರ ಎಂದೆಂದಿಗೂ ನಾವು ವಶಪಡಿಸಬಾರದು. ಏಕೆಂದರೆ, ಇದಕ್ಕೆ ಇಲ್ಲಿಯೇ ನೋಡಿರಿ! ಅಭರಣಗಳ ಹುಚ್ಚನ್ನು ಬಿಟ್ಟು, ಪರಿಮಿತಾಲಂಕಾರಗಳಿಂದ ಮಾತ್ರವೇ

ಕೂಡಿರುವ ನೀವು ಯಾವ ಭಯ-ಕಾತರ-ಶಂಕೆ-ಆತಂಕಗಳಿಗೂ ಒಳಗಾಗದೆ ಧೈರ್ಯವಾಗಿರುವಿರಲ್ಲವೇ? ಇದಕ್ಕೂ ಹೆಚ್ಚಿನ ಸಮಾಧಾನವಿನ್ನಾವುದು!

ಮತ್ತೊಂದು ವಿಚಾರ—

ದೇಶಭಕ್ತಿಯೆಂದರೆ, ಮಾತಾಪಿತೃಭಕ್ತಿಯೆಂದರೆ, ಸೋದರವಾತ್ಸಲ್ಯವೆಂದರೆ, ಬರಿಯ ವಾಗಾಡಂಬರದಿಂದಲೇ ಬರುವಂತಿಲ್ಲ. ಅದು ಮಾನವನ ಅಂತರಂಗದಿಂದಲೇ ಹುಟ್ಟಿ, ಅಲ್ಲಿಯೇ ನೆಲೆಗೊಂಡು ಸುತ್ತಲೂ ನಡೆಸೋಡುತ್ತಿರುವಂತಹವಾಗಿರಬೇಕು. ಹೀಗಿದ್ದವರೇ ತಮ್ಮ ದೇಶೋನ್ನತಿಗೆ, ತಮ್ಮ ಜನ್ಮದಾತರ ಭವಿತವ್ಯತೆಗೆ, ತಮ್ಮ ಒಡಹುಟ್ಟಿದವರ ಉತ್ತರೋತ್ತರಾಭಿವೃದ್ಧಿಗೆ, ಬೇಕಾದರೆ ತಮ್ಮ ದೇಹವನ್ನು ಗಣಿಸದೆ, ಪ್ರಾಣವನ್ನೇ ಬಿಟ್ಟು ಬಿಡಲು ಸಿದ್ಧರಾಗುವರು. ಇದಕ್ಕೆ ನಮಗೆ ದೃಷ್ಟಾಂತಕ್ಕೆಂದರೆ, ನಮ್ಮ ಚಿರಸ್ಮರಣೀಯಳಾದ ಸ್ವರ್ಗವಾಸಿನೀ ಸ್ನೇಹಲತಾದೇವಿಯನ್ನು ಸ್ಮರಿಸಿಕೊಳ್ಳಿರಿ. ಆ ದೇವಿಯು ತನ್ನ ಅತ್ಯಲ್ಪವಯಸ್ಸಿನಲ್ಲಿಯೂ, ಎಷ್ಟರ ಮಹತ್ತರವಾದ ಪಿತೃಭಕ್ತಿಯನ್ನೂ, ಮಾತೃಪ್ರೇಮಗೌರವವನ್ನೂ, ಭ್ರಾತೃಸ್ನೇಹವನ್ನೂ ವ್ಯಕ್ತಗೊಳಿಸಿಟ್ಟು, ಧನದಾಹಗ್ರಸ್ತರಾದ ಈ ಕಾಲದ ನಾಗರಿಕರೆಂಬವರಿಗೆ ತಕ್ಕ ಪ್ರಾಯಶ್ಚಿತ್ತದ ಮಾರ್ಗವನ್ನು ತೋರಿಸಿಕೊಟ್ಟು, ಎಷ್ಟು ಧೈರ್ಯ-ಸ್ಥೈರ್ಯಗಳಿಂದ ಆತ್ಮವಿಸರ್ಜನ ಮಾಡಿಕೊಂಡಿರುವಳು! ಇನ್ನೂ ಅಂತಹ ಪವಿತ್ರ ಮೂರ್ತಿಗಳು ಈ ಜಗತ್ತಿನಲ್ಲಿರುವುವೇ? ಹಾಗಿದ್ದರೆ-ಎಲ್ಲಿ, ಈ ನಮ್ಮವರ ದುರ್ವಿಚಾರಾಗ್ನಿಗೆ ಜ್ಞಾನಾಮೃತವರ್ಷವನ್ನು ಸುರಿಸಿ, ಶಾಂತತೆಯನ್ನು ಸರ್ವತ್ರ ಸ್ಥಾಪನ ಮಾಡಲಿ! ನಮ್ಮ ಬಾಲೆಯರಲ್ಲಿ ಪ್ರತಿಯೊಬ್ಬರೂ ಒಬ್ಬೊಬ್ಬ ಸ್ನೇಹಲತೆಯಾಗಿ ಪ್ರಕಾಶಿಸಿ, ದೇಶಮಾತೆಯನ್ನು ಮುತ್ತಿರುವ ದಾರಿದ್ರ್ಯ-ದ್ರೋಹ-ಆತ್ಮಹತ್ಯ-ನರಹತ್ಯಗಳೇ ಮೊದಲಾದ ಭೀಕರರೋಗಗಳ ಹುಟ್ಟಡಗಿಸಿ, ಆ ನಮ್ಮ ಪ್ರಿಯಮಾತೆಯ ಪೂರ್ವಸೌಂದರ್ಯವನ್ನು ಮತ್ತೆ ಉಂಟುಮಾಡಿ ಕೊಡಲಿ. ಅಷ್ಟು ಮಾಡಲಾರರೇ? ಅಯ್ಯೋ! ಇದೆಲ್ಲವೂ ನನ್ನ ಭ್ರಾಂತಿವಚನವು. ಸೋದರಿಯರೇ, ಮುಳಿಯದಿರಿ! ಸ್ನೇಹಲತೆಯನ್ನು ನೆನೆನೆನೆದು ನಮ್ಮ ಸ್ತ್ರೀನಿವಹವು ಕರ್ತವ್ಯಜಾಗ್ರತರಾಗುತ್ತಿರಲಿ. ಹಾಗಾಗದಿದ್ದರೆ ಪುರುಷವರ್ಗದವರು ಒಂದುವೇಳೆ ನಿದ್ರಾಜಡತೆಯಿಂದೆಚ್ಚೆತ್ತಿದ್ದರೂ, ಬಹುಕಾಲ ಹಾಗೆಯೇ ಇರಲಾರರು. ನಮ್ಮ ಜಡತೆಯಿಂಗುವ

ವರೆಗೂ ಅವರ ಏಳ್ಗೆಗೆ ದಾರಿಯಿಲ್ಲ. ಇನ್ನೇನು ಹೇಳಲಿ? ಇಷ್ಟುದೂರ ಹೇಳಿದುದರಿಂದ ನಿಮಗೆ ಬೇಸರವಾಗಿರಬೇಕಲ್ಲವೆ? ನಿಜ! ಮೊದಲನೆಯ ದಿನದಲ್ಲಿಯೇ ಇಷ್ಟು ಕಠಿಣವಾಗಿ ಹೇಳುವುದರಿಂದ ನಿಮಗೆ ಅಪ್ಯಾಯಿ ರುಚಿಸಿರಲಾರದು. ಆದರೆ, ನಾನು ಮಾಡುವುದಾದರೂ ಏನು?—

ನಾನು ಇಲ್ಲಿ, ಈವರೆಗೂ, ನಮ್ಮ ತಂದೆಯ ಅಜ್ಞಾಬಲದಿಂದಲೇ ಅಜ್ಞಾತವಾಸದಲ್ಲಿದ್ದೆನು. ಈಗಲೂ ಅವರ ನಿರೂಪದಂತೆಯೇ ಇಂದು ನಿಮ್ಮೆಲ್ಲರನ್ನೂ ಏಕಕಾಲದಲ್ಲಿ ಸೇರಿಸಿದೆನಂತಾದೆನು. ಮುಂದೆ ನನಗೆ ಇಂತಹ ಸುಸಂಧಿಯು ದೊರೆವುದು ಪ್ರಯಾಸವೆಂದೂ, ನಾನು ಏತ್ರಾಜ್ಞೆಯಂತೆ ಇನ್ನು ಸ್ವಲ್ಪದಿನಗಳಲ್ಲಿಯೇ ನಿಮ್ಮನ್ನು ಅಗಲಬೇಕಾಗಬಹುದೆಂದೂ ಭಾವಿಸಿ, ಇಂದು ಇಷ್ಟನ್ನು ವಿವರಿಸಿದೆನು. ಮುಂದೇನಾದರೂ ಕಲೆತು ಮಾತನಾಡುವ ಯೋಗವುಂಟಾದರೆ, ಉಳಿದ ವಿಚಾರಗಳೇನಿದ್ದರೂ ವಿವರಿಸಬಹುದೆಂದು ಸೂಚಿಸುವೆನು. ಮತ್ತೂ ನನ್ನ ನಿಮಿತ್ತದಿಂದ ಈ ಊರ ಮಹಾಜನರು, ಈ ನಮ್ಮ ಪರಮಪೂಜ್ಯರಾದ ಶ್ರೀಮಂತರಿಗೂ, ಅವರ ಸಹಚರರಾದವರಿಗೂ, ಉಂಟುಮಾಡಿದ ಕಠಿಣಶಾಸನವನ್ನು ಅತಿಕ್ರಮಿಸಿ,, ತಮ್ಮ ಕರ್ತವ್ಯಕರ್ಮವನ್ನು ಜಾಗ್ರತಸ್ಥಿತಿಗೆ ತಂದು, ಸಂಘಶಕ್ತಿಗೆ ನೂತನಕಾಂತಿಯನ್ನುಂಟುಮಾಡಿರುವ ನಮ್ಮ ಸನ್ಮಾನನೀಯ ಭ್ರಾತೃಗಳನೆಲ್ಲಾ ಅಭಿನಂದಿಸಿ, ನಿಮ್ಮ ಮೂಲಕವಾಗಿ ಅವರ ಅಭ್ಯುದಯವನ್ನು ಕೋರುವೆನು. ಮತ್ತೇನು ನನ್ನ ಕೋರಿಕೆ? ಇದೇ ನನ್ನ ನಿರಂತರದ ಪ್ರಾರ್ಥನೆ. ನಮ್ಮ ನಾರೀಗಣವು ತಮ್ಮ ಪುರುಷಪರ್ಗಕ್ಕೆ ಅಂತಸ್ಸತ್ವಸ್ವರೂಪಿಣಿಯರಾಗಿ ಗೌರವಿಸಲ್ಪಡುವಂತೆಯೂ, ನಮ್ಮ ಪುರುಷ ಬಂಧುಗಳು, ಸತ್ಪುತ್ರರತ್ನರೆನ್ನಿಸಿ, ದೇಶಸೇವೆಯಲ್ಲಿ ಕೃತಕಾರ್ಯರಾಗುವಂತೆಯೂ, ಆ ನಮ್ಮ ಸರ್ವಸಹಾಯೆಯೂ ಸಸ್ಯಶ್ಯಾಮಲೆಯೂ ಆದ ದೇಶಮಾತೆಯೇ ಅನುಗ್ರಹಿಸುತ್ತಿರಲಿ."

ನಂದಿನಿಯ ಈಕಡೆಯ ವಾಕ್ಯಗಳು ಮುಗಿಯುತ್ತಿದ್ದಾಗಲೇ, ಮೂಕರಂತೆ ಭ್ರಾಂತರಾಗಿ ಕುಳಿತಿದ್ದ ಸ್ತ್ರೀಯರೆಲ್ಲರೂ ಏಕಕಾಲದಲ್ಲಿ ಎದ್ದು ನಿಂತು ಉತ್ಸಾಹದಿಂದ— "ಧನ್ಯೆ! ನಂದಿನೀ-ನೀನೇ ಧನ್ಯೆ!! ನಿನ್ನ ಪ್ರತಿಯೊಂದು ವಾಕ್ಯವೂ ನಮ್ಮ ಮನಸ್ಸನ್ನು ಚೆನ್ನಾಗಿ ಮುಟ್ಟುವಂತೆ ಬೋಧಿಸಿದೆ. ನಿನ್ನ ಹಿತವಾದದಿಂದ ನಾವೆಲ್ಲರೂ ಸೂತ್ರಧಾರನಿಂದೆಳೆದಾಡಲ್ಪಡುವ ಬೊಂಬೆಗಳಂ

ತೆಯೇ ಆಗಿರುವೆವು. ನಿನ್ನಿಂದ ಈಗ ಉಪದೇಶಿಸಲ್ಪಟ್ಟ ದಾರಿಯೇ ನಮಗೆ ಶ್ರೇಯಸ್ಕರವೆಂಬುದನ್ನು ನಾವು ಬಲವಾಗಿ ನಂಬಿ, ಹಾಗೆಯೇ ಅಭ್ಯಸಿಸುವೆವು. ಅಷ್ಟೇ ಅಲ್ಲ; ದೈವಿಕ ಪ್ರೇಮಮಯಮೂರ್ತಿಯಾದ ನಿನ್ನ ದರ್ಶನ ಲಾಭವೂ, ನಿನ್ನ ಅಮೃತೋಪಮವಾದ ಉಪದೇಶವೂ ನಮಗೆ ಅಡಿಗಡಿಗೂ ಲಭಿಸುತ್ತಿರಬೇಕೆಂದು ಪ್ರತ್ಯಾಶಿಸುತ್ತಿರುವೆವು. ಇದಕ್ಕೆ ಆ ಭಗವಂತನೇ ಸಹಾಯಕನಾಗಿರಲಿ." ಎಂದು ಕೂಗಿ ಹೇಳಿದರು. ಸಾಲದುದಕ್ಕೆ, ಹೊರ ವಳಯದಲ್ಲಿದ್ದ ಪುರುಷವರ್ಗದವರು ಸಂಭ್ರಮದಿಂದ—"ಸಾಧು! ಭಗವತಿ! ಸಾಧು-ಸಾಧು!! ಲೋಕೋತ್ತರ ಗುಣಸಂಪನ್ನೆಯಾದ ನಂದಿನಿಯು ನಿನ್ನ ಮಗಳಾಗಿರಲು, ನಿನ್ನ ಪುಣ್ಯವೇ ಸಾಧು. ಅಲ್ಲದೆ, ಇಂತಹ ದೈವಿಕಮೂರ್ತಿಯ ಸಹವಾಸಲಾಭವನ್ನು ಹೊಂದುವ ಮಹಾತ್ಮನನ್ನು ಸೃಷ್ಟಿಸಿರುವೆಯಾದರೆ, ಮತ್ತೂ ಸಾಧುವಾದನಗಳು." ಎಂದೀ ಬಗೆಯಾಗಿ ಹಲವು ತರದಿಂದ ಕೂಗಿ ಹೇಳುತ್ತಿದ್ದರು.

ಈ ಗದ್ದಲದಲ್ಲಿ ಚಿತ್ರಕಲೆಯು ಮತ್ತೇನನ್ನೂ ಹೇಳಲಾರದೆ ಸಭಿಕರನ್ನು ವಂದಿಸಿ, ಫಲಪುಷ್ಪತಾಂಬೂಲಗಳಿಂದ ಸನ್ಮಾನಿಸಿ ಬೀಳ್ಕೊಟ್ಟಳು. ಪ್ರಜ್ಞಾಶಾಲಿಯಾದ ನಗ್ನೇಶರಾಯನ ಕಾರ್ಯದಕ್ಷತೆಯನ್ನು ತಿಳಿದಿರುವವರಿಗೆ ಮುಂದೆ ನಡೆದುದನ್ನು ನಾವಿಲ್ಲಿ ವಿವರಿಸಬೇಕಾದುದೇ ಇಲ್ಲವಷ್ಟೆ! ಸಂತೋಷ. ಅವರವರೇ ಅರಿತರಿಯುತ್ತ ಅರಿಯದುದನ್ನು ಹಿರಿಯರಿಂದ ಕೇಳಿ ತಿಳಿಯುತ್ತ ಏಳ್ಗೆಗೆ ಬರಬೇಕೆಂಬುದೇ ನಮ್ಮ ಮುಖ್ಯ ಸಂದೇಶವಾಗಿದೆ. (ಹಾಗಿರಲಿ.)

॥ ಶ್ರೀಃ ॥

ಚತುರ್ದಶ ಪರಿಚ್ಛೇದ.



(ಅಭಯಪ್ರದಾನ)

ನಂದಿನಿಯು ಭಾಷಣವಾದ ದಿನ ರಾತ್ರಿ, ಹತ್ತು ಗಂಟೆ ಹೊಡೆದು ಹೋಗಿದ್ದಿತು. ನಂದಿನಿಯು ಮಲಗುವ ಮನೆಯಲ್ಲಿ ಬಾಗಿಲನ್ನು ಭದ್ರ ಪಡಿಸಿ, ಹಾಸಿಗೆಯ ಮೇಲೆ ಕುಳಿತು, ಯಾವುದೋ ಪತ್ರವನ್ನು ಕೈಯಲ್ಲಿ ಹಿಡಿದು ನೋಡುತ್ತಿದ್ದಳು. ಅವಳ ಹಾಸಿಗೆಯ ಬಳಿಯಲ್ಲಿಯೇ, ಸ್ವರ್ಣ ಕುಮಾರಿಯೂ ಬೇರೇ ಹಾಸಿಗೆಯ ಮೇಲೆ ಮಲಗಿ ಗೊರಕೆಹೊಡೆಯುತ್ತಿದ್ದಳು. ನಂದಿನಿಯು ಹಿಡಿದಿದ್ದ ಪತ್ರವಾರದೋ ಏನೆಂದು ಬರೆಯಲ್ಪಟ್ಟಿದ್ದಿತೋ ಎಂಬ ಶಂಕೆಯು ನಮ್ಮ ವಾಚಕವರ್ಗವನ್ನು ಮುಟ್ಟಿರಬಹುದು! ಆದಾವುದೂ ಈಗಲೇ ತಿಳಿಯದಿದ್ದರೂ, ಅವಳ ಮುಖದಲ್ಲಿ ತೋರುತ್ತಿದ್ದ ಮರುಕವನ್ನು ನೋಡಿದ್ದರೆ, ಕೇವಲ ಆತ್ಮೀಯರ ಪತ್ರಲೇಖನವೆಂದೆ ತೋರುತ್ತಿದ್ದಿತು. ಆದುದರಿಂದ, ಅಂತದರ ಪ್ರತಿಬಿಂಬವನ್ನೇ ಇಲ್ಲಿ ವಾಚಕವರ್ಗದ ಮುಂದಿಡುವುದು ಸಹಜವಲ್ಲವೆ? ಇರಲಿ.

॥ ಪತ್ರ ॥

"ನಂದಿನಿ!

ಈಗಲಾದರೂ ಹೇಳು. ಏನುತ್ತರವನ್ನು ಕೊಡಬಲ್ಲೆ? ನಾವಾ ನಂದನು ಗೃಹಸ್ಥಾಶ್ರಮದಲ್ಲಿದ್ದು, ನಿನ್ನಿಷ್ಟದಂತೆ ದೇಶಸೇವೆಯಲ್ಲಿ ಕೃತಾರ್ಥನಾಗುವಂತೆ ಅನುಗ್ರಹಿಸುವೆಯೋ, ಇಲ್ಲದಿದ್ದರೆ ವಿರಕ್ತವೃತ್ತಿಯಿಂದ ದೇಶಿಗನಾಗಿ ಸುತ್ತಿ ಸುತ್ತಿ ಇಹಜನ್ಮವನ್ನು ಕೊನೆಗಾಣಿಸಿಕೊಳ್ಳಲೆಂದೇ ಜರಿದು ನೂಕುವೆಯೋ, ಏನು ಮಾಡುವೆ? ಹೇಳು! ಈವರೆಗೂ ನೋಡಿದೆನು; ನಿನ್ನಿಂದ ಸದುತ್ತರವು ದೊರೆಯಲಿಲ್ಲ. ನಿನ್ನ ಸೂಚನೆಯಂತೆಯೇ ನಾನು

ದಾಂಭಿಕವೃತ್ತಿಯನ್ನು ಬಿಟ್ಟು, ಅಚಲಚಂದ್ರನ ಪೂರ್ಣಾನುಯಾಯಿಯಾಗಿದ್ದರೂ, ನನ್ನನ್ನು ನೀನು ವಿಶ್ವಾಸಿಸುವಂತೆ ತೋರಲಿಲ್ಲ. ನಿನ್ನ ಪ್ರತಿಯೊಂದು ಮಾತಿನಲ್ಲಿಯೂ ನನ್ನ ನಿರೀಕ್ಷಾಭಂಗವೇ ಆಗುವಂತೆ ತೋರುವುದಾದರೂ, ಕೇವಲ ನಿನ್ನ ಅಜ್ಞಾನ ಬೋಧನೆಯ ಬಲದಿಂದ ಸ್ವಲ್ಪಸ್ವಲ್ಪವಾಗಿ ಆಶೆಯುಳ್ಳವನಾಗುತ್ತಿರುವೆನು. ಹೀಗೆಯೇ ಇನ್ನೆಷ್ಟು ಕಾಲವನ್ನು ಕಳೆಯಬೇಕೆಂದಿರುವೆ? ದೇವಿ! ಹೀಗೆ ಬರೆದುದರಿಂದ ನನ್ನನ್ನು ನೀನು ಕಾಮುಕನೆಂದಾಗಲೀ ವೃಥಾಲಾಪಿಯೆಂದಾಗಲೀ ಭಾವಿಸಬಾರದು. ನಿನ್ನ ಉತ್ಕೃಷ್ಟ ಗುಣಗಳನ್ನು ನೋಡಿದುದು ಮೊದಲು, ನಾನು, ಸಂಸಾರಯಾತ್ರೆಗೆ ಸಾರಪಾತ್ರವೆಂದರೆ ನೀನೇ ಸರಿಯೆಂದು ಭಾವಿಸಿ ಭಾವಿಸಿ, ನಿನ್ನನ್ನು ಗೌರವಿಸುತ್ತಿರುವೆನಲ್ಲದೆ, ನಿನ್ನ ಸಹವಾಸಲಾಭದಿಂದಲೇ ನಾನು ನನ್ನ ಪುತ್ರಕರ್ತವ್ಯವನ್ನು ಸಾರ್ಥಿಕ್ಯಪಡಿಸಿಕೊಳ್ಳಬೇಕೆಂದಿರುವೆನು. ಇದನ್ನು ನೀನೇಕೆ ನಡಿಸಬಾರದು?

ಪವಿತ್ರಹೃದಯೆ!

ಇಂದಿನ ಭಾಷಣಕಾಲದಲ್ಲಿ ನಡೆದ ವಿದ್ಯಮಾನಗಳಿಂದ ನಾನು ಮತ್ತೂ ಕುತೂಹಲಿಯಾಗಿರುತ್ತೇನೆ. ಇದನ್ನು ನಿನ್ನ ಸಮಕ್ಷದಲ್ಲಿ ಹೇಳಿ-ಕೇಳಿ ಬರಬೇಕೆಂದಿದ್ದರೂ, ಅದು ಸರಿಯಾದುದಲ್ಲವೆಂದು ಭಾವಿಸಿ, ಹೀಗೆ ಪತ್ರಮುಖದಿಂದ ಕೇಳುತ್ತಿರುವೆನು. ಏನು ಹೇಳುವೆಯೋ ಒರೆದು ತಿಳಿಸು. ಮತ್ತೊಂದು ಮಾತು:— ನಿನ್ನನ್ನು ಕರೆತರಬೇಕೆಂದು ನಿಮ್ಮ ಗುರುಜನರ ಆಜ್ಞಾಪತ್ರವು ಬಂದಿದೆ. ನಿನ್ನನ್ನು ಸಾಗಿದ್ದಿನ ದಿನವೇ ಸಕಲಸಂಭ್ರಮದಿಂದಲೂ ಕರೆದೊಯ್ದು ಆನಂದವನದಲ್ಲಿ ಬಿಡಬೇಕೆಂಬ ಸಂಕಲ್ಪವೂ ಆಗಿದೆ. ಆ ವೇಳೆಯಲ್ಲಿ ಅಲ್ಲಿ ನಡೆವ ಉತ್ಸವಾದಿಗಳನ್ನು ನೋಡಲು ಈ ನಗರದ ಪ್ರತಿಯೊಬ್ಬರೂ ಆಮಂತ್ರಿತರಾಗಿರುತ್ತಾರೆ. ನನ್ನನ್ನೂ ಅಲ್ಲಿಗೆ ಕರೆದೊಯ್ಯಬೇಕೆಂದು ಅಚಲಚಂದ್ರನು ಹಠತೊಟ್ಟಿರುವನು. ಆದರೆ, ನಾನು ಬಂದು ಫಲವೇನು? ನೀನು ನನ್ನ ಕೈತಪ್ಪಿ ಹೋಗುವ ಪಕ್ಷದಲ್ಲಿ, ನಾನು ಅಲ್ಲಿಗೆ ಬಂದು, ನಿರುತ್ಸಾಹಿಯಾಗಿ ಮರಳಿ ಬರಲಾರೆನು. ಹಾಗಾಗುವುದಾದರೆ, ಮುಂದಿನ ಪರಿಣಾಮವೂ ನಿನಗೆ ತಿಳಿದೇ ಇದೆ. ಇದಕ್ಕೆ ನೀನೇನು ಹೇಳುವೆಯೋ, ನಿನ್ನ ಅಂತರಂಗದ ನಿಜವಾದ ಉದ್ದೇಶವೇನೋ ಇಲ್ಲಿ ಸ್ಪಷ್ಟಪಡಿ

ಸಿದರೆ, ನನಗೆ ಸಾಕಾಗಿದೆ. ಸದ್ಯದಲ್ಲಿ ಮತ್ತೇನನ್ನೂ ಬರೆಯಲಾರೆನು. ಇಷ್ಟು ದೂರ ಸ್ವಾತಂತ್ರ್ಯವನ್ನು ವಹಿಸಿ ಬರೆದುದಕ್ಕಾಗಿ ಕ್ಷಮೆಯಿರಲಿ. ಇತಿ,—

ಶ್ರೇಯೋಭಿಲಾಷಿ, .

ನಾದಾನಂದ,"

ನಂದಿನಿಯು ಪತ್ರವನ್ನು ಮೂರು–ನಾಲ್ಕು ಬಾರಿ ಓದಿ ನೋಡಿದಳು. ಮತ್ತೆ ಮತ್ತೆ ಯೋಚಿಸಿದಳು. ಬಹಳ ಹೊತ್ತು ಏನನ್ನೋ ಚಿಂತಿಸುತ್ತಿದ್ದಳು. ಕಡೆಗೆ ಬಳಿಯಲ್ಲಿದ್ದ ಲೇಖನಸಾಮಗ್ರಿಯನ್ನು ತೆಗೆದು ಕೈಕೊಂಡು ನಾದಾನಂದನಿಗೆ ಉತ್ತರವನ್ನು ಕೊಡಲು ಹೀಗೆ ಬರೆಯತೊಡಗಿದಳು:—

॥ ಪತ್ರ ॥

"ವಿಶ್ವಸನೀಯನಾದ ನಾದಾನಂದ'

ಪ್ರಜ್ಞಾವಂತನಾದ ನಿನಗೆ ನಾನು ಹೇಳಬೇಕಾದುದೇನಿದೆ? ಮಕ್ಕಳು ತಾಯ್ತಂದೆಗಳ ಇಷ್ಟದಂತೆ ನಡೆಯಬೇಕೆಂಬುದೂ, ಅವರ ಶಾಸನವನ್ನು ಸ್ವಪ್ನದಲ್ಲಿಯೂ ಉಲ್ಲಂಘಿಸದೆ ಪರಿಶುದ್ಧಾಂತಃಕರಣದಿಂದ ನಡೆಯುತ್ತಿರಬೇಕೆಂಬುದೂ, ಸತ್ಪುತ್ರನಾದ ನಿನಗೆ ತಿಳಿದೇ ಇದೆ. ಹೀಗಿರುವಲ್ಲಿ, ಕೇವಲ ಏಕಮಾತ್ರಬಂಧುವಾಗಿರುವ–ತಂದೆಯೂ ಗುರುವೂ ಪೂಜ್ಯನೂ ಆಗಿರುವ–ಆ ನನ್ನ ಪರಮಪೂಜ್ಯಪಾದರ ಆಜ್ಞೆಯಂತೆ ನಡೆಯುತ್ತಿರುವ ನನ್ನನ್ನು ಮತ್ತೆ ಮತ್ತೆಯೂ ಕೇಳಬೇಕಾದ ಶ್ರಮವೇಕೆ? ಈ ನಂದಿನಿಯು, ಗುರುಚಿತ್ತಕ್ಕೆ ಅವಿಧೇಯಳೆಂಬ ಭಾವನೆಯುಂಟಾಗಿದೆಯೇನು? ಹಾಗಿದ್ದರೆ, ದಯೆಯಿಟ್ಟು ಅದನ್ನು ಬಿಟ್ಟುಬಿಡು. ಅಚಲಚಂದ್ರನು ನನ್ನ ಪೂಜ್ಯಭ್ರಾತೃವು. ಅತನ ಸೂಚನೆಯಂತೆ ನಡೆಯುತ್ತಿರುವುದೇ ನನಗೆ ಸದ್ಯದ ಕರ್ತವ್ಯವು. ಅಷ್ಟಲ್ಲದೆ ಮತ್ತಾವುದನ್ನೂ ನಾನು ಹೇಳಲಾರೆನು. ನಾದಾನಂದ! ಇಷ್ಟಕ್ಕೆ ನೀನು ಕಾತರನಾಗುವುದು ನನಗೆ ಸಮ್ಮತವಾಗಿಲ್ಲ. ಯಾರೂ ಹತಾಶರಾಗಿ ಪ್ರಯತ್ನವನ್ನು ಬಿಟ್ಟು ಜಡಭಾವದಲ್ಲಿ ಕುಳ್ಳಿರುವುದು ಸರಿಯಲ್ಲ;—ಎಂದ

ಒಳಿಕ, ಮುಂದೆ ದೇಶಸೇವೆಗೆ ಮುಖ್ಯ ಪಾತ್ರವಾಗಿ ನಿಲ್ಲಬೇಕಾದ ನೀನೇ ಹೀಗೆ ಅಧೈರ್ಯಪಡುವುದು ನ್ಯಾಯವೇ?–ನೀತಿಸಮ್ಮತವೇ? ಬಿಡು; ಯಾವ ಸಂಶಯವಿದ್ದರೂ ದೂರದಲ್ಲಿ ಬಿಟ್ಟುಬಿಡು. ನನ್ನನ್ನು ಅವಿಶ್ವಾಸಿಯೆಂದು ಭಾವಿಸಿ, ಶಂಕಿಸಬೇಡ. ನನ್ನನ್ನು, ನಿನ್ನ ನಿರಂತರದ ಶ್ರೇಯೋಭಿವೃದ್ಧಿಯನ್ನೇ ಮುಖ್ಯ ಗುರಿಯಾಗಿಟ್ಟು ಚಿಂತಿಸುತ್ತಿರುವ ಆಪ್ತವರ್ಗದಲ್ಲಿ ಪರಿಗಣಿಸಿ ಸಮಾಧಾನ ಹೊಂದು. ಭವಿಷ್ಯವನ್ನು ಕುರಿತು, ಈಗಲೇ ಹೀಗೆಂದು ನಿರ್ಧರಿಸಿ ಹೇಳಲು ನನಗಳವಲ್ಲ. ಆದರೆ, ನೀನು ಅಚಲಚಂದ್ರನಾಥನ ಅಭಿಪ್ರಾಯಕ್ಕೆ ವಿರೋಧವಾಗಿ ನಡೆಯಬಾರದೆಂದು ಮಾತ್ರ ಮತೆತ್ತಿಂದು ಬಾರಿ ಎಚ್ಚರಿಸುತ್ತಿರುವೆನು. ಹೀಗೆ ಬರೆದೆನೆಂದು ಆಗ್ರಹಿಸಬಾರದಾಗಿ ಕೋರುವೆನು. ಹೆಚ್ಚು ಬರೆಯಲಾರೆನು. ಇತಿ,—

ಶ್ರೇಯಃಕಾಂಕ್ಷಿಣಿ,

ನಂದಿನಿ."

ಎಂದು ಪತ್ರವನ್ನು ಮುಗಿಸಿ, ಅಂಟು ಹಾಕಿ, ಪುಸ್ತಕದಲ್ಲಿಟ್ಟು,—"ಭಗವತಿ! ನಿನಗೆ ನನ್ನ ಇಂದಿನ ಕ್ರಿಯಾಕಲಾಪವೆಲ್ಲವೂ ಸಮರ್ಪಕವಾಗಿದೆಯಷ್ಟೆ? ಕಾಪಾಡು." ಎಂದು ಹೇಳುತ್ತ ಹೇಳುತ್ತ ನಿದ್ರಾಂಗನೆಯನ್ನು ಉಪಾಸಿಸಲು ಮೊದಲುಮಾಡಿದಳು.

॥ ಶ್ರೀಃ ॥

ಪಂಚದಶ ಪರಿಚ್ಛೇದ.

ಮಾತೃಸಮ್ಮುಖದಲ್ಲಿ

(ಆನಂದ–ಸಂಭ್ರಮ–ಧನ್ಯವಾದ)

" ಸರ್ವಂಸಹೇತಿ ವಸುಧೇತ್ಯಚಲೇತಿ ಮಾತರ್ವಿಶ್ವಂಭರೇತಿ ವಿಪುಲೇತಿ ವಸುಂಧರೇತಿ ॥ ಅನ್ಯಾನಿ ಯಾನ್ಯಭಿಮುಖಾನ್ಯಭಿಧಾನವೃತ್ತ್ಯಾ ನಾಮಾನ್ಯಮೂನಿ ಕಥಯನ್ತಿ ತವಾನುಧಾವನಮ್ ॥ ೬ ॥ "

ಆನಂದವನದ ಮಾತೃಮಂದಿರದ ಆನಂದವೇ **ಆನಂದ!** ಸತ್ಯಾನಂದ ಬ್ರಹ್ಮಚಾರಿಯ ಆನಂದವೇ **ಬ್ರಹ್ಮಾನಂದ!!** ಆನಂದಮೂರ್ತಿಯ ಇಂದಿನ ಆನಂದೋತ್ಸವವನ್ನು ನೋಡುವರೆಲ್ಲರಿಗೂ ಆಗುವ ಆನಂದವೇ ನಿಜವಾದ **ಆತ್ಮಾನಂದ!!!**

ಮಾತೃಮಂದಿರದ ಶೃಂಗಾರವನ್ನು ವಿವರಿಸಲು ಈ ಲೇಖನಿಗಳ ವಲ್ಲ. ಆನಂದವನದ ಇಂದಿನ ನವೀನಾನಂದ ಸ್ವರೂಪವನ್ನು ಯಥಾವತ್ತಾಗಿ ವಿವರಿಸಲು ಅವಕಾಶವೂ ಇಲ್ಲ. ಒಂದೆರಡು–ನಾಲ್ಕಾರು ಮಾತುಗಳಿಂದ ಸಂಗ್ರಹವಾಗಿ ಹೇಳಿದರೆ, ಮುಂದಿನ ವಿದ್ಯಮಾನವನ್ನು ಮನನವಾಡಿ ಕೊಳ್ಳುವುದು ವಾಚಕರನ್ನೇ ಸೇರಿರಬೇಕಲ್ಲದೆ ಬೇರಿಲ್ಲ.

ಮಾತೃಮಂದಿರವು ಇಂದು ಹೇಗೆ ಪರಿಶೋಭಿಸುತ್ತಿದೆಯೆಂದು ತಿಳಿದಿರುವಿರಾ? ಬೆಳಬೆಳಗುವ ನೆಲದಲ್ಲಿಯಾಗಲೀ, ತೊಳಗುವ ಗೋಡೆಗಳಲ್ಲಿ

ಯಾಗಲೀ, ಗೋಷ್ಪಾದದಷ್ಟು ಸ್ಥಲವಾದರೂ ಅಸಂಸ್ಕೃತವಾಗಿ ಅಥವಾ ಉಪೇಕ್ಷಿತವಾಗಿ ಬಿಟ್ಟಿರುವಂತೆ ಕಾಣುತ್ತಿಲ್ಲ. ಸಾರಣೆ-ಕಾರಣೆ, ಚಿತ್ರಪಟ, ತಳಿರು-ತೋರಣಗಳಿಂದ, ವಿವಿಧ ಶೃಂಗಾರದಿಂದ, ಘಮಘಮಿಪ ಸಮಸ್ತ ಜಾತಿಯ ಗಂಧಗಳಿಂದ ಕೂಡಿ, ಸುಮನೋಹರವಾಗಿ ಬೆಳಗುತ್ತಿರುವುದನ್ನು ನೋಡಿದರೆ, ಆನಂದಕ್ಕೆ ಕೊರತೆಯಾದೀತೇ?

ಆನಂದವನದ ಸ್ವರೂಪವೇ ಇಷ್ಟು ಮೋಹಕವಾಗಿರುವುದೆಂದರೆ, ಆನಂದದಾಯಿನಿಯಾದ ಮುಂದಿರಾಧಿಷ್ಠಾತ್ರೀದೇವಿಯ ಸುಸ್ವರೂಪವು ಮತ್ತೆಷ್ಟು ಪ್ರಕಾಶಿಸುತ್ತಿರಬೇಕೆಂಬುದನ್ನು ಊಹಿಸಿಯೇ ತಿಳಿಯಬೇಕಲ್ಲವೇ?

ಆನಂದಮಂದಿರ ಮತ್ತು ಮಾತೃದೈವದ ಸುಸ್ವರೂಪಕ್ಕೆ ಒಪ್ಪುವಂತೆ ಆನಂದವನವೂ ಶೃಂಗಾರವಾಗಿರಬೇಕಾದುದು ಸಹಜವೇ ಸರಿಯಷ್ಟೆ! ಆನಂದವನದ–ಮಾತೃಮಂದಿರದ ಮುಂಗಡೆಯ ಪ್ರದೇಶದಲ್ಲಿ ಸುಮಾರು ಅರ್ಧ ಮೈಲಿಯಷ್ಟರ ಪ್ರದೇಶವೂ ಕಲ್ಲುಳ್ಳುಗಳ ಹೆಸರಿಲ್ಲದೆ ಪರಿಷ್ಕೃತವಾಗಿರುವ ನೆಲವು. ಉದ್ದಕ್ಕೂ ಸಾಲುಮರಗಳು, ನಡುನಡುವೆ ಧ್ವಜಸ್ತಂಭಗಳು; ಅಲ್ಲಲ್ಲಿಗೆ ಮರಗಳ ಹಿಂದೆ ಮಂಟಪಗಳು, ಚಪ್ಪರಗಳು, ಎಲ್ಲೆಡೆಯಲ್ಲಿಯೂ ತಳಿರು–ತೋರಣಗಳು. ಸುತ್ತಮುತ್ತಲ ಮಂದಿರದ ಹಿಂದುಮುಂದಿನ ಪ್ರದೇಶದಲ್ಲಿಯೂ, ನೆಲವು ಹೀಗೆಯೇ ಪರಿಷ್ಕರಿಸಲ್ಪಟ್ಟೇ ಇರುವುವು. ಅಲ್ಲದೆ, ಬಂದವರಿಗೆ ಉಳಿದು–ತಿಂದು–ಮಲಗಿ ವಿಶ್ರಾಂತಿಹೊಂದಲನುಕೂಲವಾಗಿ ಅಲ್ಲಲ್ಲಿಗೆ ಪರ್ಣಕುಟೀರಗಳೂ ಬಿಡಾರಗಳೂ ನಿಯಮಿಸಲ್ಪಟ್ಟಿವೆ. ಹೆಚ್ಚೇಕೆ? ಆನಂದವನವು ನೂತನೋತ್ಸವದ ಸಂಭ್ರಮಕ್ಕಾಗಿ ಬೇಕಾದ ಸಕಲ ಸೌಲಭ್ಯಗಳಿಂದಲೂ ಸುಸಜ್ಜಿತವಾಗಿರುವಂತೆ ತೋರುವುದೆಂದರೆ ಸಾಕು.

ಮಂದಿರದ ಗರ್ಭಾಂಕಣದಲ್ಲಿ ದೇವಿಯು ಮುಂದೆ ಪದ್ಮಾಸನಾಸೀನನಾಗಿ ಕುಳಿತು, ಉಚ್ಚೈಸ್ವರದಿಂದ (ಆನಂದವಾರವಶ್ಯತೆಯುಲ್ಲಿ ಉಂಟಾಗುವ ಗದ್ಗದಸ್ವರದಿಂದ)—॥"ಸರ್ವಂಸಹೇತಿ ವಸುಧೇತ್ಯಚಲೇತಿಮಾತರ್ವಿಶ್ವಂಭರೇತಿ ವಿಪುಲೇತಿ" ಎಂದೀ ಬಗೆಯಾಗಿ ಬಗೆಬಗೆಯಿಂದ ಮಾತೃಸ್ತವವನ್ನು ಗಾನಮಾಡುತ್ತಿರುವ ಈ ನಮ್ಮ ಸತ್ಯಾನಂದ ಬ್ರಹ್ಮಚಾರಿಯನ್ನು ನೋಡಿದರೆ, ಆತ್ಮಾನಂದವುಂಟಾಗದಿರುವುದೇನು?– ಎಂದಿಗೂ ಆಗದೆ ಬಿಡುವದಿಲ್ಲ.

ಸತ್ಯಾನಂದ ಪರಮ ಹಂಸನೆಂದರೆ, ಈಕಾಲದ ತಾಮಸ ಸನ್ಯಾಸವೇಷಧಾರಿಗಳಲ್ಲವನಲ್ಲ. ಸರ್ವಸಂಗ ಪರಿತ್ಯಾಗ ಮಾಡಿದೆನೆಂದು ನಟಿಸಿ, ವಿರಕ್ತವೇಷ ಧಾರಣೆಯಿಂದ ಬಹುಜನರನ್ನು ವಂಚಿಸಿ, ಘಾತಿಸಿ, ತಸ್ಕರಿಲಕ ಧನಸಂಗ್ರಹ ಮಾಡಿಕೊಂಡು, ಪತ್ನೀ-ಪುತ್ರ-ಪರಿವಾರಗಳಿಗೆ ಯಥೇಷ್ಟವಾದ ಸುಖ ಸಂಪದಗಳ ಮಾರ್ಗವನ್ನು ಕಲ್ಪಿಸಿ, ಸ್ವೈರವಿಹಾರೋಪಯೋಗಕ್ಕಾಗಿ, ಹಲವು ಮಂತ್ರ-ತಂತ್ರಗಳನ್ನು ಮುಂದಿರಿಸಿ ಕುಳ್ಳಿರುವ ಚಾಲಕರಂತೆಯೇ ನಮ್ಮ ಸತ್ಯಾನಂದ ನನ್ನೂ ಒಬ್ಬ ಚಾಲಕನೆಂದು ತಿಳಿದಿರುವಿರೇನೋ? ಹಾಗಿದ್ದಲ್ಲಿ ತ್ರಿವಾರಹೇಳಿರಿ. 'ಶಾಂತಂವಾಪಂ-ಪ್ರತಿಹತಮ ವಂಗಳಂ' ನಮ್ಮ ಅಪಚಾರಕ್ಕಾಗಿ ಕ್ಷಮೆಯನ್ನು ಕೋರಲೇಬೇಕು. ಮತ್ತು ಈ ನಮ್ಮ ಸತ್ಯಾನಂದ ಪರಮ ಹಂಸನು, ತಾನೇ ವಿರಕ್ತನೆಂದು ಹೆಮ್ಮೆಗೊಂಡು, ತನ್ನಲ್ಲಿ ಉಪದೇಶಕ್ಕಾಗಿ ಬರುವವರನ್ನು ಕುರಿತು "---ಈ ಪೃಥ್ವಿಯೇ ಅಸಾರವು; ಈ ಸಂಸಾರವೇ ಘೋರವು; ಈ ಭವನೇ ಭಯಂಕರ ರೋಗ ಪೀಡಿತವು. ಪತ್ನೀಪುತ್ರವ್ಯಾಮೋಹವೇ ಕ್ಲೇಶಾಗರವು ಮತ್ತು ಕ್ಷಣಿಕವು; ಇವುಗಳಿಂದ ನಮಗೆ ಸುಖವಿಲ್ಲ; ಇವರಿಂದ ಸಮಾಧಾನವೆಂಬುದೇ ದೊರೆಯಂತಿಲ್ಲ; ಬರಿಯ ಭ್ರಾಂತಿ—ತಾಪಗಳಿಗೆ ಮೂಲ. ಇದನ್ನು ನಂಬಿ, ವಿಷಯಲಾಲಸೆಯಲ್ಲ ಮರುಳಾಗಿ, ಮಮಕಾರ ವ್ಯಾಧಿಯಿಂದ ಕೆಡುವವರಿಗೆ ಎಂದಿಗೂ ಮುಕ್ತಿಯಾಗುವುದಿಲ್ಲ; ಪರಮಾತ್ಮನ ದಿವ್ಯ ರೂಪಧ್ಯಾನವೊಂದರಿಂದ ಮಾತ್ರವೇ ನಮ್ಮ ಆತ್ಮನಿಗೆ ಶಾಂತಿಯಾಗಬೇಕು: ಅದರಿಂದಲೇ ನಮಗೆ ನಿತ್ಯಾನಂದವಾಗಬೇಕು; ಆತ್ಮಧ್ಯಾನವೊಂದೇ ನಮ್ಮ ಮುಖ್ಯಗುರಿಯಾಗಬೇಕು; ಆತ್ಮಧ್ಯಾನಕ್ಕೆ ಸಂತಸೇವೆ, ಸ್ವಾರ್ಥತ್ಯಾಗ. ಭಗವತ್‌ಕೈಂಕರ್ಯಗಳೇ ಸಾಧನಗಳಾಗಿರಬೇಕು;" ಹೀಗೆ ಉಪದೇಶ ಮಾಡುವ ಜಡಬೋಧೆಯ ಗಂಧವನ್ನು ಕೂಡ ತಿಳಿದವನಲ್ಲ. ಕೇವಲ ಈತನ ವೇಷ-ಭಾಷಣ-ಪ್ರಕೃತಿಸ್ಥಿತಿಗಳನ್ನು ನೋಡಿಯೇ, ಯಾರೇ ಆಗಲಿ, ಈತನ ನಿಷ್ಕಾಮಪ್ರೇಮ, ನಿರತಿಶಯ ಬ್ರಹ್ಮನಿಷ್ಠೆ, ನಿರಂತರ-ದಯಾಪರತೆಗಳ ಮಹೋಜ್ವಲಸ್ವರೂಪವಿಂತಹದೆಂದು ಹೇಳಬಹುದು. ಹೆಚ್ಚೇಕೆ! ದೇಶ ಮಾತೃಸೇವಕನೆಂದರೆ——ಪತಿತೋದ್ಧಾರಕರ್ತನೆಂದರೆ——ಭೂತದಯಾಪರನೆಂದರೆ—ಸತ್ಯಪರಾಕ್ರಮನೆಂದರೆ—ಕ್ಷಮಾಗುಣಸಂಪನ್ನನೆಂದರೆ— ಈನಮ್ಮ ಸತ್ಯಾನಂದ ಬ್ರಹ್ಮಚಾರಿಯೇ ಸರಿ. ವಿವರಣೆನ್ನು ಸಾಕು.

ಸತ್ಯಾನೆಂದಪರಮಹಂಸನ ಮುಂದೆ, ಪದ್ಮಾಸನಾಸೀನಳಾಗಿ ಕೈನೀಡಿ, ಭಕ್ತೆ-ಪ್ರೇಮ ಪರಾಕಾಷ್ಠೆಯಿಂದ ಅನರ್ಗಳವಾದ ಆನಂದಬಾಷ್ಪವನ್ನು ಸುರಿಸುತ್ತ ತಂದೆಯ ಆನಂದವು ಉಕ್ಕೇರುವಂತೆ ಅಪ್ಸರಕಂತದಿಂದ, ನೀಣಾನಾದವನ್ನು ನಿರಾಕರಿಸುವ ಮೃದುಮಧುರಸ್ವರದಿಂದ; ಉಚ್ಚಸ್ವರದಿಂದ—

" ಅವಿರ್ಮದೈರಮರದನ್ತಿಭಿರೂಹ್ಯಮಾನಾಂ । ರತ್ನಾಕರೇಣ ರುಚಿರಾಂ ರಶನಾಗುಣೇನ ॥ ಮಾತಸ್ತ್ರಿಲೋಕಜನನೀಂ ವನಮಾಲಿನೀಂ ತ್ವಾಂ ಮಾಯಾವರಾಹ ಮಹಿಷೀಮವಯನ್ತಿ ಸನ್ತಃ ॥ ೨೧ ॥ ನಿಷ್ಕಂಟಕೇನ ವಿಭವೇನ ನಿಷೇವಣೀಯಾಂ । ಛಾಯಾ ವಿಶೇಷಪರಿಭೂತ ವಿಪನ್ನಿದಾಘಾಮ್ ॥ ಸ್ವರ್ಗಾಪವರ್ಗಸರಣೀಂ ಭವತೀಮುಶನ್ತಿ ಸ್ವಚ್ಛಂದ ಸೂಕರ ವಧೂರವಧೂತ ಪಜ್ಯಾಮ್ ॥ ೨೨ ॥ ಗನ್ಧೋದ್ಬಲಾಂ-ಗಹನಕುಂತಲ ದರ್ಶನೀಯಾಂ-ಶೈಲಸ್ಥನೀಂ ತರಳ ನಿರ್ಝರಲಮ್ಬಹಾರಾಮ್ ॥ ಶ್ಯಾಮಾಂ ಸ್ವತಸ್ತ್ರಿಯುಗಸೂಕರಗೇಹಿನೀತ್ವಂ ವ್ಯಕ್ತಂ ಸಮುದ್ಯವಸನಾಮುಭಯೀಂ ಬಿಭರ್ಷಿ ॥ ೨೦ ॥ "

ಎಂದಿಂತು ಹಲವು ಬಗೆಯಾಗಿ ಮಾತೃಗೀತೆಯನ್ನು ಸ್ವರ ತಾಳ ಬಂಧಗಳೊಡನೆ ಗಾನಮಾಡುತ್ತಿದ್ದ ನಂದಿನಿಯು ಅಭಿನವ ಶಾರದೆಯಂತೆ ಒಪ್ಪುತ್ತಿದ್ದಳು.

ಪರಮಹಂಸ-ನಂದಿನಿಯರ ಹಿಂದೆ ಕುಳಿತು. ತನ್ನ ದಿವ್ಯತೇಜಸ್ಸಿನಿಂದ ಪ್ರಕಾಶಿಸುತ್ತ, ಇಬ್ಬರ ಮಾತೃಗೀತೆಯನ್ನೂ ಮತ್ತು ಮತ್ತು ಪುಷ್ಟೀಕರಿಸುತ್ತ ತಪಸ್ವಿನಿಯು ಸಾಕ್ಷಾತ್ ಯೋಗೇಶ್ವರಿಯಂತೆ ಒಪ್ಪುತ್ತಿದ್ದಳು.

ಸೂಮರಲ್ಲಿ, ಯಾರಲ್ಲಿಯೂ ಅಂಗಭಂಗಗಳಿಲ್ಲ; ಅನ್ಯತ್ರಗಮನವಿರುತ್ತಿಲ್ಲ. ಇವರ ಗಮನಾವಲೋಕನವು ಇದಿರಿಗೆ ಪ್ರತಿಷ್ಠಿತವಾಗಿರುವ ದೇವಿಯಮುಂದೆ ಅವಳ ದಿವ್ಯಸ್ವರೂಪದ ಮೇಲೆ ಮಾತ್ರವೇ ನೆಲೆಗೊಂಡು, ಏಕಪ್ರಕಾರವಾಗಿ ಗೀತಾಸ್ವಾರಸ್ಯದಲ್ಲಿ ಗಮನನಿಟ್ಟಿರುವುವು.

ಗರ್ಭಾಂಗಣದ ಮುಂದಿನ ಪ್ರದೇಶದಲ್ಲಿ, ಮುಂಗಡೆಯೇ ಸ್ವರ್ಣಕುಮಾರಿ, ಸುರಸೆ, ಪರಿಮಳಕುಮಾರಿಯರು ಮೂವರೂ ಕುಳಿತು, ನಂದಿ

ನಿಯು ಗಾನದೊಡನೆ ತಾವೂ ಸಂಭ್ರಮದಿಂದ ಹಾಡುತ್ತಿರುವರು. ಇವರ ಬಳಿಯಲ್ಲಿ ಅಚಲಚಂದ್ರ, ನಾದಾನಂದ, ಭಕ್ತಿಸಾರ, ಸೇವಾನಂದರೂ ಕುಳಿತು, ಗರ್ಭಾಂಕಣದಲ್ಲಿರುವವರ ಸ್ವರೋತ್ಪೇಜಿತವಾಗುವಂತೆ ಅವರಿಂದ ಹೇಳಲ್ಪಟ್ಟಿದ್ದ ಸ್ತುತಿ(ಗೀತೆ)ಯನ್ನು ಮತ್ತುಮತ್ತು ಒತ್ತಿಯೊತ್ತಿ ಹೇಳುತ್ತಿರುವರು. ಸಾಲದುದಕ್ಕೆ ಇವರ ಬಳಿಯಲ್ಲಿಯೇ ನಗೇಶ, ಶರಚ್ಚಂದ್ರ, ಜ್ಞಾನಸಾರ, ವಿದ್ಯಾನಂದರೂ ಕುಳಿತು-ತಾಳಹಾಕುತ್ತೆ-ನಡುನಡುವೆ ಗೀತಾ ಪಲ್ಲವಗಳನ್ನೆತ್ತಿ ಹೇಳುತ್ತಿರುವರು.

ಮುಂದಿರದ ಮಧ್ಯಾಂಕಣದ ವಿಶಾಲಪ್ರದೇಶದಲ್ಲಿ ಇಕ್ಕೆಲಗಳಲ್ಲಿಯೂ ಸಾಲುಸಾಲಾಗಿ ಕುಳಿತಿರುವ ಮಹಿಳೆಯರೊಡನೆ ಕಲೆಕ್ಟರರ ಪತ್ನಿ ಮತ್ತು ವಿದ್ಯಾನಂದನ ಭಾರ್ಯೆಯರನ್ನು ಮುಂದೆ ನಿಟ್ಟು, ಚಿತ್ರಕಲೆ, ಚಂದ್ರಮತಿಯರು ಕುಳಿತು, ತಮ್ಮ ಮನದಣಿಯೆಂತೆ ಮಾತೃಗೀತೆಯನ್ನು ಸುಮನೋಹರವಾಗಿ ಹಾಡುತ್ತಿದ್ದರು. ಅಲ್ಲಿಂದ ಮುಂದೆಯೆಂದರೆ, ಮುಂದಿರದ ವಿಶಾಕಾರದೊಳಗಡೆಯಲ್ಲಿಯೂ ಹೊರಗಡೆಯ ವನಪ್ರದೇಶದಲ್ಲಿಯೂ. ಸೇವೆಗಾಗಿ ಬಂದಿರುವ ಅಸಂಖ್ಯಾತ ಪ್ರಜೆಗಳು, ಸಾಲುಸಾಲಾಗಿ ಕುಳಿತು-ನಿಂತು, ದೇವಿಯನ್ನೇ ನೋಡುತ್ತ, ಸತ್ಯಾನಂದಾದ್ಯರ ಮಾತೃಗೀತೆಯನ್ನು ಸಾವಧಾನದಿಂದ ಕೇಳುತ್ತ, ಮುಂದಿನ ಉತ್ಸವಾವಲೋಕನದಲ್ಲಿ ಉತ್ಸುಕರಾಗಿದ್ದರು.

ಸತ್ಯಾನಂದನು ಗಾನಮಾಡುತ್ತ ಮಾಡುತ್ತ ಆನಂದವಾರವಶ್ಯತೆಯಿಂದ ದೇವಿಯ ಪಾದಪ್ರದೇಶದಲ್ಲಿ ಆನತನಾಗಿ ಮೌನವಾಂತನು. ಆನಂದನ ಮೌನ ಧಾರಣೆಯಿಂದ, ಬಳಿಯಲ್ಲಿ ಕುಳಿತಿದ್ದ ನಂದಿನಿ, ತಪಸ್ವಿನಿಯರೇ ಮೊದಲಾಗಿ ಸಮಸ್ತರೂ ಚಕಿತರಾಗಿ, ಧಿಗ್ಗನೆದ್ದು-ನಿಶ್ಚಬ್ದದಿಂದ ನೋಡುತ್ತಿದ್ದರು. ತಪಸ್ವಿನಿಯು ದೇವಿಯ ಕಡೆಗೆ ಕೈನೀಡಿ, ಉತ್ತೇಜಿತಸ್ವರದಿಂದ ಸ್ತುತಿಸತೊಡಗಿದಳು.—

ಹೇ ಜನನಿ! ಜಗದುಜ್ಜೀವಿನಿ! ಕೃಪೆಮಾಡು; ಕಣ್ಣೆರೆದುನೋಡು:—

“ಯೋಗಾರಮ್ಭ ತ್ವರಿತಮನಸೋ ಯುಷ್ಮದೈಕಾನ್ತ್ಯ,
ಯುಕ್ತಂ ಧರ್ಮಂ ಪ್ರಾಪ್ತಂ ಪ್ರಥಮ ನಿಹಯೇ ದಾರಯ

ನ್ತೇ ಧನಾಯೂಮ್॥ ತೇಷಾಂ ಭೂಮೇರ್ಧನಪತಿಗೃಹಾ ದಮ್ಬರಾದಮ್ಬುಧೇರ್ವಾ ಧಾರಾನಿರ್ಯಾನ್ತ್ಯಧಿಕ ಮುಧಿಕಂ ವಾಞ್ಛಿತಾನಾಂವಸೂನಾಮ್ ॥೧೭॥"

ತಪಸ್ವಿನಿಯು ಸ್ತುತಿಸುತ್ತಿರುವಂತೆಯೇ ನಿಂತಿದ್ದವರೆಲ್ಲರೂ ಮಂಗಳಗೀತಾ ವಾದ್ಯಂಗಳನ್ನು ಬಾರಿಸಲು ಮೊದಲುಮಾಡಿದರು. ನೋಡು ನೋಡುತ್ತಿದ್ದಂತೆಯೇ ದೇವಿಯ ಪಾದತಲದಲ್ಲಿ ಅನತನಾಗಿದ್ದ ಸತ್ಯಾನಂದನು, ನೂತನ ಶಕ್ತ್ಯುತ್ತೇಜಿತನಾಗಿ ಎದ್ದು ಎರಡು ಕೈಗಳಿಂದಲೂ ದೇವಿಗೆ ಮಂಗಳಾರತಿಯನ್ನೆತ್ತಿದನು. ಮಂಗಳಾರತಿಯಾಗುತ್ತಿರುವುದನ್ನು ನೋಡಿ, ತಪಸ್ವಿನಿಯು ನಮಸ್ಕರಿಸಿಕೊಡನೆ ಸಡಗರದಿಂದ ನೀರಾಜಿನಗಳನ್ನು ಹತ್ತಿಸಿ-ಬೆಳಗಿಸಿ, ಘಂಟಾನಾದವನ್ನು ದಿಕ್ಕಟಗಳೆಲ್ಲೆಲ್ಲಾ ಸುತ್ತುವಂತೆ ಬಾರಿಸಿದಳು. ನಿಂತಿದ್ದ ಆ ಬಾಲ ವೃದ್ಧರಾದಿಯಾದ ಸ್ತ್ರೀ ಪುರುಷರೂ ದೇವತಾಸಂದರ್ಶನ ಲಾಭವನ್ನು ಹೊಂದಿ, ಧನ್ಯಧನ್ಯ ಶಬ್ದದಿಂದ ನಲಿನಲಿದಾಡಿದರು.

ಇಲ್ಲಿಗೆ ಪೂಜೆಯು ಯಥಾಕ್ರಮವಾಗಿ ನೆರೆವೇರಿದಂತಾಯಿತು. ಸತ್ಯಾನಂದನು ಮತ್ತೆ ದೇವಿಯನ್ನು ವಂದಿಸಿ, ಆ ಬಳಿಕ,—ನಿಂತಿದ್ದವರೆಲ್ಲರನ್ನೂ ಕುಳ್ಳಿರಹೇಳಿ, ತಾನು ಮಾತ್ರ ನಿಂತು, ಪ್ರೇಮಪೂರಿತನಾಗಿ ಕರುಣಾಮ್ಯಂಜಕ ಸ್ವರದಿಂದ ಹೇಳತೊಡಗಿದನು.—

"ಓ ನನ್ನ ಪ್ರೀತಿಪಾತ್ರರಾದ ತಮ್ಮಂದಿರೇ ! ನನ್ನ ಪೂಜ್ಯಮಾತೆಯರಾದ ಆರ್ಯಮಹಿಳೆಯರೇ!! ಮುಂದೆ ಪೂಜ್ಯಮಾತೆಯರಾಗಿ ಲೋಕಾದರಕ್ಕೆ ಪಾತ್ರರಾಗುವ ನನ್ನ ಎಳದಂಗೆಯರೇ!!! ಇದೇ—ನೋಡಿರಿ; ನಮ್ಮೆಲ್ಲರಿಗೂ ಪರಮಪೂಜ್ಯಳಾದ ಜನ್ಮಭೂಮಾತೆಯೇ ಇಲ್ಲಿ ಪ್ರತಿಷ್ಠಿತಳಾಗಿರುವಳು. ತಾಯಿಯು ಸಮಕ್ಷದಲ್ಲಿ ನಾವೆಲ್ಲರೂ ಇಂದು ಒಂದಾಗಿ ಕಲೆತಿರುವೆವು; ಮುಂದೆಯೂ ಹೀಗೆಯೇ ಕಲೆಯಬಹುದೆಂಬ ಭರವಸೆಯನ್ನೂ ಹೊಂದಿರುವೆವು. (ಕರತಾಡನ.)

ಕೇಳಿರಿ. ಇವಳೇ ನಮ್ಮ ತಾಯಿ; ಇವಳ ದಯೆಯೇ ನಮ್ಮ ಸಮಸ್ತ ಸೌಭಾಗ್ಯಸಂಪತ್ತಿ; ಇವಳ ಅಂತರಂಗದ ಕೃಪಾಕಟಾಕ್ಷದಿಂದಲೇ ನಾವು ಈ ಒಗೆಯ ಮಾನವಜನ್ಮವನ್ನೆತ್ತಿ, ತಕ್ಕಮಟ್ಟಿಗೆ ಉತ್ತಮವರ್ಗದಲ್ಲಿ ಸದಾಚಾರ ಸಂಪನ್ನರಾದ ತಾಯ್ತಂದೆಗಳ ಹೊಟ್ಟೆಯಲ್ಲಿ ಹುಟ್ಟಿ, ಇವಳ ಕೃಪಾರೂಪ

ಸಾಕ್ಷಾತ್ಕಾರವಾದಂತೆ, ಆ ತಾಯ್ತಂದೆಗಳ ಸುಶಿಕ್ಷಣೆಯಿಂದ ಪರಿಪೋಷಿತರಾಗಿ, ದೇಶಕಾಲವಸ್ತುಸ್ಥಿತಿಗಳನ್ನು ತಕ್ಕಮಟ್ಟಿಗೆ ತಿಳಿದು, ಜಗನ್ನಿಯಂತನ ಉದ್ದೇಶವನ್ನರಿತುಕೊಳ್ಳುವ ಅದೃಷ್ಟವನ್ನು ಹೊಂದಿ, ಇಂದು ಈ ಮಾತೃಭೂಮಿಕೆಯಲ್ಲಿ ನಾವೆಲ್ಲರೂ ಒಟ್ಟಾಗಿ ಸೇರಿರುತ್ತೇವೆ. ಇಂದಿನ ನಮ್ಮ ಸುಖ ಸಮಾಗಮದ ಸುಯೋಗವು ಎಂದಿಗೂ ವ್ಯರ್ಥವೆನ್ನಿಸುವುದಿಲ್ಲ. (ಸಾಧು ಸಾಧು)

ಮಾನವ ಜನ್ಮವನ್ನೆತ್ತಿದ ಪ್ರತಿಯೊಬ್ಬನೂ ಮಾತೃಸೇವೆಯನ್ನು ಮಾಡಿಯೇ ಋಣವಿಮುಕ್ತನಾಗಬೇಕು. ಮಾತೃಸೇವೆಯನ್ನು ಮಾಡದೆ, ಮತ್ತಾವ ಸತ್ಕಾರ್ಯವನ್ನೇ ಮಾಡಿದೆವೆಂದರೂ ನಮಗೆ ಬಂಧವಿಮೋಚನವಾಗಲಾರದು. ಮಾತೃಕೃಪೆಗೆ ಪಾತ್ರರಾಗದೆ. ನಮ್ಮ ಜನ್ಮಧಾರಣೆಯ ಪರಮೋದ್ದೇಶವನ್ನು ನಾವು ತಿಳಿಯಲಾರೆವು. ಯಾವ ಪುತ್ರನು ಮಾತೃಸೇವೆಯನ್ನು ಮನಃಪೂರ್ವಕವಾಗಿ ಮಾಡುವನೋ, ಅತನೇ ದೇಶಮಾತೆಯ ಅನುಗ್ರಹಪಾತ್ರನಾದ ಸತ್ಪುತ್ರನು. ಅತನೇ ದೇಶಮಾತೆಯ ಅಭ್ಯುದಯ ಆಪದಾ ಕ್ಷೇಮಲಾಭವನ್ನು ತಿಳಿದುಕೊಳ್ಳುವ ಮಹಾತ್ಮನು. ಅಂತಹ ಸತ್ಪುತ್ರನಲ್ಲೆಯೇ ಕ್ಷಮಾದೇವಿಯಾದ ದೇಶಮಾತೆಯ ನಿರತಿಶಯಪ್ರೇಮವೂ ಜಗತ್ಪಿತನ ಪ್ರಸಾದವೂ ಸಾಕ್ಷಾತ್ಕಾರವಾಗಿರುವುದು. ಇದಕ್ಕೆ ನಿದರ್ಶನವೆನೆಂದರೆ, ಸತ್ಯವಾನ-ಶ್ರೀರಾಮಚಂದ್ರ ಮೊದಲಾದವರನ್ನು ನೋಡಿದರೆ ಸಾಕು; ಅವರು, ತಮ್ಮ ತಾಯ್ತಂದೆಗಳ ಮತ್ತು ತಮ್ಮ ದೇಶಮಾತೆಯ ಕ್ಷೇಮ-ಅಭ್ಯುದಯ-ಕೀರ್ತಿಗಳ ಮೇಲೆ ತಮಗಿದ್ದ ನೈಸರ್ಗಿಕಪ್ರೇಮದಿಂದ ಎಂತಹ ತಪಃಕ್ಲೇಶಗಳನ್ನು ಸಹಿಸಿದರೆಂಬುದನ್ನೂ, ಅವರ ಶ್ರಮಸಹಿಷ್ಣುತೆ, ಕರ್ತವ್ಯತತ್ಪರತೆ, ಪ್ರೇಮಪರಾಕಾಷ್ಠತೆಗಳ ಮಹತ್ಫಲದಿಂದ ಅವರಿಗುಂಟಾದ ಶಾಶ್ವತಸುಖವೈಭವವನ್ನೂ ವಿಚಾರಕ್ಕೆ ತಂದುಕೊಳ್ಳುವುದಾದರೆ ಸಾಕು.

ಪುರುಷನು ಹೀಗೆ ತನ್ನ ಕರ್ತವ್ಯವನ್ನು ಚೆನ್ನಾಗಿ ಗಮನಿಸುತಿದ್ದರೆ, ಸ್ತ್ರೀಯು, ತನ್ನ ಪತಿಯ ಸೇವೆಯೇ ಮುಖ್ಯವಾಗಿ ತನ್ನ ಸತೀಕರ್ತವ್ಯವನ್ನು ಸಾರ್ಥಕ್ಯಪಡಿಸುವಂತೆ, ತನ್ನ ಪುರುಷನಿಗೆ ಸಹಚಾರಿಣಿಯಂತಿದ್ದು ಸಹಕರಿಸಬೇಕು. ತಮ್ಮ ಪತಿಗಳು ಮಾತಾಪಿತೃಸೇವೆಯೇ ಅತ್ಯುತ್ತಮವಾದ ತಪಸ್ಸೆಂದು ತಿಳಿದು, ಅವರನ್ನು ಸೇವಿಸಿ ಅವರ ಮನಸ್ಸಮಾಧಾನವಾಗುವಂತೆ, ಸರ್ವ

ಪ್ರಕಾರದಿಂದಲೂ, ನಡೆದುಕೊಳ್ಳುವಂತೆ ಮಾಡಬೇಕಾದುದೇ ಸಹಚಾರಿಣಿಯರಾದ ಸತಿಯರ ಕೆಲಸವು. ತಾಯ್ತಂದೆಗಳ ಮನಸ್ಸಮಾಧಾನವಾಗಬೇಕಾದರೆ, ದ್ವೇಷಾಸೂಯಾದಿ ದುರ್ಗುಣಗಳೂ, ಉದಾಸೀನ-ಅಭಿಮಾನ ಮೊದಲಾದ ತಾಮಸವ್ಯಾಪಾರವೂ ನಮ್ಮಲ್ಲಿರಬಾರದು. ಒಡಹುಟ್ಟಿದವರೆಲ್ಲರಲ್ಲಿಯೂ ಅಪ್ರತಿಭಾವವನ್ನಿರಿಸಿ, ಎಲ್ಲರೂ ಅನ್ಯೋನ್ಯಭಾವದಲ್ಲಿ ಬದ್ಧರಾಗಿ, ಸ್ವಕರ್ತವ್ಯ ನಿಷ್ಠೆ-ಸ್ವಾವಲಂಬನಗಳಿಂದ ನಿರಲಸರಾಗಿ, ನಿರಂತರೋದ್ಯೋಗಶೀಲರೆನ್ನಿಸಿ ನಡೆಯುತ್ತಿರಬೇಕು. ಹೀಗೆ ಮಾಡಿದಲ್ಲದೆ ನಮ್ಮ ಪುತ್ರಕರ್ತವ್ಯವು ನಮ್ಮಿಂದ ಸರಿಯಾಗಿ ಮಾಡಲ್ಪಟ್ಟಿತೆಂದು ಹೇಳುವಂತಿಲ್ಲ.

ಹಾಗಿದ್ದರೆ,—"ನಾವು ಮಾತೃಸೇವೆಯಲ್ಲಿ ಎಷ್ಟುಮಟ್ಟಿಗೆ ಕೃತಕೃತ್ಯರಾಗಿರುವೆವು? ನಮ್ಮಿಂದ ನಮ್ಮ ದೇಶಮಾತೆಗಾಗಲೀ, ದೇಶಮಾತೆಯ ಪ್ರತಿನಿಧಿಸ್ವರೂಪಿಣಿಯಾದ ಜನ್ಮದಾತೆಗಾಗಲೀ, ಎಷ್ಟುಮಟ್ಟಿನ ಮೇಲ್ಮೆಯುಂಟು ಮಾಡಲ್ಪಟ್ಟಿರುವುದು? ನಮ್ಮಲ್ಲಿ ಬಂಧು ಪ್ರೇಮವು ಎಷ್ಟುಮಟ್ಟಿಗೆ ನಿಂತಿರುವುದು? ನಮ್ಮನಮ್ಮಲ್ಲಿ ಐಕಮತ್ಯ, ಸ್ವಾತಂತ್ರ್ಯ, ಸಮತಾಭಾವ, ಸತ್ಯಸಂಧತೆಗಳು ಎಷ್ಟೆಷ್ಟು ಪ್ರಕಾರಕ್ಕೆಬಂದಿರುವುವು?" ಎಂಬೆವನ್ನು ಕುರಿತು. ನಮ್ಮ ನಮ್ಮಲ್ಲೆಯೇ ವಿಚಾರಮಾಡಿಕೊಳ್ಳುವುದೂ, ವಿಚಾರಾಂತ್ಯದಲ್ಲಿ ತೋರಿಬರಬಹುದಾದ ನ್ಯೂನತೆಗಳನ್ನು ಕ್ರಮಪಡಿಸಿಕೊಂಡು ಮುಂದೆ ಜಾಗರೂಕರಾಗಿರುವುದೂ ಅವಶ್ಯಕವಲ್ಲವೆ? (ಒಪ್ಪಿದೆವು; ಒಪ್ಪಿದೆವು.)

ಈಗ ನೋಡಿರಿ,—ನನ್ನ ಪ್ರಿಯಬಾಂಧವರೇ!

ನಾವೆಲ್ಲರೂ ಏಕಮಾತೃಸಂತಾನರು; ಏಕದೈವೋಪಾಸಕರು; ನಮ್ಮೆಲ್ಲರಿಗೂ ಬಂದೇ ಬಂದಾಗಿರುವ ಸನಾತನ ಅಥವಾ ಆರ್ಯಧರ್ಮವೇ ಅನುಷ್ಠೇಯವು; ಹೀಗಿದ್ದರೂ ನಮ್ಮಲ್ಲಿ ಮಾತ್ರ ಇನ್ನೂ ಬಂಧುಪ್ರೇಮವು ಸರ್ವತ್ರ ಪ್ರಸಾರವಾಗುತ್ತಿಲ್ಲ. ನಮ್ಮಲ್ಲಿ ಪರಸ್ಪರ ಸಾಜನ್ಯಭಾವಗಳು ಅತ್ಯಾಗಿ ಕಾಣುತ್ತಿಲ್ಲ. ಅಲ್ಲದೆ, ನಮ್ಮಲ್ಲಿ ಒಬ್ಬರನ್ನೊಬ್ಬರು ದೂರುವುದಾಗಲೀ, ಒಬ್ಬರಲ್ಲೊಬ್ಬರು ಹೋರುವುದಾಗಲೀ ಬಿಟ್ಟಿಲ್ಲ. ಒಬ್ಬರ ವಸ್ತುವನ್ನು ಮತ್ತೊಬ್ಬರು ಅಪಹರಿಸುವುದೂ, ತಮ್ಮ ಮನಸ್ತೃಪ್ತಿಗೆಂದು ಮತ್ತೊಬ್ಬರ ಮೇಲೆ ಬೀಳುವುದೂ, ಅವರ ಪ್ರಾಣ-ಮಾನ-ಧನಗಳನ್ನು ಅಪಹರಿಸುವುದೂ, ಇವೇ ಮೊದಲಾದ ದುರಾಚಾರಗಳನ್ನು ನಮ್ಮವರು ನಿಶ್ಶೇಷವಾಗಿ

ಬಿಟ್ಟಿರುವಂತೆ ಕಾಣುತ್ತಿಲ್ಲ. ಲೋಕಸ್ಥಿತಿಯು ಹೀಗಿರುವಾಗ ಇನ್ನು ಮಾತೃಭಕ್ತಿ, ದೇಶವಾತ್ಸಲ್ಯ, ಭಾಷಾಭಿಮಾನ, ಬಂಧು ಪ್ರೇಮಗಳ ವಿಚಾರಕ್ಕೆ ಅವಕಾಶವೆಲ್ಲಿರುವುದು? ಮತ್ತು ನಾವದನ್ನು ಆಚರಣೆಗೆ ತರಲು ಹೇಗೆ ಸಮರ್ಥರಾಗುವೆವು?—

ಇತ್ತ ನೋಡಿರಿ; ಬಾಂಧವರೇ!

ಕೋಟ್ಯನುಕೋಟಿ ಸಂಖ್ಯಾಕರಾದ ನಮ್ಮೆಲ್ಲರಿಗೂ ತಾಯಿಯಾಗಿ ಅನಂತ ಸಂತಾನವುಳ್ಳ, ವೀರಪ್ರಸವಿನಿಯೆಂಬ ಪ್ರಖ್ಯಾತಿಯನ್ನು ಪಡೆದಿದ್ದ ನಮ್ಮ ತಾಯಿ, ಜನ್ಮಭೂಮಿ. ಈ ನಮ್ಮ ದೇಶವಾತೆ, ಈಗ ಹೊಂದಿರುವ ಕ್ಲೇಶಭಾವವನ್ನು ನೋಡಿರಿ. ಇವಳ ಈ ಪರಿಸ್ಥಿತಿಗೆ ಕಾರಣರಾರಿರಬೇಕೆಂಬುದನ್ನು ಮನಸಮಾಡಿಕೊಳ್ಳಿರಿ. ಆಗಲಾದರೂ ನಿಮಗೆ ಇದರ ಮರ್ಮವು ತಿಳಿದು, ಪಿತಾಪಹುಟ್ಟಿ, ಇವಳ ಮನಸ್ಸಮಾಧಾನಕ್ಕಾಗಿ ನಿಮಗೆ ನೀವೇ ದೀಕ್ಷೆಯನ್ನು ವಹಿಸುವವರಾಗುವಿರಿ! (ಶೋಚನೀಯ ಸ್ಥಿತಿಯು ನಿಜ. ವಿಚಾರಶಕ್ತಿ ಹೀನರಾದೆವು. ಉಪದೇಶವಾಗಬೇಕು.)

ಪ್ರಿಯಬಾಂಧವರೇ!

ಮಾತೃಜೀರ್ಣೋದ್ಧಾರದಲ್ಲಿ ಒದ್ಯುದರರಾಗಿ ನಿಂತು, ಉದ್ಯೋಗವನ್ನು ಕೈಕೊಳ್ಳಬೇಕೆಂದು ಕೇಳಿಕೊಳ್ಳುತ್ತಿರುವುದು ಮಾತ್ರವಲ್ಲದೆ, ಬಾಹುಬಲ, ಬುದ್ಧಿಶಕ್ತಿ, ವಿದ್ಯಾಧಿಕ್ಯಗಳಿಂದ ಪ್ರಬುದ್ಧಮಾನರಾಗುತ್ತಿರುವ ನಿಮಗೆ ಉಪದೇಶಮಾಡಲು ನಾನು ಶಕ್ತನಲ್ಲ. ಆದರೂ ಇಷ್ಟನ್ನು ಹೇಳಬಲ್ಲೆನು.—

ಹೆತ್ತತಾಯಿಗೆ ಹೆಣ್ಣಾಮಕ್ಕಳಲ್ಲಿ ಅತಿಶಯ ಪ್ರೇಮವಿರುವುದು ಸಹಜವು. ಏಕೆಂದರೆ, ಹುಟ್ಟಿದ ಹೆಣ್ಣಾ, ಬೆಳೆದು ಬುದ್ಧಿಕಲಿತರೆ, ಬ್ಯಾಲದಿಂದಲೂ ತಾಯಿಯೊಡನಾಡಿ, ಕಾಡಿ, ಬೇಡಿ, ನಲಿದಾಡಿ, ತಾಯಿಯ ಕೆಲಸಗಳಲ್ಲಿ ನೆರವಾಗಿ, ಎಳ್ಳಷ್ಟೇ ಬಗೆಯಿಂದ ಅವಳ ಮನಸ್ಸಿಗೆ ಉತ್ಸಾಹವನ್ನು ಹೆಚ್ಚಿಸುವಳು. ಆ ಬಳಿಕ ದೊಡ್ಡವಳಾದರೂ ತನ್ನ ತಾಯಿಯಲ್ಲಿ 'ಹೆಂಗರುಳು ಮೃದು'ವೆಂಬ ನಾಣ್ಣುಡಿಗನುಸಾರವಾಗಿ ತನ್ನ ಸರ್ವಾಂತಃಕರಣದಿಂದಲೂ ವಿಧೇಯಳಾಗಿರುವಳು. ಅಲ್ಲದೆ, ತನ್ನ ತಾಯಿಯಂತೆ ತಾನು ಕೂಡ ಪ್ರೇಮಮಯಿಯಾದ ಮಾತೆಯೆನ್ನಿಸಲು, ಮತ್ತು ತನ್ನ ತಾಯಿಯಂತೆ ಸತೀಮಣಿಯಾಗಿ ಪ್ರಕಾಶಿಸಲು ಸಂಕಲ್ಪಿಸಿ, ಪತಿರಾಜನನ್ನೂ, ಅತನ ಗುರು.

ಬಂಧುವರ್ಗವನ್ನೂ ಅಕೃತ್ರಿಮ ಭಕ್ತಿ–ವಿಶ್ವಾಸಗಳಿಂದ ಸೇವಿಸುತ್ತೆ, ಅತ್ಮ ಕ್ಕೂ ಹಿತಬಂಧುವಿತ್ರರಿಗೂ ಆಹ್ಲಾದದಾಯಿನಿಯಾಗಿ ಬಗೆಗೊಳ್ಳುವಳು. ಹೀಗಾಗುವುದರಿಂದ ತಾಯಿಗೆ. ತನ್ನ ಮಗಳು ತನಗೆ ಸತ್ಕೀರ್ತಿಯನ್ನೂ. ಕುಲಕ್ಕೆ ಗೌರವವನ್ನೂ, ಸಮಾಜಕ್ಕೆ ಕಾಂತಿಯನ್ನೂ ಹೆಚ್ಚಿಸಿದಳೆಂಬ ಸಂತೋಷವುಂಟಾಗುವುದು. ಇಂತಹ ಸಂತೋಷವುಂಟಾಗಬೇಕೆಂದೇ ತಾಯಿಯರು, ತಮ್ಮ ಹೆಣ್ಣುಮಕ್ಕಳಲ್ಲಿ ಹೆಚ್ಚು ಅಕ್ಕರೆಗೊಳ್ಳುತ್ತಿರುವರು. ಸಿದರ್ಶನಕ್ಕೆಂದರೆ, ಲೋಕಮಾನ್ಯ ಸಾವಿತ್ರೀದೇವಿಯ ಚರಿತೆಯೇ ಸಾಕು.

ಆದರೆ, ಈಗಿನ ನಮ್ಮವರ ಪರಿಸ್ಥಿತಿಯು ಹೇಗೆ ತಿರುಗಿದೆ, ನೋಡಿರಿ! ದೇಶಮಾತೆಯ ಸಮಸ್ತ ಕಲ್ಯಾಣಕ್ಕೂ ಕಾರಣರಾಗಿರುವ ಸ್ತ್ರೀಯರನ್ನು ನಾವು ಈಗ ಕೇವಲ ನಿಕೃಷ್ಟಭಾವದಿಂದ ಕಾಣುತ್ತೇವೆ. ಅವರ ಪರಮೋದ್ದೇಶವನ್ನು ವಿಮರ್ಶಿಸಲೊಲ್ಲದೆ, ವಿಕಲ್ಪಾರ್ಥದಿಂದ ಅಲ್ಲಗಳೆದು, ಅವರನ್ನು ಮೂಲೆಗೆ ಒತ್ತರಿಸಿ, ನಿಷ್ಕ್ರಿಯಪಡಿಸುತ್ತಿದ್ದೇವೆ. ಅವರ ಸೇವಾಕಾರ್ಯಗಳಿಗೆ ತಕ್ಕಂತೆ ಸಹಾನುಭೂತಿಯನ್ನು ತೋರಿಸದೆ, ಅನೇಕ ನಿರ್ಬಂಧಗಳನ್ನು ಮುಂದಿಟ್ಟು, ಹಲವು ಬಗೆಯಿಂದ ಅವರ ಮನಸ್ಸನ್ನು ನೋಯಿಸಿ, ಅವರಿಗೆ, ವಿದ್ಯಾವಿಚಾರ—ಶಾಸ್ತ್ರಾಭ್ಯಾಸಗಳನ್ನು ಕಲಿಸುವ ಮಾತಿಗೆ ಪ್ರತಿಯಾಗಿ ಸ್ತ್ರೀಸಾಮಾನ್ಯಕ್ಕೆ ಸಹಜವಾಗಿರುವ ಕೌಶಲ್ಯ(ಬುದ್ಧಿಶಕ್ತಿ)ವನ್ನೂ ಕುಂದಿಸಿ ಕೆಡಿಸುತ್ತಿದ್ದೇವೆ. ಅಂತವರು ಪ್ರಜ್ಞಾಪ್ರಸಾರಕ್ಕವಕಾಶವನ್ನು ಹೊಂದಲಿಯದೆ, ಬಂಧನಕ್ಲೇಶದಲ್ಲಿ ಸಿಕ್ಕಿ, ಹಲವು ವಿಘ್ನಗಳಿಗೆ ಪಕ್ಕಾಗಿ, ತಮ್ಮ ಪವಿತ್ರಹೃದಯದ ಕೋಮಲತೆಯು ಕುಗ್ಗಿಹೋಗುವಂತೆ ಕ್ಲೇಶ–ಅಸೂಯೆ–ಆತುರ–ಅಭಿಮಾನ—ಕ್ರೋಧ—ಸಂಶಯಗಳಿಗೆ ತುತ್ತಾಗಿ ಹೋಗುತ್ತಿರುವಂತೆ ಮಾಡಿ, ನಲಿಯುತ್ತಿರುತ್ತೇವೆ. ಇದಕ್ಕೂ ಹೆಚ್ಚಿನ ದುರ್ಗುಣಗಳುಂಟೇ? ಇಲ್ಲ; ಎಂದಿಗೂ ಇಲ್ಲ.

ಮುತ್ತೂ ಹೇಳುವೆನು ಕೇಳಿರಿ!

ಸ್ತ್ರೀಜನಾಂಗವನ್ನು ಯಾರು ದೂಷಿಸುವರೋ, ಅವರು ಆತ್ಮದ್ರೋಹ ಪಾತಕಕ್ಕೆ ಮೊದಲು ಗುರಿಯಾಗತಕ್ಕವರು. ಏಕೆಂದರೆ, ನಮ್ಮನ್ನು ಹೆತ್ತವಳು ಹೆಂಗಸು; ಹೊತ್ತುಹೊತ್ತಿಗೆ ಅನ್ನನೀರನ್ನಿತ್ತು ಆಡಿಸಿ ಪಾಲಿಸಿದವಳು ಹೆಂಗಸು; ಈಗ ನಮ್ಮನ್ನು ಹೊತ್ತಿರುವವಳಾದರೂ ಹೆಂಗಸೇ ಅಲ್ಲದೆ ಗಂಡ

ಸಲ್ಲ. ಮತ್ತು ನಮ್ಮ ವಿದ್ಯಾ–ಬುದ್ಧಿ–ಶಕ್ತಿ–ಮೇಧಾ–ಪ್ರಜ್ಞಾ ಇವೆಲ್ಲಕ್ಕೂ ಅಭಿಮಾನಿಗಳಾದವರೆಲ್ಲರೂ ಸ್ತ್ರೀಯರೇ ಆಹುದು. ಅಲ್ಲದೆ, ಮುಂದೆ ನಮ್ಮ ಸಮಸ್ತ ವಿಚಾರಗಳಿಗೂ ಸ್ತ್ರೀಯರ ಸಹಾನುಭೂತಿಯೇ ಮೂಲವಾಗಿರಬೇಕು; ಅದಿಲ್ಲದಿದ್ದರಾಗದು. "ಹೆಂಗಸರು ಮಾಯಾವಿನಿಯರು; ಅನೇಕ ಕುಟಿಲ ತಂತ್ರಗಳಿಂದ ಪುರುಷರನ್ನು ದುರ್ಮಾರ್ಗದಲ್ಲಿ ಕೆಡಹತಕ್ಕವರು; ಆದುದರಿಂದ ಅವರನ್ನು ಯಾರೂ ನಂಬಬಾರದು; ವಿಶ್ವಾಸಪಡಲೂ ಬಾರದು;" ಎಂದು ಅನೇಕರು ಹೇಳುತ್ತಿರುವರು. ಇದು ಸಾಧುವಲ್ಲ. ಯಾರು ಸ್ತ್ರೀಯರನ್ನು ನಂಬಲಾರರೋ, ಅವರು ತಮ್ಮನ್ನು ತಾವೇ ನಂಬಲಾರದ ಕಳ್ಳರು. ಅಂತವರಲ್ಲಿ ನಿಜವಿಲ್ಲ; ಸ್ಥಿರತೆಯಿಲ್ಲ; ಸಮಾಧಾನವು ಮೋದಲೇ ಇಲ್ಲ. ಎಂದರೆ, ಸ್ತ್ರೀಯರನ್ನು ಮೇಲೇರಿಸಿ ನಾವು ಅವರಿಗೆ ದಾಸಭೂತರಾಗಬೇಕೇನೆಂದು ಕೇಳುವಿರಿ?– ಹಾಗಲ್ಲ. ಸ್ತ್ರೀಯರನ್ನು ಅತಿಯಾಗಿ ಮುದ್ದಿಸಿ, ಅವರ ವಿಲಾಸಕ್ಕಾಗಿ ತಾವು ಮರುಳರಾಗಬೇಕೆಂಬುದು ನನ್ನ ಅಭಿಪ್ರಾಯವಲ್ಲ. ಸ್ತ್ರೀಯರಿಗೆ ನಾವು ಅತ್ಯಾವಶ್ಯವಾಗಿ ಕೊಡಬೇಕಾಗಿರುವ—ಅದಿಯಿಂದಲೂ ನಮ್ಮ ಆರ್ಯರಿಂದ ಸ್ತ್ರೀಜನಾಂಗಕ್ಕೆಂದು ವಹಿಸಲ್ಪಟ್ಟಿರುವ, ಮುಂದೆ ಅವರು ನಿರಮಾತೆಯರಾಗಿ, ಧರ್ಮಾಭಿವೃದ್ಧಿಗೆ ಆಶ್ರಯಸ್ವರೂಪಿಣಿಯರಾಗಿ ಪ್ರಕಾಶಿಸುವಂತೆ ಮಾಡಲ್ಪಡಬೇಕಾಗಿರುವ ವಿಚಾರಗಳಲ್ಲಿ ಮಾತ್ರ ನಾವು ಧರ್ಮೈಕ—ನ್ಯಾಯೈಕ ದೃಷ್ಟಿಯಿಂದ ಅವರಲ್ಲಿ ಧಾರಾಳಬುದ್ಧಿಯನ್ನು ತೋರಿಸಿದರೆ ಎಷ್ಟೋ ಉಪಕಾರ ಮಾಡಿದಂತಾಗುವುದು. ಹೀಗೆ ಮಾಡಬೇಕಾದರೆ ನಮ್ಮಲ್ಲಿ ಇನ್ನೆಷ್ಟು ಕಾಲ ಹಿಡಿಯಬೇಕೋ ತಿಳಿಯದು.

ಮತ್ತೂ ಹೇಳುವೆನೇನೆಂದರೆ,—

ನಮ್ಮ ಆರ್ಯಬಾಂಧವರಲ್ಲಿ ತಮ್ಮ ಸತಿಯರಲ್ಲಿ ತಾವು ಅವ್ಯಾಲೋಚನೆ ಮಾಡುವುದಾಗಲೀ, ಅವರ ಅಭಿಪ್ರಾಯವನ್ನು ಅನುಮೋದಿಸುವುದಾಗಲೀ ಬಹು ನಾಚಿಕೆಕೇಡಿನ ಸಂಗತಿಯೆಂದು ತಿಳಿದಿರುವವರು ಹಲವರಿರುವರು. ಮತ್ತೆ–ಪತ್ನಿಯ ಅಭಿಪ್ರಾಯದಂತೆ ನಡೆಯಬೇಕೆಂಬ ಬಂದೇ ಪಟ್ಟನ್ನು ಹಿಡಿದು, ಉಚಿತಾನುಚಿತ ಪ್ರಜ್ಞೆಯಿಲ್ಲದೆ ಕೇವಲ ವಿಲಾಸದಲ್ಲಿ ಬೆರೆದು, ತಮ್ಮ ಹಿರಿಯರನ್ನೂ ಗುರುಜನರನ್ನೂ ಗಣಿಸದೆ ತಿರುಗುವವರೂ ಕೆಲವರಿರುವರು. ಇವರಿಬ್ಬರ ಅಭಿಪ್ರಾಯಗಳೂ ಅನರ್ಥಕಾರಿಗಳಲ್ಲದೆ ಬೇರಿಲ್ಲ.

ಪತ್ನಿಯಲ್ಲಿ,—ಪ್ರಜ್ಞಾಸ್ವರೂಪಿಣಿಯಾದ ಸಹಧರ್ಮಿಣಿಯಲ್ಲಿ, ಕಾಲೋಚಿತವಾಗಿ ಸಮಾಲೋಚಿಸಿ, ತಕ್ಕಂತೆ ಸಹಾಯವನ್ನು ಹೊಂದಿ, ಸಕಲ ಧರ್ಮ—ಅರ್ಥ ಸಂಬಂಧವಾದ ಕ್ರಿಯಾಕಲಾಪಗಳಲ್ಲಿ ಕೃತಕಾರ್ಯರಾಗುವವರು ವಿರಳ. ಇಂತಹ ಪುರುಷಶ್ರೇಷ್ಠರಲ್ಲಿ, ಸದ್ಯಸ್ಥಿತಿಯಲ್ಲಿ ನಮ್ಮ ನಗೇಶರಾಯನೇ ಅಗ್ರಗಾಮಿಯಾಗಿರುವನೆಂದರೆ ಅತ್ಯುಕ್ತಿಯಲ್ಲ. (ನಾಥು ನಾಥ..)

ನಗೇಶರಾಯನಲ್ಲಿ ಇಂತಹ ಲೋಕೋತ್ತರ ಗುಣಗಳಿರುವುದರಿಂದಲೇ, ಅತನು ತನ್ನ ಸಹಧರ್ಮಿಣಿಯೊಡನೆ, ದೇಶನಾತೃಸೇವೆಯಲ್ಲಿ ಕೃತಕೃತ್ಯನಾಗಿರುವನು. ಸತೀಮಣಿಯಾದ ಚಿತ್ರಕಲೆಯು, ಪತಿಯ ಛಾಯಾನುವರ್ತಿನಿಯಾಗಿರುವುದರಿಂದಲೇ, ಶಿವಪುರದಲ್ಲಿ ಈ ಕೆಳಗೆ ಸೂಚಿಸಿದ ಸಮಾಜಶಾಸನ ಸಂಬಂಧವಾದ ಗಂಡಾಂತರಗಳೆಲ್ಲವನ್ನೂ ದಾಟಿ, ನಿಷ್ಕಾರಿಗಳ ಪುಂಡಾಟವಡಗುವಂತೆ ಮಾಡಿ, ಪ್ರತಿಜ್ಞಾಪರಿಪಾಲನೆಯಲ್ಲಿ ಅಪ್ರತಿಮನೆನ್ನಿಸಿದನು.

ಇನ್ನೊಂದು ಕಡೆಯಲ್ಲಿ ನೋಡಿದರೆ, ಸಪತ್ನೀಮಾತ್ಸರ್ಯದ ಭೀಕರ ವ್ಯಾಧಿಯು ನಮ್ಮವರಲ್ಲಿ ಬಹುಜನರನ್ನು ನರಳಿಸುತ್ತಿರುವುದಾದರೂ, ನಿರ್ಮತ್ಸರ ಪ್ರೇಮಮಯಳಾಗಿರುವ ಚಂದ್ರಮತೀದೇವಿಯಿಂದ ಅದು ಪರಾಭವ ಹೊಂದುವಂತಾಯಿತು. ಅಂತಹ ನಾರೀಮಣಿಯ ಸಹವಾಸಲಾಭದಿಂದ ಶರಚ್ಚಂದ್ರನಾಥನು, ಲೋಕೋತ್ತಮ ಗುಣಸಂಪನ್ನನಾದ ಅಚಲಚಂದ್ರನಿಂದ ನಿರಂತರವೂ ಸೇವಿಸಲ್ಪಡುವಂತಾದನು. ಹಾಗಾಗದಿದ್ದರೆ, ಇಂತಹ ಪುತ್ರರತ್ನವನ್ನು ಪಡೆದೂ ಅದೃಷ್ಟಹೀನನಾಗಿ ನರಳಬೇಕಾಗುತ್ತಿದ್ದಿತು.

ಮತ್ತೂ ಕೇಳಿರಿ ಬಾಂಧವರೇ!

ನಾಲ್ಕಾರು ಅಕ್ಷರಗಳನ್ನು ಕಲ್ತು, ಬಂದೆಂದು ಕಲಿಗಳನ್ನು ತಿಳಿದು, ಯಾವುದೋ ಒಂದು ಸರ್ಕಾರಿ (ಅಲ್ಪವೋ—ಅಧಿಕವೋ ಹೇಗಾದರೂ ಸರಿ) ಉದ್ಯೋಗ ಅಥವಾ ಅಧಿಕಾರವನ್ನು ಕೈಕೊಂಡ ಮಾತ್ರಕ್ಕೆ, ಅಹಂಕಾರ—ಉದಾಸೀನಗಳಿಂದ ಬೀಗಿ, ದೀನಾನಾಥರಲ್ಲಿ ಬಂದಿಷ್ಟಾದರೂ ದಯೆತೋರದೆ, 'ತಮಗಾರು ಸರಿ, ತಾವಾರಿಗೆ ನಿಧೇಯರಾಗಬೇಕು' ಎಂಬ ದುರ್ಭಾವನೆಯಿಂದ ತಮ್ಮ ಕರ್ತವ್ಯವನ್ನೇ ಮರೆತು, ಕಾಳಿತಿರುವವರೆಷ್ಟೋ ಮಂದಿಯಿರುವರು. ಇಂತವರಲ್ಲಿ ಕೆಲವರು, ತಮ್ಮ ವಯಸ್ಸಾಬಲ್ಯಕಾಲ

ದಲ್ಲಿ ಹಾಗೂ ಹೀಗೂ ಇದ್ದರೂ, ವಯಸ್ಸುಕಳೆದಂತೆಲ್ಲಾ ವಿಷಯಭ್ರಾಂತಿ, ಪಕ್ಷಪಾತ, ಕಾರಣ್ಯ, ಕೃಪಣತೆಗಳನ್ನು ಅಭ್ಯಸಿಸಿ ಮುಪ್ಪಿನಮರುಳಾಟವಾಡುತ್ತಿರುವರು. ಇಂತವರು ತಮ್ಮ ಮುಂದಿನ ಮಕ್ಕಳನ್ನು ಮಂದಿಗಳಾಗುವಂತೆ ಮಾಡುವ ಹೋಜನೆಯನ್ನು ಒಂದು ಕಡೆಗಿಟ್ಟು, ತಮ್ಮ ಮುಪ್ಪಿನಲ್ಲಿ ತಮಗುಂಟಾದ ಮರುಕ್ತನವನ್ನೇ ಮಕ್ಕಳಿಗೆ ಕಲಿಸುವುದೂ, ಇಲ್ಲವೆ, ತಮ್ಮ ಚಾಪಲ್ಯರೋಗವನ್ನು ನೋಡಿ ಸಹಿಸಲಾರದ ಮಕ್ಕಳನ್ನೇ ತಾವು ಕಳೆದುಕೊಳ್ಳುವುದೂ ಹೀಗೆ ಎರಡು ಬಗೆಯಿಂದಲೂ ದೇಶಕ್ಕೆ ಮತ್ತು ಸಮಾಜಕ್ಕೆ ಹಾನಿಯನ್ನುಂಟುಮಾಡುವವರಾಗಿರುತ್ತಾರೆಂಬುದನ್ನು ಬಹು ಜನರು ನೋಡಿಯೇ ಇರಬಹುದು. ಆದರೆ ಅಧಿಕಾರವು ಹೆಚ್ಚಿದಷ್ಟೂ ಉತ್ತರವಾದಿತ್ವವೂ ಹೆಚ್ಚಿ, ನ್ಯಾಯಾನ್ಯಾಯಗಳ ಸೂಕ್ಷ್ಮವನ್ನರಿತು, ವಿಹಿತಮಾರ್ಗದಲ್ಲಿ ನಡೆಯುವುದಲ್ಲದೆ, ಮತ್ತು ವಿಹಿತಮಾರ್ಗದಿಂದ ದೇಶಹಿತಕಾರ್ಯದಲ್ಲಿ ನಿರತವ್ರತರಾಗಿರುವವರನ್ನು ಅಧಿಕವಾಗಿ ಪ್ರೋತ್ಸಾಹಿಸಿ, ಅಂತವರ ಸತ್ಕಾರ್ಯದಲ್ಲಿ ತಮ್ಮ ಶಕ್ತ್ಯನುಬದ್ಧವಷ್ಟು ಮಟ್ಟಿಗೂ ಅನುಕೂಲಗಳನ್ನು ಕಲ್ಪಿಸುವ ವಿದ್ವನ್ಮಣಿಗಳಲ್ಲಿ ಕಲೆಕ್ಟರ್ ಜ್ಞಾನಸಾರಚಕ್ರವರ್ತಿಯೂ, ಕಾಲೇಜ್‌ಸೂಪರಿಂಟೆಂಡೆಂಟ್ ವಿದ್ಯಾನಂದ ಬಾಬುವೂ ಪ್ರಧಾನವ್ಯಕ್ತಿಗಳಾಗಿರುತ್ತಾರೆ. ಇವರ ಕರ್ತವ್ಯ ದಕ್ಷತೆಯಿಂದ, ಇವರು ಕಲ್ಪಿಸಿಕೊಟ್ಟ ಅನುಕೂಲಗಳಿಂದ ದೇಶಮಾತೆಯ ಸತ್ಪುತ್ರನಾದ--ವಿದ್ಯಾರ್ಥಿಕುಲಮಂಡನನಾದ--ಸಮಾಜದ ಶಾಂತಿಸಂಸ್ಥಾಪನೆಯಲ್ಲಿ ದಕ್ಷನಾದ—ಅಚಲಚಂದ್ರನು ತನ್ನ ಸಹಾಧ್ಯಾಯಿಗಳಲ್ಲಿ, ಈ ಕಾಲದ ನವನಾಗರಿಕರೆಂಬ ಹೆಮ್ಮೆಗೊಂಡು, ಸೊಗಸು—ಶೃಂಗಾರಗಳಲ್ಲಿಯೇ ನಿರತರಾಗಿದ್ದ ಇತರ ತರುಣರನ್ನೂ ತನ್ನಂತೆಯೇ ದೇಶಮಾತೃಸೇವೆಯಲ್ಲಿ, ಸಮಾಜದ ಕಲ್ಯಾಣ ಕಾರ್ಯದಲ್ಲಿ ಬದ್ಧರನ್ನಾಗಿ ಮಾಡಿಕೊಳ್ಳುವನಾದನು. ಹಾಗಿಲ್ಲದಿದ್ದರೆ, ನಗೇಶರಾಯನ ಮೇಲೆ ಹೊರೆಯಿಸಲ್ಪಟ್ಟ ಆರೋಪ, ಬಹಿಷ್ಕಾರಗಳಿಂದ ಶಿವನಗರಕ್ಕೆ ಉಂಟಾಗಿದ್ದ ಅಗ್ರಹವು, ಇಷ್ಟು ಬೇಗ ಶಾಂತಿಹೊಂದುತಿದ್ದಿತೆಂದಾಗಲೀ, ಮುಂದಾಲೋಚನೆಯಿಲ್ಲದೆ ತಮ್ಮ ಪೂರ್ವದ ಅಕಾರ್ಯಗಳು ಹೊರಬೀಳುವುದೆಂಬ ವಿಚಾರವೂ ಇಲ್ಲದೆ, ಸ್ವಕಾರ್ಯಸಾಧನೆಗಾಗಿ ನಗೇಶರಾಯನ ಮತ್ತು ಅತನ ಅನುಗಾಮಿಗಳ ಪರಿವಾರದಲ್ಲಿ ಆಪದವನ್ನು ತಂದೊಡ್ಡುತ್ತಿದ್ದ ಪಂತರು—

ಭಟ್ಟಾಚಾರ್ಯುರ ಅಕ್ರಮಗಳಿಗೆ ಪ್ರಾಯಶ್ಚಿತ್ತವಾಗುತ್ತಿದ್ದಿತೆಂದಾಗಲೀ ಹೇಳಲಾರೆನು.

ಕಲೆಕ್ಟರರ ನ್ಯಾಯೈಕ ಪಕ್ಷಪಾತವೂ, ವಿದ್ಯಾಸಂದ ಬಾಬುವಿನ ಜ್ಞಾನ ಪ್ರಸಾರದ ಪರಮೋದ್ದೇಶವೂ, ಶರಚ್ಚಂದ್ರನಾಥನ ಸಮತಾಭಾವವೂ ಸಹಕರಿಸದಿದ್ದ ಪಕ್ಷದಲ್ಲಿ ನಗೇಶರಾಯನು ಎಷ್ಟೇ ಲೋಕೈಕವೀರನೂ, ದಕ್ಷನೂ, ಧೈರ್ಯಶಾಲಿಯೂ ಆಗಿದ್ದ ಮಾತ್ರದಲ್ಲಿಯೂ, ಈತನೊಬ್ಬನಿಂದಲೇ ಇಷ್ಟು ಕಾರ್ಯಗಳೂ ನೆರೆವೇರುತ್ತಿರಲಿಲ್ಲ. ಅಲ್ಲದೆ, ಅವರ ಸಹಾಯವಿಲ್ಲದಿದ್ದರೆ ಈತನು ನಂದಿನಿಯ ಪರವಾಗಿ ಉಂಟಾದ ಅಷ್ಟರ ಕಷ್ಟ—ನಷ್ಟ—ನಿಷ್ಠುರಗಳನ್ನೂ ತಡೆದು ನಂದಿನಿಯನ್ನು ಪರಿತ್ಯಾಗಮಾಡಬೇಕೆಂದಮರ ಬಾಯನ್ನು ಕಟ್ಟಿ, ನಾಲದುದಕ್ಕೆ ತನ್ನ ಮಗಳನ್ನು ಕೂಡ, ನಂದಿನಿಯಂತೆಯೇ ಬಿಳಿಯಿಸಿ, ದುರಾಶಾ ಪಿಶಾಚಗ್ರಸ್ತರನ್ನು ಹಣ್ಣಿಗೆ ತರುವೆನೆಂಬ ಪಂಥವನ್ನೊಡ್ಡಿ, ಇಷ್ಟರ ಸಂಭ್ರಮಕ್ಕೂ ಕಾರಣ-ಕಾರ್ಯ-ಕರ್ತನಾದನೆಂದು, ಇಂದು ಲೋಕಮಾನ್ಯನೆನ್ನಿಸುವಂತಹ ಸುಯೋಗವನ್ನೂ ಕಾಣುತ್ತಿರಲಿಲ್ಲ. ಅದುದರಿಂದಲೇ ನಮ್ಮವರಲ್ಲಿ ಐಕಮತ್ಯವೊಂದಿದ್ದರೆ, ಅದೇ ಸಂಘಶಕ್ತಿಯ ಮಹತ್ತತ್ತ್ವವನ್ನು ಸರ್ವಪ್ರಕಾರದಿಂದಲೂ ಸಾರ್ಥಿಕ್ಯಪಡಿಸುವಂತೆ ಮಾಡುವುದೆಂದೂ, ಇದೆಲ್ಲಕ್ಕೂ ನಮ್ಮಲ್ಲಿ ನಿಷ್ಕಲಂಕವಾದ ಬಂಧುಪ್ರೇಮವೂ ಪೂಜ್ಯಭಾವನೆಯೂ ಚೆನ್ನಾಗಿರಬೇಕೆಂದೂ ಹೇಳಲು ತಡೆಯಿಲ್ಲ.

ಇನ್ನು ವಿವರವಿಷ್ಟಕ್ಕೆ ಸಾಕು. ಮುಖ್ಯವಿಚಾರವನ್ನು ಸೂಚಿಸಿ, ಕೃತಕಾರ್ಯನಾಗುವೆನು.

ಕೇಳಿರಿ, ನನ್ನ ಪ್ರಿಯಬಾಂಧವರೇ!

ನಂದಿನಿಯು ವಿಚಾರವಾಗಿ ನೀವು ಇಂದಿನವರೆಗೆ ಹೇಗೆ ಹೇಗೆ ತಿಳಿದಿರುವಿರೋ—ಅದರಲ್ಲಿ, ನಿಜಾಂಶವೆಷ್ಟಿರಬಹುದೊ, ಯಾರೂ ಹೇಳಲಳವಲ್ಲ. ಅಲ್ಲದೆ,—"**ಅಜ್ಞಾತಗೋತ್ರದ ಭಿಕ್ಷುಕನ ಮಗಳು, ಸ್ವೇಚ್ಛಾಚಾರಿ, ಅವಿವಾಹಿತೆಯಾದ ಷೋಡಶಿ**" ಇತ್ಯಾದಿ ಇತ್ಯಾದಿಯಾದ ಪರುಷ ಭಾಷಣಗಳಿಂದ ಇವಳ ಯಾವದ್ವೃತ್ತಾಂತವನ್ನೂ ತಿಳಿಯಬೇಕೆಂಬ ಕೌತುಕವೂ ನಿಮಗಾಗಿರಬಹುದು. ಹೀಗಾಗಬೇಕಾದುದು ಸಹಜವೇ ಸರಿ. ಏಕೆಂದರೆ.—

ಈ ಅನಂದವನದ ಮಾತೃಮಂದಿರದಲ್ಲಿ "ಕೇವಲ ಫಲಮೂಲಾಹಾರಿಯಾಗಿರುವ ಒಬ್ಬ ಸನ್ಯಾಸಿಗೆ ಇವಳು ಕನ್ಯೆಯೆಂತಾಗುವಳು? ಸನ್ಯಾಸಿಯಾಗಿದ್ದರೆ ಈ ಹೆಂಗಸನ್ನು ಇಷ್ಟರ ವರೆಗೂ, ತನ್ನ ಬಳಿಯಲ್ಲಿ ಹೀಗೇಕೆ ಬಿಳಿಯಿಸಿಕೊಂಡಿದ್ದನು?" ಎಂದು ಹಲವರು ಶಂಕಿಸಬಹುದಲ್ಲದೆ, ತಪಸ್ವಿನಿಯ ವಿಚಾರವಾಗಿಯೂ ಹಲವು ವಿಕಲ್ಪಾರ್ಥಗಳನ್ನೇ ಪ್ರಯೋಗಿಸಬಹುದಲ್ಲವೆ? ಸಹಜ. ಇದು, ವಿಚಾರವಿಮರ್ಶೆಯಿಲ್ಲದ ಸಾಮಾನ್ಯರಿಗೆ ಉಂಟಾಗುವುದು ಸ್ವಾಭಾವಿಕವೇ ಸರಿ. ಆದರೂ ವ್ರಾಜ್ಞರು ಇದನ್ನು ಒಪ್ಪಲಾರರು. ಆದಿರಲಿ. ನಂದಿನಿಯು ಅವಿವಾಹಿತೆಯಾದ ಷೋಡಶಿಯಾಗಿರುವುದೇನೋ ಸಹಜ. ಆದರೆ, ಅವಳು ತನ್ನ ಗರ್ಭಧಾರಿಣಿಯಾದ ಮಾತೃವಿಯೋಗವನ್ನು ಹೊಂದಿದ ಬಳಿಕ ಇಂದಿನವರೆಗೆ ಈ ಎಂಟು ವರ್ಷಗಳನ್ನು ಅಚಲವಾದ ಬ್ರಹ್ಮಚರ್ಯೆಯಲ್ಲಿ ನಿಯೋಗಿಸಿ, ತಕ್ಕಮಟ್ಟಿಗೂ ಜ್ಞಾನವನ್ನು ಸಂಪಾದಿಸಿಕೊಂಡಿರುವಳಲ್ಲದೆ, ಹೀಗೆಯೇ ಇನ್ನೆಷ್ಟುಕಾಲವಿದ್ದರೂ ಮನೋವಿಕಲ್ಪಕ್ಕೆ ಅವಕಾಶವಿಲ್ಲದೆ ಇರುವಳೆಂದು ಸಪ್ರಮಾಣವಾಗಿ ಹೇಳಬಹುದು. ಆದರೆ, ದೇಶಮಾತೆಯ ಅಭ್ಯುದಯಕ್ಕಾಗಿ-ಸಮಾಜದ ಅನಿಷ್ಟನಿವಾರಣೆಗಾಗಿ-ಸ್ತ್ರೀಪ್ರಪಂಚದ ಕಲ್ಯಾಣಕ್ಕಾಗಿ-ತರುಣಗೃಹಸ್ಥರ ಕರ್ತವ್ಯಸ್ಫೂರ್ತಿಗಾಗಿ ಇಂದು ಇವಳನ್ನು ಸುಬ್ರಹ್ಮಚರ್ಯನಿಷ್ಠಾತೆಯಾದ ಗೃಹಿಣೀರತ್ನವನ್ನಾಗಿ ಮಾಡಬೇಕೆಂಬುದು ಮಾತೆಯ ಉದ್ದೇಶವಾಗಿದೆ. (ಕರತಾಡನದೊಡನೆ "ಮೇಲು ಮೇಲು, ಮತ್ತೊಂದುಬಾರಿ")

ಮಾತೆಯ ಸಂಕಲ್ಪದಂತೆ ಇಂದು ಇವಳನ್ನು ಗೃಹಿಣಿಯಾಗಿ ಮಾಡಿ, ಋಣವಿಮುಕ್ತನಾಗಬೇಕಾದುದು ನನ್ನ ಕರ್ತವ್ಯವಾಗಿರುವುದರಿಂದ, ಇಂದು ಇವಳ ಇತಿವೃತ್ತವನ್ನೂ ವಿದಿತಪಡಿಸಬೇಕಾಗಿದೆ, ಕೇಳಿರಿ.—

ನಂದಿನಿಯ ತಾಯಿಯೇ ನನ್ನ ದ್ವಿತೀಯ ಪತ್ನಿ. ಸನ್ಯಾಸಿಗೆ ಪತ್ನಿಯೆಲ್ಲಿ?—ಏಕೆ—ಎನ್ನುವಿರಿ? ನನ್ನಭಾವನೆ ಅದಲ್ಲ. ಯಾವ ಪುಣ್ಯವತಿಯು ತನ್ನ ಜೀವಿತವನ್ನೆಲ್ಲ ಪತಿಯ ಸೇವೆಯಲ್ಲಿಯೇ ಕಳೆದು, ತನ್ನ ಜೀವನಸರ್ವಸ್ವನಂದ ಸ್ವರೂಪವನ್ನು ಹೊಂದಿ ಅಂತರ್ಹಿತೆಯಾದಳೋ, ಅಂತಹ ಪುಣ್ಯಮೂರ್ತಿಯಲ್ಲಿ ಕೃತಘ್ನನಾಗುವುದು ನನ್ನ ಶೀಲವಲ್ಲ. ಅವಳನ್ನು ನಾನು ನನ್ನ ಸರ್ವಾಂತಃಕರಣದಿಂದಲೂ ಗೌರವಿಸಿಯೇ ಈಬಗೆಯಾಗಿ ನನ್ನ ಕರ್ತ

ತ್ಯ-ಧರ್ಮ-ಧ್ಯೇಯಗಳನ್ನು ನಿರಾತಂಕದಿಂದ ನಿರ್ವಹಿಸುತ್ತಿರುವೆನು. ಆ ಪುಣ್ಯವತಿಯ ಸಹಕಾರದಿಂದಲೇ ನನ್ನ ಚಿತ್ತವು. ಸಮಸ್ತಸ್ತ್ರೀಪ್ರಪಂಚವನ್ನೂ, ಇಲ್ಲಿ ಸಾಕ್ಷಾತ್ಕರಿಸಿರುವ ನಮ್ಮ ತಾಯಿಯಂತೆಯೇ ಭಾವಿಸಿ, ಪೂಜಿಸುತ್ತಿರುವೆನು. ಮತ್ತು ಅವರಲ್ಲಿ ನಾನು ಕೇವಲ ಬಾಲಮಾತ್ರನೆಂದೇ ತಿಳಿದಿರುವೆನು; ಅಲ್ಲದೆ ಆ ಪುಣ್ಯಮೂರ್ತಿಯನ್ನು ಮರೆತು, ಸ್ತ್ರೀಯರನ್ನು ನೋಡುವುದಾಗಲೀ, ನುಡಿಸುವುದಾಗಲೀ. ಅವರ ಹೆಸರನ್ನೆತ್ತುವುದಾಗಲೀ ಸನ್ಯಾಸಿಗೆ ತಕ್ಕುದಲ್ಲವೆಂದಾಡುವರಂತೆ ನಾನು ಅತ್ಯಲ್ಪಜ್ಞನಾಗಿ, ಅಜ್ಞಾನದ ಸಂಶಯ ಕ್ಲೇಶದಲ್ಲಿ ಕೊರಗಿದ ಮಾತ್ರದಿಂದ ಸನ್ಯಾಸ ಧರ್ಮದಲ್ಲಿ ನಿಷ್ಠನಾಗುವೆನೆಂದು ಹೇಗೂ ಎಣಿಸಲಾರೆನು. ಅದಿರಲಿ.

ನಂದಿನಿಯು ತಾಯಿಯು ವಿಶ್ವನಾಥಭಟ್ಟಾಚಾರ್ಯರಿಗೆ ಅಣ್ಣನ ಮಗಳಾಗಿದ್ದಳು. ಭಟ್ಟಾಚಾರ್ಯರ ಅಣ್ಣಂದಿರು ಸಾಮಾನ್ಯಪುರುಷರಾಗಿರಲಿಲ್ಲ. ಅವರ ಜ್ಞಾನವು ಅತ್ಯದ್ಭುತವಾಗಿದ್ದುದರಿಂದ ಅವರು ತಮ್ಮ ಏಕಮಾತ್ರ ಪುತ್ರಿಯನ್ನು ಸುಶಿಕ್ಷಿತಳನ್ನಾಗಿ ಮಾಡಿದ್ದರು. ಅಲ್ಲದೆ ಅವರ ಉಚ್ಚಭಾವನೆಗೆ ತಕ್ಕಂತೆ ಪತ್ನೀಪಿಯೋಗದಿಂದ ವಿರಕ್ತನಾಗಿ, ಪರಸ್ಥಳದಲ್ಲಿ ನ್ಯಾಸಂಗಿಸುತ್ತಿದ್ದ ನನ್ನನ್ನು ಕರೆಯಿಸಿ, ಕನ್ಯಾದಾನಮಾಡಿ, ಮತ್ತೆ ನನ್ನನ್ನು ಗೃಹಸ್ಥನನ್ನಾಗಿಸಿ, ತಾವು ಬಂಧನಮುಕ್ತರಾದರು. ಇದರಿಂದ ನಮ್ಮ ತಾಯಿಗೂ, ನನ್ನ ಸೋದರ-ಸೋದರಿಯಾದ ಶರಚ್ಚಂದ್ರ, ತಪಸ್ವಿನಿಯರಿಗೂ ಅತ್ಯಂತ ಸಮಾಧಾನವಾಯಿತು. ನಂದಿನಿಯು ಹುಟ್ಟಿದ ನಾಲ್ಕನೆಯ ವರ್ಷದಲ್ಲಿಯೇ ನಾನು, ತಮ್ಮನು ಶವಪುರದಲ್ಲಿ ಬೇರೆಯಿದ್ದುದರಿಂದ ನನ್ನ ಪತ್ನಿಯ ಮತ್ತು ನಂದಿನಿಯ ಮೇಲ್ವಿಚಾರಣೆಯನ್ನು ತಂಗಿಗೊಪ್ಪಿಸಿ, ವೃದ್ಧಳಾಗಿದ್ದ ನಮ್ಮ ತಾಯಿಯನ್ನು ತೀರ್ಥಯಾತ್ರೆಗಾಗಿ ಕರೆದುಕೊಂಡುಹೋದೆನು. ತಾಯಿ ಹೊಡನೆ ನಾನು ಭೂಪ್ರದಕ್ಷಿಣಮಾಡಲು ಹೊರಟು, ಪ್ರಯಾಗವನ್ನು ಸೇರಿದ ಒಂದೆರಡು ವಾರಗಳಲ್ಲಿಯೇ ತಾಯಿಯು ಮೃತಪಟ್ಟುದರಿಂದ ಮಾತೃಕೈಂಕರ್ಯವನ್ನು ಪ್ರಯಾಗದಲ್ಲಿಯೇ ಯಥೋಕ್ತರೀತಿಯಾಗಿ ನೆರವೇರಿಸಿ, ಅಲ್ಲಿಂದ ಕಾಶೀಕ್ಷೇತ್ರಕ್ಕೆ ಹೊರಟು ಬಂದೆನು.

ಪ್ರೇಮಮಯಿಯಾದ ನನ್ನ ತಾಯಿಯು ನನ್ನನ್ನು ಬಿಟ್ಟು ಹೋದಳೆಂಬ ದುಃಖವು ನನಗೆ ಅತಿಯಾಗಿದ್ದು, ಪವಿತ್ರತಮವಾದ ಕಾಶೀಕ್ಷೇತ್ರವನ್ನು

ನೇರಿಯೂ ನನಗೆ ಸಂತೋಷವುಂಟಾಗಲಿಲ್ಲ. ಯಾವಾಗಲೂ ಆ ತಾಯಿಯ ಹಂಬಲವೊಂದಲ್ಲದೆ ನನಗೆ ಮತ್ತಾವುದೂ ಬೇಕಾಗಿರಲಿಲ್ಲ. ಹೀಗೆ ನಾನು ಹುಚ್ಚನಂತಾಗಿ ಬಂದು ದಿನ ಗಂಗಾತೀರದಲ್ಲಿ ನಿರ್ವಿಣ್ಣನಾಗಿ ಕುಳಿತಿದ್ದಾಗ, ನನ್ನಲ್ಲಿಗೆ ದಯಾಘನನಾದ ಯೋಗೀಶ್ವರನೊಬ್ಬನು ಬಂದು, ನನ್ನ ವಿಚಾರವೆಲ್ಲವನ್ನೂ ಕೇಳಿದನು. ನಾನು ಕೂಡ ನನ್ನ ಚರಿತೆಯನ್ನು ಅತನಿಗೆ ಹೇಳಿದುದಲ್ಲದೆ, ತಾಯಿಯನ್ನು ಬಿಟ್ಟಿರಲಾರೆನೆಂದೂ, ಅಂತಹ ನನ್ನ ಪರಮ ಪ್ರಿಯಮಾತೆಯನ್ನು ನೋಡಬಹುದಾದ ಉಪಾಯವಿದ್ದರೆ, ಹೇಳಬೇಕೆಂದೂ ಯೋಗಿಯನ್ನು ಬಹು ವಿಧದಿಂದ ಪ್ರಾರ್ಥಿಸಿದೆನು.

ಯೋಗಿವರನು ನಗುನಗುತ್ತ ನನ್ನ ಕೈಹಿಡಿದು–'ತಮ್ಮ! ನನ್ನೊಡನೆ ಬಾ. ನೀನು ತಾಯಿಯನ್ನು ಕಾಣುವೆ' ಎಂದು ಹೇಳಿ ನನ್ನನ್ನು ತಮ್ಮ ಆನಂದಮಂದಿರಕ್ಕೆ ಕರೆದೊಯ್ದು, ಅಲ್ಲಿದ್ದ ಉಳಿದ ಸಂನ್ಯಾಸಿಗಳನ್ನು ನನಗೆ ತೋರಿಸಿ,–''ನೋಡಿದೆಯಾ, ತಮ್ಮ! ಇವರೆಲ್ಲರೂ ನನಗೂ ನಿನಗೂ ಅಣ್ಣ ತಮ್ಮಂದಿರು; ಇವರು ಇಲ್ಲಿರುವುದಾದರೂ ತಾಯಿಯು ಸೇವೆಗಾಗಿಯೇ" ಎಂದು ಹೇಳುಹೇಳುತ್ತ ಅಲ್ಲಿ ಪ್ರತಿಷ್ಠಿತವಾಗಿದ್ದ ಮಹಾತಾಯಿಯ ಉಗ್ರ ರೂಪ-ಶಾಂತಮೂರ್ತಿಗಳನ್ನು ಕ್ರಮಕ್ರಮವಾಗಿ ತೋರಿಸಿ–'ನೋಡಿದೆಯಷ್ಟೆ? ಇವಳೇ ನಿನಗೂ ನನಗೂ ಇಲ್ಲಿರುವ ಉಳಿದ ಸಂನ್ಯಾಸಿಗಳಿಗೂ ಮತ್ತು ಸಮಸ್ತ ಆರ್ಯ ಸಂತಾನಕ್ಕೂ ತಾಯಿ; ಇವಳೇ ನಮ್ಮ ಸಮಸ್ತ ದೈವವು; ಇವಳ ಸೇವೆಯೇ ನಮಗೆ ಮುಖ್ಯವಾಗಿ ತಪಶ್ಚರ್ಯೆ; ಇವಳ ಈ ಉಗ್ರ ಶಾಂತಿಸ್ಥಾಪನೆಗೆ ಪ್ರಯತ್ನಿಸುವುದೇ ನಾವು ಮಾಡಬೇಕಾಗಿರುವ ಮಾತೃ ಕೈಂಕರ್ಯ; ಇದನ್ನು ಮಾಡುವವರಿಗೂ ನಾವು ಕೃತಕಾರ್ಯರಾಗಲಾರೆವು; ಅಣ್ಣ! ಚೆನ್ನಾಗಿ ನೋಡು; ನಿನ್ನನ್ನು ಹೆತ್ತ ತಾಯಿ ಮತ್ತಾರೂ ಅಲ್ಲ; ಈ ತಾಯಿಯ ಕಟಾಕ್ಷವೇ ಆ ರೂಪದಿಂದ ಜನ್ಮವೆತ್ತಿದ್ದು, ಈಗ ಮತ್ತೆ ಇವಳಲ್ಲಿಯೇ ಐಕ್ಯವಾದಳು; ಹೀಗೆಯೇ ಎಂದರೆ, ನಿನ್ನನ್ನು ಹೆತ್ತತಾಯಿಯಂತೆಯೇ ಉಳಿದ ಎಲ್ಲಾ ಸ್ತ್ರೀಯರೂ ಈ ತಾಯಿಯ ಪ್ರತಿನಿಧಿಸ್ವರೂಪಿಣಿಯರೆಂದೇ ತಿಳಿ. ಈ ನಿನ್ನ ತಾಯಿಯ ಸಂತೋಷವನ್ನು ನೀನು ಬಯಸುವವನಾಗಿದ್ದರೆ, ಇವಳ ಅಂತರಂಗಕೈವಾಪರಿಪೂರ್ಣರಾದ ಸ್ತ್ರೀಪ್ರಪಂಚವನ್ನೇ ನೀನು ಮಾತೃಭಾವನೆಯಿಂದ ಕಾಣುತ್ತಿರು. ಹಾಗಾದರೆ ನಿನ್ನ ತಾಯಿ ನಿನ್ನಲ್ಲಿ

ಪ್ರಸನ್ನಳಾಗುವಳು. ಇನ್ನು ವ್ಯಥೆಯನ್ನು ಬಿಡು." ಎಂದು ಉಪದೇಶಿಸಿದನು. ಅಂದಿನ ಮೊದಲು ಶೋಕದಿಂದ ನಿರ್ಮುಕ್ತನಾಗಿ ಇತರ ಚಿಂತನೆಯೇ ಇಲ್ಲದೆ, ಯೋಗೀಶ್ವರನ ಬಳಿಯಲ್ಲಿ ಯೋಗಾಭ್ಯಾಸಕ್ಕೆ ತೊಡಗಿ, ಅತ ನೊಡನೆ ಮಾತೃಸೇವೆಯಲ್ಲಿ ನಿರತನಾಗಿದ್ದುಬಿಟ್ಟೆನು.

ಹೀಗೆಯೇ ನಾನು ಅಲ್ಲಿ ಎರಡು ವರ್ಷಗಳ ದೀರ್ಘಕಾಲವನ್ನೂ ಕಳೆದುಬಿಟ್ಟೆನು. ಅಷ್ಟರಲ್ಲಿಯೇ ನನಗೆ ಒಂದು ರಾತ್ರಿ ಕನಸಿನಲ್ಲಿ ನಮ್ಮ ತಾಯಿಯು ಬಂದು,---ತಾನು ಈ ಆನಂದವನದಲ್ಲಿ ಒಬ್ಬಳೇ ಇರುವುದಾ ಗಿಯೂ, ತನ್ನ ಸೇವೆಯುಲ್ಲಿದ್ದ ತನ್ನ ಹಿರಿಯಮಗನು ವೃತ್ಯುಪಥದಲ್ಲಿರುವುದ ರಿಂದ ನನ್ನನ್ನು ಬೇಗ ಬರಬೇಕೆಂದೂ, ಹೇಳಿದಂತಾಯಿತು. ಅದನ್ನು ನಾನು ಯೋಗೀಶ್ವರನಿಗೆ ತಿಳಿಸಲು, ಅತನು---'ದೇವಿಯು ನಿನಗೆ ಪ್ರಸನ್ನಳಾಗಿರುವಳು. ನಡೆ, ಈ ತಾಯಿಯ ಅಂತರೂಪವು ನಿನಗೆ ನಿರ್ದಿಷ್ಟವಾದ ಜೆಯಲ್ಲಿ ವೃಶ್ಯವಾಗಬಹುದಾಗಿದೆ. ನೀನಿನ್ನು ಮಾತೃಕೃಪಾಪಾತ್ರನಾಗಿ ಧನ್ಯನೆನ್ನಿಸುವೆ; ನೆನಪಿರಲಿ.' ಎಂದು ನನ್ನನ್ನು ಅಂತಃಕರಣಪೂರ್ವಕವಾಗಿ ಹರಸಿ ಬೀಳ್ಕೊಟ್ಟನು.

ಹಾಗೆ ಕಾಶಿಯಿಂದ ಹೊರಟು ನಾನು ಬರುತ್ತಾ ನಾಲ್ಕಾರು ವಾರ ಗಳಲ್ಲಿ ಈ ವನವನ್ನು ಸೇರಿ, ದೇವಿಯಿಂದ ನಿರೂಪಿಸಲ್ಪಟ್ಟ ಗುರುತುಗಳಿಂದ ಇಲ್ಲಿಗೆ ಬಂದು ನೋಡಿದೆನು. ಈ ಮಂದಿರವು ಇಷ್ಟು ದೊಡ್ಡದಾಗಿರಲಿಲ್ಲ. ಇಲ್ಲಿಯ ಗರ್ಭಾಂಕಣವು ಮಾತ್ರವೇ ಇದ್ದು, ಈ ವನವೆಲ್ಲವೂ ಕ್ರೂರಮೃಗ ಸಂಕೀರ್ಣವಾದ ಕಾನನವೇ ಆಗಿದ್ದಿತು. ಇಲ್ಲಿ ಮಾತೃಸೇವೆಗೆ ಒಬ್ಬ ವಿರಕ್ತ ನಾದ ವೃದ್ಧನು ಮಾತ್ರ ಇದ್ದನು. ಅತನನ್ನು ಕಂಡೊಡನೆ, ನಾನು ನನಗಾದ ಸ್ವಪ್ನವೃತ್ತಾಂತವನ್ನು ಹೇಳಿ, ಅತನಿಂದ ಮಾತೃಸೇವೆಯುಲ್ಲೆ ಅದುಮೊದಲು ನಿಯುಮಿಸಲ್ಪಟ್ಟು ನಿಂತೆನು. ಆ ಸಾಧುವು ತನ್ನ ಹೊರೆಯನ್ನು ನನ್ನ ಮೇಲೆ ಹೊರೆಸಿ, ತನ್ನ ಇಹಜೀವನದ ಸಮಾಪ್ತಿಯನ್ನು ತಾನು ಕಂಡನು.

ನಾನು ಇಲ್ಲಿಗೆ ಬಂದಮೇಲೆಯೂ ನಾಲ್ಕಾರು ತಿಂಗಳವರೆಗೆ ನನಗೆ ಪತ್ನೀ---ಪುತ್ರಿ---ಸೋದರ---ಸೋದರಿಯರ ನಿಚಾರವಾದ ಅಭಿಮಾನವೇ ಉಂಟಾಗಿರಲಿಲ್ಲ. ಆದರೆ, ಆಗಲೂ ಸ್ವಪ್ನದಲ್ಲಿ ತಾಯಿಯೇ ನನ್ನನ್ನು ಕುರಿತು, "ಮಗುವೆ! ಅಲ್ಲಿ ನಿನ್ನ ಪರಿವಾರಕ್ಕೆ ಆಪದವೆಷ್ಟೋ ಉಂಟಾಗಿದೆ;

ನೀನು ಇಲ್ಲಿ ನಿರ್ವಿಚಾರವಾಗಿರುತ್ತೀಯೆ" ಹೀಗೆ ಹೇಳಿದಳು. ಅದನ್ನು ಕೇಳಿದ ಕೂಡಲೇ ನಾನು ಇಲ್ಲಿಂದ ಹೊರಟುಹೋಗಿ ನೋಡುವಷ್ಟರಲ್ಲಿ ನನ್ನ ತಂಗಿಯು ವೈಧವ್ಯದುಃಖಕ್ಕೆ ಗುರಿಯಾಗಿ ವರ್ಷದಮೇಲಾಗಿದ್ದಿತು.

ವಿಧವೆಯರ ಕಷ್ಟಗಳು ಅಷ್ಟಿಷ್ಟೆಂಬುದನ್ನು ನಾವು ಹೇಳಲಳವಲ್ಲ ವಷ್ಟೆ. ಹಾಗೆಯೇ ಇವಳು ಪತಿವಿಯೋಗಹೊಂದಿ ದುಃಖಾನುಭವ ಮಾಡು ತ್ತಿದ್ದುದು ಸಾಲದೆಂದು, ಇವಳ ಮೈದುನರಾದ ಗಣೇಶಪಂತರೂ, ಇವಳ ಸ್ವಾಮಿಗೆ ಮಾತುಲನಾಗಿದ್ದ ಈಗಿನ ಜೀವಾನಂದ ಗುರುಪೀತದವರೂ, ಇವಳ ಸರ್ವಸ್ವವನ್ನೂ ಮತದ ಸೇವಾಕಾರ್ಯಕ್ಕೊಪ್ಪಿಸಿ, ಸಮಾಜಶಾಸನಕ್ಕೆ ಅಧೀನವಾಗಿ ನಡೆಯಬೇಕೆಂದು ಬಹುಬಗೆಯಿಂದ ಸಿಷ್ಕುರವಡಿಸಿದ್ದರು. ಅಲ್ಲದೆ, ಭಟ್ಟಾಚಾರ್ಯರಂತೂ ನನ್ನ ಪತ್ನಿಗೆ ಪಿತೃದತ್ತವಾಗಿದ್ದ ಭೂಸ್ವಾಸ್ಥ್ಯ ವನ್ನು ತಾವೇ ಅಪಹರಿಸಬೇಕೆಂದೋ, ಹೇಗೋ, ತನ್ನ ಮಗಳಿಗೆ ತಮ್ಮ ಕೈಯಿಂದಲೇ ವಿಷಪ್ರಯೋಗಮಾಡಿದ್ದುದರಿಂದ ಅವಳು ಅತ್ಯಂತ ಯಾತನೆ ಯನ್ನು ಅನುಭವಿಸುತ್ತಾ ಕೇವಲ ನನ್ನ ಸಂದರ್ಶನಾಪೇಕ್ಷೆಯೊಂದರಲ್ಲನೇ ಪ್ರಾಣವನ್ನುಳಿಸಿಕೊಂಡಿದ್ದಳು. (ಹರಿಹರಿ! ಘೋರಕೃತ್ಯ!! ಚಂಡಾಲತನ.)

ನಾನು ಹೋಗಿ ಸೇರಿದ ಕೂಡಲೇ ನನಗೆ ವಿಚಾರವೆಲ್ಲವೂ ತಿಳಿದು ಬಂದಿತು. ತಂಗಿಯು ತನ್ನ ಕಿರಿಯಣ್ಣನ ಮಾತನ್ನು ಕೇಳಿ, ಅದರಂತೆ, ತನಗೆ ಎಷ್ಟೋ ಕಷ್ಟಗಳುಂಟಾದರೂ ಹೇಸಿಗೆ ಕೆಲಸಕ್ಕೆ ತನ್ನಲ್ಲಿ ಎಡೆಗೂಡೆ ನೆಂದೇ ಹೇಳುತ್ತ ಎಲ್ಲವನ್ನು ತಡೆದಿರುವುದಾಗಿಯೂ ಅಲ್ಲದೆ ನಂದಿನಿಯು ತಾಯಿಯು, ಅಂತ್ಯಕಾಲಕ್ಕಾದರೂ ನೋಡಿ ಮನಸ್ಸಮಾಧಾನ ಹೊಂದು ವಂತೆ ಮಾಡೆಂದು ಎಷ್ಟೋ ಬಾರಿ ಪತ್ರಮುಖದಿಂದ ವ್ಯಾರ್ಥಿಸಿಕೊಂಡಿದ್ದು ವಾಗಿಯೂ ತಿಳಿದೆನು. ಅದೆಲ್ಲವೂ ಹಾಗಿರಲಿ. ನನ್ನನ್ನು ನೋಡಿ ನನ್ನಿಂದ ವೃತ್ತಾಂತವೆಲ್ಲವನ್ನೂ ತಿಳಿದ ಬಳಿಕ, ಆ ನನ್ನ ಪತ್ನಿಯು ಈ ನಂದಿನಿಯು ಕೈಯನ್ನು ನನ್ನ ಕೈಯಲ್ಲಿರಿಸಿ--"ದೇವ! ಇನ್ನು ಅಪ್ಪಣೆಯಾಗಲಿ. ನಾನು ಇಂದು ಕೃತಕೃತ್ಯಳಾದೆನು. ನನ್ನ ಉದ್ದೇಶವು ಭಗವತಿಯ ಅನುಗ್ರಹದಿಂದ ನೆರವೇರಿತು. ನಾನು ಇಂದು ಈ ದೇಹವನ್ನು ಬಿಟ್ಟು ಹೋಗುವೆನಾದರೂ ನಿಮ್ಮನ್ನು ಬಿಟ್ಟು ಹೋಗುವಳಾಗಿಲ್ಲ. ಮಾತೃಸೇವೆಯಲ್ಲಿ ನೀವು ನಿರತ ರಾಗಿರುವುದನ್ನು ನೋಡಿ ನಲಿಯಲು, ಆ ಮಾತೃಚರಣಾರವಿಂದದಲ್ಲಿಯೇ

ಸೇರಿರುವೆನೆಂದು ತಿಳಿಯಿರಿ. ಆಶೀರ್ವದಿಸಿ ಬೀಳ್ಕೊಡಿರಿ. ನಂದಿನಿಯನ್ನು ಇಂದಿನವರೆಗೆ ನಾನು ಅಕ್ಕರತೆಯಿಂದ ಬೆಳೆಯಿಸಿದರೂ ನೀವು ಮುಂದೆ ಇವಳನ್ನು ತಕ್ಕರೀತಿಯಿಂದ ದೇಶಸೇವೆಯಲ್ಲಿ ಸಹಕರಿಸುವಂತೆ ಸುಧಾರಿಸುವುದನ್ನು ಮರೆಯಬಾರದು. ಅಲ್ಲದೆ, ನನ್ನ ಮರಣಕ್ಕೆ ಮತ್ತೊಬ್ಬರು ಕಾರಣರಾಗಿದ್ದರೂ, ಅದು ಕೇವಲ ಮಾತೃಸೇವೆಗೆ ಅನುಕೂಲವನ್ನೇ ಉಂಟುಮಾಡಿದುದರಿಂದ ನಮಗೆ ಸಹಾಯವೇ ಆಯಿತು. ಇದಕ್ಕಾಗಿ ಅವರಲ್ಲಿ ನೀವೇ ಆಗಲಿ, ನಿಮ್ಮ ತಮ್ಮನು ಅಥವಾ ಮಕ್ಕಳು ಯಾರೇ ಆಗಲೀ, ಪ್ರತೀಕಾರಮಾಡಲು ಚಿಂತಿಸಲಾಗದೆಂದು ಕೇಳಿಕೊಳ್ಳುವೆನು. ಇಷ್ಟಾದರೆ ಸಾಕು.' ಹೀಗೆ ಹೇಳುತ್ತ ಹೇಳುತ್ತ ನನ್ನಿಂದ ಭಾಷೆಯನ್ನು ತೆಗೆದುಕೊಂಡು, ನನ್ನಿದಿರಾಗಿಯೇ ವ್ರಾಣತ್ಯಾಗ ಮಾಡಿದಳು. (ಶೋಚನೀಯವು; ಶೋಚನೀಯವು.)

ಪತ್ನೀವಿಯೋಗವಾದ ಬಳಿಕ, ಮತ್ತೆ ನಾನು ನಂದಿನಿಯನ್ನು ಅಲ್ಲಿಯೇ ಬಿಟ್ಟು, ಇಲ್ಲಿಗೆ ಬಂದು ಎಂದಿನಂತೆ ಮಾತೃಸೇವೆಯಲ್ಲಿ ನಿರತನಾದೆನು. ಹೀಗೆ ನಾನೂ ಬಂದು, ಆಕೆಯೂ ಸತ್ತುದರಿಂದಲೂ, ಈ ತಪಸ್ವಿನಿಗೆ ಕಿರುಕುಳಗಳು ಮಿತಿಮೀರಿ ಹೋದವು. ಆ ವೇಳೆಯಲ್ಲಿ ಅಚಲನು ಬುದ್ಧಿತಿಳಿದವನಾಗಿ ಇರುತ್ತಿದ್ದರೆ ಎಷ್ಟೋ ಅನರ್ಥಗಳು ನಡೆದು ಹೋಗುತ್ತಿದ್ದುವು; ಅವಿರಲಿ. ಹೇಗೂ ಕಿರುಕುಳಗಳನ್ನು ತಡೆಯಲಾರೆನೆಂದು ಇವಳು ನನಗೆ ಹೇಳಿಕಳುಹಿದಳು.

ನನ್ನ ಸೇವಾಕಾರ್ಯವನ್ನು ಬಿಟ್ಟು ಬರಲು ನನಗೆ ಸಮ್ಮತವಿರಲಿಲ್ಲವಾದರೂ ಹೋಗದೆ ಹೇಗಿರಬಹುದೆಂದು ಯೋಚಿಸುತ್ತಿದ್ದಾಗ ಮತ್ತೆ ನಮ್ಮೀ ತಾಯಿಯು ನನಗೆ--"ಮಗುವೆ! ನಂದಿನಿಯನ್ನು ನನಗೆ ದತ್ತಕೊಡಲಾರೆಯಾ? ಅವಳನ್ನು ನಾನು ಅಧಿಕವಾಗಿ ಪ್ರೀತಿಸುವೆನು." ಎಂದಿಂತು ಸ್ಪಷ್ಟವನ್ನು ಕರುಣಿಸಿದಳು.

ಮಾತೃವಾಕ್ಯವು ಹೀಗೆ ನನ್ನನ್ನು ಪ್ರೇರಿಸಲು, ನಾನು ಆಗಲೇ ಹೊರಟು ತಂಗಿಯ ಸ್ವತ್ತನ್ನೂ ಮತ್ತು, ನನ್ನ ಪತ್ನಿಯ ಪಿತೃದತ್ತವಾದ ಸಂಪತ್ತಿಯನ್ನೂ ಬಟ್ಟಾಗಿ ಮಾರಿ ಹಣವನ್ನು ತೆಗೆದುಕೊಂಡು, ದೇಶಯಾತ್ರೆಗಾಗಿ ಹೊರಟು ಹೋಗುವೆನೆಂದು ಹೇಳಿ, ನಂದಿನಿ-ತಪಸ್ವಿನಿಯರನ್ನು ಜೊತೆ

ಗೊಂಡು ಇಲ್ಲಿಗೆ ಬಂದೆನು. ಒಂದೆರಡು ವರ್ಷಗಳ ವರೆಗೆ ನಮ್ಮ ವರ್ತಮಾನವನ್ನೇಕೊಡದೆ ಇದ್ದುದರಿಂದ, ನಾವು ಯಾತ್ರಿಕರಾಗಿ ಹೋಗಿ ಮೃತಪಟ್ಟೆನೆಂದೇ ಅವರೆಲ್ಲರೂ ತಿಳಿದಿದ್ದರು.

ಹೀಗಾದ ಬಳಿಕ ನಾನು ತಪಸ್ವಿನಿಯು ಮತ್ತು ನಂದಿನಿಯು ಮಾತಾ ಮಹನ ಸಂಪತ್ತಿಯಿಂದ ಈ ಆನಂದವನವನ್ನೂ ಮಂದಿರವನ್ನೂ ವಿಸ್ತಾರಗೊಳಿಸಿದೆನು. ಆಬಳಿಕ ನಂದಿನಿಯನ್ನು ಈ ತಾಯಿಯಮುಂದೆ ಪ್ರಮಾಣಪೂರ್ವಕವಾಗಿ ಒಪ್ಪಿಸಿ, ಅವಳ ಅಭಿಮಾನಪುತ್ರಿಯಾದುದರಿಂದ ತಕ್ಕಮಟ್ಟಿಗೂ ಬ್ರಹ್ಮಚರ್ಯೆ—ವಿದ್ಯಾ—ಸದಸದ್ವಿಚಾರಜ್ಞಾನ–ವೈರಾಗ್ಯ– ಯೋಗಗಳನ್ನು ಅಭ್ಯಾಸಕ್ಕೆ ತಂದೆನು.

ವಯೋ–ರೂಪ–ವಿದ್ಯಾ–ವಿನಯಾದಿ ಸಮಸ್ತ ಗುಣಸಂಪನ್ನೆಯಾದ ಕನ್ಯೆಯನ್ನು ಹೀಗೇಕೆ ಬೆಳೆಸಿದ್ದೆನೆಂದರೆ, ಕನ್ಯೆಯನ್ನು ಅಪಾತ್ರನಿಗೆ ಕೊಡಬಾರದು. ಸತ್ಪಾತ್ರನು ದೊರೆಯಲಿಲ್ಲ. ಮಾಡತಕ್ಕುದೇನು? ಮನೋಯೋಗದಿಂದ ಮಾತೃಸೇವೆಯಲ್ಲಿದ್ದರೆ ಸಾಕೆಂದು ಮಾಡಿ ಹಾಗೆಯೇ ಬಿಟ್ಟಿನು. ಅನೇಕರು ಬಂದು ಕೇಳಿದರು. ಸಮ್ಮತಿಸಲಿಲ್ಲ. ಆದರೆ ಹೀಗೆ ನನ್ನ ಬಳಿಯಲ್ಲಿ ಇನ್ನೆಷ್ಟುಕಾಲವಿರಬಹುದೆಂದು ಯೋಚಿಸುತ್ತಿರುವಾಗಲೇ ನನ್ನೇ ಶನು ದೃಗ್ಗೋಚರನಾಗಿ, ನಂದಿನಿಯ ಪೋಷಣೆಗೆ ತಾನು ನಿಲ್ಲುವೆನೆಂದು ಹೇಳಿ, ಆ ಕಾರ್ಯಭಾರವನ್ನು ವಹಿಸಿದನು. ಕೇಳಿದಿರೇನು, ನನ್ನ ಬಾಧವರೇ?

ನಂದಿನಿಯ ಇಂದಿನ ವರೆಗಿನ ಚರಿತೆಯೆಲ್ಲವನ್ನೂ ವಿವರಿಸಿರುವೆನು. ಇನ್ನು ಬಂದು ವಿಚಾರವುಳಿದಿದೆ. ನಂದಿನಿಯು ನನಗೆ ಮಗಳಲ್ಲ; ತಾಯಿ. ಈ ನಮ್ಮ ತಾಯಿಯ ಅಭಿಮಾನದ ಪುತ್ರಿ; ತಾಯಿಯಂತೆಯೇ ಮಕ್ಕಳೂ ಇರಬೇಕೆಂಬ ತತ್ವವು ಇವಳಿಗೆ ಸಲ್ಲುವಂತೆ, ಇವಳು ತನ್ನ ಮಾತೆಯ ಕ್ಷಮಾಗುಣವನ್ನೇ ಅವಲಂಬಿಸಿರುವಳು. ಇವಳು ತಾಯಿಯೆಂದರೆ ಜನ್ಮಭೂಮಿಯೊಂದೇ ಎಂದು ನಂಬಿರುವಳಲ್ಲದೆ, ತಾಯಿಗೆ ಮೇಲ್ಮೆಯುಂಟಾಗುವಂತೆ ಮಾಡಲು ತನ್ನ ಜೀವವನ್ನೇ ಬತ್ತಿಯಾಗಿಟ್ಟು, ಸ್ಥಿರತೆಯಿಂದ ನಡೆಯುತ್ತಿರುವಳು. ತಾಯಿ, ತಂದೆ, ಗುರು ಮೊದಲಾದ ಹಿತೈಷಿಗಳ ಶಾಸನವು ಎಷ್ಟೇ ಕಠಿಣವಾಗಿರಲಿ, ತನಗದೇ ಶ್ರೇಯಸ್ಕರವಾದುದರಿಂದ ಅದನ್ನು ಮೀರದೆ ನಡೆಯು

ಬೇಕೆಂಬುದೇ ಇವಳ ಉದ್ದೇಶವಾಗಿರುವುದು. ಇದಕ್ಕನುಸಾರವಾಗಿಯೇ ಇವಳು ವ್ಯಾಪಂಚಿಕ ತತ್ವದ ಪ್ರೌಢಶಿಕ್ಷಣವನ್ನೂ, ಗೃಹರಾಜ್ಯನಿರ್ವಾಹಕ್ಕೆ ಬೇಕಾದ ದಕ್ಷತೆಯುನ್ನೂ, ಸಪ್ರಮಾಣವಾದ ದೃಷ್ಟಾಂತಗಳೊಡನೆ ಹೊಂದಬೇಕೆಂಬ ಉದ್ದೇಶದಿಂದ, ನಗೇಶರಾಯನ ವಶಕ್ಕೊಪ್ಪಿಸಲ್ಪಟ್ಟು, ಅಲ್ಲಿ ಎರಡು ವರ್ಷಗಳನ್ನು ಅತ್ಯುತ್ತಮರೀತಿಯಿಂದ ವಿನಿಯೋಗಿಸಿರುವುದಲ್ಲದೆ. ನಗೇಶರಾಯನ ಪುತ್ರನಿಗೂ ಪುತ್ರಿಗೂ ತನ್ನ ಮನೋಯೋಗಶಕ್ತಿಯುಲ್ಲೆ ಅಷ್ಟಿಷ್ಟಾಗಿ, ಅವರಿಂದಲೂ ಅಭ್ಯಸಿಸಲ್ಪಡುವಂತೆ ಮಾಡಿ, ನಗೇಶರಾಯನಿಗೂ ಅತನ ಪತ್ನಿಗೂ ಪ್ರಾಣಾಧಿಕವಾದ ಜೀವರತ್ನವೆಂಬಂತೆ ತೋರಿ, ಮುಂದಿನ ತನ್ನ ಎಳದಂಗೆಯರಿಗೆಲ್ಲ ಮಕ್ಕಳಿಗಿರಬೇಕಾದ ಭಾವನೆಯೆಂತಹದೆಂಬುದನ್ನು ಕಲಿಸುವವಳಾಗಿರುವಳು.

ಇನ್ನುಮುಂದೆ, ಈ ನಂದಿನಿಯಿಂದ ನಮ್ಮೀ ಭಾರತಮಾತೆಗೆ ಎಷ್ಟೆಷ್ಟೋ ಕಾರ್ಯಗಳಾಗಬೇಕಾಗಿರುವುದರಿಂದಲೂ, ಅದನ್ನು ಇವಳೊಬ್ಬಳೇ ನಿರ್ವಹಿಸಲಾರದುದರಿಂದಲೂ, ಪ್ರಕೃತಿ-ಶಕ್ತಿಗಳೆರಡೂ ಸೇರಿಯೇ ವಸ್ತು ಸ್ವರೂಪವು ವ್ಯಕ್ತಪಟ್ಟು, ರಸವತ್ತಾಗಿ ತೋರುವದಲ್ಲದೆ, ಶಕ್ತಿಯಿಲ್ಲದೆ ಪ್ರಕೃತಿ ಸೌಂದರ್ಯವಾಗಲೀ ಪ್ರಕೃತಿಯಿಲ್ಲದೆ ಶಕ್ತಿಯ ಕಾಂತಿಯಾಗಲೀ ಕಾರ್ಯಕಾರಿಯಾಗಿ ನಿಲ್ಲಲಾರದಂತೆ, ಕೇವಲಪ್ರಕೃತಿ ಸಾದೃಶ್ಯವಾಗಿರುವ ಸ್ತ್ರೀವ್ಯಕ್ತಿತ್ವದಿಂದಮಾತ್ರವೇ ನಂದಿನಿಯು ಉದ್ದೇಶಸಿದ್ಧಿಹೊಂದುವುದು ಅಸಾಧ್ಯವಾದುದರಿಂದಲೂ, ಇಂತಹ ಪ್ರಕೃತಿಗೆ ಶಕ್ತಿಯನ್ನುಂಟುಮಾಡುವ ಪಾತ್ರವು ಎಂದರೆ, ನಂದಿನಿಯ ವ್ಯಕ್ತಿತ್ವವನ್ನು ಸಾಫಲ್ಯಗೊಳಿಸುವ ಪ್ರಭಾವವೂ, ನಾದಾನಂದನಲ್ಲಿ ಚೆನ್ನಾಗಿ ತೋರುತ್ತಿರುವುದರಿಂದಲೂ, ಅಲ್ಲದೆ, ನಂದಿನಿಯ ಸದುದ್ದೇಶ-ಸಾಹಸ-ಪ್ರಯತ್ನಗಳಿಗೆ ಉದಾರಾಶ್ರಯ, ಪ್ರೋತ್ಸಾಹಗಳನ್ನು ಕಲ್ಪಿಸುವುದರಲ್ಲಿ ನಗೇಶ-ಚಿತ್ರಕಲೆಯರಿಬ್ಬರೂ ಸಮರ್ಥರಾಗಿರುವುದರಿಂದಲೂ ಇಂದು ಇವಳನ್ನು, ಈ ನಮ್ಮ ಪುತ್ರಮಣಿ ಅಚಲಚಂದ್ರನಾಥನ ಹಿತಸೂಚನೆಯಂತೆ, ಮಾತೃಸನ್ನಿಧಿಯಲ್ಲಿ ನಾದಾನಂದನ ಹಸ್ತದಲ್ಲಿರಿಸಿ, ನನ್ನ ಕರ್ತವ್ಯದ ದೊಡ್ಡ ಹೊರೆಯನ್ನು ಕೆಳಗಿಳಿಸುತ್ತಿರುವೆನು. ಇದರಿಂದ, ಲೇ ನಮ್ಮ ಸಮಾಜದ ಕಲ್ಯಾಣವು ಊರ್ಜಿತವಾಗಬೇಕೆಂದೂ ಆಶಿಸುವೆನು. (ಧನ್ಯಧನ್ಯ!! ಸತ್ಯಾನಂದಜೀ ಧನ್ಯಧನ್ಯ!!! ಸತ್ಪಾತ್ರಲಾಭ; ಸಾಲಂಕೃತ

ಕನ್ಯಾದಾನ, ಸರ್ವೋತ್ತಮ ಬಾಂಧವ್ಯ; ಸಾಧ್ವೀವಧೂಲಾಭ; ಅಹುದು; ಶ್ರೀಮಂತನ ಸುಕೃತವಿಶೇಷ; ಆಗಲಿ; 'ಶುಭಸ್ಯಶೀಘ್ರಂ'ನಂದಿನೀ ಕಲ್ಯಾಣ.)

ಸತ್ಯಾನಂದ:— ನನ್ನ ಪ್ರಿಯಬಾಂಧವರೇ!

ನಂದಿನೀ ಕಲ್ಯಾಣಮಾತ್ರವೇ ಅಲ್ಲ. ನಂದಿನಿಯು ನಾದಾನಂದನಿಂದ ಕಲ್ಯಾಣಿಯಾಗುವಂತೆ, ಅಚಲಚಂದ್ರನಾಥನು ಸ್ವರ್ಣಕುಮಾರಿಯನ್ನು ಪರಿಗ್ರಹಿಸಿ, ಮಂಗಳಪ್ರದನಾಗಬೇಕೆಂಬುದೂ ಭಗವತಿಯ ಸಂಕಲ್ಪವಾಗಿದೆ. ನಾದಾನಂದ-ಅಚಲಚಂದ್ರರ ಪುತ್ರಕರ್ತವ್ಯವು ಸಾರ್ಧಿಕ್ಯಹೊಂದುವಂತೆ, ಸೇವಾನಂದ—ಭಕ್ತಿಸಾರರೂ ಪ್ರಕೃತಿ ಪ್ರಭಾವದಿಂದ ಸಹಕರಿಸುವರೆಂದು ನಿರೀಕ್ಷಿಸಲ್ಪಟ್ಟಿದೆ. [ತಥಾಸ್ತು. ತಥಾಸ್ತು. ತಥಾಸ್ತು. ತ್ರಿವಾರ ಹೇಳುವೆವು. ಸಾಧುಸಮ್ಮತವು. ಸ್ವದೇಶಾಭಿವೃದ್ಧಿಸಾಧನವು. ಇದೇ ಅತ್ಯಾವಶ್ಯಕವಾಗಿ ಮಾಡಬೇಕಾದ ಮಹತ್ಕಾರ್ಯವು. ಭಗವತಿಯು ಅನುಗ್ರಹಿಸಲಿ. ನಡೆಯಲಿ; ಮಂಗಳೋತ್ಸವಗಳು. (ಕರತಾಡನಗಳು)]

ಸತ್ಯಾನಂದನು ಇಷ್ಟು ಹೇಳಿ ಮತ್ತೆ ದೇವಿಯ ಕಡೆಗೆ ತಿರುಗಿ ಧ್ಯಾನಾಸಕ್ತನಾಗಿ ಕುಳಿತನು.

॥ ಶ್ರೀಃ ॥

ಷೋಡಶ ಪರಿಚ್ಛೇದ.

(ತಪಸ್ವಿನೀ ಹಿತೋಪದೇಶ)

"ಯೋಗೇಶ್ವರಿ, ತ್ವಾಂ ಶಿರಸಾನಮಾಮಿ"

ಸತ್ಯಾನಂದ ಪರಮಹಂಸನು ಧ್ಯಾನಾಸಕ್ತನಾಗಿ ಕುಳಿತಬಳಿಕ, ಗರ್ಭಾಂಕಣದಲ್ಲಿದ್ದ ತಪಸ್ವಿನಿಯು ನಂದಿನಿಯನ್ನು ಕೈಹಿಡಿದು ಕರೆದು ಕೊಂಡು ಚಿತ್ರಕಲೆಯಿದ್ದಲ್ಲಿಗೆ ನಡೆತಂದಳು. ತಪಸ್ವಿನಿಯ ಹಿಂದೆಯೇ ಸಪ್ತ ಯರೊಡನೆ ಸ್ವರ್ಣಕುಮಾರಿಯೂ, ನಾದಾನಂದಾದಿಗಳೊಡನೆ ಅಚಲಚಂದ್ರನೂ ಹೊರಟುಬಂದರು. ತಪಸ್ವಿನಿಯು ಆಗಮನವನ್ನು ನೋಡಿ, ಕುಳಿತಿದ್ದವರೆಲ್ಲರೂ ನಿಂತು. ಕೈಗಳನ್ನು ಮೇಲಕ್ಕೆತ್ತಿ, ವಿನಯ-ಭಕ್ತಿ-ಗೌರವದಿಂದ "ಯೋಗೇಶ್ವರಿ. ತ್ವಾಂ ಶಿರಸಾನಮಾಮಿ" ಎಂದು ಸ್ತುತಿಸಿದರು.

ತಪಸ್ವಿನಿಯು:— ದೇವಿಯು ಕಡೆಗೆ ಕೈನೀಡಿ, ಕರುಣಾವ್ಯಂಜಕಸ್ವರದಿಂದ ಹೇಳಿದಳು:— "ನನ್ನ ದೇಶಬಾಂಧವರೇ ! ಯೋಗೇಶ್ವರಿಯು ನೋಡಿರಿ, ಅಲ್ಲಿರುವಳು. ಅವಳಿಗೆ ನಿಮ್ಮೀ ವಂದನೆಗಳು ಅರ್ಪಿತವಾಗಿರುವವು. ಅವಳ ಪೂರ್ಣಾನುಗ್ರಹಕ್ಕೂ ನೀವು ಪಾತ್ರರಾಗಿರುವಿರಿ. ಅಷ್ಟಲ್ಲದೆ ದೇಶಮಾತೃಸೇವಕಳಾದ ಈ ಭಿಕ್ಷುಕಳು ವಂದನಾರ್ಹಳೆಂದಿಗೂ ಅಲ್ಲವೆಂದು ತಿಳಿಯಿರಿ."

ಚಿತ್ರಕಲೆ:—ಭಗವತಿ! ಕೊರಳುತುಂಬ ಜಪಮಾಲೆಗಳನ್ನು ಅಳವಡಿಸಿಕೊಂಡು ಕಾವಿಯನ್ನುಟ್ಟಮಾತ್ರದಿಂದಲೇ ತಪಸ್ವಿಗಳಾದೆವೆಂದು ಭಾವಿಸಿ, ತಾವೇ ಪರಮಪಾವನರೆಂಬ ಅಹಂಕಾರದಿಂದ ಅನನುಭವವಾದ ನಾಲ್ಕಾರು ಸಂತೆವಾತಗಳನ್ನು ಕಂತವಾತಮಾಡಿ, ಬಂದವರನ್ನು ಭ್ರಮೆಗೊಳಿಸುವವರನ್ನು ನಾವು ಸ್ತುತಿಸಲಿಲ್ಲ; ಸ್ತುತಿಸುವುದೂ ಇಲ್ಲ. ಯಾರ ಪವಿತ್ರಹೃದಯವು ಪ್ರಪಂಚವನ್ನೇ ಪರದೇವತಾಭಾವನೆಯಿಂದ ಪ್ರೀತಿಸುತ್ತಿರುವುದೋ, ಯಾರ ಅಂತಃಕರಣವು ಪರಮಾತ್ಮನ ಸಂಬಂಧಾನುಸಂಬಂಧಗಳ ಸೂಕ್ಷ್ಮತತ್ವವನ್ನು

ತಿಳಿದು ಮಹತ್ವಾಕಾಂಕ್ಷೆಯಿಂದ ಅದನ್ನು ಪ್ರಸಾರಕ್ಕೆ ತರಬಲ್ಲದಾಗಿರುವು ದೋ, ಅಂತಹ ದೈವಿಕಮೂರ್ತಿಯನ್ನೇ ನಾವು ವಂದಿಸುವೆವು. ಭಗವತಿ! ಯೋಗೇಶ್ವರಿಯು ಅಲ್ಲಿರುವಳೆಂಬುದೇನೋ ನಿಜವಾಗಿದ್ದರೂ, ಇಲ್ಲಿ ಈ ರೂಪದಿಂದಲೇ ನಮಗೆ ಪ್ರತ್ಯಕ್ಷಳಾಗಿರುವಳೆಂದು ನಾವು ತಿಳಿಯಬಾರದೇಕೆ? (''ಸಾಧು! ಸಾಧು!! ಸಾಧ್ವೀವಚನವೇ ಪರಮಸಾಧು.'' ಸಭಿಕರಉತ್ಸಾಹ)

ತಪಸ್ವಿನಿಯು ಸಂಭ್ರಮದಿಂದ ಚಿತ್ರಕಲೆಯು ಕೈಹಿಡಿದು, ನಂದಿನಿಯ ಕೈಗಳೊಡನೆ ಸೇರಿಸಿ, ಪ್ರೇಮಾತಿಶಯದಿಂದ ಒಂದುತಡವೆ ನೆರೆದಿದ್ದವರ ಕಡೆಯನ್ನು ನೋಡಿದಳು. ತಪಸ್ವಿನಿಯ ಕರುಣಾದೃಷ್ಟಿಯನ್ನು ನೋಡಿ ಎಲ್ಲರೂ ಕುತೂಹಲದಿಂದ ನಿಶ್ಚಬ್ದರಾಗಿ ನಿಂತರು. ತಪಸ್ವಿನಿಯು ಹೇಳ ತೊಡಗಿದಳು.—

''ತಾಯಿಯರೇ! ಅಕ್ಕತಂಗಿಯರೇ! ನೀವೆಲ್ಲರೂ ನನ್ನನ್ನು ಎಷ್ಟೋ ಗೌರವಿಸುತ್ತಿರುವಿರಿ. ಆದರೆ, ಆ ಗೌರವಕ್ಕೆ ತಕ್ಕ ಪಾತ್ರತೆಯು ಮಾತ್ರ ನನ್ನಲ್ಲಿರುವುದಿಲ್ಲ. ಆದರೂ ನೀವು ಹೀಗೆ ಅಭಿನಂದಿಸುತ್ತಿರುವದನ್ನು ನಿರೋಧಿಸಲಿಕ್ಕೆ ನನ್ನಿಂದಾಗದು. ಏಕೆಂದರೆ, ಯಾರ ನೆವದಿಂದಲೇ ಆಗಲಿ. ಹೇಗೇ ಆಗಲಿ, ಮಾತೆಯನ್ನು ಸ್ತುತಿಸಿ, ಕೀರ್ತಿಸಿ ಆನಂದಭಾಜನರಾಗುತ್ತಿರುವ ನಿಮ್ಮ ಆತ್ಮಸಂತೋಷಕ್ಕೆ ನಾನೇಕೆ ಆತಂಕವಾಗಲಿ? ಮನದಣಿವಂತೆ ಸ್ತುತಿಸಿ ನಲಿಯಿರಿ. ಆದರೆ ಕೇಳಿರಿ; ನಾನು ಅಷ್ಟರ ಪ್ರತಿಭಾಸಂಪನ್ನೆಯಲ್ಲವಾದರೂ ನಿಮ್ಮಲ್ಲಿ ನಾನಾಗಿ ಹೇಳುವ ಒಂದೆರಡು ಅನುಭವಪೂರ್ಣವಾದ ಹಿತಸೂಚನೆಗಳನ್ನು ಗಮನಿಸಿರಿ.

ದೇವಿಯರೇ! ಆರ್ಯಮಾತೆಯ ಅಂಶರೂಪಿಣಿಯರಾಗಿರುವ ನಿಮ್ಮಲ್ಲಿ ನಮ್ಮ ಆರ್ಯರಮಣೀಧರ್ಮದ ನಿಜವಾದ ರಕ್ತವು ಅಷ್ಟಿಷ್ಟಾದರೂ ಇಲ್ಲದೆ ಹೋಗಿಲ್ಲ. ಆ ಆರ್ಯತ್ವದ ಹನಿಮಾತ್ರವು ನಮ್ಮ ಧಾತುವಿನಲ್ಲಿ ಪ್ರವೇಶ ಮಾಡಿರುವುದಾದರೆ, ಸಾಕು; ನಮ್ಮ ನಾರೀಜನ್ಮವೇ ಸಾಫಲ್ಯ! ಏಕೆಂದರೆ, ನಮ್ಮ ಪೂರ್ವಜರಾದ ಆರ್ಯರಮಣಿಯರ ಅತ್ಯದ್ಭುತವಾದ ತಪಃಪ್ರಭಾವವನ್ನು ನಾವೂ ಹೊಂದಬೇಕೆಂದರೆ ಈ ಕಾಲದಲ್ಲಿ ನಮಗೆ ಸ್ವಲ್ಪವಿಚಾರದಂತಾಗುವುದು. ಎಂದರೆ, ಕಾಲವು ಕೆಟ್ಟುಹೋಗಿಲ್ಲ. ಹಾಗೂ ವಿಚಾರ ಮಾಡುವೆವಾದರೆ, ಈ ಕಾಲವೇ ನಮಗೆ ಅತ್ಯಂತ ಸಹಕಾರಿಯಾಗಿದೆ.

ಆದರೂ ನಮ್ಮವರ ಆಚಾರ ವಿಚಾರಗಳೇ ವಿಕಲ್ಪವಾಗಿ ತಿರುಗಿವೆ. ಇದ ರಿಂದ ನಮ್ಮ ಮನೋದಾರ್ಢ್ಯವು ಕುಂದಿ, ಹಿಂದುಮುಂದಿನ ವಿಷಯವಿಚಾರ ಗಳನ್ನು ಸಮಾಲೋಚಿಸುವುದರಲ್ಲಿಯೇ ನಮ್ಮ ಬುದ್ಧಿಶಕ್ತಿಯನ್ನು ನಾಶಮಾ ಡಿಕೊಳ್ಳುವ ದುಃಸ್ಥಿತಿಯು ನಮ್ಮವರನ್ನು ಆಕ್ರಮಿಸಿದೆ! ಹೇಳುವುದೇನು?

ಯಾವ ಸ್ತ್ರೀವರ್ಗವು ಸಮಸ್ತ ಪುರುಷ ವರ್ಗದಿಂದ ತ್ರಿಕರಣಸಾತ್ವಿಕ ವಾಗಿ ಪ್ರಶಂಸಿಸಲ್ಪಡುತ್ತಿದ್ದಿತೋ, ಅದೇ ಸ್ತ್ರೀವರ್ಗವೇ, ಈಗ ಇಷ್ಟರ ಅಪಮಾನ—ಉದಾಸೀನ—ಸಂಶಯ—ಕ್ಲೇಶಗಳಿಗೂ ಪಕ್ಕಾಗಿ, ನರಳುವ ಗತಿಯುಂಟಾಗಿದೆ. ಅಷ್ಟೇಅಲ್ಲ. ನಾವು ಮಾತ್ರವೇ ಅಪವಾದಗ್ರಸ್ತೆಯ ರಾಗಿದ್ದರೆ ದುಃಖವಿಲ್ಲ. ಪವಿತ್ರಾಂತಃಕರಣರಾದ ನಮ್ಮ ಭಾರತಮಹಿಳಾ ಮಣಿಯರ ಯಶೋಧಾವಲ್ಯವು ಕೂಡ, ನಮ್ಮವರ ಮೇಲಿನ ದೌರ್ಜನ್ಯ ವಿಷದಿಂದ ಮಲಿನಸ್ಥಿತಿಗಳಿಯುತ್ತಿರುವುದು, ವಿಚಾರಪರರಾರಿಗೂ ವಿಷಾದ ವನ್ನುಂಟು ಮಾಡದೆ ಬಿಡಲಾರದು! ಇರಲಿ.

ಈ ಕಡೆ ನೋಡಿರಿ ನನ್ನ ತಂಗಿಯರೇ!

ಇಲ್ಲಿರುವ ನಮ್ಮ ತಾಯಿಗೆ ಇವಳ ಪುತ್ರಸಂತಾನವೇ ಬಲಭುಜವಾಗಿ ಯೂ, ಸ್ತ್ರೀಸಂತಾನವೇ ಇವಳ ವಾಮಭುಜವಾಗಿಯೂ ಇರುವುವು. ಇಂತಿ ರುವ ಭುಜಗಳಲ್ಲಿ ಈಗಾಗಿರುವ ಸ್ಥಿತಿಗಳನ್ನು ನೋಡಿ ತಿಳಿಯಿರಿ. ಈ ತಾಯಿಯ ದಕ್ಷಿಣಬಾಹುವನ್ನು ನೋಡಿರಿ! ಅಭಯಪ್ರದವಾಗಿ ನಳನಳಿಸು ತ್ತಿದ್ದ ಕರಪಲ್ಲವವು ಕುಂದಿಹೋಗಿ, ಒಡಲಬೇಗೆಯ ಉಪಟಳವನ್ನು ತಡೆಗಟ್ಟುತ್ತಿರುವ ನಡುಪಟ್ಟಿಯಂತೆ ಸಾರವಿಲ್ಲದುದಾಗಿ, ಕಟಪ್ರದೇಶದಲ್ಲಿ ಹೇಗೆ ಸುತ್ತಿಡಲ್ಪಟ್ಟಿರುವುದೋ, ಕಾಣಲಿಲ್ಲವೇ? ಹೀಗಾಯಿತೇಕೆ?

ಮತ್ತೆ ನೋಡಿರಿ, ಇವಳ ವಾಮಬಾಹುವಿನ ಪರಿಯನ್ನು! ಯಾವ ಭಾಗ್ಯವು, ಹಿಂದೆ ಆತ್ಮಾನಂದಪಥವನ್ನು ಪ್ರಕಾಶಪಡಿಸುತ್ತಿದ್ದ ಕರಕಮಲ ದಿಂದ ಸಮಸ್ತ ಜೀವಕೋಟಿಗೂ ಆಹ್ಲಾದ ದಾಯಕವಾಗಿದ್ದಿತೋ, ಅದೇ ಭಾಗವೇ ಈಗ ಈ ಬಗೆಯಾಗಿ, ಕೃಶವಾಗಿ,—ಅದೇ ಕರಕಮಲವೇ ಈಗ ಈರೀತಿ ಮುಕುಳಿತವಾಗಿ, ಅಂತಸ್ತಾಪದಿಂದ ಹೊರಡುವ ಕಣ್ಣೀರನ್ನು ವಾರಿಸುತ್ತಿರುವಂತೆ ಕಪೋಲಪ್ರದೇಶದಲ್ಲಿ ಸೇರಿಹೋಗಿರುವುದನ್ನು ನೋಡು

ತ್ತಿದ್ದರೂ ನೀವೇನೆನ್ನುತ್ತಿರುವಿರಿ? ಹೀಗಾಯಿತೇಕೆಂದು ಕೇಳುವಿರೇನು—ತಂಗಿಯರೇ? ಇದಕ್ಕೆ ಕಾರಣರು ನಾವೇ, ಅಥವಾ ನಮ್ಮ ಪುರುಷಬಾಂಧವರೋ—ಹೀಗೆಯೇ ಸರಿಯೆಂದು ನಿರ್ಧರಿಸುವುದು ಕಷ್ಟವಾಗಿದ್ದರೂ, ಇಬ್ಬರಿಂದಲೂ ಅಪಚಾರವು ನಡೆಯಲ್ಪಟ್ಟಿರುವುದೆಂದು ಹೇಳಬೇಕಾಗಿದೆ. ಇದಕ್ಕಾಗಿ ಎಷ್ಟೆಷ್ಟು ಪರಿತಪಿಸಿದರೂ ಸ್ವಲ್ಪವಾಗಿಯೇ ಇದೆ.

ಆದರೆ, ಗತಿಸಿದ ವಿಚಾರವನ್ನು ಕುರಿತು, ಅತಿಯಾಗಿ ಶೋಕಿಸುತ್ತ ಕುಳಿತ ಮಾತ್ರದಿಂದಲೇ ನಾವು ನಮ್ಮ ಮಾತೆಯು ಪೂರ್ವ ಶೋಭಾರಾಶಿಯನ್ನು ಮತ್ತೆ ಊರ್ಜಿತಪಡಿಸಿದ ಹಾಗಾಗಲಿಲ್ಲ. ನಾವು ಅಧೀರರಾಗಿ ಅತ್ತುದರಿಂದಲೇ ನಮ್ಮ ತಾಯಿಯು ಅಭ್ಯುದಯವನ್ನು ಹೊಂದುವುದಿಲ್ಲ. ಅಳುವುದು—ಹಂಬಲಿಸುವುದು—ಕಳವಳಿಸಿ ಬಳಲುವುದು, ಇವುಗಳಲ್ಲಿ ಯಾವದೇ ಒಂದರಿಂದಲೂ ನಾವು ನಮ್ಮ ಕರ್ತವ್ಯವನ್ನು ಸಾಧಿಸಲಾರೆವು. ಮತ್ತೆ ಈಗ ನಾವು ಮಾಡಬೇಕಾಗಿರುವುದೆಂದರೆ, ಮುಂದಿನ ಅಭ್ಯುದಯವನ್ನು ಕಾಣಬೇಕೆಂಬ ಉತ್ಸಾಹವನ್ನು ಹೊಂದಿ, ನಮ್ಮಲ್ಲಿರುವ ದುರ್ಗುಣಗಳನ್ನು ದೂರ ಮಾಡಿ, ಸದ್ವರ್ತನ-ಸೌಜನ್ಯಗಳನ್ನು ಹೆಚ್ಚಿಸಿಕೊಳ್ಳಬೇಕಾದುದೊಂದೇ ನಾವು ಮಾಡಬೇಕಾಗಿರುವುದು.

ನಮ್ಮಲ್ಲಿರುವ ದುರ್ಗುಣಗಳೆಂದರೆ, ಪ್ರಬಲವಾದುದು ಆಲಸ್ಯ-ಉದಾಸೀನ-ಅಭಿಮಾನ-ಮಾತ್ಸರ್ಯಗಳೇ ಆದಿಯಾದುವು. ಇವುಗಳಲ್ಲಿ ಆಲಸ್ಯವೆಂಬುದು ನಮ್ಮಲ್ಲಿ ಕಾಲೂರಿದಾಗಲ್ಲೇ ನಮ್ಮ ಕರ್ತವ್ಯದ ಪಾಲಿಗೆ ಧೂಳು ಬಿದ್ದಂತಾಯಿತು. ಕರ್ತವ್ಯಮೂಢರಾದ ಬಳಿಕ, ನಾವು ಮಾಡಬೇಕಾದುದೇನಿದೆ? ಊಟ—ನೋಟ-ಕೂಟ-ಬಡಿದಾಟ ಇವುಗಳಲ್ಲಿಯೇ ನಮ್ಮ ಗಮನ ವಿರಬೇಕಷ್ಟೆ? ಹಾಗಿರಲಾರದ ಪಕ್ಷದಲ್ಲಿ ನಾವು ಕುಳಿತೆಡೆಯಲ್ಲಿಯೇ ಸುಮ್ಮನೆ ಕುಳಿತಿರಲಾರದೆ, ಪರಮತದೂಷಣೆ, ಪರಹಿಂಸೆ, ಪರಸ್ವಾಪಹಾರ, ಕಲಹ, ಕ್ರೋಧ ಮೊದಲಾದುವುಗಳನ್ನು ಹಿಡಿಯುವೆವು. ಬಳಿಕ ಇವನ್ನೇ ಆಶ್ರಯಿಸಿರುವ ಇತರ ದುರ್ಗುಣಗಳೂ ಒಂದೊಂದಾಗಿ ಬಂದು ನಮ್ಮಲ್ಲಿ ಸ್ಥಾನವನ್ನಾಕ್ರಮಿಸಿ, ನಮ್ಮಲ್ಲಿ ಜನ್ಮಸಹಜವಾಗಿದ್ದ ಪ್ರಜ್ಞಾ, ಲಜ್ಜಾ, ದಯಾ, ದುರಿತಭೀತಿ, ಧೃತಿ, ಶಾಂತಿ ಮೊದಲಾದ ಗುಣಗಳನ್ನು ನುಂಗಿ, ಅವುಗಳ ಅಭಾವದಿಂದ ನಮ್ಮಲ್ಲಿ ತಾಮಸ ಭಾವವನ್ನು ಹೆಚ್ಚಿಸುವುವು. ಹೀಗೆ ತಾಮಸ

ಭಾವವು ನಮ್ಮನ್ನು ಹತ್ತಿರುವುದರಿಂದಲೇ ನಮ್ಮಲ್ಲಿ ದೌರ್ಜನ್ಯವು ಹೆಚ್ಚಿ ಹೋಗಿರುವುದು. ಇದಕ್ಕೆ ಕಾರಣರು, ಇಲ್ಲವೆ ಪ್ರೋತ್ಸಾಹಕರು ಒಂದು ವೇಳೆ ಪುರುಷರೇ ಆಗಿರುವರೆಂದು ಕೆಲವರು ತರ್ಕಿಸಬಹುದಾದರೂ, ನಾವು ಹಾಗೆ ಎಂದಿಗೂ ಹೇಳಬಾರದು. ಏಕೆನ್ನುವಿರಲ್ಲವೆ? ಪುರುಷರು ಇದನ್ನು ತಮ್ಮ ಸ್ವಬುದ್ಧಿಯಿಂದಲೇ ಮಾಡಿದವರಾಗಿಲ್ಲ. ಹೀಗೆ ಮಾಡಲು ಅಥವಾ ಮಾಡಲ್ಪಡುವಂತಾಗಲು ಅವರು ಅನೇಕ ಕಾರಣಗಳಿಂದ ಅನುಮೋದಿಸಿರಬೇಕೆಂದು ಮಾತ್ರ ಹೇಳಬಹುದು. ಅಷ್ಟಲ್ಲದೆ, ನಮ್ಮ ಪುರುಷಬಾಂಧವರು ಸ್ತ್ರೀಸಾಮಾನ್ಯವನ್ನೇ ನಿಂದಿಸುವಂತೆ ನಾವೂ ಪುರುಷಕೋಟಿಯನ್ನು ದೂರಿಗೆಳೆಯಬೇಕೆಂಬುದು ಸರಿಯಲ್ಲ. ಅಂತವರಲ್ಲಿ ಪ್ರತ್ಯಕ್ಷಪ್ರಮಾಣಕ್ಕೆ ಬರುವಂತಹ ದೋಷಗಳು ಕಂಡುಬಂದರೆ ಕೂಡ, ನಾವು ಅದಕ್ಕೆ ಮುಂಬರಿದು ಬರಲವಕಾಶಕೊಡದೆ, ನಮ್ಮ ಸಹಜ ಕ್ಷಮಾಗುಣದಿಂದಲೇ ತಡೆಗಟ್ಟಿ, ಆ ನಮ್ಮ ಬಂಧುವರ್ಗವನ್ನು ಉಚಿತರೀತಿಯಲ್ಲಿ ಸನ್ಮಾನಿಸುತ್ತಿರಬೇಕು. ಸ್ತ್ರೀಯರನ್ನು ನಿರಾಕರಿಸಿ ಪುರುಷರಾಗಲೀ, ಪುರುಷರನ್ನು ನಿರಾಕರಿಸಿ ಸ್ತ್ರೀಯರಾಗಲೀ ಬೇರೆ ಬೇರೆಯಾಗಿದ್ದು, ತಮ್ಮ ಕರ್ತವ್ಯವನ್ನು ತೃಪ್ತಿಕರವಾಗಿ ನೆರವೇರಿಸುವೆನೆಂದರೆ ಸಾಧ್ಯವಲ್ಲ. ಒಬ್ಬರ ಸಹಾನುಭೂತಿಯು ಮತ್ತೊಬ್ಬರಿಗಿದ್ದು, ಇಬ್ಬರೂ ಏಕಮತದಿಂದ ತಮ್ಮ ತಮ್ಮ ಪಾಲಿಗೆ ಬಿದ್ದಿರುವ ಕೆಲಸದ ಹೊರೆಯನ್ನು ನಿರ್ವಹಿಸುವುದೇ ಮುಖ್ಯವು. ಇದನ್ನು ಚೆನ್ನಾಗಿ ವಿಚಾರಕ್ಕೆ ತರದೆ, ಬರಿದೆ ಒಬ್ಬರನ್ನೊಬ್ಬರು ದೂರಿ, ತಮ್ಮ ಆತ್ಮಸಮಾಧಾನಕ್ಕೆ ತಾವೇ ಆತಂಕಕಾರಣರಾಗುವುದು ನೀತಿಯಲ್ಲ.

ಮತ್ತೆ ಕೇಳಿರಿ, ನನ್ನ ಎಳದಂಗೆಯರೇ!

ನಮ್ಮ ಹೆಣ್ಣುಮಕ್ಕಳಿಗೆ ನಾವು ಯಾವ ರೀತಿಯಲ್ಲಿ ಶಿಕ್ಷಣೆಯನ್ನು ಕೊಡಬೇಕೆನ್ನುವಿರಿ? ಶಿಕ್ಷಣೆಯೆಂದರೆ ಏನೆಂದು ತಿಳಿದಿರುವಿರಿ? ದಿನಕ್ಕೆ ನಾಲ್ಕಾರು ದೆಬ್ಬೆಗಳು ಮುರಿವಂತೆ ಮಕ್ಕಳನ್ನು ಹೊಡೆವುದು, ಇಲ್ಲವೆ, ಅಸಹ್ಯವಾದ ಬಯ್ಗುಳಿಂದ ಅವರನ್ನು ಬಗೆಬಗೆಯಾಗಿ ನೋಯಿಸುವುದು, ಇವೇ ಶಿಕ್ಷಣವೆಂದು ನಮ್ಮಲ್ಲಿ ಕೆಲವರು ಭಾವಿಸಿ, ಅದನ್ನೇ ಆಚರಣೆಯಲ್ಲಿಯೂ ತಂದಿರುವರಲ್ಲವೆ? ಅಂತವರಿಗೆ ಹೆಣ್ಣುಮಕ್ಕಳು, ಗಂಡುಮಕ್ಕಳೆಂಬ ಭೇದ

ವೇನು? ಎಲ್ಲರನ್ನೂ ಮಾತುಮಾತಿಗೂ ಹೊಡೆದು ಕೊಲ್ಲುವುದೆಂದೇ ವಾಡಿಕೆ. ಅದಿರಲಿ.

ಮಕ್ಕಳನ್ನು ಹೊಡೆದು-ಬಯ್ದು, ದಾರಿಗೆ ತರಬೇಕೆಂಬುವರು ಮೂರ್ಖರು. ಹಾಗೆ ಹೊಡೆದು-ಬಯ್ದು ದಾರಿಗೆ ತರಬೇಕೆಂದರೆ, ಅವರು ಏಟನ್ನು ತಡೆಯಲಾರದೆ ಮೊದಮೊದಲು ಅಳುವುದು, ಕಳವಳಿಸುವುದು, ಆ ಬಳಿಕ ಸುಳ್ಳಾಡಿ ತಲೆತಪ್ಪಿಸಿಕೊಳ್ಳುವುದು, ಅದೂ ಆದ ಬಳಿಕ ಮುಂದೆ ಕ್ರಮವಾಗಿ ಚಂಡಿತನದಿಂದ ಹೋರುವುದು, ಹೆರವರನ್ನು ದೂರಿ ತಾವೂ ದೂರಲ್ಪಡುವುದು. ಕಡೆಗೆ ಮೀರಿಬಂದು ಮೇಲೆ ಮುರಿದು ಬೀಳುವುದು, ಇಲ್ಲವೆ, ಕುಲ-ಗೋತ್ರ-ಶೀಲಗಳೆಲ್ಲವನ್ನೂ ಬಿಟ್ಟು, ಅಡ್ಡದಾರಿ ಹಿಡಿದು ಹಾಳಾಗುವುದು. ಹೀಗಲ್ಲವೇ—ಆಗುವರು?

ಶಿಕ್ಷಣವೆಂದರೆ, ಹಿರಿಯರ ಸದ್ವರ್ತನಗುಣವೇ ಮಾದರಿಯಾಗಿಟ್ಟು, ಮಕ್ಕಳಿಗೆ ಬಾಲ್ಯದಿಂದಲೂ ತಮ್ಮ ತಾಯಿ ತಂದೆಗಳ ಮತ್ತು ಒಡಹುಟ್ಟಿದವರಲ್ಲಿ ಪ್ರೀತಿಯುಂಟಾಗಿ, ತಾಯಿ ತಂದೆಗಳ ಸಂತೋಷಕ್ಕಾಗಿ ಅವರು ಕೆಲವು ವೇಳೆ ಆಟವಾಟಗಳನ್ನಾದರೂ ಬಿಟ್ಟು, ಅವರ ಮುಂದೆ ಬಂದು ಸರಸ ಪ್ರಸಂಗದಲ್ಲಿ ಬೆರೆದು, ವಿನೋದಕ್ಕಾಗಿ ಅವರ ಕೆಲಸಗಳಿಗೆ ತಾವೂ ನೆರವಾಗಬೇಕೆಂಬ ಅಭಿಮಾನವನ್ನು ಹೊಂದಿ, ತಮ್ಮ ಶಕ್ತಿ-ಶ್ರದ್ಧಾ-ಭಕ್ತಿಗಳನ್ನು ಪ್ರದರ್ಶಿಸುವ ಪ್ರಯತ್ನವನ್ನು ಹಿಡಿಯುವಂತೆ ಕೊಡಲ್ಪಡುವ ಶಿಕ್ಷಣವೇ ಶಿಕ್ಷಣವೆನ್ನಿಸುವುದು.

ಹೀಗೆ ಕೊಡಲ್ಪಡುವ ಶಿಕ್ಷಣದಿಂದ ಆ ನಮ್ಮ ಮಕ್ಕಳು ಆದಿಯಿಂದಲೂ ತಮ್ಮ ತಾಯಿತಂದೆಗಳಲ್ಲಿ ಅಕೃತ್ರಿಮವಾದ ಪ್ರೀತಿಗೌರವವನ್ನುಳ್ಳವರಾಗಿ, ತಮ್ಮ ಒಡಹುಟ್ಟಿದವರು, ಅಪ್ತರು, ಇಷ್ಟರು, ಇವರಲ್ಲಿ ವಿಶ್ವಾಸವನ್ನೂ, ಇತರ ಆರ್ತರು, ಅನಾಥರುಗಳಲ್ಲಿ ಕನಿಕರವನ್ನೂ, ಪ್ರಾಣಿಗಳಲ್ಲಿ ದಯೆಯನ್ನೂ ತೋರುವವರಾಗುತ್ತಾರೆ. ಇಂತವರೇ ದೇಶಕ್ಕೂ ಸಮಾಜಕ್ಕೂ ಕಲ್ಯಾಣವನ್ನುಂಟುಮಾಡುವರು. ಇಂತವರಿಂದಲೇ ಕುಲ-ಮತ-ಕೀರ್ತಿ-ಸುಖ-ಸಂಪದಗಳು ಊರ್ಜಿತಸ್ಥಿತಿಗೆ ಬರಬೇಕು. ಇದೇ ಶಿಕ್ಷಣವೇ ನಮ್ಮ ಆರ್ಯರಮಣಿಯರೂ, ಮತ್ತು ಆರ್ಯಬಾಂಧವರೂ ಹೊಂದಿದ್ದರು. ಈಬಗೆಯ ಅತ್ಯುತ್ತಮಶಿಕ್ಷಣವೇ ನಮ್ಮವರಿಗೆ ಪ್ರಾಥಮಿಕ ಶಿಕ್ಷಣವಾಗಿದ್ದು,

ಉಳಿದ–ಎಂದರೆ, ವಿದ್ಯಾಪ್ರಸಾರಕ್ಕೆ ಸಾಧನವಾದ ಶಾಸ್ತ್ರಾಭ್ಯಾಸವೂ ಅಥವಾ ಕಲಾಭ್ಯಾಸವೂ ಅಭ್ಯಸಿಸಲ್ಪಟ್ಟಿರೆ, ಅಂತವರಿಂದ ನಮ್ಮ ದೇಶಮಾತೆಗೆ ಉಂಟಾಗುವ ಲಾಭವು ಅಪಾರವೆನಿಸುವುದು.

ಮತ್ತೊಂದು ವಿಚಾರವೇನೆಂದರೆ,—

ನಮ್ಮ ಹೆಣ್ಣುಮಕ್ಕಳಿಗೆ ಕೊಡಲ್ಪಡುವ ಶಿಕ್ಷಣವು ನಿಮ್ಮಿಂದಲೇ ಆಗಬೇಕಲ್ಲದೆ, ಅದನ್ನು ಪುರುಷಬಂಧುಗಳ ಪಾಲಿಗೆ ಬಿಡುವುದಾಗಲೀ ಇಲ್ಲವೆ, ಶಾಲೆಗಳಲ್ಲಿ ಅಥವಾ ತಮ್ಮ ಪರೋಕ್ಷದಲ್ಲಿ ಕೊಡಲ್ಪಡಬಾರದು. ಏಕೆಂದರೆ, ಹಾಗೆ ಪರೋಕ್ಷದಲ್ಲಿ ಅಥವಾ ಶಾಲೆಗಳಲ್ಲಿ ಕೊಡಲ್ಪಡುವ ಶಿಕ್ಷಣದಲ್ಲಿ ಭಾಷಾಪಾಂಡಿತ್ಯವುಂಟಾಗಬಹುದಾದರೂ ನಮ್ಮವರಿಗೆ ಅವಶ್ಯಕವಾಗಿರಬೇಕಾದ ಗೃಹಶಿಕ್ಷಣವೂ, ಅದನ್ನು ಪುಷ್ಟೀಕರಿಸುವಂತೆ ಮಾಡುವ ಸಾಮಾಜಿಕ, ನೈತಿಕ, ಮತ್ತು ತಾತ್ವಿಕಶಿಕ್ಷಣವೂ, ಸರಿಯಾದ ರೀತಿಯಲ್ಲಿ ಎಂದರೆ, ಸಾತ್ವಿಕ ಮಾರ್ಗದಲ್ಲಿ ಕೊಡಲ್ಪಡುವುದೆಂದು ಹೇಳುವಂತಿಲ್ಲ. ಇವುಗಳನ್ನು ಬಿಟ್ಟು ಕಲಿಯುವ ಕಲೆಯಿಂದ ನಮ್ಮವರು ಸಾಧಿಸಬಹುದಾದ ಧರ್ಮವಾದರೂ ಇಂತಹದೆಂದು ಹೇಳಲಾಗುವುದಿಲ್ಲ. ಹೀಗಿದ್ದು, ವೃಥಾ ನಮ್ಮ ಮಕ್ಕಳು ನಮ್ಮ ಹಿರಿಯರಿಗೆ ಮತ್ತು ತಮ್ಮ ಪುರುಷರಿಗೆ ಅನಿಧೇಯರಾಗಿ, ಕೇವಲ ಸ್ವಾತಂತ್ರ್ಯದ ಉದ್ಯೋಗ ಅಥವಾ ಅಧಿಕಾರಗಳನ್ನು ಹೊಂದಿ ಮತ್ತರಾಗುವಂತೆ ಮಾಡುವ ಶಿಕ್ಷಣದಿಂದೇನು? ಅದರಿಂದ ನಮ್ಮ ಸಮಾಜಕ್ಕಾಗಲೀ ದೇಶಕ್ಕಾಗಲೀ ಉಂಟಾಗುವ ಲಾಭವಾವುದು?—ಹೇಳುವುದು ಪ್ರಯಾಸ ಮತ್ತು ಸಾಹಸ ಮಾತ್ರವಲ್ಲವೆ?—

ಅದರೆ, ಹೀಗೆ ಹೇಳಿದುದರಿಂದ ಪ್ರೌಢಶಿಕ್ಷಣವೆನ್ನಿಸುವ ಕಲಾಭ್ಯಸನವೇ ಕೂಡದೆಂದು ನಾನು ಹೇಳುವುದಿಲ್ಲ. ಪ್ರಾಥಮಿಕ ಶಿಕ್ಷಣವು ನಿಮ್ಮಿಂದ ತೃಪ್ತಿಕರವಾಗಿ ಕೊಡಲ್ಪಟ್ಟಬಳಿಕ, ನಮ್ಮ ಮಕ್ಕಳು ತಮ್ಮ ಪತಿರಾಜರಿಂದ ಮತ್ತು ತಮ್ಮ ಬಂಧುಗಳಿಂದ ಹೊಂದುವುದರಲ್ಲಿ ಏನೂ ಆತಂಕವಿರಲಾರದು. ಇದರಿಂದ ನಮ್ಮವರಲ್ಲಿ ಸ್ತ್ರೀವಿದ್ಯಾಭ್ಯಾಸವೇ ನಿಷೇಧವೆಂದು ಹೇಳುವ ಅಜ್ಜಮ್ಮನವರಿಗೂ,—ಸ್ತ್ರೀವಿದ್ಯಾಭ್ಯಾಸವು ಅತ್ಯಾವಶ್ಯಕವೆಂದು ಹೇಳುವ ರಾದರೂ, ತತ್ವಾರ್ಥವನ್ನು ವಿಚಾರಕ್ಕೆ ತಾರದೆ, ಪಾಶ್ಚಾತ್ಯ ನಾಗರಿಕತೆಯನ್ನೇ ಮುಂದಿಟ್ಟು, ಅಂತವರ ವೃತ್ತಿಯನ್ನೇ ತಾವೂ ಅನುಕರಣಕ್ಕೆತಂದು,

ತಮ್ಮ ತನು-ಮನೋ-ಧನಗಳನ್ನು ವ್ಯರ್ಥವಾಗಿ ಕಳೆಯುತ್ತಿರುವ ನವನಾಗರಿಕ ಯುವತಿಯರಿಗೂ ತಿಳಿಗಣ್ಣಿರೆದು, ಆತ್ಮಾವಲಂಬನದ ಆನಂದವೆಂತಹ ಸೆಂಬುದು ಅನುಭವಕ್ಕೆ ಬರುವಂತಾಗುವುದು.

"ಸೋದರಿಯರೇ!

ಮೇಲೆ ಹೇಳಿದುದೆಲ್ಲವೂ ನಮ್ಮ ನುಂದಿನ ಮಕ್ಕಳನ್ನು ನಾವು ಮುಂದಿಗಳನ್ನಾಗಿ ಮಾಡುವ ಉಪಾಯಮಾತ್ರವಲ್ಲದೆ, ನಮ್ಮ ಕರ್ತವ್ಯವೂ ಆಗಿದೆ. ಇಷ್ಟಾಗಬೇಕಾದರೆ, ನಾವು ಹೇಗಿರಬೇಕೆಂದು ತಿಳಿದಿರುವಿರಿ? ನಮ್ಮ ಮಕ್ಕಳ ವಿಚಾರದಲ್ಲಿಯೇ ಆಗಲಿ, ಮನೆಮಂದಿಗಳ ವಿಚಾರದಲ್ಲಿಯೇ ಆಗಲಿ, ಮತ್ತು ಪತಿಸೇವೆ, ಗುರುಶುಶ್ರೂಷೆಗಳಲ್ಲಿಯೇ ಆಗಲೀ ನಾವು ಹೇಗೆ ನಡೆದುಕೊಳ್ಳಬೇಕೆಂದು ಮಾಡಿರುವಿರಿ? (ನಿರೂಪಿಸಬೇಕು, ನಿರೂಪಿಸಬೇಕು.)

ತಾಯಿಯಾದವಳು, ನಿಜವಾದ ತಾಯಿಯೆನ್ನಿಸಬೇಕಾದರೆ, ತನ್ನ ಗೃಹಕಾರ್ಯನಿರ್ವಾಹದ ಕಡೆಗೆ ಸಂಪೂರ್ಣವಾದ ಗಮನವನ್ನು ಕೊಡಬೇಕು. ಮನೆಯಲ್ಲಿ ಮುಂದಿಗಳಿರುವರೆಂದು, ತನ್ನ ಕಾರ್ಯವನ್ನು ಮತ್ತೊಬ್ಬರ ಪಾಲಿಗೆ ಬಿಟ್ಟು, ತಾನು ಯಾಜಮಾನ್ಯದ ಭಾರವನ್ನು ಮಾತ್ರವೇ ಹೊತ್ತಿರುವೆನೆಂದು ಕುಳಿತರೆ, ತನ್ನ ಮಕ್ಕಳೂ ತನ್ನಂತೆಯೇ ಮೈಗಳ್ಳತನವನ್ನು ಕಲಿಯುಬಹುದೆಂದೂ, ಮತ್ತು ತನ್ನ ಸೋಮಾರಿತನ ಅಥವಾ ಕಾಠಿಣ್ಯಾದ ಅಧಿಕಾರಕ್ಕಾಗಿ ಮನೆಮಂದಿಗಳಲ್ಲಿ ಅಂತಃಕಲಹಗಳುಂಟಾಗಬಹುದೆಂದೂ, ಹೀಗಾಗುವುದರಿಂದ ತನ್ನ ಯಶಸ್ಸಿಗೆ ಹಾನಿಯೂ, ಗೃಹರಾಜ್ಯಕ್ಕೆ ಆತಂಕಗಳೂ ಹೆಚ್ಚುವುದೆಂದೂ ಚೆನ್ನಾಗಿ ತಿಳಿದಿಚ್ಛತ್ತಿದ್ದು, ತಾನು ಮಾಡಬೇಕಾದ ಕೆಲಸಗಳನ್ನು ಪಾಲುಮಾರದೆ, ಸಕಾಲದಲ್ಲಿ, ಸರಿಯಾದ ರೀತಿಯಲ್ಲಿ, ನೆರವೇರಿಸುವುದರಿಂದ ಮನೆಮಂದಿಗಳ ಮನಸ್ಸಿಗೆ ಉತ್ಸಾಹವನ್ನೂ ಅಂತರ್ಯವಾದ ವಿಶ್ವಾಸವನ್ನೂ ಹೆಚ್ಚಿಸುವಂತೆ ನಡೆಯುತ್ತಿರಬೇಕು. ಮತ್ತು ಮನೆಮಂದಿಗಳಲ್ಲಿಯೂ ಇತರ ಆಶ್ರಿತಾನಾಥ ಅತಿಥಿ-ಅಭ್ಯಾಗತ ವರ್ಗದವರಲ್ಲಿಯೂ ಆದರವನ್ನು ತೋರುತ್ತಿರಬೇಕು. ತಮ್ಮ ಹಿರಿಯರೆಂದರೆ, ಗುರುಜನರೆಂದರೆ, "ದಿನಗಳೆದು ಸಾಯುವ ಮುದುಕರೆಂದು" ಅಲ್ಲಗಳೆಯದೆ, ಕೇವಲ ಭಕ್ತಿಗೌರವಗಳಿಂದ, ಮತ್ತು ಮಕ್ಕಳನ್ನು ಉಪಚರಿಸುವ ಬಗೆಯಿಂದ ಉಪಚರಿಸಿ, ಅವರನ್ನು ಸಂತೋಷಪಡಿಸುವುದೇ ತಮ್ಮ ಪುರೋವೃದ್ಧಿಗೆ ಸಾಧನವೆಂದು

ತಿಳಿದು, ಅದರಂತೆ ನಡೆಯಬೇಕು. ಇಷ್ಟೇ ಅಲ್ಲ; ಪತಿರಾಜರಿಗೆಂದರೆ,—ಕೇವಲ ಪರಬ್ರಹ್ಮವೇ ಅವರೆಂದು ನಂಬಿ, ಸರ್ವಪ್ರಕಾರದಿಂದಲೂ ಎಂದರೆ, ಪತಿಗೆ ಸೇವೆಯಲ್ಲಿ ದಾಸಿಯಾಗಿ, ಹಿತಸೂಚನೆಯಲ್ಲಿ ಉಪದೇಶಕಳಾಗಿ, ಕಾರ್ಯನಿರ್ವಾಹದಲ್ಲಿ ಮಂತ್ರಿಯಾಗಿ, ಕೀರ್ತಿ-ಸಂಪಲ್ಲಾಭಗಳಲ್ಲಿ ಜಯಶ್ರೀಯಾಗಿ, ಸುಖಾನುಭವದಲ್ಲಿ ಛಾಯೆಯಾಗಿ,—ಹೀಗೆ ನಡೆವುದರಿಂದ—ಪುರುಷನ ಸಮಸ್ತ ಪುರುಷಾರ್ಥಸಾಧನೆಗೂ ಆಧಾರಪಾತ್ರಳಾಗಿರುವಂತೆ ನಡೆಯಬೇಕು. ಹೀಗಿದ್ದರೆಯೇ ನಮ್ಮ ಮುಂದಿನ ಮುಕ್ಕಳು, ನಮ್ಮ ಮಾರ್ಗವನ್ನು ಅನುಕರಣಕ್ಕೆ ತರುವರಲ್ಲದೆ ಬೇರಿಲ್ಲ.

ಇದು ನಿಮಗೆ ತಿಳಿಯದುದಲ್ಲವಾದರೂ ನನ್ನ ಮನಸ್ತೃಪ್ತಿಗಾಗಿ, ಹಿರಿಯರು ಹೇಳಬೇಕೆಂದು ಮಾಡಿರುವ ಶಾಸನಕ್ಕಾಗಿ, ಹೇಳಿರುವೆನು. ಎಂದರೆ, ಒಬ್ಬಿಬ್ಬರಿಗೆ ಹೇಳಿದುದಲ್ಲ. ನಮ್ಮ ಈ ನಂದಿನಿಯನ್ನೇ ಮುಂದಿಟ್ಟು, ಇಲ್ಲಿರುವ ನನ್ನ ಎಳದಂಗೆಯರೆಲ್ಲರಿಗೂ ಹೇಳಿರುವೆನು. ಇದನ್ನು ಚೆನ್ನಾಗಿ ಸಮಾಲೋಚಿಸಿ, ಕಾರ್ಯಕಾರಿಯಾಗುವಂತೆ ಮಾಡಬೇಕೆಂದೂ ಕೇಳಿಕೊಳ್ಳುವೆನು. ಇದೇ ನಂದಿನಿಗೆ ನಾನು ಕೊಡತಕ್ಕ ಬಳುವಳಿ. ಇದೇ ಪತಿಸಹಿತೆಯಾಗುವ ನಂದಿನಿಗೆ ನಾನು ಕೊಡುವ ಬಹುಮಾನ; ಮತ್ತು ನಂದಿನೀ ಅಚಲಚಂದ್ರರ ಸ್ಥಿರಬ್ರಹ್ಮಚರ್ಯವ್ರತಸಿದ್ಧಿಯ ಕುರುಹಾಗಿ, ಇಂದು ನಡೆಯುವ ಕಲ್ಯಾಣಮಹೋತ್ಸವಕ್ಕಾಗಿ, ನಮ್ಮ ಅಕ್ಕತಂಗಿಯರೆಲ್ಲರಿಗೂ ನನ್ನಿಂದ ಕೊಡಲ್ಪಡುವ ಅಭಿನಂದನ!!!" (ಕರತಾಡನದೊಡನೆ—"ಯಥೇಷ್ಟವು; ಯಥೇಷ್ಟವು. ಇದೇ ನಮಗೆ ಅನಂತಾನಂತವಾದ ವರವು.")

॥ ಶ್ರೀಃ ॥

ಸಂಕಲ್ಪಸಿದ್ಧಿ.

(ನಂದಿನೀ ಕಲ್ಯಾಣ; ದೇಶಸೇವಾದೀಕ್ಷೆ.)

"ಧರ್ಮದ್ರುಹಂ ಸಕಲದುಷ್ಕೃತಿ ಸಾರ್ವಭೌಮಮಾತ್ಮಾನ
ಭಿಜ್ಞಮನುತಾಪಲವೋಜ್ಜಿತಂಮಾಮ್॥ವೈತಾನಸೂಕರ
ಪತೇಶ್ಚರಣಾರವಿನ್ದೇ ಸರ್ವಂ ಸಹೇನನುಸಮರ್ಪಯಿತುಂ
ಕ್ಷಮಾತ್ವಾಂ॥೯॥ ತ್ರಾಣಾಭಿಸನ್ಧಿ ಸುಲಭೇಪಿ ಸದಾಮು
ಕುನ್ದೇ ಸಂಸಾರತನ್ತ್ರವಹನೇನವಿಲಮ್ಬಮಾನೇ। ರಕ್ಷಾ
ವಿಧೌತನುಭೃತಾಮನಘಾನುಕಮ್ಪಾಮಾತಸ್ಸ್ವಯಂವಿತ
ನುಷೇ ಮಹತೀಮುಪೇಕ್ಷಾಮ್ ॥ ತಾಪಶ್ರಯಿಾಂ ನಿರ
ವಧೀಂ ಭವತೀಂ ದಯಾರ್ದ್ರಾಸ್ಸಂಸಾರ ಘರ್ಮಜನಿತಾಂ
ಸಪದೀಕ್ಷಿಪನ್ತಃ। ನೂತರ್ಭವಜ್ಜನು ನುಧುರಾಮೃತವರ್ಷ
ನ್ಮೈತ್ರೀಂ ಮಾಯೂವರಾಹದಯಿತೇ ಮುಹಿತೇಕಟಾಕ್ಷಃ॥ ೫೦

ನಂದಿನೀ-ಸ್ವರ್ಣಯರ ಮಾಂಗಲ್ಯಧಾರಣಾ ಮಹೋತ್ಸವದ ಸಮಯ. ಸತ್ಯಾನಂದ ಬ್ರಹ್ಮಚಾರಿಯು ದೇವಿಯ ಪಾದಪೂಜೆಯಲ್ಲಿ ನಿರತ ನಾಗಿರುವನು. ತಪಸ್ವಿನಿಯು ದೇವಿಯ ಬಡಗಡೆಯಲ್ಲಿ ನಿಂತು, ಅನಂದೋ ತ್ಸಾಹದಿಂದ ದೇವಿಯ ಪೂಜೆಯಲ್ಲಿ ಅಣ್ಣನಿಗೆ ಸಹಾಯಕಳಾಗಿರುವಳು. ಗರ್ಭಾಂಕಣದ ಮುಂಗಡೆ, ದೇವಿಗೆ ಇದಿರಾಗಿ, ನಾದಾನಂದ, ಆನಂದಚಂದ್ರರು ಕೈಕಟ್ಟಿಕೊಂಡುನಿಂತು ಭಯ ಭಕ್ತಿಯಿಂದ-"ಧರ್ಮದ್ರುಹಂ ಸಕಲ ದುಷ್ಕೃತಿ ಸಾರ್ವಭೌಮಮಾತ್ಮಾನಭಿಜ್ಞಮನುತಾಪಲವೋಜ್ಜಿತಂಮಾಮ್॥" ಎಂದೀ ಬಗೆಯಾಗಿ ದೇವಿಯನ್ನು ಪ್ರಾರ್ಥಿಸುತ್ತಿರುವರು. ಇವರ ಒಳಿಯಲ್ಲಿಯೇ ಭಕ್ತಿಸಾರ ಸೇವಾನಂದರೂ, ಅವರ ಹಿಂದೆ ನಗೇಶ, ಶರಚ್ಚಂದ್ರ, ಜ್ಞಾನ ಸಾರಚಕ್ರವರ್ತಿ, ವಿದ್ಯಾನಂದಪ್ರಭುಗಳೂ ಕೈಕಟ್ಟಿ ನಿಂತಿರುವರು.

ದೇವಿಯ ಬಲಗಡೆಯಲ್ಲಿ ಕ್ರಮವಾಗಿ ನಂದಿನಿ-ಸ್ವರ್ಣಯರು ದೇವಿಯ ಪಾದಪ್ರದೇಶದಲ್ಲಿಯೇ ದೃಷ್ಟಿಯನ್ನು ನಿಲ್ಲಿಸಿ ತಲೆವಾಗಿ ನಿಂತಿರುವರು.

ಇವರ ಬಳಿಯಲ್ಲಿಯೇ ಸುರಸೆ ಪರಿಮಳೆಯರೂ, ಇವರ ಹಿಂದೆ ಚಿತ್ರಕಲಾ ಚಂದ್ರಮತಿ ಮೊದಲಾದವರೂ ಪುಷ್ಪಾಕ್ಷತೆಗಳನ್ನು ಹಿಡಿದು ನಿಂತಿರುವರು.

ಮಾಂಗಲ್ಯಧಾರಣೆಗೆ ನಿಶ್ಚಿತವಾಗಿದ್ದ ಸುಮುಹೂರ್ತವೂ ಬಂದಿತು. ದೇವಿಗೆ ಮಂಗಳಾರತಿಯೂ ಸಂಪನ್ನೋರಿತು. ಸತ್ಯಾನಂದನು ದೇವಿಯು ಪಾದ ಪ್ರದೇಶದಲ್ಲಿದ್ದ ಪುಷ್ಪಾಕ್ಷತೆಗಳನ್ನು ತೆಗೆದು, ಮುಂದೆ ನಿಂತಿದ್ದ ವಧೂವರರ ಮೇಲೆ ಚಲ್ಲಿ, ನಾಲ್ವರಿಗೂ ಕಂಕಣಗಳನ್ನು ಕಟ್ಟಿ, ಆ ಬಳಿಕ ಸ್ವರ್ಣಾಭರಣ ಸಹಿತವಾಗಿ ಪ್ರಕಾಶಿಸುತ್ತಿದ್ದ ಮಾಂಗಲ್ಯಸೂತ್ರಗಳನ್ನು ತೆಗೆದು, ನಾದಾನಂದ ಅಚಲಚಂದ್ರರ ಕೈಯಲ್ಲಿತ್ತು, "ಸುಕುಮಾರರೇ! ಈ ನಮ್ಮ ಮಾತೆಗೆ ಪ್ರೀತ್ಯಾಸ್ಪದ ಪುತ್ರರಾಗಿರುವ ನೀವು ಈವರೆಗೆ ದೇಶಮಾತೃಸೇವೆಯಲ್ಲಿ ನಿರತರಾಗಿ, ಬ್ರಹ್ಮಚರ್ಯೋಪಕನಿಷ್ಠೆಯಿಂದ ನಿಮ್ಮ ಪುತ್ರಕರ್ತವ್ಯದ ಪ್ರಥಮಭಾಗವನ್ನು ಸಾಫಲ್ಯಗೊಳಿಸಿಕೊಂಡಿರಿ. ಇನ್ನು ಮುಂದೆ, ಈ ನಿಮ್ಮ ಪುತ್ರಕರ್ತವ್ಯದ ಸಮಸ್ತಭಾಗಗಳಲ್ಲಿಯೂ ಕೃತಾರ್ಥರೆನ್ನಿಸುವುದಕ್ಕಾಗಿ, ನಿಮಗೆ ಅವಶ್ಯಮನುಭೋಕ್ತವ್ಯಂಗಳಾಗಿರುವ ಗೃಹಸ್ಥಾಶ್ರಮಧರ್ಮಗಳನ್ನು ನೀವು ಈಗ ಕೈಕೊಳ್ಳಬೇಕಾಗಿರುವುದು. ಇಂತಹ ಪವಿತ್ರತಮವಾದ ಧರ್ಮದಲ್ಲಿ ನೀವು ಸಿದ್ಧಾರ್ಥಗಳಾಗಬೇಕಾದರೆ, ಭಗವನ್ನಿಯಾಮಕದಂತೆ ನಿಮಗಾಗಿ ಕಾದಿರುವ ಈ ಪ್ರಕೃತಿದೇವಿಯರ ಪಾಣಿಗ್ರಹಣ ಮಾಡಿ, ಇವರ ಸಹಚರ್ಯೆಯಿಂದ ಧರ್ಮಪ್ರಜಾಪತಿಗಳಾಗಬೇಕೆಂದು ಭಗವತಿಯು ಆಜ್ಞೆಯಾಗಿರುವುದು.

ಅದುದರಿಂದ ಸುಕುಮಾರರೇ! ಇದೋ ಈ ಮಾಂಗಲ್ಯಸೂತ್ರಗಳನ್ನು ನೀವು ನಿಮ್ಮ ನಿಮ್ಮ ಸಹಧರ್ಮಿಣಿಯರಾಗುವ ಇವರ ಕೊರಳಿಗೆ ಕಟ್ಟಿರಿ. ಇದರ ಪ್ರಭಾವವು ಅಪಾರವಾದುದು; ಎಂದರೆ, ಸರ್ವಮಂಗಳೆಯು ಕೃಪಾಪ್ರೇಷಿತವಾದ ಈ ಸೂತ್ರವು, ಸತಿಯರಿಗೆ ಅವರ ಸ್ವಾಮಿಯು ಉಭಯಹಸ್ತದಿಂದ, ಎಂದು, ಕೊರಳನ್ನು ಅಲಂಕರಿಸುವುದೋ, ಅಂದಿನ ಮೊದಲು ಇದು, ಅವರು ಸಾಕ್ಷಾತ್ ಸರ್ವಮಂಗಳೆಯ ಅಂಶರೂಪಿಣಿಯರೇ ಆಗಿ, ಸಮಸ್ತ ಕಲ್ಯಾಣಕಾರ್ಯಗಳಿಗೂ ಮುಖ್ಯ ಕಾರಣೆಯರಾಗಿ ನಿಲ್ಲುವಂತೆ ಅಂತಸ್ಸತ್ವವನ್ನು ಕೊಡುವ ಸಾಮರ್ಥ್ಯವುಳ್ಳದು. ಈ ಮಾಂಗಲ್ಯಸೂತ್ರಕ್ಕೆ ನಮ್ಮ ಭಗವತೀಮಾತೆಯೇ ಪೋಷಕಳಾಗಿದ್ದು, ಸರ್ವಪ್ರಕಾರದಿಂದಲೂ ನಿಮಗೆ

ಮಾಂಗಲ್ಯವಿವೃದ್ಧಿಯಾಗುವಂತೆ ಅನುಗ್ರಹಿಸುವಳೆಂಬುದನ್ನು ಸಂಪೂರ್ಣ ಭರವಸೆಯುಳ್ಳವಿಟ್ಟು ಶುಭಕರ್ಮವನ್ನು ನೆರವೇರಿಸಿರಿ" ಎಂದು ಹೇಳಿ ನಗೇಶ-ಶರಚ್ಚಂದ್ರರನ್ನು ಕುರಿತು—"ತಮ್ಮಂದಿರೇ! ಈ ವರೆಗೆ ನೀವು ಜಗನ್ನಿಯಂತನ ಕಟ್ಟಳೆಯನ್ನನುಸರಿಸಿ, ಕನ್ಯಾಪಿತೃತ್ವದ ಮಹತ್ತರವಾದ ಭಾವನನ್ನು ಸಹಿಸಿ, ದೇಶಹಿತಕಾರ್ಯದಲ್ಲಿ ದಕ್ಷತೆಯನ್ನು ವಹಿಸಿ, ಸಹಜ ರೀತಿಯಿಂದ ಸತ್ಪಾತ್ರಗಳಿಗೆ ಕನ್ಯಾದಾನವನ್ನು ಮಾಡಿ, ಅಕ್ಷಯವಾದ ಯಶಸ್ಸುಗಳನ್ನು ಸಂಪಾದಿಸಿ ಧನ್ಯರಾದಿರಿ! ಜಗನ್ಮಾತೆಯನ್ನು ಪರಿಶುದ್ಧಾಂತಃಕರಣದಿಂದ ಸೇವಿಸಿ, ದೇಶಸೇವಕರಲ್ಲಿ ಅಗ್ರಗಣ್ಯರೆನ್ನಿಸಿದಿರಿ!! ಸಮಾಜದ ಮತ್ತು ಆಚಾರ ವಿಚಾರದಲ್ಲಿ ಉಂಟಾಗಿದ್ದ ಮೌಢ್ಯ-ಮೂರ್ಖ ಪದ್ಧತಿಗಳನ್ನೂ, ವರ ನಿಕ್ರಯ ಕನ್ಯಾವಿಕ್ರಯಗಳ ಹೇಯವ್ಯಾಪಾರಗಳನ್ನೂ ಖಂಡಿಸಿ, ಅನೀತಿಯ ದುಂದುವೆಚ್ಚವನ್ನು ತಡೆದು, ಆಶ್ರಿತಾನಾಥರಿಗೂ ಆರ್ತರಿಗೂ ತ್ರಾಣವುಂಟಾಗುವಂತೆ ಸುಧಾರಣೆಯನ್ನುಂಟುಮಾಡಿ, ಪರಮಾತ್ಮನ ಪೂರ್ಣಾನುಗ್ರಹಕ್ಕೂ ಪಾತ್ರರಾಗಿ, ಮುಂದೆ ಮಂದಿಗಳಾಗುವವರಿಗೆ ಮಾರ್ಗದರ್ಶಕರಾಗಿ ಪ್ರಕಾಶಿಸುವಂತಾದಿರಿ. ಸಂತೋಷ! ಸತ್ಪುತ್ರರೇ, ನಿಮ್ಮೀ ಸದುದ್ಯಮದಿಂದ ದೇಶ ಮಾತೆಗುಂಟಾದಲಾಭವು ಸಂತಸಪ್ರದವೇಸರಿ. ವಿಶೇಷವಿವರಣವೇಕೆ? ಸುಮುಹೂರ್ತವಾಗಿದೆ. ನಿಮ್ಮ ಭಾಯೆಯರೊಡನೆ ನೀವು, ನಿಮ್ಮ ನಿಪ್ಪು ಕನ್ಯಾಮಣಿಯರ ಪಾಣಿಗ್ರಹಣಮಾಡುವುದರಲ್ಲಿರುವ ಇವರನ್ನು ಆಶೀರ್ವದಿಸಿರಿ."

ನಗೇಶ ಶರಚ್ಚಂದ್ರರು ತಲೆಬಾಗಿ ದೇವಿಯ ಕಡೆಗೆ ಕೈನೀಡಿ—"ಭಗವರ್ತಿ! ನಮ್ಮೆಲ್ಲರಿಗೂ ತಾಯಿಯಾದವಳೇ ಇಲ್ಲಿರುವಲ್ಲಿ, ಆಶೀರ್ವದಿಸುವುದು ಅವಳನ್ನಲ್ಲದೆ ನಮ್ಮನ್ನು ಸೇರಿಲ್ಲ. ಮಾತೆಯ ಆಶೀರ್ವಚನವನ್ನು ನಿರೂಪಿಸಲು ತಾವೇ ಸಮರ್ಥರು. ತಮ್ಮ ಅನುಗ್ರಹವೇ ಪರಮೋತ್ಕೃಷ್ಟವಾದ ವರವು. ಈ ನೂತನ ವಧೂವರರು ಜಗನ್ಮಾತೆಯ ಮಕ್ಕಳೇ ಆಗಿರುವುದರಿಂದ, ಇವರ ಪಾಣಿಗ್ರಹಣ ಮಹೋತ್ಸವವನ್ನು ನೋಡಿ ಆನಂದಿತರಾಗುವಂತೆ ನಮ್ಮೆಲ್ಲರಿಗೂ ತಾವೇ ಅನುಗ್ರಹಿಸಬೇಕು." ಎಂದು ಸುಮ್ಮನಾದರು.

ಮತ್ತೆ ಸತ್ಯಾನಂದನ ಆಜ್ಞೆಯಾಯಿತು. ನಂದಿನೀ ಸ್ವರ್ಣಿಯರಿಗೆ ಮಾಂಗಲ್ಯಧಾರಣಾಮಹೋತ್ಸವವೂ ಸಂಭ್ರಮದಿಂದ ನಡೆಯಿತು. ಮತ್ತೆ ಸತ್ಯಾನಂದನ ನಿರೂಪದಂತೆ ಶರಚ್ಚಂದ್ರ ನಗೇಶರು-ತಮ್ಮ ತಮ್ಮ ಭಾರ್ಯೆಯ

ಮೊದಲೆ ನಂದಿನೀ ಸ್ವರ್ಣಯರ ಹಸ್ತವನ್ನು ವಿಧ್ಯುಕ್ತರೀತಿಯಿಂದ ನಾದಾ ನಂದ ಅಚಲಚಂದ್ರರ ಹಸ್ತದಲ್ಲಿರಿಸಿ, ಧನ್ಯವಾದವನ್ನು ಮಾಡಿ, ಆನಂದಾಶ್ರು ವನ್ನು ಸುರಿಸುತ್ತ ನಿಂತರು.

ಆ ವೇಳೆಯಲ್ಲಿ ಅಲ್ಲಿ ಉಂಟಾದ ಸಂತೋಷದ ಕಲಕಲನಿನಾದವನ್ನು ವಿವರಿಸಬೇಕೇ? ನೆರೆದಿದ್ದವರಲ್ಲಿ ಆಬಾಲವೃದ್ಧರಾದಿಯಾಗಿ ಎಲ್ಲರ ವದನ ದ್ವಾರದಿಂದಲೂ ಹೊರಹೊರಡುತ್ತಿದ್ದ ಜಯಘೋಷವೂ ಉತ್ಸಾಹದಿಂದ ಮಾಡಲ್ಪಡುತ್ತಿದ್ದ ಕರತಾಡನಗಳ ಕೋಲಾಹಲವೂ ಆನಂದಮಂದಿರ-ಆನಂದ ವನಪ್ರಾಂತವನ್ನೇ ಕುಣಿಕುಣಿದಾಡಿಸಿತೆಂದರೆ ಸಾಕು. ಅಷ್ಟೇ ಅಲ್ಲ.

ಸತ್ಯಾನಂದನು ಮತ್ತೆ ಕರುಣಾವ್ಯಂಜಕಸ್ವರದಿಂದ ಹೇಳಿದನು.—"ಸುಕುಮಾರರೇ! ಸುಭಾಗೆಯರೇ!! ಇದುವೊದಲು ನೀವು ಧರ್ಮಪ್ರಜಾ ಪತಿಗಳೆನ್ನಿಸುವ ದಂಪತಿಗಳಾಗಿರುವಿರಿ. ಇನ್ನು ಮುಂದೆ ನೀವು ಮಾಡಬೇ ಕಾದ ಪ್ರತಿಯೊಂದು ಕಾರ್ಯವೂ ನಿಮ್ಮಿಬ್ಬರ ಚಿತ್ತೈಕಾಗ್ರತೆಯನ್ನೇ ಅವ ಲಂಬಿಸಿದ್ದು, ನಿಯಮವನ್ನು ಮೀರದೆ ನಡೆಯಿಸಲ್ಪಡಬೇಕಾಗಿರುವುದು. ಇದಕ್ಕಾಗಿ ನೀವು ನಿಮ್ಮ ನಿಮ್ಮ ಭಾರ್ಯೆಯರೊಡನೆ ಮಾತೃಸಮ್ಮುಖದಲ್ಲಿ ಈಗಲೇ ಪ್ರಮಾಣಪೂರ್ವಕವಾಗಿ ದೀಕ್ಷೆಯನ್ನು ವಹಿಸಬೇಕು."

ನಾದಾನಂದ + ನಂದಿನಿ + ಅಚಲಚಂದ್ರ + ಸ್ವರ್ಣಕುಮಾರಿಯರು ಕೈಕಟ್ಟಿ, ವಿನೀತರಾಗಿ ನಿಂತು—"ಆಪ್ಪಣೆಯಂತೆ ನಡೆಯಲು ಯಾವಾಗಲೂ ಸಿದ್ಧರಾಗಿರುವೆವು." ಎಂದು ನಿವೇದಿಸಿದರು.

ಸತ್ಯಾ:—ಹಾಗಿದ್ದರೆ, ಜಾಗ್ರತರಾಗಿದ್ದು ಕೇಳಿ, ಹೇಳಿರಿ. ಷಡ್ಗುಣೈ ಶ್ವರ್ಯ (ಸತ್ಯ, ಜ್ಞಾನ, ಧರ್ಮ, ದಯಾ, ಶಾಂತಿ, ಕ್ಷಮಾ) ಸಂಪನ್ನೆಯಾದ ಈ ನಮ್ಮ ಆರ್ಯಭೂಮಾತೆಯೇ ನಿಮಗೆಲ್ಲರಿಗೂ ತಾಯಿ—ತಂದೆ, ಗುರುದೈವ ಸರ್ವಸ್ವವೂ ಆಗಿರುವಳೆಂಬ ಭಾವನೆಯು ನಿಮ್ಮಲ್ಲಿ ಖಚಿತವಾಗಿರಬೇಕು.

ನಾದಾ + ಅಚಲ
ನಂದಿನಿ + ಸ್ವರ್ಣ } :—ಪ್ರಮಾಣಮಾಡುವೆವು; ಹಾಗೆಯೇ ಇರಲು ಳ್ಳವರು.

ಸತ್ಯಾ:—ನಿಮ್ಮ ಧರ್ಮ-ಧ್ಯೇಯ—ಕರ್ತವ್ಯಗಳು ನಿಮ್ಮಲ್ಲಿ ಏಕಾ ಭಿಪ್ರಾಯದಲ್ಲಿದ್ದು, ಒಬ್ಬರನ್ನೊಬ್ಬರು ಛಾಯಾ, ವ್ಯಕ್ತಿ,—ನಾದೃಶ್ಯದಿಂದ

ಅಭೇದ್ಯರಾಗಿ ವರ್ತಿಸಬೇಕು. ನಿಮ್ಮಲ್ಲಿ ಯಾರಿಗೂ ಪರಸ್ಪರ ವೈಮನಸ್ಯ ಕಾರಣಗಳಾದ ಸಂಶಯ, ಕ್ಲೇಶ, ಈರ್ಷ್ಯೆ, ದ್ವೇಷ, ರೋಷ, ದುರಭಿಮಾನ, ಮಂಚಿನೆಗಳೇ ಆದಿಯಾದ ದುರ್ಗುಣಗಳುಂಟಾಗದಂತೆ ಅವನ್ಮಾತ್ರಯ — (ಜಾಗ್ರತ್, ಸ್ವಪ್ನ, ಸುಷುಪ್ತಿ) ಕರಣತ್ರಯ (ಮನಸ್ಸು, ವಾಕ್ಕು, ಕರ್ಮ) ಗಳಿಂದ ಪರಿಶುದ್ಧರಾಗಿ ನಡೆಯಬೇಕು. ಪತಿಗೆ ಸತಿಯೇ ಶಕ್ತಿಯಾಗಿಯೂ, ಸತಿಗೆ ಪತಿಯೇ ಕಾಂತಿಪ್ರದನಾಗಿಯೂ ಇದ್ದು, ಕಾಂತಿ—ಶಕ್ತಿಗಳ ನಾರ್ಧಿಕ್ಯತೆಯನ್ನು ಕಾರ್ಯದಿಂದ ಪ್ರದರ್ಶಿಸುತ್ತಿರಬೇಕು.

ನಾದಾ + ಅಚಲ
ನಂದಿನಿ + ಸ್ವರ್ಣ } :—ಅಜ್ಞಾಬದ್ಧರಾಗಿರುವೆವು.

ಸತ್ಯಾ:—ಮತಸಕ್ತವಾಗಲೀ ಅನ್ಯಮತದೂಷಣೆಯಾಗಲೀ ನಿಮ್ಮಲ್ಲಿರಬಾರದು. ಎಲ್ಲಾ ಮತವೂ ಒಂದೇ ದೈವವನ್ನೇ ಪ್ರತಿಪಾದಿಸುತ್ತಿವೆ. ಎಲ್ಲಾ ಮತಗಳಲ್ಲಿಯೂ ಸರ್ವಶಕ್ತನಾದ ಪರಮಾತ್ಮನೊಬ್ಬನೇ ನೆಲಸಿರುವನು. ಈ ತತ್ವವನ್ನರಿತು, ನಮ್ಮ ನಮ್ಮ ಆರ್ಯರ ಹಿತಮಾರ್ಗದಲ್ಲಿ ನೀವಿದ್ದು, ಒಬ್ಬರನ್ನೊಬ್ಬರು ಬಂಧುಪ್ರೇಮದಿಂದ ಪ್ರೀತಿಸುತ್ತ, ಒಬ್ಬರ ಕ್ಷೇಮಾಭ್ಯುದಯವೇ ಮತ್ತೊಬ್ಬರ ಶ್ರೇಯೋಭಿವೃದ್ಧಿಯೆಂದು ಭಾವಿಸಿ, ಎಲ್ಲರೂ ಸಹಜ ಸೌಜನ್ಯದಿಂದ ದೇಶೋನ್ನತಿಯಲ್ಲಿ ಬದ್ಧಾದರರಾಗಿರಬೇಕೆಂಬುದನ್ನು ಮರೆಯಬಾರದು.

ನಾದಾ + ಅಚಲ
ನಂದಿನಿ + ಸ್ವರ್ಣ } :— ಒಪ್ಪಿದೆವು; ತಪ್ಪಲಾರೆವು.

ಸತ್ಯಾ:—ನಮ್ಮ ಪೂರ್ವಜರಲ್ಲಿ ಮತ್ತು ಗುರುಜನರಲ್ಲಿ ಎಂದಿಗೂ ಅವಿಧೇಯರಾಗಿ ನಡೆಯಬಾರದು. ಅವರ ಯಾವುದೇ ಒಂದು ಸಣ್ಣಾನುಡಿಗಳನ್ನಾಗಲೀ ಅದರದಿಂದ ಕೇಳಿ ತಿಳಿದು, ಉಚಿತರೀತಿಯಿಂದ ಸನ್ಮಾನಿಸಬೇಕು. ನೀವು ಕಲಿಯಬೇಕಾದ ನೀತಿಗಳು ಎಷ್ಟೆಷ್ಟೋ ಇರುವುವು. ಇರುವೆಯಿಂದ ಮೊದಲು, ಮೃಗರಾಜನ ವರೆಗೆ ನಮಗೆ ಪಾಠವನ್ನು ಕಲಿಸುವ ಸುಗುಣಗಳು ಒಂದೊಂದರಲ್ಲಿ ಒಂದೊಂದು ಬಗೆಯಾಗಿ ಇದ್ದೇ ಇರುವುವು. ಯಾವನೇಳೆಯಲ್ಲಿ, ಎಂತಹ ಸಮಯದಲ್ಲಿಯೂ-ಯಾವದನ್ನೇ ಆಗಲೀ ಅಲ್ಪ ಅಥವಾ ಅಪ್ರಯೋಜಕವೆಂದು ತಿರಸ್ಕರಿಸದೆ, ಸಾವಧಾನದಿಂದ ಸಮಾಲೋಚಿಸುವುದರಿಂದಲೇ ಮಾನವನು ಅಭ್ಯುದಿತನಾಗುವನು.

ಇದನ್ನು ವಿಚಿತವಾಗಿ ತಿಳಿದು, ಯಾರಲ್ಲಿಯೂ ವಿರೋಧವನ್ನಾಗಲೀ ಉದಾಸೀನವನ್ನಾಗಲೀ ತೋರದೆ, ವಿನಯ—ಪ್ರೀತಿ—ಗೌರವಗಳನ್ನೇ ಪ್ರದರ್ಶಿಸಬೇಕು.

ನಾದಾ + ನಂದಿನಿ
ಅಚಲ + ಸ್ವರ್ಣಾ } :—ಸರ್ವಪ್ರಕಾರದಿಂದಲೂ ಹಾಗೆಯೇ ನಡೆಯುತ್ತಿಲ್ಲವರು.

ಸತ್ಯಾ:—ನಾವು ಮಾಡಬೇಕಾದ ಪ್ರತಿಯೊಂದು ಕೆಲಸವೂ ನಮ್ಮ ಮನೆತನಕ್ಕೂ ದೇಶಕ್ಕೂ ಸಮಾಜಕ್ಕೂ ಕೀರ್ತಿ—ಕಲ್ಯಾಣ—ಕ್ಷೇಮಾಭ್ಯುದಯಗಳನ್ನುಂಟುಮಾಡುವಂತಹ ಸತ್ಕಾರ್ಯಗಳೇ ಆಗಿರಬೇಕಲ್ಲದೆ, ನಾವು ಮಾಡುವ ಯಾವುದೇ ಒಂದು ಕೆಲಸವೂ ಜನರ ವಿಡಂಬನೆಗಾಗಿ ನಡೆಸಲ್ಪಡದೆ, ನಮ್ಮ ಅವಶ್ಯ ಕರ್ತವ್ಯಕರ್ಮವೆಂಬ ನಿಷ್ಕಾಮ ಬುದ್ಧಿಯಿಂದಲೇ ಮಾಡಲ್ಪಡಬೇಕು. ಹೀಗಾದ್ದರೆಯೇ ನಮ್ಮ ವ್ರತವು ಸಾರ್ಥಿಕ್ಯವು.

ನಾದಾ + ನಂದಿನಿ
ಅಚಲ + ಸ್ವರ್ಣಾ } :—ಶಿರಸಾವಹಿಸಿದೆವು.

ಸತ್ಯಾ:—ಮತ್ತೆ ಒಂದೆರಡು ಮಾತುಗಳು,—ನೀವು ಗೃಹಸ್ಥಾಶ್ರಮಿಗಳಾದ ಮಾತ್ರಕ್ಕೆ ಭೋಗೋಪಭೋಗಗಳಲ್ಲಿಯೇ ನಿರತರಾಗಿರಬಾರದು. ಕ್ಲಿಪ್ತರೀತಿ, ಮಿತವ್ಯಯದಿಂದ, ಉಚಿತಮಾರ್ಗದಲ್ಲಿ, ನಿಮ್ಮ ತನುಮನೋಧನಗಳನ್ನು ವಿನಿಯೋಗಿಸಿ, ನಿಮ್ಮ ಮುಂದಿನ ಮಕ್ಕಳನ್ನು ನಿಜವಾದ ದೇಶಸೇವಕರನ್ನಾಗಿ ಮಾಡುವ ಸದ್ವರ್ತನವು ನಿಮ್ಮಲ್ಲಿ ಸ್ಥಿರವಾಗಿರಬೇಕು. ಸಮಾಜದ ಶಾಂತಿಸ್ಥಾಪನೆಗಾಗಿ, ದೇಶದಕಲ್ಯಾಣಕ್ಕಾಗಿ, ಪ್ರಾಣವನ್ನೇ ಪಿಡಬೇಕಾಗಿಬಂದರೂ, ಸಂತೋಷದಿಂದ ಮುಂದೆ ನಿಲ್ಲುವಂತಹ ಪ್ರೌಢ ಶಿಕ್ಷಣವು ನಮ್ಮಲ್ಲಿ ಪ್ರತಿಯೊಬ್ಬರಿಗೂ ಉಂಟಾಗಿರಬೇಕು. ಇವ್ವಾದರೆ ಸಾಕು. ನೀವೂ ಮತ್ತು ನಿಮ್ಮ ಅನುಗಾಮಿಗಳೂ ದೇಶಮಾತೆಯ ಪೂರ್ಣಾನುಗ್ರಹಕ್ಕೆ ಪಾತ್ರರಾದ ಧನ್ಯಾತ್ಮರೆನ್ನಿಸುವಿರಿ. ನಿಮ್ಮಿಂದಲೇ ದೇಶಮಾತೆಯ ಕಲ್ಯಾಣವು ನಡೆಯುವುದು. ಇದು ನಿಮಗೆ ಮಾತ್ರವೇ ಹೇಳಿದ ಮಾತಲ್ಲ; ಇಲ್ಲಿರುವ ಎಲ್ಲರಿಗೂ ಹೇಳಿದುದು. ಇದನ್ನು ಎಲ್ಲರೂ ಅನುಸರಿಸಬೇಕೆಂಬುದೇ ನನ್ನ ಕೋರಿಕೆ.

ಎಲ್ಲರೂ ಏಕವಾಕ್ಯತೆಯಿಂದ--"ಅನುಗೃಹೀತರಾದೆವು; ಅನುಗೃಹೀತರಾದೆವು."

ಸತ್ಯಾ:--ಪ್ರಿಯಬಾಂಧವರೇ! ಈವರೆಗೆ ನನ್ನಿಂದ ಹೇಳಲ್ಪಟ್ಟುದೆಲ್ಲವೂ, ಜಗನ್ಮಾತೆಯ ಪ್ರೇರಣಾವಾಕ್ಯವಲ್ಲದೆ ನನ್ನ ಸ್ವಂತ ಹೇಳಿಕೆಯಲ್ಲ. ಏಕೆಂದರೆ, ಅಷ್ಟದೂರ ನಿಮ್ಮನ್ನು ಆಜ್ಞಾಪಿಸುವ ಶಕ್ತಿಯು ಕೇವಲ ಭಗವತಿಯಲ್ಲದೆ ಮಾತ್ರವೇ ಇರತಕ್ಕುದಲ್ಲದೆ. ಸನ್ನಿಧ್ಯವಿಲ್ಲ. ಆದರೂ ಮತ್ತೊಂದು ನನ್ನ ಕೋರಿಕೆಯನ್ನು ನಿಮ್ಮಲ್ಲಿ ನಿವೇದಿಸುವೆನು. ಅಂಗೀಕರಿಸಬೇಕೆಂದು ಪರಿಗ್ರಹಿಸಿದರೆ ಧನ್ಯನಾದೆನೆಂದೇ ಭಾವಿಸುವೆನು.

ಇಂದು, ನಾವೆಲ್ಲರೂ, ಮಾತೃಸನ್ನಿಧಿಯಲ್ಲಿ ಕಲೆತು ಸಂಭಾಷಿಸುವಂತಾದ ಇಂದಿನ ಸಂಯೋಗವನ್ನು ನಾವೆಂದಿಗೂ ಮರೆಯುವುದಿಲ್ಲ. ಇದನ್ನು ನಮ್ಮ ಮುಖ್ಯೋತ್ಸವ ದಿನಗಳಲ್ಲಿ ಪ್ರಾಮುಖ್ಯವನ್ನಾಗಿ ಗಣಿಸಬೇಕೆಂದೂ, ಇಂದಿನ ಸಂತೋಷವು ಮುಂದೆಯೂ ನಮ್ಮನ್ನು ಅಡಿಗಡಿಗೆ ನಲಸೇರಿಸುವಂತೆ ಮಾಡಬೇಕೆಂದೂ, ಇಲ್ಲಿರುವ ಪ್ರತಿಯೊಬ್ಬರೂ ಪ್ರಾರಬ್ಧಕ್ಕೆಂದು ಬಾರಿಬಾರಿಗಾದರೂ ಕಷ್ಟದೆ ಬಂದಲ್ಲಿ ನೆರೆದು, ದೇಗುಲವನ್ನು ಸೇರಿಸಿ, ಸ್ನೇಹಬಾಂಧವ್ಯವನ್ನು ಬಲಪಡಿಸುವುದರಿಂದ ನಮ್ಮ ದೇಶದ ಸಂಪದಭಿವೃದ್ಧಿಕಾರ್ಯಗಳಿಗೆ ಅವಕಾಶವನ್ನು ಕಲ್ಪಿಸಬೇಕೆಂದೂ, ಈ ಜಗತ್ತಿನ ಸೇವಾಸಮಾಜಕ್ಕೆ ಅತೀಲತೇಂದ್ರ-ಸಾದಾನಂದರೇ ಅವರಪರ ಸತ್ಶಿಷ್ಯರುಗೊಡನೆ ಮುಖ್ಯಕಾರ್ಯದರ್ಶಿಗಳಾಗಿ ನಿಲ್ಲಬೇಕೆಂದೂ, ಉಳಿದ ಮೇಲ್ವಿಚಾರಣೆಗಳಿಗೆಲ್ಲಕ್ಕೂ ನಗೇಶರಾಯ, ಕಲೆಕ್ಟರರು, ವಿದ್ಯಾನಂದಸ್ವಾಮಿ, ಶರಚ್ಚಂದ್ರ ಇವರೇ ನಿಲ್ಲುವವರಾಗಬೇಕೆಂದೂ ಕೋರುವೆನು. ಇಷ್ಟನ್ನು ನಡೆಯಿಸುವುದಾಗಿ ಅಭಿಯುಕ್ತರಾಗಬಾರದೆ. ನನ್ನ ಆನಂದಕ್ಕೆ ಪಾರವೇ ಇರುವುದಿಲ್ಲ. ಆಗಲಿ. ಭಗವತಿ! ತಾಗಾಗಲಿ!

"ಜಯ! ಭಗವತಿ! ಜಯಜಯ!! ಸಾಧು! ಸತ್ಯಾನಂದಜೀ! ಸಾಧುಸಾಧು!! ಧನ್ಯ! ನಾದಾನಂದ! ಧನ್ಯಧನ್ಯ!! ಆನಂದ, ಅತೀಲ ಚಂದ್ರನಾಥ! ನಿನ್ನಿಂದಲೇ ನಮ್ಮೆಲ್ಲರಿಗೂ ಆಯಿತು. ಇಂದಿನ ಅಮೃತಾನಂದ!! ಆಗಲಿ. ನಂದಿನೀ ಪರಿಗ್ರಹಣದಿಂದ ಸಾದಾನಂದನಿಗೆ ಬ್ರಹ್ಮಾನಂದ! ಸ್ವರ್ಣಕುಮಾರೀ ಪರಿಗ್ರಹಣದಿಂದ ಅತೀಲತೇಂದ್ರನಿಗೆ ಆತ್ಮಾನಂದ! ಸತ್ಯಾನಂದ ಪರಮಹಂಸನಿಗೆ ಮತ್ತು ತಪಸ್ವಿನಿಯರಿಗೆ ಪರಮಾನಂದ. ಇಂದಿನ

ನವನವೀನೋತ್ಸವದಿಂದ ಆನಂದಮಂದಿರಕ್ಕೆ, ಆನಂದವನಕ್ಕೆ, ಮತ್ತು ಆನಂ
ದೋತ್ಸವದಲ್ಲಿ ಉತ್ಸುಕರಾಗಿದ್ದ ನಮ್ಮೆಲ್ಲರಿಗೆ ನೇತ್ರಾನಂದ! ಮತ್ತೇನು!
ಇಂದಿನ ಆನಂದವೇ ಆನಂದ. ಭಗವತಿ, ಅನುಗ್ರಹಿಸು! ಇದೇ ಆನಂದವೇ
ನನಗೆ ಸ್ಥಿರವಾಗಿರಲಿ. ಗೃಹಶಿಕ್ಷಣದಲ್ಲಿ ಚಿತ್ರಕಲೆ, ನಿರ್ಮತ್ಸರ ಪ್ರೇಮ
ದಲ್ಲಿ ಚಂದ್ರಮತಿ, ನೀತಿಮಾರ್ಗಪ್ರವರ್ತನೆಯಲ್ಲಿ ನಗೇಶ, ಸತ್ಯಸಂಧತೆಯಲ್ಲಿ
ಶರಚ್ಚಂದ್ರ, ನ್ಯಾಯನಿಷ್ಠೆಯಲ್ಲಿ ಕಲೆಕ್ಟರ್ ಜ್ಞಾನಸಾರಚಕ್ರವರ್ತಿ.
ಜ್ಞಾನಸಂಸ್ಕಾರದಲ್ಲಿ ವಿದ್ಯಾಸಾಗರ. ದೇಶಸೇವೆಯಲ್ಲಿ ಅತಿಲೌಕಿಕ, ಗುಣ
ಗ್ರಹಣದಲ್ಲಿ ಸೇವಾಸಾಗರ. ಭಕ್ತಿವಾರಿ. ಅನುವರ್ತನದಲ್ಲಿ ಸ್ವರ್ಣಕುಮಾರಿ
ಸುರಸೆ, ಪರಿಮಳ ಇವರೆಲ್ಲರೂ, ನಮ್ಮೆಲ್ಲರಿಗೂ ಆದರ್ಶಪ್ರಾಯರಾಗಿದ್ದು
ಆತ್ಮಾವಲಂಬನದಿಂದ ಧ್ಯಾನಮಾರ್ಗದಲ್ಲಿ ಲಬ್ಧವಾಗುವ ದಿವ್ಯನಾದವನ್ನು
ಸಂದರ್ಶಿಸಿ, ತನ್ಮೂಲಕ ಹೊಂದುವ ಪ್ರಾಪ್ತಾನಂದದ ತಪಸ್ಸನ್ನಿಯೇ ಇದೇ
ಬಂತೆ ನಂದಿನಿಯು ನಮ್ಮೆಲ್ಲರನ್ನೂ ಆನಂದನಾವಸ್ರಾವ್ಯದಲ್ಲಿ ಅಭಿಷಿಕ್ತರನ್ನಾಗಿ
ಮಾಡಿ, ಅತೀಂದ್ರಿಯಪಾದ ಯೋಗಶಕ್ತಿಯಿಂದ ಪರಿಪಾಲಿಸುತ್ತಿರುವಂತೆ
ಅನುಗ್ರಹಿಸು. ಇವೆಲ್ಲವೂ ನಿನ್ನ ಸ್ವಾಧೀನಕೃಪಾಕಟಾಕ್ಷವಾಗಲೇ ಸಲಿಸಬೇಕು.
ದಯೆಪಾಲಿಸು."

" ಸಮ್ಪದ್ಯನ್ತೇ ಭವಭಯತಮೀ ಭಾನವಸ್ತ್ವತ್ಪ್ರಸಾದಾ—
ದ್ಭಾವಾನ್ಸರ್ವೇ ಭಗವತಿ ಹರೌಭಕ್ತಿಮುದ್ವೇಲಯಂತಃ॥
ಯಾಚೇಕನ್ತ್ವಾಮಹಮತಿಶಯಶ್ವೇತಲೋದಾರ ಶೀಲಾ-
ನ್ಭೂಯೋಭೂಯೋ ದಿಶಸಿಮಹತಾಂ ಮುಜ್ಜಲಾನಾಂಪ್ರ
ಬನ್ಧಾನ್ ॥.....”

ಆನಂದಕೋಲಾಹಲ ಕರತಾಡನದಿಂದ ಮತ್ತೊಮ್ಮೆ ಆನಂದಮಂದಿರವೂ
ಆನಂದವನವೂ ಆನಂದದಿಂದ ನಲಿನಲಿದಾಡಿತು.